ಶುಕ್ರವಾರ, ಸೆಪ್ಟೆಂಬರ್ 22, 2023 | ₹ 7.00
www.prajavani.net
prajavani.net | prajavani | prajavani | prajavani
ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೃತ್ಯ
ಮಧ್ಯಪ್ರದೇಶದ ಓಂಕಾರೇಶ್ವರದಲ್ಲಿ ನಡೆದ ಆದಿ ಶಂಕರಾಚಾರ್ಯರ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ನೃತ್ಯ ಪ್ರದರ್ಶಿಸಿದ ಕಲಾವಿದೆ

RERA No.: PRM/KA/RERA/1251/310/PR/120423/005862
For more details visit www.rera.karnataka.gov.in

TWO GREAT TO MISS!

GREAT LOCATION! GREAT PRODUCT!

1 WELL CONNECTED LOCATION

2 mins From Silk Institute Metro

Kanakapura Road - 2 mins
₹6,500/sft.

Banashankari - 6 mins
₹11,000/sft.

JP Nagar - 8 mins
₹12,500/sft.

Bannerghatta Road - 10 mins
₹7,500/sft.

RR Nagar - 10 mins
₹8,000/sft.

2 SUPERIOR PROJECT

Spacious 2 & 3 BHK apartments with 65+ lifestyle amenities

1.25 acres of central landscape podium

Floor to ceiling windows for maximum light and ventilation

Vehicle-free community for kids and senior citizens

Only project in the vicinity with high-end specifications

PHASE I 120 UNITS SOLD OUT

Launching - Phase 2
CASAGRAND ZAIDEN
off Kanakapura Main Road, 2 mins From Silk Institute Metro

2 & 3 BHK apartments from ₹75L*

Kanakapura Main Road Market Price ~~₹6,500~~ Per sft.

Casagrand Launch Price ~~₹5,499~~ Per sft.

Early Bird Price ₹5,399 Per sft. (*For the first 20 bookings only)

SALIENT FEATURES • Uniquely crafted 286 spacious apartments spread across 3.69 acres • B+G+9 floors structure • Lavish clubhouse of 15,000 Sft. • 100% Vaastu compliant with zero dead space • Close to prominent IT/ITES companies, schools, colleges & hospitals

INCREDIBLY PRICED - PHASE 2

Type	Size (sft)	Launch Price (₹)	Early Bird Price (₹)
2 BHK+2T	1230-1271	~~77L - 79L~~	75L - 78L
3 BHK+2T	1496-1503	~~91L - 94L~~	89L - 93L
3 BHK+3T	1707-1886	~~1.05 Cr - 1.15 Cr~~	1.04 Cr - 1.13 Cr

Ph 2 Total: 166 Units | Sold: 41 Units | Available: 125 Units

COMPLETION IN 24 MONTHS

*T&C apply.

Exclusive site visit available | Visit model house at site

93840 54982 | www.casagrand.co.in

CREDAI

CASAGRAND building aspirations

Launching - Phase 2

CASAGRAND ZAIDEN

off Kanakapura Main Road,
2 mins From Silk Institute Metro

RERA No.: PRM/KA/RERA/1251/310/PR/120423/005862
For more details visit www.rera.karnataka.gov.in

2 & 3 BHK Apts. with 65+ Lifestyle amenities From ₹75 L*

Location Map & Highlights



Podium View

Entrance Night View

Elevation View

INDOOR AMENITIES

1. Reception lounge
2. Multipurpose party hall
3. AV Room
4. Business center
5. Convenience store
6. Outdoor cafeteria
7. Gym
8. Cross fit corner
9. Boxing corner
10. Kids play area
11. Indoor games room
12. Board games corner
13. Video games corner
14. Adventure wall
15. Kids ball pool
16. Association room
17. Laundry / Ironing shop
18. Drivers / Maid dormitory
19. Drivers / Maid Toilet

OUTDOOR AMENITIES

20. Drop-off Plaza
21. Amphitheatre
22. Swimming pool
23. Kids pool
24. Waterfall feature
25. Water play jets
26. Pool side lounges
27. Half - Basketball court
28. Cricket practice net
29. Futsal lawn
30. Outdoor gym
31. Outdoor kids play area
32. Kids rock climbing
33. Bicycle racks with bicycles
34. Cycling track
35. Jogging track
36. Skating rink
37. Senior citizen court
38. Meditation lawn
39. Party deck
40. Barbeque corner
41. Hobby court
42. Interactive floor games
43. Play mounds
44. Inground Trampoline
45. Sandpit
46. Pets park
47. Aroma garden
48. Spillover party lawn
49. Shaded patio seating
50. Interactive water fountain
51. Plumeria court
52. Hammock garden
53. Leisure seating court
54. Reflexology walkway
55. Tot lot
56. Jungle gym
57. Golf putting
58. Seating pavilion
59. Zen garden
60. Community farming
61. Sculpture court
62. Informal seating area
63. Outdoor board games nook
64. Electric car charging bay
65. Car wash bay
66. Air filling station

Scan this QR code to experience a virtual walk-through

Amphitheatre

Clubhouse

Indoor Kids Play Area

All sites & offices have been sanitised | Social distancing is maintained in all our sites & offices | Scheduled site visit available | All our employees are vaccinated

* T&C apply.

CREDAI

Exclusive site visit available | Visit model house at site

93840 54982 | www.casagrand.co.in

PRODUCT SUPERIORITY: Superior brands · 221 quality checks · More amenities · Better utility of space and ventilation · Kids and senior citizens friendly

CASAGRAND building aspirations

ಶುಕ್ರವಾರ, ಸೆಪ್ಟೆಂಬರ್ 22, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 263 | ಪುಟ 16

• www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
'ಅರ್ದಂಬರ್ಧ ಪ್ರೇಮಕಥೆ'ಯ ದಿವ್ಯಾನುಭವ -ನಟಿ ದಿವ್ಯಾ ಉರುಡುಗ ಸಂದರ್ಶನ

ಆಳ-ಅಗಲ
ಕೆನಡಾದಲ್ಲಿ ಭಾರತೀಯರು ಸುರಕ್ಷಿತರೇ...

ಕಾಂಗ್ರೆಸ್‌ನಲ್ಲಿ ಬಣ ರಾಜಕೀಯ ಉಲ್ಬಣ 8

ನಮ್ಮ ಕ್ಲಿನಿಕ್: ಶುಶ್ರೂಷಕರೇ ವೈದ್ಯರು! 5

ಸೆನ್ಸೆಕ್ಸ್	ನಿಫ್ಟಿ	₹/$
66,230	19,742	83.13

ಪ್ರತಿದಿನ 5,000 ಕ್ಯೂಸೆಕ್ ನೀರು ಹರಿಸುವಂತೆ ಕಾವೇರಿ ಪ್ರಾಧಿಕಾರ ನೀಡಿದ್ದ ಆದೇಶ ಊರ್ಜಿತ

ಮಧ್ಯಪ್ರವೇಶಕ್ಕೆ 'ಸುಪ್ರೀಂ' ನಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾವೇರಿ ನದಿಯಿಂದ ತಮಿಳುನಾಡಿಗೆ ಕರ್ನಾಟಕವು ಪ್ರತಿದಿನ 5,000 ಕ್ಯೂಸೆಕ್ ನೀರು ಹರಿಸಬೇಕು ಎಂದು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ನೀಡಿದ ನಿರ್ದೇಶನದಲ್ಲಿ ಮಧ್ಯಪ್ರವೇಶಿಸಲು ಸುಪ್ರೀಂ ಕೋರ್ಟ್ ಗುರುವಾರ ನಿರಾಕರಿಸಿದೆ. ಪ್ರಾಧಿಕಾರದ ನಿರ್ದೇಶನದಂತೆ ಪ್ರತಿದಿನ 5,000 ಕ್ಯೂಸೆಕ್ ನೀರಿನ ಬದಲಿಗೆ 7,200 ಕ್ಯೂಸೆಕ್ ನೀರು ಹರಿಸಲು ಕರ್ನಾಟಕಕ್ಕೆ ಸೂಚಿಸಬೇಕು ಎಂಬ ತಮಿಳುನಾಡು ಸರ್ಕಾರದ ಕೋರಿಕೆಯನ್ನು ಕೋರ್ಟ್ ತಿರಸ್ಕರಿಸಿದೆ.

ತಮಿಳುನಾಡಿಗೆ ನಿತ್ಯ 24,000 ಕ್ಯೂಸೆಕ್ ನೀರು ಹರಿಸಲು ನಿರ್ದೇಶನ ನೀಡಬೇಕು ಎಂದು ಕೋರಿ ತಮಿಳುನಾಡು ಸರ್ಕಾರ ಸಲ್ಲಿಸಿರುವ ಮೂಲ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಪಿ.ಎಸ್.ನರಸಿಂಹ ಹಾಗೂ ಪ್ರಶಾಂತ್ ಕುಮಾರ್ ಮಿಶ್ರಾ ಅವರಿದ್ದ ಪೀಠ ನಡೆಸಿತು. ಮುಂಗಾರು ವೈಫಲ್ಯ, ಸರಾಸರಿ ಒಳಹರಿವು ಮತ್ತು ಇತರ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಂಕಷ್ಟದ ಸಂದರ್ಭಗಳನ್ನು ಪರಿಗಣಿಸಿ ಪ್ರಾಧಿಕಾರವು ನಿರ್ದೇಶನ ನೀಡಿದೆ ಎಂದು ಪೀಠವು ಹೇಳಿದೆ.

ಪ್ರಾಧಿಕಾರದ ಆದೇಶದ ಪ್ರಕಾರ, ರಾಜ್ಯವು ಇದೇ 26ರವರೆಗೆ ಒಟ್ಟು 75,000 ಕ್ಯೂಸೆಕ್ (15 ದಿನಗಳ ಲೆಕ್ಕಾಚಾರ) ನೀರನ್ನು ಹರಿಸಬೇಕಿದೆ.

5ನೇ ಪುಟ ನೋಡಿ

ತಮಿಳುನಾಡಿಗೆ ನೀರು ಹರಿಸುವುದನ್ನು ಖಂಡಿಸಿ ರೈತರ ಪ್ರತಿಭಟನೆ ತೀವ್ರಗೊಂಡ ಕಾರಣ ಮಂಡ್ಯದ ಕೆಆರ್‌ಎಸ್ ಅಣೆಕಟ್ಟೆಗೆ ಗುರುವಾರ ಪೊಲೀಸರ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು

ಕಾವೇರಿ ನೀರು ಹಂಚಿಕೆ ಕುರಿತು ಕರ್ನಾಟಕದ ಜೊತೆ ಯಾವುದೇ ರೀತಿಯ ಮಾತುಕತೆ ಅಗತ್ಯವಿಲ್ಲ. ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್ ತೀರ್ಪು ಅಂತಿಮ ಮತ್ತು ನಿರ್ಣಾಯಕ
ತಮಿಳುನಾಡು ಸರ್ಕಾರ

ಕಾವೇರಿ ನೀರು ಹಂಚಿಕೆ ಸಂಬಂಧ ಕೇಂದ್ರ ಜಲ ಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರ ಜತೆ ಸಭೆ ನಡೆಸಿದ್ದೇವೆ. ಅವರು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ
ಸಿದ್ದರಾಮಯ್ಯ, ಮುಖ್ಯಮಂತ್ರಿ

ಕರ್ನಾಟಕದ ವಾದವೇನು?

'ಪ್ರಾಧಿಕಾರದ ಆದೇಶ ರಾಜ್ಯದ ಹಿತಾಸಕ್ತಿಗೆ ವಿರುದ್ಧವಾಗಿದೆ. ಇಲ್ಲಿ ಬೆಳೆಗೆ ನೀರು ಒದಗಿಸುವ ವಿಷಯ ಮಾತ್ರವಲ್ಲ, ಬದಲಿಗೆ ಬೆಂಗಳೂರು, ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಿಗೆ ಕುಡಿಯುವ ನೀರು ಒದಗಿಸುವ ಪ್ರಶ್ನೆಯೂ ಇದೆ. ಪ್ರಸ್ತುತ ಸನ್ನಿವೇಶದಲ್ಲಿ 3 ಸಾವಿರ ಕ್ಯೂಸೆಕ್ ನೀರು ಬಿಡುವಂತೆಯೂ ನಿರ್ದೇಶನ ನೀಡಬಾರದಿತ್ತು.

'ಈ ವಿವಾದಗಳಿಗೆ ಮೇಕೆದಾಟು ಯೋಜನೆಯೇ ಪರಿಹಾರ. ಈ ಯೋಜನೆ ಅನುಷ್ಠಾನಕ್ಕೆ ಒಪ್ಪಿಗೆ ನೀಡಬೇಕು. ಈ ಸಂಬಂಧ ನಿರ್ದೇಶನಗಳನ್ನು ನೀಡಬೇಕು'.

ಹಿರಿಯ ವಕೀಲ ಶ್ಯಾಮ್ ದಿವಾನ್ ಹಾಗೂ ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ರಾಜ್ಯದ ಪರವಾಗಿ ವಾದ ಮಂಡಿಸಿದರು.

ತಮಿಳುನಾಡು ವಾದವೇನು?

'ಇದು ಕೊರತೆಯ ವರ್ಷವಾಗಿದ್ದರಿಂದ ಕರ್ನಾಟಕವು ತಮಿಳುನಾಡಿಗೆ ಪ್ರತಿದಿನ 7,200 ಕ್ಯೂಸೆಕ್ ನೀರು ಹರಿಸಬೇಕು ಎಂದು ಪ್ರಾಧಿಕಾರ ನಿರ್ಧರಿಸಿತ್ತು. ನಂತರ ಅದನ್ನು 5 ಸಾವಿರ ಕ್ಯೂಸೆಕ್‌ಗೆ ಇಳಿಸಲಾಗಿತ್ತು. ಕಾವೇರಿ ನೀರು ನಿಯಂತ್ರಣ ಸಮಿತಿಯ ಶಿಫಾರಸನ್ನು ಪ್ರಾಧಿಕಾರವು ಯಾಂತ್ರಿಕವಾಗಿ ಅನುಮೋದಿಸಿದೆ. ತಮಿಳುನಾಡಿನ ಸಂಕಷ್ಟ ಪರಿಸ್ಥಿತಿಯನ್ನು ಗಮನದಲ್ಲಿ ಇಟ್ಟುಕೊಂಡು 7,200 ಕ್ಯೂಸೆಕ್ ನೀರು ಹರಿಸಲು ನಿರ್ದೇಶನ ನೀಡಬೇಕು.

'ಅಲ್ಲದೆ, ಇದು ತಮಿಳುನಾಡಿನಲ್ಲಿ 5 ಲಕ್ಷ ಎಕರೆಯಲ್ಲಿ ಬೆಳೆದುನಿಂತಿರುವ ಬೆಳೆಯ ಪ್ರಶ್ನೆಯಾಗಿದೆ'.

ಹಿರಿಯ ವಕೀಲ ಮುಕುಲ್ ರೊಹಟಗಿ ಅವರು ತಮಿಳುನಾಡು ಪರ ವಾದ ಮಂಡಿಸಿದರು.

ರಾಹುಲ್ 'ಕೂಲಿ'

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ನವದೆಹಲಿಯ ಆನಂದ ವಿಹಾರ ರೈಲು ನಿಲ್ದಾಣದಲ್ಲಿ ಗುರುವಾರ ಹಮಾಲರ ಜತೆಗೆ ಸಂವಾದ ನಡೆಸಿ, ಬಳಿಕ ಹಮಾಲರ ಹೆಗ್ಗುರುತಿನ ಕೆಂಪು ಬಣ್ಣದ ಅಂಗಿ ಧರಿಸಿ, ತಲೆ ಮೇಲೆ ಟ್ರಾಲಿ ಬ್ಯಾಗ್ ಹೊತ್ತು ಫೋಟೊಕ್ಕೆ ಪೋಸ್ ಕೊಟ್ಟರು –ಪಿಟಿಐ ಚಿತ್ರ 9

ಉಭಯ ದೇಶಗಳ ನಡುವೆ ಬಿಗಡಾಯಿಸಿದ ಬಿಕ್ಕಟ್ಟು

ಕೆನಡಾದವರಿಗೆ ವೀಸಾ ಇಲ್ಲ

ನವದೆಹಲಿ (ಪಿಟಿಐ): ಉಗ್ರರಿಗೆ ಕೆನಡಾ ಸುರಕ್ಷಿತ ತಾಣವಾಗಿದ್ದು, ಅಲ್ಲಿನ ಪ್ರಜೆಗಳಿಗೆ ಭಾರತದ ವೀಸಾ ನೀಡುವುದನ್ನು ತಕ್ಷಣದಿಂದ ನಿಲ್ಲಿಸಲಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಗುರುವಾರ ಹೇಳಿದ್ದಾರೆ.

ಹಿಂಸೆಗೆ ಕುಮ್ಮಕ್ಕು, ದುಷ್ಕೃತ್ಯ ಎಸಗಿದವರ ಮೇಲೆ ಕ್ರಮ ಕೈಗೊಳ್ಳು-ವುದಕ್ಕೆ ಸಂಬಂಧಿಸಿ ಕೆನಡಾ ಸರ್ಕಾರದ ನಿಷ್ಕ್ರಿಯತೆ, ರಾಯಭಾರ ಕಚೇರಿಗಳ ಕಾರ್ಯನಿರ್ವಹಣೆಗೆ ತೊಡಕಾಗುವಂತಹ ವಾತಾವರಣ ನಿರ್ಮಾಣದಿಂದಾಗಿ ವೀಸಾ ನೀಡಿಕೆಯನ್ನು ನಿಲ್ಲಿಸಲಾಗಿದೆ ಎಂದು ಅವರು ವಿವರಿಸಿದ್ದಾರೆ.

ನವದೆಹಲಿಯಲ್ಲಿರುವ ರಾಜತಾಂತ್ರಿಕ ಅಧಿಕಾರಿಗಳು ಮತ್ತು ಕಾನ್ಸುಲ್ ಅಧಿಕಾರಿಗಳ ಸಂಖ್ಯೆಯನ್ನು ಕಡಿಮೆ ಮಾಡುವಂತೆಯೂ ಭಾರತವು ಕೆನಡಾಕ್ಕೆ ಸೂಚಿಸಿದೆ. 'ಎರಡೂ ಕಡೆಯ ಅಧಿಕಾರಿಗಳ ಸಂಖ್ಯೆ, ಅಧಿಕಾರಿಗಳ ಶ್ರೇಣಿ ಒಂದೇ ರೀತಿ ಇರಬೇಕು ಎಂದು ನಾವು ಬಯಸುವುದರಿಂದ ಕೆನಡಾದ ರಾಜತಾಂತ್ರಿಕ ಅಧಿಕಾರಿಗಳ ಸಂಖ್ಯೆಯ ಇಳಿಕೆಯನ್ನು ನಿರೀಕ್ಷಿಸುತ್ತೇವೆ' ಎಂದು ಸಚಿವಾಲಯ ಹೇಳಿದೆ.

7ನೇ ಪುಟ ನೋಡಿ

ಪಾತಕಿ ಸುಖ್‌ದೂಲ್ ಸಿಂಗ್ ಹತ್ಯೆ

ಚಂಡೀಗಢ/ನವದೆಹಲಿ (ಪಿಟಿಐ): ಪಂಜಾಬ್‌ನ ಭೂಗತ ಪಾತಕಿ ಸುಖ್‌ದೂಲ್ ಸಿಂಗ್ ಅಲಿಯಾಸ್ ಸುಖಾ ದುನೇಕ ಎಂಬಾತನನ್ನು ಕೆನಡಾದಲ್ಲಿ ಅಪರಿಚಿತ ವ್ಯಕ್ತಿಗಳು ಗುಂಡಿಟ್ಟು ಕೊಂದಿದ್ದಾರೆ ಎಂದು ಮೂಲಗಳು ಗುರುವಾರ ತಿಳಿಸಿವೆ.

ಕೊಲೆ, ಕೊಲೆಯತ್ನ, ಡಕಾಯಿತಿ ಸೇರಿ 18ಕ್ಕೂ ಹೆಚ್ಚು ಪ್ರಕರಣಗಳು ಈತನ ಮೇಲೆ ಇದ್ದವು. ಈತ 2017ರಲ್ಲಿ ಭಾರತದಿಂದ ಕೆನಡಾಕ್ಕೆ ಪರಾರಿಯಾಗಿದ್ದ. ಗ್ಯಾಂಗುಗಳ ನಡುವಣ ಸಂಘರ್ಷವೇ ಈತನ ಕೊಲೆಗೆ ಕಾರಣವಾಗಿರಬಹುದು ಎಂದು ಅಂದಾಜಿಸಲಾಗಿದೆ.

ಹೊಣೆ ಹೊತ್ತ ಬಿಷ್ಣೋಯ್ ಗ್ಯಾಂಗ್: ಸುಖ್‌ದೂಲ್ ಸಿಂಗ್ ಹತ್ಯೆಯ ಹೊಣೆಯನ್ನು ಜೈಲಿನಲ್ಲಿರುವ ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್ ಹೊತ್ತುಕೊಂಡಿದೆ.

7ನೇ ಪುಟ ನೋಡಿ

ಮೈಸೂರು ವಿ.ವಿ ಕುಲಪತಿ ನೇಮಕ ರದ್ದತಿಗೆ ತಡೆ

ಬೆಂಗಳೂರು: ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಅವರ ನೇಮಕಾತಿ ರದ್ದುಪಡಿ-ಸಿದ್ದ ಏಕಸದಸ್ಯ ನ್ಯಾಯಪೀಠದ ಆದೇಶಕ್ಕೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ನೇತೃತ್ವದ ವಿಭಾಗೀಯ ನ್ಯಾಯಪೀಠ ತಡೆ ನೀಡಿದೆ. 5

ಇಂಫಾಲ್: ಮತ್ತೆ ಕರ್ಫ್ಯೂ ಜಾರಿ 9

ಚಿನಕುರಳಿ

ಪ್ರಕಾಶ್ ಶೆಟ್ಟಿ

ಡಿಸಿಎಂ: ವಾಗ್ವಾದ ಬಿರುಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತ್ತೆ ಮೂವರನ್ನು ಉಪಮುಖ್ಯಮಂತ್ರಿ ಮಾಡಬೇಕು ಎಂಬ ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿಕೆ ಸುತ್ತಲಿನ ವಾಗ್ವಾದ ಮತ್ತಷ್ಟು ಬಿರುಸುಗೊಳ್ಳುತ್ತಲೇ ಇದೆ.

ರಾಜಣ್ಣ ಹೇಳಿದ್ದರಲ್ಲಿ ತಪ್ಪೇನಿದೆ ಎಂದಷ್ಟೇ ಈಚೆಗೆ ಪ್ರಶ್ನಿಸಿದ್ದ ಗೃಹ ಸಚಿವ ಜಿ. ಪರಮೇಶ್ವರ ಅವರು ಗುರುವಾರ ಮತ್ತೊಂದು ಹೆಜ್ಜೆ ಮುಂದಿಟ್ಟಿದ್ದಾರೆ. ಲೋಕಸಭೆ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗೆಲ್ಲಬೇಕಾದರೆ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಜತೆಗೆ ಬಲವಾಗಿ ನಿಂತ ಸಮುದಾಯದವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಲೇಬೇಕು ಎಂಬ ರಾಜಣ್ಣ ವಾದವನ್ನು ಅವರು ಬಲವಾಗಿ ಸಮರ್ಥಿಸಿದ್ದಾರೆ.

ಮೂವರು ಉಪಮುಖ್ಯಮಂತ್ರಿ ಮತ್ತು ಬಣ ರಾಜಕೀಯದ ಬಗ್ಗೆ ಕೇಳಲಾದ ಪ್ರಶ್ನೆಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಧ್ಯಮದವರ ಮೇಲೆಯೇ ಸಿಟ್ಟಾಗಿದ್ದರು. ಈ ಕುರಿತು ತಕರಾರು ಇರುವುದನ್ನು ಅವರ ಮಾತುಗಳೇ ಬಿಂಬಿಸಿದ್ದವು. ಇದಕ್ಕೆ ಪೂರಕವೆಂಬಂತೆ ಮಾತನಾಡಿದ ಮಾಗಡಿ ಕ್ಷೇತ್ರದ ಕಾಂಗ್ರೆಸ್ ಶಾಸಕ ಎಚ್.ಸಿ. ಬಾಲಕೃಷ್ಣ, ಸಚಿವ ರಾಜಣ್ಣ ವಿರುದ್ಧ ಕಿಡಿ ಕಾರಿದ್ದಾರೆ.

ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿ-ಸಿರುವ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ, 'ಹೈಕಮಾಂಡ್ ಮನಸ್ಸು ಮಾಡಿದರೆ ಮೂವರಷ್ಟೇ ಅಲ್ಲ, ನಾಲ್ವರನ್ನು ಉಪ ಮುಖ್ಯಮಂತ್ರಿ ಮಾಡಬಹುದು. ಹಲವು ಸಮುದಾಯಗಳಿಗೆ ರಾಜಕೀಯ ಅಧಿಕಾರ ನೀಡಲು ಸಾಧ್ಯವಾಗಿಲ್ಲ. ಡಿಸಿಎಂ ಆಗಬೇಕು ಎಂದು ಎಲ್ಲರಿಗೂ ಆಸೆ ಇರುತ್ತದೆ. ಆದರೆ, ದುರಾಸೆ ಇರಬಾರದು ಅಷ್ಟೇ. ಈ ಕುರಿತು ಪಕ್ಷದ ವೇದಿಕೆಯಲ್ಲೇ ಚರ್ಚೆ ಮಾಡುತ್ತೇವೆ' ಎಂದಿದ್ದಾರೆ.

ಸಮುದಾಯ ಸೆಳೆಯಲು ಹೆಚ್ಚು ಡಿಸಿಎಂ ಅಗತ್ಯ: ಪರಮೇಶ್ವರ

ಸಚಿವ ರಾಜಣ್ಣ ಲೋಕಸಭಾ ಚುನಾವಣೆಯ ದೃಷ್ಟಿಯಿಂದ ನೀಡಿದ ಹೇಳಿಕೆ ಸರಿ ಇದೆ. ಪಕ್ಷ ಸದೃಢಗೊಳಿಸಲು, ನಿರ್ದಿಷ್ಟ ಸಮುದಾಯಗಳನ್ನು ಸೆಳೆಯಲು ಹೆಚ್ಚು ಡಿಸಿಎಂ ಹುದ್ದೆಗಳನ್ನು ನೀಡುವುದು ಸಮಂಜಸವಾಗಿದೆ. ಈ ವಿಚಾರದಲ್ಲಿ ಹೈಕಮಾಂಡ್ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕಿದೆ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

'ಅಧಿಕಾರದಲ್ಲಿರುವ ಪಕ್ಷ ಲೋಕಸಭಾ ಚುನಾವಣೆಯಲ್ಲಿ ನಿರೀಕ್ಷಿತ ಗೆಲುವು ಪಡೆಯಲು ಸಾಧ್ಯವಾಗದೆ ಜನಾದೇಶವೆಂದು ಪರಿಗಣಿಸಿ, ಸರ್ಕಾರವನ್ನೇ ವಿಸರ್ಜಿಸಿದ ಪ್ರಕರಣಗಳು ಹಿಂದೆ ನಡೆದಿವೆ. ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಆ ರೀತಿ ಆಗಬಾರದು ಎಂಬ ಹಿನ್ನೆಲೆಯಲ್ಲಿ ರಾಜಣ್ಣ ಅವರು ಹೇಳಿಕೆ ನೀಡಿರಬಹುದು. ಹೆಚ್ಚು ಸ್ಥಾನ ಬಂದರೆ ಪಕ್ಷಕ್ಕೆ ಅನುಕೂಲ' ಎಂದರು.

3 ಸಿಎಂ, 15 ಡಿಸಿಎಂ ಮಾಡಿ: ಬಾಲಕೃಷ್ಣ

ಎಲ್ಲ ವರ್ಗದವರನ್ನೂ ತೃಪ್ತಿಪಡಿಸಬೇಕು ಎಂದರೆ ಮೂವರು ಮುಖ್ಯಮಂತ್ರಿ, 15 ಉಪಮುಖ್ಯಮಂತ್ರಿ ಸ್ಥಾನಗಳನ್ನು ಸೃಷ್ಟಿಸಬೇಕಾಗುತ್ತದೆ ಎಂದು ಮಾಗಡಿ ಕ್ಷೇತ್ರದ ಕಾಂಗ್ರೆಸ್ ಶಾಸಕ ಎಚ್.ಸಿ. ಬಾಲಕೃಷ್ಣ ವ್ಯಂಗ್ಯವಾಡಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಡಿಸಿಎಂ ಹುದ್ದೆ ಮುಗಿದ ಅಧ್ಯಾಯ ಎಂದು ರಾಜಣ್ಣ ಅವರಿಗೆ ಹೇಳಲು ಬಯಸುತ್ತೇನೆ. ವೈಯಕ್ತಿಕ ತೆವಲುಗಳನ್ನು ತೀರಿಸಿಕೊಳ್ಳಲು ಹೇಳಿಕೆ ಕೊಡುವುದನ್ನು ಬಿಡಬೇಕು. ಒಗ್ಗಟ್ಟಾಗಿ ನಾವು ಬರ ಎದುರಿಸಬೇಕು... ನಾಯಕರು ಕೂಡ ಪಕ್ಷ ಸಂಘಟನೆ ಮುಂದಿನ ಲೋಕಸಭೆ ಬಗ್ಗೆ ಯೋಚನೆ ಮಾಡಬೇಕು. ಈಗ ಅಪ್ರಸ್ತುತ ವಿಚಾರ ಎತ್ತುವುದು ಬೇಡ' ಎಂದರು.

8ನೇ ಪುಟ ನೋಡಿ

ಒಳ ಪುಟ
'ಮೋಸದ ಆರೋಪ: ವಿವಾಹ ರದ್ದು ಅಸಾಧ್ಯ' 9

Conditions Apply*

ಡೈಲಿವೇರ್ ವಿನ್ಯಾಸಗಳೊಂದಿಗೆ ನಿಮ್ಮ ವಿಶೇಷ ಕ್ಷಣಗಳನ್ನು ಸಂಭ್ರಮಿಸಿ

ಮಲಬಾರ್ ಗೋಲ್ಡ್ & ಡೈಮಂಡ್ಸ್‌ನ ಸೊಗಸಾದ ಶ್ರೇಣಿಯ ಅತ್ಯಂತ ಹಗುರುವಾದ ವಿನ್ಯಾಸಗಳ ಆಭರಣಗಳೊಂದಿಗೆ ನಿಮ್ಮ ಎಲ್ಲಾ ಸಂಭ್ರಮವನ್ನು ಆಚರಿಸಿ. ಎಲಿಗೆಂಟ್ ಚೇನ್‌ಗಳು ಮತ್ತು ಕ್ಲಾಸಿ ಬಳೆಗಳಿಂದ ಅತ್ಯಾಕರ್ಷಕ ಉಂಗುರಗಳವರೆಗೆ ಶುದ್ಧ ಚಿನ್ನ ಮತ್ತು ವಜ್ರಗಳಲ್ಲಿ ತಯಾರಿಸಲಾದ ಆಭರಣಗಳನ್ನು ನ್ಯಾಯಯುತ ಬೆಲೆಯಲ್ಲಿ ಖರೀದಿಸಿ. ನಮ್ಮ ಅತ್ಯದ್ಭುತವಾದ ವಿನ್ಯಾಸಗಳ ಆಭರಣಗಳು ನಿಮ್ಮ ಸಂಭ್ರಮದ ಸುಮಧುರ ಕ್ಷಣಗಳಿಗೆ ಮತ್ತಷ್ಟು ಹೊಳಪನ್ನು ತುಂಬುತ್ತವೆ. ಈ ಮೂಲಕ ಅವುಗಳನ್ನು ಇನ್ನಷ್ಟು ಸ್ಮರಣೀಯವಾಗಿಸುತ್ತವೆ.

MALABAR FAIR PRICE PROMISE
For Everyone. Every day. Everywhere.
ತಯಾರಿಕಾ ಶುಲ್ಕ 4.9%* ರಿಂದ ಆರಂಭ

ಬೆಂಗಳೂರು: ಎಂ.ಜಿ ರೋಡ್ | ಡಿಕೆನ್‌ಸನ್ ರಸ್ತೆ | ಜಯನಗರ | ರಾಜಾಜಿನಗರ | ಕೋರಮಂಗಲ | ಫೀನಿಕ್ಸ್ ಮಾರ್ಕೆಟ್‌ಸಿಟಿ | ಮಾರತ್ತಹಳ್ಳಿ | ಬನ್ನೇರುಘಟ್ಟ ರಸ್ತೆ ಕಮ್ಮನಹಳ್ಳಿ | ಮಲ್ಲೇಶ್ವರಂ | ಹೆಚ್‌ಎಸ್‌ಆರ್ ಲೇಔಟ್ | ಬನಶಂಕರಿ | ಯಲಹಂಕ | ಫೋರಮ್ ಮಾಲ್, ಪ್ರೆಸ್ಟೀಜ್ ಫಾಲ್ಕನ್ ಸಿಟಿ | ಆರ್‌ಆರ್ ನಗರ | ಮೈಸೂರು ಮಂಡ್ಯ | ಹಾಸನ | ಚಿಕ್ಕಮಗಳೂರು | ಮಂಗಳೂರು | ಉಡುಪಿ | ಬೆಳಗಾವಿ | ಹುಬ್ಬಳ್ಳಿ | ಧಾರವಾಡ | ವಿಜಯಪುರ | ಕಲಬುರಗಿ | ಬೀದರ್ | ಬಳ್ಳಾರಿ | ದಾವಣಗೆರೆ ಶಿವಮೊಗ್ಗ | ತುಮಕೂರು | ರಾಯಚೂರು.

Call: 1800 572 0916 | BUY ONLINE AT: malabargoldanddiamonds.com
INDIA | UK | USA | SINGAPORE | MALAYSIA | UAE | QATAR | KSA | OMAN | KUWAIT | BAHRAIN

ಭಾರತದ ಕುಟುಂಬಗಳ ಕುರಿತ ಎಸ್‌ಬಿಐನ ಸಂಶೋಧನಾ ವರದಿ

ಉಳಿತಾಯ ಕುಸಿತ, ಸಾಲ ದುಪ್ಪಟ್ಟು

ಮುಂಬೈ (ಪಿಟಿಐ): ಭಾರತದ ಕುಟುಂಬಗಳ ಉಳಿತಾಯವು 2021–22ಕ್ಕೆ ಹೋಲಿಸಿದರೆ 2022–23ನೇ ಹಣಕಾಸು ವರ್ಷದಲ್ಲಿ ಶೇ 55ರಷ್ಟು ಕುಸಿತ ಕಂಡಿದ್ದು, ಜಿಡಿಪಿಯ ಶೇ 5.1ಕ್ಕೆ ಇಳಿಕೆಯಾಗಿದೆ. ಆದರೆ, ಸಾಲದ ಪ್ರಮಾಣವು ಎರಡು ಪಟ್ಟು ಏರಿಕೆ ಕಂಡಿದ್ದು ₹15.6 ಲಕ್ಷ ಕೋಟಿಯಷ್ಟು ಆಗಿದೆ ಎಂದು ಎಸ್‌ಬಿಐನ ಸಂಶೋಧನಾ ವರದಿ ತಿಳಿಸಿದೆ.

2021–22ರಲ್ಲಿ ಕುಟುಂಬಗಳ ಉಳಿತಾಯದ ಪ್ರಮಾಣವು ಶೇ 11.5ರಷ್ಟು ಇತ್ತು. ಇದು 2022–23ರಲ್ಲಿ ಶೇ 5.1ಕ್ಕೆ ಇಳಿಕೆ ಕಂಡಿದ್ದು, 50 ವರ್ಷಗಳ ಕನಿಷ್ಠ ಮಟ್ಟವಾಗಿದೆ ಎಂದು ಹೇಳಿದೆ. 2019–20ರಲ್ಲಿ ಕುಟುಂಬಗಳ ಉಳಿತಾಯದ ಪ್ರಮಾಣವು ಶೇ 7.6ರಷ್ಟು ಇತ್ತು.

ಎಸ್‌ಬಿಐನ ಸಂಶೋಧನಾ ವರದಿಯ ಪ್ರಕಾರ, ಕುಟುಂಬದ ಉಳಿತಾಯದ ಪ್ರಮಾಣ ಕಡಿಮೆ ಆಗಿದ್ದು, ಭೌತಿಕ ಸ್ವರೂಪದ ಸ್ವತ್ತು (ರಿಯಲ್ ಎಸ್ಟೇಟ್, ಚಿನ್ನ ಇತ್ಯಾದಿ) ಖರೀದಿ ಹೆಚ್ಚಾಗುತ್ತಿದೆ. ಕುಟುಂಬಗಳ ಸಾಲದ ಮೊತ್ತವು ₹8.2 ಲಕ್ಷ ಕೋಟಿಯಷ್ಟು ಹೆಚ್ಚಾಗಿದ್ದು, ಇದರಲ್ಲಿ ವಾಣಿಜ್ಯ ಬ್ಯಾಂಕ್‌ಗಳಿಂದಲೇ ₹7.1 ಲಕ್ಷ ಕೋಟಿಯಷ್ಟು ಸಾಲ ಪಡೆಯಲಾಗಿದೆ.

ಎಸ್‌ಬಿಐ ಸಂಶೋಧನಾ ಘಟಕದ ಮುಖ್ಯ ಆರ್ಥಿಕ ಸಲಹೆಗಾರ ಸೌಮ್ಯ ಕಾಂತಿ ಘೋಷ್ ಪ್ರಕಾರ, ಕೋವಿಡ್ ಸಾಂಕ್ರಾಮಿಕದ ನಂತರ ಕುಟುಂಬದ ಸಾಲವು ₹8.2 ಲಕ್ಷ ಕೋಟಿಯಷ್ಟು ಏರಿಕೆ ಕಂಡಿದ್ದರೆ, ಉಳಿತಾಯವು ₹6.7 ಲಕ್ಷ ಕೋಟಿಯಷ್ಟು ಹೆಚ್ಚಾಗಿದೆ. ಎರಡು ವರ್ಷಗಳಲ್ಲಿ ಕುಟುಂಬಗಳು ಪಡೆದಿರುವ ಶೇ 55ರಷ್ಟು ರಿಟೇಲ್ ಸಾಲವನ್ನು ಮನೆ ಖರೀದಿಸಲು, ಶಿಕ್ಷಣದ ವೆಚ್ಚ ಭರಿಸಲು ಮತ್ತು ವಾಹನ ಖರೀದಿಸುವ ಉದ್ದೇಶಗಳಿಗೆ ಬಳಸಲಾಗಿದೆ.

ಬಡ್ಡಿದರವು ಕಡಿಮೆ ಪ್ರಮಾಣದಲ್ಲಿ ಇದ್ದಿದ್ದೇ ಕುಟುಂಬಗಳು ಈ ಪ್ರಮಾಣದಲ್ಲಿ ರಿಟೇಲ್ ಸಾಲ ಪಡೆಯಲು ಕಾರಣ. ಇದರಿಂದಾಗಿ ಕುಟುಂಬಗಳು ಉಳಿತಾಯ ಮಾಡುವ ಬದಲಾಗಿ ಆಸ್ತಿ, ಮನೆ ಖರೀದಿಯಂತಹ ಭೌತಿಕ ಸ್ವರೂಪದ ಉಳಿತಾಯದ ಕಡೆಗೆ ಹೆಚ್ಚು ಆಸಕ್ತಿ ತೋರಿವೆ ಎಂದು ಘೋಷ್ ಹೇಳಿದ್ದಾರೆ.

ಆಸ್ತಿ ಖರೀದಿಸುವ ಕಡೆಗೆ ಗಮನ ಹೆಚ್ಚಾಗಿರುವುದರಿಂದ ರಿಯಲ್ ಎಸ್ಟೇಟ್ ವಲಯದ ಚೇತರಿಕೆ ಆಗಿರುವುದಲ್ಲದೆ ಆಸ್ತಿಗಳ ಬೆಲೆಯೂ ಹೆಚ್ಚಾಗುವಂತಾಗಿದೆ ಎಂದು ಘೋಷ್ ತಿಳಿಸಿದ್ದಾರೆ.

ಗೃಹ ಸಾಲ ಮತ್ತು ಭೌತಿಕ ಸ್ವತ್ತುಗಳ ಮೂಲಕ ಕುಟುಂಬವು ಮಾಡುವ ಉಳಿತಾಯದ ನಡುವೆ ದೀರ್ಘಾವಧಿಯ ಸಂಬಂಧ ಇದೆ. ಕುಟುಂಬದ ನಿವ್ವಳ ಉಳಿತಾಯದಲ್ಲಿ ಇಳಿಕೆ ಕಂಡಿರುವ ಜೊತೆಗೇ ಭೌತಿಕ ಸ್ವತ್ತು ಖರೀದಿಸುವ ಮೂಲಕ ಮಾಡುವ ಉಳಿತಾಯವು ಹೆಚ್ಚಾಗಿದೆ ಎಂದು ಅವರು ಹೇಳಿದ್ದಾರೆ.

'ಜನರ ಆದ್ಯತೆ ಬದಲಾಗಿದೆ'

ದೇಶದಲ್ಲಿ ಕೌಟುಂಬಿಕ ಉಳಿತಾಯದ ಪ್ರಮಾಣವು ಕುಸಿತ ಕಂಡಿರುವುದಕ್ಕೆ ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಟೀಕೆ ವ್ಯಕ್ತವಾಗಿದೆ. ಇದಕ್ಕೆ ಪ್ರತಿಕ್ರಿಯೆ ನೀಡಿರುವ ಹಣಕಾಸು ಸಚಿವಾಲಯವು, ಜನರು ಬೇರೆ ಬೇರೆ ಹಣಕಾಸು ಉತ್ಪನ್ನಗಳಲ್ಲಿ ಹೂಡಿಕೆ ಮಾಡುತ್ತಿದ್ದಾರೆ. ಯಾವುದೇ ಸಂಕಷ್ಟ ಇಲ್ಲ ಎಂದಿದೆ.

ಜನರ ಆದ್ಯತೆ ಬದಲಾಗಿದ್ದು, ವಿವಿಧ ರೀತಿಯ ಹಣಕಾಸು ಉತ್ಪನ್ನಗಳ ಕಡೆಗೆ ಆಸಕ್ತಿ ತೋರಿಸುತ್ತಿರುವುದೇ ಕೌಟುಂಬಿಕ ಉಳಿತಾಯ ಕುಸಿತ ಕಾಣಲು ನಿಜವಾದ ಕಾರಣ. ಅಂಕಿ-ಅಂಶಗಳು ಇದನ್ನೇ ಸೂಚಿಸುತ್ತಿವೆ. ವಿವಿಧೆಡೆ ಹಂಚಿಕೆಯಾಗುತ್ತಿರುವ ಸುದ್ದಿಗಳಲ್ಲಿ ಹೇಳುತ್ತಿರುವಂತೆ ಕುಟುಂಬಗಳ ಮೇಲೆ ಯಾವುದೇ ಒತ್ತಡ ಇಲ್ಲ ಎಂದು ತಿಳಿಸಿದೆ.

ಅಭಿವೃದ್ಧಿಯ ಪರ ಈ ಕನಸುಗಾರ

ಛಲದಂಕಮಲ್ಲ...

ದಾವಣಗೆರೆಯ ಅಭಿವೃದ್ಧಿಯ ಕನಸು ಕಂಡು ಅವಕಾಶ ಸಿಕ್ಕಿದಾಗಲೆಲ್ಲಾ ಅದನ್ನು ಸಾಕಾರಗೊಳಿಸಿದವರು ಸಚಿವ ಎಸ್.ಎಸ್. ಮಲ್ಲಿಕಾರ್ಜುನ್. 'ದಾವಣಗೆರೆಯ ಅಭಿವೃದ್ಧಿಯ ಹರಿಕಾರ' ಎನ್ನುವುದು ಅವರ ಅಭಿಮಾನಿಗಳು, ಪಕ್ಷದ ಕಾರ್ಯಕರ್ತರು, ಆಪ್ತರ ಮಾತು.

ಈ ಮಾತಿಗೆ ಪೂರಕವಾಗಿ ಕೆಲಸ ಮಾಡಿದ್ದರಿಂದಲೇ ಅಭಿಮಾನಿಗಳು, ಜನರು ಅವರನ್ನು 'ಕನಸುಗಾರ ಮಲ್ಲಣ್ಣ' ಎಂದು ಕರೆಯುತ್ತಾರೆ. ಅಧಿಕಾರ ಸಿಕ್ಕಾಗಲೆಲ್ಲಾ ದಾವಣಗೆರೆಯ ಅಭಿವೃದ್ಧಿಗೆ ಶ್ರಮಿಸಿದವರು. ಅದರ ಇಚ್ಛಾಶಕ್ತಿಯ ಫಲವೇ 'ಏಷ್ಯಾದ ಅತಿ ದೊಡ್ಡ ಗಾಜಿನಮನೆ', 'ಜಾನುವಾರು ಮಾರುಕಟ್ಟೆ', 'ಕುಂದವಾಡ ಕೆರೆ ಹಾಗೂ ಟಿ.ವಿ. ಸ್ಟೇಷನ್ ಕೆರೆಯಿಂದ ನಗರಕ್ಕೆ ಕುಡಿಯುವ ನೀರು ಪೂರೈಸುವ ಯೋಜನೆಗಳು. ಇದಲ್ಲದೇ ಹತ್ತು ಹಲವು ಅಭಿವೃದ್ಧಿ ಕಾರ್ಯಕ್ರಮಗಳು ಅವರ ಅವಧಿಯಲ್ಲಾದವು.

ಸ್ಮಾರ್ಟ್ ಸಿಟಿ-ಮೊದಲ ಪಟ್ಟಿಯಲ್ಲೇ ದಾವಣಗೆರೆ ಸೇರುವುದರ ಹಿಂದೆ 'ಮಲ್ಲಣ್ಣ'ರ ಶ್ರಮವಿದೆ ಎನ್ನುತ್ತಾರೆ ಕಾರ್ಯಕರ್ತರು. ಕೇಂದ್ರ ಸರ್ಕಾರ ಸ್ಮಾರ್ಟ್ ಸಿಟಿ ಯೋಜನೆ ಘೋಷಣೆ ಮಾಡುತ್ತಲೇ ಮಹಾನಗರ ಪಾಲಿಕೆಯನ್ನು ಚುರುಕುಗೊಳಿಸಿದ ಮಲ್ಲಿಕಾರ್ಜುನ್, ಮೊದಲ ಪಟ್ಟಿಯಲ್ಲಿ ದಾವಣಗೆರೆ ಸೇರುವಂತೆ ಮಾಡಿದರು. ಪಾಲಿಕೆಯಲ್ಲಿ ತಮ್ಮ ಪಕ್ಷದ ಆಡಳಿತ ಇರುವುದನ್ನು ಕಂಡು ಅತ್ಯಂತ ಚಾಕಚಕ್ಯತೆಯಿಂದ ಕೆಲಸ ಮಾಡುವಂತೆ ಮಾಡಿದರು.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

'ಸ್ಮಾರ್ಟ್ ಸಿಟಿಯಿಂದ ಜನರಿಗೆ ಅನುಕೂಲವಾಗಬೇಕು ಎಂದು ಮಲ್ಲಿಕಾರ್ಜುನ್ ಬಯಸಿದ್ದರು. ಆಗ ಪಾಲಿಕೆಯಲ್ಲಿ ಆಡಳಿತ ನಮ್ಮದೇ ಇತ್ತು. ಇದು ಪೂರಕವಾಯಿತು. ಮಂಡಕ್ಕಿ ಭಟ್ಟಿ ಅಭಿವೃದ್ಧಿ ಕಾಣಬೇಕು. ಆ ಪ್ರದೇಶ ದೂಳು ಮುಕ್ತ ಆಗಲೇಬೇಕು ಎಂದು ಯೋಜನೆ ತರಲು ಶ್ರಮಿಸಿದರು. ಪಾಲಿಕೆ ಸದಸ್ಯರು, ಅಧಿಕಾರಿಗಳು ಅವರಿಗೆ ಬೆಂಬಲವಾಗಿದ್ದರು' ಎಂದು ನೆನಪಿಸಿಕೊಳ್ಳುತ್ತಾರೆ ಪಾಲಿಕೆ ಸದಸ್ಯ ಚಮನ್ ಸಾಬ್.

ನಗರದ ಜನಸಂಖ್ಯೆ ಏರುತ್ತಾ ಹೋದಂತೆ ಕುಡಿಯುವ ನೀರು ಒದಗಿಸುವುದು ಸವಾಲಾಗಬಾರದು ಎಂಬ ಕಾರಣಕ್ಕೆ ನಗರದ ನಾಲ್ಕೂ ದಿಕ್ಕುಗಳಲ್ಲಿ ನೀರಿನ ಆಕರವಾಗಿ ಕೆರೆಗಳಿಗೆ ಕಾಯಕಲ್ಪ ನೀಡುವ ಗುರಿಯನ್ನು ಮಲ್ಲಿಕಾರ್ಜುನ್ ಹೊಂದಿದ್ದರು. ಅದರಂತೆ ನಗರದ ದಕ್ಷಿಣ ಭಾಗದಲ್ಲಿನ ಆವರಗೆರೆ ಕೆರೆಗೆ ಕಾಲುವೆ ನೀರು ಹರಿಯುವಂತೆ ಮಾಡಿದ್ದರು. ಮುಂದೆ ನದಿಯಿಂದ ನೀರು ಹರಿಸಲು ಯೋಜನೆಯನ್ನೂ ರೂಪಿಸಿದ್ದರು. ದಾವಣಗೆರೆ ನಗರದಲ್ಲಿ ಗೃಹ ಕ್ರಾಂತಿ ಮಾಡಿದರು. ಸಾವಿರಾರು ಜನರಿಗೆ ಸೂರು ಕಲ್ಪಿಸಿದರು.

ದಾವಣಗೆರೆ ಉತ್ತರ, ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಹುತೇಕ ರಸ್ತೆಗಳು ಇಂದು ಅಭಿವೃದ್ಧಿ ಹೊಂದಿದ್ದರ ಹಿಂದೆ ಎಸ್.ಎಸ್. ಮಲ್ಲಿಕಾರ್ಜುನ್ ಅವರ ವಿಶೇಷ ಆಸಕ್ತಿ ಇದೆ. ಮಲ್ಲಿಕಾರ್ಜುನ್ ರಾಜಕಾರಣಿಯಾಗಿ, ಅಭಿವೃದ್ಧಿಪರ ಕೆಲಸಗಾರನಾಗಿದ್ದರಿಂದಲೇ ಅಭಿಮಾನಿಗಳು, ಜನರ ಪ್ರೀತಿ ಪಡೆದಿದ್ದಾರೆ ಎಂಬುದು ಅವರನ್ನು ಹತ್ತಿರದಿಂದ ಬಲ್ಲವರ ಮಾತು.

ಗಾಜಿನ ಮನೆಯ ಹಿರಿಮೆ

1999ರಲ್ಲಿ ಮಲ್ಲಿಕಾರ್ಜುನ್ ಮೊದಲ ಬಾರಿಗೆ ಸಚಿವರಾಗಿದ್ದಾಗ ಕುಂದವಾಡ ಕೆರೆಗೆ ಕಾಯಕಲ್ಪ ಒದಗಿಸಿದರು. ಕುಂದವಾಡ ಕೆರೆ ಪಕ್ಕದಲ್ಲಿ ಗಾಜಿನ ಮನೆ ನಿರ್ಮಾಣ ಮಾಡಿದ್ದು ಅವರ ಕನಸಿನ ಯೋಜನೆ. ತೋಟಗಾರಿಕೆ ಸಚಿವರಾಗಿದ್ದಾಗ ವಿದೇಶಿ ಪ್ರವಾಸದಲ್ಲಿ ಕಂಡ ಅಲ್ಲಿನ ಸುಂದರ ಉದ್ಯಾನಗಳಂತೆ ದಾವಣಗೆರೆಯಲ್ಲೂ ಅಂತಹದ್ದೊಂದು ಇರಬೇಕು ಎಂದು ಬಯಸಿ ಅದನ್ನು ನಿರ್ಮಿಸಿದರು. ಈ ಗಾಜಿನ ಮನೆ ಇಡೀ ಏಷ್ಯಾದಲ್ಲಿ ಅತಿ ದೊಡ್ಡ ಗಾಜಿನ ಮನೆ ಎಂಬ ಕೀರ್ತಿಗೆ ಪಾತ್ರವಾಗಿದೆ.

ಬೃಹತ್ ಗಾಜಿನಮನೆ ಹಾಗೂ ವಿದೇಶಿ ಅಲಂಕಾರಿಕ ಸಸ್ಯಗಳಿರುವ ಉದ್ಯಾನ ಜನರನ್ನು ಆಕರ್ಷಿಸುತ್ತಿದೆ. ಮಧ್ಯ ಕರ್ನಾಟಕ ಭಾಗದ ಪ್ರಸಿದ್ಧ ಪ್ರವಾಸಿ ತಾಣವಾಗಿದೆ. ವಿನೂತನ ಮಾದರಿಯಲ್ಲಿ ನಿರ್ಮಾಣಗೊಂಡಿರುವ ಗಾಜಿನಮನೆಯ ವಿನ್ಯಾಸಕ್ಕೆ 'ಝಾಕ್' ರಾಷ್ಟ್ರಪ್ರಶಸ್ತಿಯೂ ಲಭಿಸಿರುವುದು ವಿಶೇಷ.

ನಗರದ ಸೌಂದರ್ಯಕ್ಕೆ ಒತ್ತು

ನಗರದ ಸೌಂದರ್ಯಕ್ಕೆ ಹೆಚ್ಚು ಒತ್ತು ನೀಡಿದ ಮಲ್ಲಿಕಾರ್ಜುನ್ ರಸ್ತೆಗಳ ಇಕ್ಕೆಲಗಳಲ್ಲಿ ವಿಶೇಷ ವಿನ್ಯಾಸದ ವಿದ್ಯುತ್ ಕಂಬಗಳನ್ನು ಅಳವಡಿಸಲು ಕಾರಣರಾದರು. ಆ ವಿಶೇಷ ವಿನ್ಯಾಸದ ವಿದ್ಯುತ್ ಕಂಬಗಳು ಅವರು ವಿದೇಶದಲ್ಲಿ ಕಂಡು ನಮ್ಮಲ್ಲೂ ಇಂತಹ ಅಭಿವೃದ್ಧಿಯಾಗಬೇಕು ಎಂದು ಕಂಡ ಕನಸಿನ ಫಲ.

ವಿಶೇಷ ತಳಿಯ ಸಸಿಗಳನ್ನೂ ನಗರದ ರಸ್ತೆಗಳ ವಿಭಜಕದಲ್ಲಿ ನೆಡಿಸಿದ್ದು ಮಲ್ಲಿಕಾರ್ಜುನ್ ಅವರ ಯೋಜನೆ. ಇಂದು ಪಿ.ಬಿ. ರಸ್ತೆಯ ಮಧ್ಯಭಾಗದಲ್ಲಿ ಬೆಳೆದು ನಿಂತ ಮರಗಳು ನಗರದ ಸೌಂದರ್ಯ ಇಮ್ಮಡಿಗೊಳಿಸಿವೆ. ಇದರ ಹಿಂದೆ ಇದ್ದುದು 'ಮಲ್ಲಣ್ಣ'

ಸುಸಜ್ಜಿತ ಜಾನುವಾರು ಮಾರುಕಟ್ಟೆ

ಮಧ್ಯಕರ್ನಾಟಕ ದಾವಣಗೆರೆಯ ಜಾನುವಾರು ಸಂತೆಗೂ ಪ್ರಸಿದ್ಧಿ. ಇಲ್ಲಿಗೆ ಹಿಂದಿನಿಂದಲೂ ಜಾನುವಾರು ಖರೀದಿಗೆ ವಿವಿಧ ಜಿಲ್ಲೆಗಳ ಜನರು ಬರುತ್ತಿದ್ದರು. ಇದನ್ನು ಅರಿತ ಎಸ್.ಎಸ್. ಮಲ್ಲಿಕಾರ್ಜುನ ಸಚಿವರಾಗಿದ್ದಾಗ ರೈತರಿಗೆ ಅನುಕೂಲ ಕಲ್ಪಿಸಲು ಸುಸಜ್ಜಿತ ಜಾನುವಾರು ಮಾರುಕಟ್ಟೆ ನಿರ್ಮಿಸಿದರು. ಇದರ ಫಲವೇ ದೇಶದಲ್ಲಿಯೇ ಮಾದರಿ ಅನ್ನಿಸುವಂತಹ ಅಂತರರಾಷ್ಟ್ರೀಯ ಮಟ್ಟದ ಗೋವು ಮಾರುಕಟ್ಟೆ. ಸುಸಜ್ಜಿತವಾದ ಈ ಮಾರುಕಟ್ಟೆ ವೀಕ್ಷಣೆಗೆ ವಿವಿಧ ಜಿಲ್ಲೆಗಳ ಅಧಿಕಾರಿಗಳು ಆಗಾಗ ಭೇಟಿ ನೀಡುತ್ತಾರೆ.

ರಸ್ತೆಗಳ ಅಭಿವೃದ್ಧಿ: ವಾಹನ ದಟ್ಟಣೆ ಸಮಸ್ಯೆ ಗಮನಿಸಿದ ಮಲ್ಲಿಕಾರ್ಜುನ್ ವಿಶಾಲವಾದ ಪಿ.ಬಿ. ರಸ್ತೆ ನಿರ್ಮಿಸಲು ನೆರವಾದರು. ನಗರದ ಮಂಡಿಪೇಟೆ, ಚೌಕಿಪೇಟೆ, ಕೆ.ಆರ್. ಮಾರುಕಟ್ಟೆ ಸೇರಿದಂತೆ ದಾವಣಗೆರೆ ದಕ್ಷಿಣ ಹಾಗೂ ಉತ್ತರ ವಿಧಾನಸಭಾ ಕ್ಷೇತ್ರಗಳ ಹಲವು ಬಡಾವಣೆಗಳು, ಪ್ರಮುಖ ರಸ್ತೆಗಳಿಗೆ ಕಾಯಕಲ್ಪ ಕಲ್ಪಿಸಿದರು.

ಸ್ಮಾರ್ಟ್ ಸಿಟಿಗೆ ಮಲ್ಲಣ್ಣನ ಕಾಳಜಿ: ಸ್ಮಾರ್ಟ್ ಸಿಟಿ ಯೋಜನೆಯಡಿ ದಾವಣಗೆರೆ ಮೊದಲ ಪಟ್ಟಿಯಲ್ಲೇ ಆಯ್ಕೆಯಾಗಲು ಮಹಾನಗರ ಪಾಲಿಕೆ ಅಧಿಕಾರಿಗಳು, ಜನಪ್ರತಿನಿಧಿಗಳನ್ನು ಹುರಿದುಂಬಿಸಿದವರು ಎಸ್.ಎಸ್. ಮಲ್ಲಿಕಾರ್ಜುನ್.

ಸ್ಮಾರ್ಟ್ ಸಿಟಿ ಯೋಜನೆಗೆ ನಗರ ಆಯ್ಕೆಯಾಗಲು ವಿಸ್ತೃತವಾದ ಪ್ರಾಜೆಕ್ಟ್ ತಯಾರಿಸಲಾಗಿತ್ತು. ಆ ಪ್ರಾಜೆಕ್ಟ್‌ಗೆ ದೇಶದಲ್ಲಿಯೇ ಉತ್ತಮವಾದ ಪ್ರಾಜೆಕ್ಟ್ ಎಂಬ ಮೆಚ್ಚುಗೆಗೆ ಪಾತ್ರವಾಗಿತ್ತು.

'ವಿವಿಧ ಇಲಾಖೆಯ ಸಮನ್ವಯದಿಂದ ಅನುದಾನ ಬರುವಂತೆ ನೋಡಿಕೊಳ್ಳುವ ಚಾಣಾಕ್ಷತನ ಎಸ್.ಎಸ್. ಮಲ್ಲಿಕಾರ್ಜುನ್ ಅವರಲ್ಲಿದೆ. ಕುಡಿಯುವ ನೀರು ಪೂರೈಕೆ, ಯುಜಿಡಿ ಕಾಮಗಾರಿ, ರಸ್ತೆಗಳ ಅಭಿವೃದ್ಧಿಯೇ ಇರಲಿ, ಯಾವುದಕ್ಕೂ ಮಹಾನಗರ ಪಾಲಿಕೆ ಮೇಲೆ ಹೆಚ್ಚಿನ ಒತ್ತಡ ತರುತ್ತಿರಲಿಲ್ಲ. ಬೇರೆ ಬೇರೆ ಇಲಾಖೆಯಿಂದ ಅನುದಾನ ತಂದು ಅಭಿವೃದ್ಧಿ ಮಾಡಿದರು' ಎಂದು ನೆನಪಿಸಿಕೊಳ್ಳುತ್ತಾರೆ ಅವರ ಅವಧಿಯಲ್ಲಿ ಕೆಲಸ ಮಾಡಿದ್ದ ಅಧಿಕಾರಿಗಳು. ಕುಂದವಾಡ ಕೆರೆ ನೀರನ್ನು ಕುಡಿಯಲು ಬಳಸುವ ಯೋಜನೆ ಉತ್ತಮ ಯೋಜನೆ. ಇಂತಹ ಕೆಲಸಗಳು ಬೇರೆ ಜಿಲ್ಲೆಯಲ್ಲಿ ಆಗಲಿಲ್ಲ. ಇದರ ಹಿಂದೆ ಅವರ ಇಚ್ಛಾಶಕ್ತಿ ಇದೆ ಎನ್ನುತ್ತಾರೆ ಅವರನ್ನು ಹತ್ತಿರದಿಂದ ಬಲ್ಲವರು.

ಕುಂದವಾಡ ಕೆರೆಯ ಅಭಿವೃದ್ಧಿ ಕಾಮಗಾರಿ ವೀಕ್ಷಣೆ

22 ಕೆರೆ ತುಂಬಿಸುವ ಏತ ನೀರಾವರಿ ಯೋಜನೆ ಆರಂಭದ ಕ್ಷಣ

ದೂರದೃಷ್ಟಿತ್ವದ ಹೊಳಹು ಎಸ್‌ಎಸ್‌ಎಂ

• ಅಥಣಿ ಎಸ್. ವೀರಣ್ಣ



'ದುಡ್ಡಿದ್ದ ಎಲ್ಲರೂ ಸಾಧನೆ ಮಾಡಲು ಆಗದು. 'ಹಣ ನಿಭಾಯಿಸುವಿಕೆ' ಒಂದು ಸವಾಲಿನ ಕೆಲಸ. ಆ ಬುದ್ಧಿಮತ್ತೆ ಎಲ್ಲರಿಗೂ ಒಲಿಯದು. ಇದರ ನಾಡಿಮಿಡಿತ ಅರ್ಥೈಸಿಕೊಂಡು ಒಂದಿನಿತೂ ವ್ಯರ್ಥವಾಗಲು ಬಿಡದೆ ಅಭಿವೃದ್ಧಿ, ಜನರ ಸೇವಾ ಕಾರ್ಯಗಳಿಗೆ ಹಣ ಬಳಕೆ ಆಗುವಂತೆ ಮಾಡಿದ್ದಾರೆ. ಎಸ್.ಎಸ್. ಮಲ್ಲಿಕಾರ್ಜುನ್'.

ಉದ್ಯಮಶೀಲತೆ, ದೂರದೃಷ್ಟಿತ್ವ, ಅಭಿವೃದ್ಧಿ ಪರ ಚಿಂತನೆ, ಜನರ ಸೇವಾ ಕಾರ್ಯ ಇವೆಲ್ಲವೂ ಅವರಿಗೆ ರಕ್ತಗತವಾಗಿ ಬಂದಿವೆ. ಈ ಗುಣಗಳೇ ಅವರಿಗೆ 'ಮನಿ ಮ್ಯಾನೇಜ್‌ಮೆಂಟ್'ನ ಪಾಠ ಕಲಿಸಿವೆ. ವಿದ್ಯಾರ್ಥಿ ದೆಸೆಯಿಂದಲೇ ಅವರಿಗೆ ಉದ್ಯಮಶೀಲತೆಯ ಚಿಂತನೆ ಬೆಳೆದಿತ್ತು. ದ್ವಿತೀಯ ಬಿ.ಕಾಂ ಓದುವಾಗ ₹ 15 ಕೋಟಿ ಮೌಲ್ಯದ ಯೋಜನೆಯೊಂದನ್ನು ಸಿದ್ಧಪಡಿಸಿದ್ದರು. ಅದು ಕಾರ್ಯಗತಕ್ಕೂ ಬಂದಿತು. ಆ ಸಮಯದಲ್ಲಿ ಇತರ ಉದ್ಯಮಿಗಳಿಗೆ ಅದು ನಿಜಕ್ಕೂ ಅಚ್ಚರಿ ಮೂಡಿಸಿತ್ತು. ಅವರ ಉದ್ಯಮಶೀಲತೆಯ ಓಟಕ್ಕೆ ಇದು ಒಂದು ಉದಾಹರಣೆಯಷ್ಟೇ.

ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಗಳ ಮೂಲಕ ಔದ್ಯೋಗಿಕ ಅವಕಾಶಗಳನ್ನು ಹೆಚ್ಚಿಸಬೇಕು ಎನ್ನುವ ತುಡಿತ ಸದಾ ಅವರಲ್ಲಿ ಮನೆಮಾಡಿರುತ್ತದೆ. ಈ ಚಿಂತನೆಗೆ ಪೂರಕವಾಗಿ ಮೊತ್ತಮೊದಲು ಆರಂಭಿಸಿದ್ದು ಕಲ್ಲೇಶ್ವರ ಇಂಡಸ್ಟ್ರೀಸ್. ಬಳಿಕ ಸ್ಯಾಮ್‌ಸಂಗ್ ಡಿಸ್ಟಿಲರೀಸ್, ಸಕ್ಕರೆ ಕಾರ್ಖಾನೆ... ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಸಕ್ಕರೆ ಕಾರ್ಖಾನೆ ಬಹುದೊಡ್ಡ ಉದ್ಯಮವಾಗಿ ಬೆಳೆದಿದೆ. ಅವರ ಚಿಂತನಶೀಲತೆಗೆ ಸಾಕ್ಷಿ ಎಂಬಂತೆ ಇದು ರೂಪುಗೊಂಡಿದೆ. ಇದಕ್ಕೆ ಮತ್ತೊಂದು ಸೇರ್ಪಡೆ 'ಎಥೆನಾಲ್ ಪ್ಲಾಂಟ್'.

ಅವರು ಯಾವುದೇ ಉದ್ಯಮ ಅಥವಾ ಅಭಿವೃದ್ಧಿ ಕಾರ್ಯ ಆರಂಭಿಸಬೇಕು ಎಂದರೆ ವಿಷಯ ಆಧಾರಿತವಾಗಿ ಅಧ್ಯಯನ ಮಾಡುತ್ತಾರೆ. ಆ ಬಳಿಕವೇ ಅದನ್ನು ಕಾರ್ಯರೂಪಕ್ಕೆ ತರುವುದು. ಸಕ್ಕರೆ ಕಾರ್ಖಾನೆ ಆರಂಭಕ್ಕೂ ಮುನ್ನ ಚೀನಾ, ಬ್ರೆಜಿಲ್, ಶ್ರೀಲಂಕಾ ದೇಶಗಳಿಗೆ ಭೇಟಿ ನೀಡಿ ಅಲ್ಲಿನ ಸಕ್ಕರೆ ಕಾರ್ಖಾನೆ ಉದ್ಯಮದ ಬಗ್ಗೆ ಕೂಲಂಕಷ ಅಧ್ಯಯನ ಮಾಡಿ ಬಳಿಕ ಕರ್ನಾಟಕದಲ್ಲಿ ಅದನ್ನು ಕಾರ್ಯರೂಪಕ್ಕೆ ತರಲು ಅಣಿಯಾದರು. ಅವರಲ್ಲಿ ಇಂತಹ ದೂರದೃಷ್ಟಿತ್ವ, ಅಧ್ಯಯನಶೀಲತೆಯನ್ನು ಕಣ್ಣಾರೆ ಕಂಡಿದ್ದೇನೆ. ಈಗ ಹಲವು ಸಕ್ಕರೆ ಕಾರ್ಖಾನೆಗಳು ಆರಂಭವಾಗಿವೆ. ಇಲ್ಲಿಂದ ವಿದೇಶಗಳಿಗೂ ಸಕ್ಕರೆ ರಫ್ತು ಮಾಡಲಾಗುತ್ತಿದೆ.

ದಾವಣಗೆರೆ 'ಶಿಕ್ಷಣ ಕಾಶಿ' ಎಂದು ಹೆಸರು ಪಡೆಯುವಲ್ಲಿ ಅವರ ತಂದೆಯವರಾದ ಶಾಮನೂರು ಶಿವಶಂಕರಪ್ಪ ಅವರೊಂದಿಗೆ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಕೊಡುಗೆ ಬಹಳಷ್ಟಿದೆ. ಒಬ್ಬ ವಿದ್ಯಾರ್ಥಿ ಎಲ್‌ಕೆಜಿಯಿಂದ ಹಿಡಿದು ಔದ್ಯೋಗಿಕ ಶಿಕ್ಷಣದವರೆಗೂ

ಬಾಪೂಜಿ ವಿದ್ಯಾಸಂಸ್ಥೆಯ ಸುವರ್ಣ ಮಹೋತ್ಸವದ ಸಂದರ್ಭ

ಅಧ್ಯಯನ ಮಾಡಿ ಹೊರಹೊಮ್ಮಲು ಅನುಕೂಲವಾಗುವಂತೆ ಹಲವು ವಿದ್ಯಾಸಂಸ್ಥೆಗಳು, ಕಾಲೇಜುಗಳು, ಮೆಡಿಕಲ್ ಕಾಲೇಜುಗಳನ್ನು ಆರಂಭಿಸಿದ್ದಾರೆ. ಜೆ.ಜೆ.ಎಂ ಮೆಡಿಕಲ್ ಕಾಲೇಜು ಅಭಿವೃದ್ಧಿಪಡಿಸುವಲ್ಲಿ ಇವರ ಪಾತ್ರ ಪ್ರಮುಖವಾಗಿದೆ. ಇದರೊಂದಿಗೆ ಎಸ್.ಎಸ್. ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಕಾಲೇಜು ದಾವಣಗೆರೆಗೆ ಮುಕುಟಪ್ರಾಯದಂತಿವೆ.

ಜಿಲ್ಲೆಯ ಹಾಗೂ ನಗರದ ಅಂದ ಹೆಚ್ಚಿಸಲು ಹಾಗೂ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಎಸ್‌ಎಸ್‌ಎಂ ಹಲವು ಮುನ್ನುಡಿಗಳನ್ನು ಬರೆದಿದ್ದಾರೆ. ಸ್ಮಾರ್ಟ್‌ಸಿಟಿ ಯೋಜನೆಯಡಿ ಸಾಕಷ್ಟು ಅನುದಾನ ತಂದು ನಗರದ ಸೌಂದರ್ಯಕ್ಕೆ ಒತ್ತು ನೀಡಿದ್ದಾರೆ. ಪಿ.ಬಿ. ರಸ್ತೆ ನವೀಕರಣಗೊಳಿಸಿ, ಅಲಂಕಾರಿಕ ಬೀದಿ ದೀಪಗಳನ್ನು ಅಳವಡಿಸಿದರು. ಚೀನಾ ಮಾದರಿಯ ಈ ಬೀದಿ ದೀಪಗಳು ರಾಜ್ಯದಲ್ಲೇ ಮೊದಲು ದಾವಣಗೆರೆಯ ಅಂದವನ್ನು ಹೆಚ್ಚಿಸಿದವು. ಈ ಮಾದರಿಯ ಬೀದಿ ದೀಪಗಳನ್ನೇ ಇಂದು ಇತರ ಜಿಲ್ಲೆಗಳಲ್ಲಿ ಅಳವಡಿಸಲಾಗಿದೆ. ಅವರ ಅಭಿವೃದ್ಧಿಪರ ಚಿಂತನೆಗೆ ಇಂತಹ ಹಲವು ಕಾರ್ಯಗಳು ಸಾಕ್ಷಿಯಾಗಿವೆ. ಎಸ್‌ಎಸ್‌ಎಂ ಬಿ.ಕಾಂ ಪದವೀಧರರಾದರೂ ಆಧುನಿಕ ತಂತ್ರಜ್ಞಾನದ ಬಗ್ಗೆ ಅವರಿಗಿರುವ ಜ್ಞಾನ ಅಪಾರ. ಅದನ್ನು ನಗರದ ಸೌಂದರೀಕರಣಕ್ಕೆ, ಅಭಿವೃದ್ಧಿ ಕಾರ್ಯಗಳಿಗೆ ಸಮರ್ಥವಾಗಿ ಬಳಸಿಕೊಂಡಿದ್ದಾರೆ.

ತಂದೆಯ ಹಾದಿಯಲ್ಲಿ: ಮಲ್ಲಿಕಾರ್ಜುನ್ ಅವರು ಯಾವುದೇ ಯೋಜನೆ ರೂಪಿಸುವಾಗಲೂ ತಂದೆ ಶಾಮನೂರು ಶಿವಶಂಕರಪ್ಪ ಅವರ ಮಾರ್ಗದರ್ಶನ ಪಡೆಯುತ್ತಾರೆ. ಅವರೊಂದಿಗೆ ಸಮಾಲೋಚನೆ ನಡೆಸಿ, ಸಲಹೆ, ಸೂಚನೆ ಪಡೆದು ಬಳಿಕ ತಮ್ಮದೇ ಶೈಲಿಯಲ್ಲಿ ಅದನ್ನು ಕಾರ್ಯರೂಪಕ್ಕೆ ತರುತ್ತಾರೆ.

ರಾಜಕೀಯ ಕ್ಷೇತ್ರದಲ್ಲಿ ಅವರಿಗೆ ಉತ್ತಮ ಭವಿಷ್ಯವಿದೆ. ತಂದೆಯಂತೆಯೇ ಜಾತ್ಯತೀತವಾಗಿ ಎಲ್ಲ ಸಮುದಾಯದವರನ್ನೂ ಒಳಗೊಂಡು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುತ್ತಾರೆ. ಆ ಕಾರಣಕ್ಕಾಗಿಯೇ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಬಹುಮತದೊಂದಿಗೆ ಗೆಲುವು ಪಡೆದರು. ಮುಖ್ಯಮಂತ್ರಿಯಾಗುವ ಎಲ್ಲ ಅರ್ಹತೆಗಳೂ ಅವರಲ್ಲಿವೆ.

ಬಾಪೂಜಿ ಶಿಕ್ಷಣ ಸಂಸ್ಥೆಗಳ ಸುವರ್ಣ ಮಹೋತ್ಸವಕ್ಕೆ ಅಂದಿನ ರಾಷ್ಟ್ರಪತಿ ಎ.ಪಿ.ಜೆ.ಅಬ್ದುಲ್ ಕಲಾಂ ಅವರನ್ನು ಅತಿಥಿಯಾಗಿ ಕರೆಯಿಸಿದ್ದರು. ಅಬ್ದುಲ್ ಕಲಾಂ ಅವರಲ್ಲಿ ಇದ್ದ ವಿಶನ್ ಇವರಲ್ಲೂ ಇದೆ ಎಂದರೆ ಅತಿಶಯೋಕ್ತಿಯಲ್ಲ. ಅವರ ಅಭಿವೃದ್ಧಿ ಕಾರ್ಯಗಳನ್ನು ಗಮನಿಸಿದ ಅಬ್ದುಲ್ ಕಲಾಂ ಅವರು 'ನಿಮಗೆ ಈಗ ವಯಸ್ಸೆಷ್ಟು' ಎಂದು ಕೇಳಿ ಹುಬ್ಬೇರಿಸಿದ್ದರು. ಅವರ ಅಭಿವೃದ್ಧಿಯ ನಾಗಾಲೋಟ ಅಷ್ಟರಮಟ್ಟಿಗಿದೆ.

56ನೇ ಜನ್ಮದಿನ ಆಚರಿಸಿಕೊಳ್ಳುತ್ತಿರುವ ಮಲ್ಲಿಕಾರ್ಜುನ್ ಅವರಿಗೆ ದೇವರು ಆರೋಗ್ಯ, ಆಯಸ್ಸು ನೀಡಲಿ. ಎಲ್ಲ ಕ್ಷೇತ್ರಗಳಲ್ಲೂ ಇನ್ನಷ್ಟು ಬೆಳೆಯಲಿ ಎಂದು ಆಶಿಸುವೆ.

ಲೇಖಕರು: ಉದ್ಯಮಿ, ಹಿರಿಯ ಲೆಕ್ಕ ಪರಿಶೋಧಕರು

ಆಲದ ಮರದ ಚಿಗುರು....

ನಾಡಿನ ಹಿರಿಯ ರಾಜಕೀಯ ಧುರೀಣ, ದಾವಣಗೆರೆಯ ಅನ್ವರ್ಥನಾಮದಂತಿರುವವರು ಶಾಮನೂರು ಶಿವಶಂಕರಪ್ಪ. ಈ ಬೃಹತ್ ಆಲದ ಮರದ ಚಿಗುರು ಎಸ್.ಎಸ್.ಮಲ್ಲಿಕಾರ್ಜುನ ಅವರು.

ಮಧ್ಯ ಕರ್ನಾಟಕ ದಾವಣಗೆರೆ ಜನತೆಗೆ ಚಿರಪರಿಚಿತರಾಗಿರುವ ಶಾಮನೂರು ಶಿವಶಂಕರಪ್ಪ ಅವರ ಸುಪುತ್ರರಾಗಿರುವ ಎಸ್.ಎಸ್. ಮಲ್ಲಿಕಾರ್ಜುನ ಅವರು ತಮ್ಮ ತಂದೆಯ ಜನಪರ ಚಿಂತನೆಯ ಹಾದಿಯಲ್ಲಿಯೇ ನಡೆಯುತ್ತಿದ್ದರೂ ತಮ್ಮದೇ ವಿಶಿಷ್ಟ ಛಾಪು, ಜನಪ್ರಿಯತೆ ಹೊಂದಿರುವ ಜನನಾಯಕ. ಸಣ್ಣ ವಯಸ್ಸಿನಲ್ಲಿಯೇ ದಾವಣಗೆರೆ ವಿಧಾನಸಭಾ ಕ್ಷೇತ್ರದಿಂದ ರಾಜಕೀಯ ಜೀವನ ಪ್ರವೇಶಿಸಿದವರು. ನಷ್ಟದಲ್ಲಿದ್ದ ದಾವಣಗೆರೆ ಸಕ್ಕರೆ ಕಾರ್ಖಾನೆಯ ಜವಾಬ್ದಾರಿಯನ್ನು ವಹಿಸಿಕೊಂಡು, ತಮ್ಮ ಅವಿರತ ಶ್ರಮದಿಂದ ಲಾಭದ ಹಾದಿಯಲ್ಲಿ ನಡೆಯುವಂತೆ ಮಾಡಿದರು. ಅತ್ಯಾಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಸಕ್ಕರೆ ಜೊತೆಗೆ ವಿದ್ಯುತ್ ಉತ್ಪಾದನೆಗೆ ಒತ್ತು ನೀಡಿದ ಮಲ್ಲಿಕಾರ್ಜುನ ಅವರ ಬದ್ಧತೆ , ಅಲ್ಲಿನ ರೈತರ, ಜನರ ಮೆಚ್ಚುಗೆಗೆ ಪಾತ್ರವಾಗಿದೆ.

ಎಸ್.ಎಂ.ಕೃಷ್ಣ ಅವರ ಸರ್ಕಾರದಲ್ಲಿ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರಾಗಿ ಬಹು ಜನೋಪಯೋಗಿ ಕಾರ್ಯಗಳನ್ನು ಮಾಡಿದ್ದು ಗಮನಾರ್ಹ. ಭದ್ರಾನಾಲೆಯಿಂದ ಕುಂದುವಾಡ ಕೆರೆಗೆ ನೀರನ್ನು ಹರಿಸಿ ಕುಡಿಯುವ ನೀರಿಗಾಗಿ ಪರದಾಡುತ್ತಿದ್ದ ಜನರ ಬವಣೆಯನ್ನು ನೀಗಿಸಿ ಇತಿಹಾಸ ನಿರ್ಮಿಸಿದರು. ಬಡಬಗ್ಗರು, ಕೂಲಿ ಕಾರ್ಮಿಕರು, ದುರ್ಬಲವರ್ಗದವರ ಬಗ್ಗೆ ವಿಶೇಷ ಕಾಳಜಿ ಹೊಂದಿರುವ ಮಲ್ಲಿಕಾರ್ಜುನ ಅವರು 11,500 ಕ್ಕೂ ಹೆಚ್ಚು ಮನೆಗಳನ್ನು ನಿರ್ಮಿಸುವ ಮೂಲಕ ಬಡವರಿಗೆ ನೆಮ್ಮದಿಯ ಸೂರನ್ನು ಕಲ್ಪಿಸಿದವರು.

2016ರಲ್ಲಿ ಸಚಿವರಾಗಿದ್ದಾಗ ದಾವಣಗೆರೆ ಜಿಲ್ಲೆಯಲ್ಲಿ ಏಷ್ಯಾದಲ್ಲಿಯೇ ದೊಡ್ಡ ಗ್ಲಾಸ್ ಹೌಸ್ ನಿರ್ಮಾಣ, ಸ್ಮಾರ್ಟ್ ಸಿಟಿ, ಜಲಸಿರಿ ಯೋಜನೆಗಳನ್ನು ಜಾರಿಗೆ ತಂದ ಕೀರ್ತಿಗೂ ಪಾತ್ರರಾಗಿದ್ದಾರೆ. ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿ ಸೇವೆ ಸಲ್ಲಿಸುತ್ತಿರುವ ಎಸ್.ಎಸ್.ಮಲ್ಲಿಕಾರ್ಜುನ ಅವರು ತಮ್ಮ ಪರಿಶ್ರಮ ಹಾಗೂ ದೂರದೃಷ್ಟಿಯಿಂದ ರಾಜ್ಯದ ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ ಕ್ಷೇತ್ರದಲ್ಲಿ ತಮ್ಮ ಛಾಪು ಮೂಡಿಸಿದ್ದಾರೆ. ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕಾ ಸಚಿವರಾಗಿ ಮಲ್ಲಿಕಾರ್ಜುನ ಅವರ ಅಪ್ರತಿಮ ಸೇವೆ ಕರ್ನಾಟಕವನ್ನು ಯಶಸ್ಸಿನ ಹಾದಿಯಲ್ಲಿ ಕೊಂಡೊಯ್ಯಲಿದೆ ಎಂಬುದು ನನ್ನ ಬಲವಾದ ನಂಬಿಕೆ. ತಮ್ಮ ತಂದೆಯಂತೆಯೇ ಆಲದ ಮರವಾಗಿ ಅನೇಕ ಜನರ ಬಾಳಿಗೆ ನೆರಳು ನೀಡುವಂತಾಗಲಿ ಎಂದು ಹಾರೈಸುತ್ತೇನೆ. ಮಲ್ಲಿಕಾರ್ಜುನ ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

ಶ್ರೀಯುತ ಸಿದ್ದರಾಮಯ್ಯ, ಮುಖ್ಯಮಂತ್ರಿಗಳು

ಪಕ್ಷದ ಯುವ ಕಾರ್ಯಕರ್ತರಿಗೆ ಮಾದರಿ

ಅಭಿಮಾನಿಗಳು ಹಾಗೂ ಜನರ ಪಾಲಿನ ಪ್ರೀತಿಯ 'ಮಲ್ಲಣ್ಣ'ನಾಗಿ, ಸಮಾಜ ಸೇವೆ, ಪಕ್ಷ ಸಂಘಟನೆ, ಪಕ್ಷ ನಿಷ್ಠೆಯಲ್ಲಿ ತಂದೆ ಶಾಮನೂರು ಶಿವಶಂಕರಪ್ಪ ಅವರ ಹಾದಿಯಲ್ಲೇ ಸಾಗಿ ಬಂದಿರುವ ರಾಜ್ಯದ ಪ್ರಭಾವಿ ನಾಯಕರಲ್ಲಿ ಒಬ್ಬರು ಎಸ್.ಎಸ್.ಮಲ್ಲಿಕಾರ್ಜುನ ಅವರು.

ತಮ್ಮ ತಂದೆಯ ಮಾದರಿಯಲ್ಲಿ ಪಕ್ಷದ ಕಟ್ಟಾಳುಗಳಾಗಿ ಮಧ್ಯ ಕರ್ನಾಟಕ ಭಾಗದಲ್ಲಿ ಕಾಂಗ್ರೆಸ್ ಪಕ್ಷವನ್ನು ಕಟ್ಟಿದವರು. ತಂದೆಯವರು ಪ್ರಭಾವಿ ನಾಯಕರಾದರೂ ತಳಮಟ್ಟದ ರಾಜಕಾರಣದಿಂದ ಬೆಳೆದವರು ಮಲ್ಲಿಕಾರ್ಜುನ ಅವರು. ವಿಶ್ವವಿದ್ಯಾಲಯದ ಸೆನೆಟ್ ಸದಸ್ಯತ್ವದಿಂದ ಇಂದು ಈ ರಾಜ್ಯದ ಸಚಿವರಾಗಿರುವ ಇವರು ಪಕ್ಷದ ಯುವ ಕಾರ್ಯಕರ್ತರಿಗೆ ಮಾದರಿ. ಕಾಂಗ್ರೆಸ್ ಪಕ್ಷಕ್ಕೆ ಎಂತಹ ಸಂಕಷ್ಟ ಬಂದಾಗಲೂ ಜಗ್ಗದೆ, ಕುಗ್ಗದೆ ಪಕ್ಷದ ಬೆನ್ನಿಗೆ ತಮ್ಮ ತಂದೆಯವರಂತೆ ನಿಂತ ವ್ಯಕ್ತಿತ್ವ ಮಲ್ಲಿಕಾರ್ಜುನ ಅವರದ್ದು.

ಶಾಮನೂರು ಶಿವಶಂಕರಪ್ಪ ಅವರನ್ನು ಬಿಟ್ಟರೆ ಮಧ್ಯ ಕರ್ನಾಟಕದಲ್ಲಿ ಸಮರ್ಥವಾಗಿ ಪಕ್ಷವನ್ನು ಮುನ್ನಡೆಸುವ ನಾಯಕತ್ವ ಇವರಲ್ಲಿದೆ. ಶಿಕ್ಷಣ ತಜ್ಞ, ಸರಳ, ಮಿತಭಾಷಿ, ಸ್ನೇಹಜೀವಿಗಳಾದ ಇವರು ಪಕ್ಷದ ಶಕ್ತಿ ಎಂದರೆ ತಪ್ಪಲ್ಲ. ತಂದೆಯವರು ದೊಡ್ಡ ನಾಯಕನಾದರೂ ಇವರು ಬಯಸಿ ರಾಜಕಾರಣಕ್ಕೆ ಬಂದವರಲ್ಲ, ಇವರು ಶಾಸಕರಾಗಿ ಆಯ್ಕೆಯಾದ ಸನ್ನಿವೇಶವೇ ಕೌತುಕ ಹುಟ್ಟಿಸುವಂತಹದ್ದು. ಆ ಸನ್ನಿವೇಶ ಕೇಳಿದ ನಂತರ ಇವರಿಗೆ ಪಕ್ಷದ ಬಗೆಗೆ ಇರುವ ಬದ್ಧತೆ ಹೆಚ್ಚು ಇಷ್ಟವಾಯಿತು.

'ಕರ್ನಾಟಕದ ಮ್ಯಾಂಚೆಸ್ಟರ್ ದಾವಣಗೆರೆ' ಇವರ ನೇತೃತ್ವದಲ್ಲಿ ಉತ್ತಮ ನಗರವಾಗಿ ಬೆಳೆಯುತ್ತಿದೆ. ಇಡೀ ನಗರಕ್ಕೆ ಬೇಕು- ಬೇಡಗಳ ಮಾಹಿತಿಯನ್ನು ಕುಳಿತಲ್ಲೇ ಹೇಳಬಲ್ಲವರು. ಪ್ರಸ್ತುತ ಸರ್ಕಾರದಲ್ಲಿ ಗಣಿ, ಭೂವಿಜ್ಞಾನ ಮತ್ತು ತೋಟಗಾರಿಕೆ ಸಚಿವರಾಗಿ ಅತ್ಯಂತ ಉತ್ಸಾಹದಿಂದ ಕೆಲಸ ಮಾಡುತ್ತಿರುವ ಮಲ್ಲಿಕಾರ್ಜುನ ಅವರು, ತಮ್ಮ ಇಲಾಖೆಗಳಲ್ಲಿ ಕ್ರಾಂತಿಕಾರಕ ಬದಲಾವಣೆ ತರುವಂತಹ ಯೋಜನೆ- ಯೋಚನೆಗಳನ್ನು ಇಟ್ಟುಕೊಂಡಿದ್ದಾರೆ.

ಹಿರಿಯರಾದ ಶಾಮನೂರು ಶಿವಶಂಕರಪ್ಪ ಅವರಂತೆಯೇ ಇವರದ್ದು ಎಂದಿಗೂ ಬತ್ತದ ಉತ್ಸಾಹ. ಇವರ ಸಂಘಟನಾ ಶಕ್ತಿ, ಸಾಮರ್ಥ್ಯಗಳು ಈ ರಾಜ್ಯದ ಜನರ ಹಾಗೂ ಪಕ್ಷದ ಬೆಳವಣಿಗೆಗೆ ಹೆಚ್ಚಿನ ಚಾಲನಾ ಶಕ್ತಿ ನೀಡಲಿ ಎಂದು ಈ ಸಂದರ್ಭದಲ್ಲಿ ಆ ದೇವರ ಬಳಿ ಪ್ರಾರ್ಥಿಸುತ್ತೇನೆ.

ಶ್ರೀಯುತ ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿಗಳು, ಕೆಪಿಸಿಸಿ ಅಧ್ಯಕ್ಷರು



ಸ್ಪಂದನಶೀಲ ನಾಯಕ

ಜನಾನುರಾಗಿ ಮುಖಂಡ, ಅಭಿವೃದ್ಧಿಯ ಕಟ್ಟಾಳು ಹಾಗೂ ಸ್ಪಂದನಶೀಲ ನಾಯಕರಾದ ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರಾದ ಎಸ್.ಎಸ್ ಮಲ್ಲಿಕಾರ್ಜುನ ಅವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು.

ಶ್ರೀಯುತ ಎಂ.ಬಿ ಪಾಟೀಲ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಸಚಿವರು

ಮಾತು ಒರಟು, ಮನಸ್ಸು ಬೆಣ್ಣೆ..

• -ಬಿ.ಎನ್.ಮಲ್ಲೇಶ್



ಎಸ್.ಎಸ್.ಮಲ್ಲಿಕಾರ್ಜುನ್ ಅವರನ್ನು ಯುವ ನೇತಾರ, ಅಭಿವೃದ್ಧಿಯ ಹರಿಕಾರ, ಸರಳತೆಯ ಸಾಹುಕಾರ ಮುಂತಾದ ಹತ್ತು ಹಲವು ಅಭಿಮಾನದ ಹೆಸರುಗಳಿಂದ ಕರೆಯುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಮಲ್ಲಿಕಾರ್ಜುನ್ ಅಪಾರ ದೈವಭಕ್ತ, ದೂರದೃಷ್ಟಿಯ ಜನನಾಯಕ, ಕನಸುಗಾರ ಎಲ್ಲವೂ ಸರಿ. ಆದರೆ ಬಹುತೇಕ ಯಾರಿಗೂ ಗೊತ್ತಿರದ ಅಪರೂಪದ ಗುಣವೊಂದು ಅವರಲ್ಲಿದೆ. ಅದು ಬಡವರನ್ನು ಕಂಡರೆ ಕರಗುವ, ಮರುಗುವ ಗುಣ. ಮಾತಿನಲ್ಲಿ ಮಲ್ಲಣ್ಣ ಸ್ವಲ್ಪ ಒರಟರಂತೆ ಕಂಡರೂ ಮನಸ್ಸು ಮಾತ್ರ ಬೆಣ್ಣೆ.

ಒಂದು ಘಟನೆ ಇಲ್ಲಿ ನೆನಪಾಗುತ್ತದೆ. ಅದು ಮಲ್ಲಿಕಾರ್ಜುನ್ ಅವರ ಹೊಸಮನೆಯ ಗೃಹಪ್ರವೇಶ ಸಂದರ್ಭ. ಗಣ್ಯರು, ರಾಜಕಾರಣಿಗಳು, ಅಧಿಕಾರಿಗಳು ಸಾವಿರ ಸಂಖ್ಯೆಯಲ್ಲಿ ಶುಭ ಕೋರಲು ಬಂದಿದ್ದರು. ಅವರ ನಡುವೆ ಕಾಲಿಲ್ಲದ ಒಬ್ಬ ಭಿಕ್ಷುಕ ತೆವಳುತ್ತ ಬಂದು ಮಲ್ಲಿಕಾರ್ಜುನ್ ಕೈಗೆ ಒಂದು ಗಿಫ್ಟ್ ಕವರ್ ಕೊಟ್ಟ. ತೆರೆದು ನೋಡಿದರೆ ಅದರಲ್ಲಿ ಐನೂರು ರೂಪಾಯಿ! ಮಲ್ಲಿಕಾರ್ಜುನ್‌ಗೆ ಹೃದಯ ತುಂಬಿ ಬಂತು. ಆ ಹಣವನ್ನು ಅವನ ಜೇಬಿಗೇ ಇಟ್ಟು ಆತನನ್ನು ಅನಾಮತ್ತಾಗಿ ಎತ್ತಿಕೊಂಡು ಊಟದ ಟೇಬಲ್ ಬಳಿ ಕೂರಿಸಿ ಊಟ ಮಾಡಿಸಿ ಕಳಿಸಿದರು ಮಲ್ಲಣ್ಣ.

ಯಾರು ಆ ಭಿಕ್ಷುಕ? ಮಲ್ಲಣ್ಣ ಪ್ರತಿ ಶನಿವಾರ ದುಗ್ಗಮ್ಮನ ದೇವಸ್ಥಾನದ ಬಳಿ ಇರುವ ಆಂಜನೇಯ ಗುಡಿಗೆ ಹೋಗುವುದು ರೂಢಿ. ಅಲ್ಲಿ ಗುಡಿಯ ಮುಂದೆ ಭಿಕ್ಷೆ ಬೇಡುತ್ತಿದ್ದವರಲ್ಲಿ ಈ ಭಿಕ್ಷುಕನೂ ಒಬ್ಬ. ಮಲ್ಲಿಕಾರ್ಜುನ್ ಸಚಿವರಾಗಿದ್ದಾಗ ಆತನೂ ಸೇರಿದಂತೆ ಹದಿನೈದಕ್ಕೂ ಹೆಚ್ಚು ಭಿಕ್ಷುಕರಿಗೆ ಆಶ್ರಯ ಮನೆ ಮಂಜೂರು ಮಾಡಿಸಿಕೊಟ್ಟಿದ್ದರು. ಭಿಕ್ಷೆ ಬೇಡುವ ಬದಲು ಏನಾದರೂ ಉದ್ಯೋಗ ಮಾಡಿ, ನಾನು ಹಣ ಕೊಡುತ್ತೇನೆ ಎಂದೂ ಹೇಳಿದ್ದರು. ಮಲ್ಲಿಕಾರ್ಜುನ್ ಗೃಹಪ್ರವೇಶ ವಿಷಯ ತಿಳಿದು ತನ್ನ ಭಿಕ್ಷೆಯ ಹಣವನ್ನೆಲ್ಲ ಒಟ್ಟುಮಾಡಿ ಐದುನೂರು ರೂಪಾಯಿ ಗಿಫ್ಟ್ ಕೊಡಲು ತೆವಳುತ್ತ ಬಂದಿದ್ದ ಆ ಭಿಕ್ಷುಕನ ಅಭಿಮಾನಕ್ಕೆ ಏನು ಕೊಟ್ಟರೆ ಸಾಟಿಯಾದೀತು?

ಕಳೆದ ಚುನಾವಣೆಯಲ್ಲಿ ಮಲ್ಲಿಕಾರ್ಜುನ್ ಅಲ್ಪ ಮತಗಳಿಂದ ಸೋತಾಗ ಈ ಭಿಕ್ಷುಕರು "ನಾವೆಲ್ಲ ನಿಮಗೇ ಓಟು ಹಾಕಿದ್ದಿವಿ. ಅದೇಗೆ ಸೋತಿರಿ" ಎಂದು ಕಾಲು ಹಿಡಿದುಕೊಂಡು ಕಣ್ಣೀರು ಹಾಕಿದ್ದರು.

ಮಲ್ಲಣ್ಣ ಸಚಿವರಾದಾಗ ದಾಖಲೆಯ ಹನ್ನೊಂದು ಸಾವಿರ ಆಶ್ರಯ ಮನೆಗಳನ್ನು ನಿರ್ಮಿಸಿದರು. ಎಸ್‌ಒಜಿ ಕಾಲನಿ ನಿರ್ಮಿಸಿ ಆಟೋ ಚಾಲಕರು, ಪತ್ರಕರ್ತರು, ಕ್ಷೌರಿಕರು, ಫುಟ್‌ಪಾತ್ ವ್ಯಾಪಾರಸ್ಥರಿಗೆಲ್ಲ ಕೇವಲ 5, 10 ಸಾವಿರ ರೂಪಾಯಿಗೆಲ್ಲ ಮನೆಗಳನ್ನು ಕೊಟ್ಟಿದ್ದರು. ಈಗ ಆ ಮನೆ, ನಿವೇಶನ 25 ಲಕ್ಷ ರೂ.ವರೆಗೂ ಬೆಲೆ ಬಾಳುತ್ತವೆ. ಬಹುತೇಕ ನಿವಾಸಿಗಳು ಇಂದಿಗೂ ತಮ್ಮ ಮನೆಗಳಲ್ಲಿ ಮಲ್ಲಿಕಾರ್ಜುನ್ ಅವರ ಫೋಟೋ ಹಾಕಿಕೊಂಡಿದ್ದಾರೆ.

ಇನ್ನೊಂದು ಘಟನೆ... ಮಲ್ಲಿಕಾರ್ಜುನ್ ಅವರ ಅಕ್ಕಿ ಅಂಗಡಿಯಲ್ಲಿ ಹಮಾಲಿ ಕೆಲಸ ಮಾಡುತ್ತಿದ್ದ ಹಿರಿಯ ವ್ಯಕ್ತಿಯೊಬ್ಬರು ತೀರಿಕೊಂಡರು. ಮಲ್ಲಿಕಾರ್ಜುನ್ ಚಿಕ್ಕವರಿದ್ದಾಗ ಅವರನ್ನು ಎತ್ತಿ ಆಡಿಸಿದ ಹಿರಿಯ ಜೀವ ಅದು. ಪ್ರಾಮಾಣಿಕ ಕೆಲಸಗಾರ. ಅವರ ಅಂತ್ಯಸಂಸ್ಕಾರದ ವೇಳೆ ಮಲ್ಲಿಕಾರ್ಜುನ್ ಅವರ ಶವಯಾತ್ರೆಗೆ ಹೆಗಲು ಕೊಟ್ಟು ಆ ಋಣ ತೀರಿಸಿದರು. ತಾನು ಸಾಹುಕಾರ, ಆತ ಕೆಲಸಗಾರ ಎಂಬ ಭೇದ ಭಾವ ಲವಲೇಶವೂ ಅವರಲ್ಲಿರಲಿಲ್ಲ. ಅದೇ ರೀತಿ ಕಾರ್ಮಿಕ ನಾಯಕ ಪಂಪಾಪತಿಯವರು ನಿಧನರಾದಾಗ ಶವಯಾತ್ರೆಯ ಕೊನೆಯವರೆಗೂ ನಡೆದುಕೊಂಡೇ ಬಂದ ಮಲ್ಲಿಕಾರ್ಜುನ್ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಂಡಿದ್ದರು.

ಟಿ.ವಿ.ಶಂಕರ್ ಯಾರಿಗೆ ಗೊತ್ತಿಲ್ಲ? ಕಮ್ಯುನಿಸ್ಟ್ ಯುವನಾಯಕ. ನಂತರ ಕಾಂಗ್ರೆಸ್ ಸೇರಿ ಮಲ್ಲಿಕಾರ್ಜುನ್‌ರ ಆಪ್ತರಾದರು. ಶಂಕರ್ ಅವರ ಕಿಡ್ನಿಗಳು ವಿಫಲಗೊಂಡು ಅವರು ಅನಾರೋಗ್ಯಕ್ಕೀಡಾದಾಗ ತಮ್ಮ ಸ್ವಂತ ಹಣದಲ್ಲಿ ಎಷ್ಟೇ ಖರ್ಚಾಗಲಿ ಕಿಡ್ನಿ ಹಾಕಿಸಿಕೊಡುವುದಾಗಿ ಮಲ್ಲಿಕಾರ್ಜುನ್ ಭರವಸೆ ನೀಡಿದರು. ಆದರೆ ಕಿಡ್ನಿ ದಾನಿಗಳು ಸಿಗುವಷ್ಟರಲ್ಲಿ ಶಂಕರ್ ನಿಧನ ಹೊಂದಿದರು. ಶಂಕರ್‌ಗೆ ಇಬ್ಬರು ಪುಟ್ಟಮಕ್ಕಳು. ಆಗ ಮಲ್ಲಿಕಾರ್ಜುನ್ ಶಂಕರ್ ಪತ್ನಿಗೆ ತಮ್ಮ ಆಸ್ಪತ್ರೆಯಲ್ಲಿ ಕೆಲಸಕೊಟ್ಟು ಆ ಕುಟುಂಬವನ್ನು ಕಾಪಾಡಿದರು. ಈಗ ಶಂಕರನ ಹಿರಿಯ ಮಗ ಇಂಜಿನಿಯರ್. ಆತನು ಮಲ್ಲಿಕಾರ್ಜುನ್‌ರ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾನೆ.

ಕೊರೊನಾ ಬಂದಂಥ ಸಂದರ್ಭದಲ್ಲಿ ಮಲ್ಲಿಕಾರ್ಜುನ್ ಸಾವಿರಾರು ಜನರ ಪ್ರಾಣ ಉಳಿಸಿದರೆನ್ನಬಹುದು. ಒಂದು ಮನ ಕಲಕುವ ಘಟನೆ ಎಂದರೆ ನಂದಾ ಭಾಗವತ್ ಎಂಬ ಮಹಿಳೆಗೆ ಕೊರೊನಾ ತಗುಲಿತು. ಅವರಿಗೆ ಎಂಟು ತಿಂಗಳ ಮಗುವಿತ್ತು. ದಾವಣಗೆರೆಯ ಖಾಸಗಿ ಆಸ್ಪತ್ರೆಯೊಂದಕ್ಕೆ ನಂದಾ ಅವರನ್ನು ಸೇರಿಸಿ ಚಿಕಿತ್ಸೆ ಆರಂಭಿಸಲಾಯಿತು. ಆದರೆ ಮೂರೇ ದಿನದಲ್ಲಿ "ನಮ್ಮಲ್ಲಿ ಆಕ್ಸಿಜನ್ ಇಲ್ಲ, ಪೇಶಂಟ್‌ನ್ನು ಬೇರೆ ಕಡೆ ಕರೆದೊಯ್ಯಿರಿ" ಎಂದು ಆಸ್ಪತ್ರೆಯವರು ಹೇಳಿದಾಗ ನಂದಾ ಅವರ ಪತಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ನಮ್ಮ ಪತ್ರಿಕೆಯ ಅಂಕಣಕಾರ್ತಿ ಜ್ಯೋತಿ ಉಪಾಧ್ಯಾಯ ಅವರು ಈ ಪರಿಸ್ಥಿತಿಯ ಬಗ್ಗೆ ನನಗೆ ತಿಳಿಸಿ ಭಾಗವತ್ ಅವರಿಗೆ ಕರೆ ಮಾಡಿಕೊಟ್ಟರು. ಅವರು ಫೋನಲ್ಲಿ ಅಳುತ್ತಿದ್ದರೆ ಹೊರತು ಮಾತು ಸಾಧ್ಯವಾಗಲೇ ಇಲ್ಲ. ನಂದಾ ಅವರ ಆಕ್ಸಿಜನ್ ಮಟ್ಟ 80 ರಿಂದ ಕೆಳಕ್ಕೆ ಕುಸಿಯುತ್ತಲೇ ಇತ್ತು. ನಾನು ಮಲ್ಲಿಕಾರ್ಜುನ್ ಅವರ ಬಳಿ ಈ ಕುರಿತು ಮಾತಾಡಿ ಸಹಾಯ ಕೇಳಿದೆ. ತತ್‌ಕ್ಷಣ ನಂದಾ ಅವರನ್ನು ಎಸ್.ಎಸ್.ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಆಕ್ಸಿಜನ್ ದೊರೆಯಿತು. ಇಂಜೆಕ್ಷನ್‌ಗಳನ್ನು ನೀಡಿ ಕೆಲವೇ ದಿನಗಳಲ್ಲಿ ಅವರು ಚೇತರಿಸಿಕೊಂಡರು. ಅವರ ಪುಟ್ಟ ಮಗು ಅಮ್ಮ ಬೇಕು ಎಂದಾಗಲೆಲ್ಲ ವಾರ್ಡ್ ಹೊರಗಡೆ ಗಾಜಿನ ಬಾಗಿಲ ಆಚೆ ನಿಂತು ನಂದಾ ಅವರನ್ನು ತೋರಿಸುತ್ತಿದ್ದ ಚಿತ್ರ ಇನ್ನೂ ನನ್ನ ಕಣ್ಣ ಮುಂದಿದೆ. ಬರೆಯುತ್ತ ಹೋದರೆ ಇಂಥ ನೂರಾರು ಘಟನೆಗಳನ್ನು ಬರೆಯಬಹುದು. ಬಡವರನ್ನು, ಅಸಹಾಯಕರನ್ನು ಕಂಡರೆ ಕರಗುವ, ಮರುಗುವ ಮಲ್ಲಣ್ಣ ನೂರ್ಕಾಲ ಬಾಳಲಿ ಎಂದು ಹಾರೈಸುತ್ತೇನೆ.

ಲೇಖಕರು: ಹಿರಿಯ ಪತ್ರಕರ್ತರು, ಸಾಹಿತಿಗಳು

ಎಸ್.ಎಸ್. ಮಲ್ಲಿಕಾರ್ಜುನ್ ಅವರ ಜಾನುವಾರು ಪ್ರೀತಿ

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿಕೆ • ರೋಗ ನಿರ್ವಹಣೆ ಕ್ರಿಯಾಯೋಜನೆ ಅನಾವರಣ

‘ಗೃಹ ಆರೋಗ್ಯದಡಿ ‘ಡಿಮೆನ್ಶಿಯಾ’ ಪತ್ತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮರೆವು ಕಾಯಿಲೆಯು (ಡಿಮೆನ್ಶಿಯಾ) ಗಂಭೀರ ಸ್ವರೂಪ ಪಡೆಯುತ್ತಿದ್ದು, ಇಡೀ ಕುಟುಂಬದ ಮೇಲೆ ಪರಿಣಾಮ ಬೀರುತ್ತಿದೆ. ಆದ್ದರಿಂದ ಗೃಹ ಆರೋಗ್ಯ ಯೋಜನೆಯಡಿ ಈ ಕಾಯಿಲೆ ಪತ್ತೆ ಮಾಡಲಾಗುವುದು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಆರೋಗ್ಯ ಇಲಾಖೆಯ ಸಹಯೋಗದಲ್ಲಿ ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಹಾಗೂ ಡಿಮೆನ್ಶಿಯಾ ಇಂಡಿಯಾ ಅಲೈನ್ಸ್ ಜಂಟಿಯಾಗಿ ನಗರದಲ್ಲಿ ಗುರುವಾರ ಆಯೋಜಿಸಿದ ವಿಶ್ವ ಅಲ್ಝೈಮರ್ ದಿನ ಕಾರ್ಯಕ್ರಮ ಉದ್ಘಾಟಿಸಿದ ಅವರು, ‘ಡಿಮೆನ್ಶಿಯಾ ಕಾಯಿಲೆ ಸಾರ್ವಜನಿಕ ಆರೋಗ್ಯದ ಆದ್ಯತೆ’ ಎಂದು ಘೋಷಿಸಿದರು. ಇದೇ ವೇಳೆ ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ ಅವರು ಕ್ರಿಯಾ ಯೋಜನೆಯನ್ನು ದಿನೇಶ್ ಗುಂಡೂರಾವ್ ಅವರಿಗೆ ಹಸ್ತಾಂತರಿಸಿದರು.

‘ಗೃಹ ಆರೋಗ್ಯ ಯೋಜನೆಯನ್ನು ಪ್ರಾಯೋಗಿಕವಾಗಿ ರಾಜ್ಯದ 8 ಜಿಲ್ಲೆಗಳಲ್ಲಿ ಜಾರಿ ಮಾಡಲಾಗುತ್ತಿದೆ. ಈ ಯೋಜನೆಯಡಿ ಪ್ರತಿ ಮನೆಗೂ ತೆರಳಿ, ಆರೋಗ್ಯ ತಪಾಸಣೆ ನಡೆಸ-ಲಾಗುತ್ತದೆ. ಮಧುಮೇಹ, ಅಧಿಕ ರಕ್ತದೊತ್ತಡ, ಕ್ಯಾನ್ಸರ್ ಸೇರಿ ವಿವಿಧ ರೋಗಗಳನ್ನು ಪತ್ತೆ ಮಾಡಲಾಗುತ್ತದೆ. ಮರೆವು ಕಾಯಿಲೆಯ ಬಗ್ಗೆಯೂ ಪ್ರಶ್ನಿಸಿ, ಪ್ರಾರಂಭಿಕ ಹಂತದಲ್ಲಿಯೇ ಸಮಸ್ಯೆ ಗುರುತಿಸಲು ಕ್ರಮ ವಹಿಸಲಾಗುತ್ತದೆ. ಈ ಕಾಯಿಲೆ ಎದುರಿಸುತ್ತಿರುವವರ ಆರೈಕೆ ಮಾಡುತ್ತಿರುವವರಿಗೆ ಆರ್ಥಿಕ ಬೆಂಬಲ ಅಗತ್ಯ. ಸರ್ಕಾರೇತರ ಸಂಸ್ಥೆಗಳ ಸಹಯೋಗದಲ್ಲಿ ಯಾವ ರೀತಿ ಬೆಂಬಲ ನೀಡಲು ಸಾಧ್ಯ ಎನ್ನುವುದರ ಬಗ್ಗೆ ಮುಂದಿನ ದಿನಗಳಲ್ಲಿ ಕಾರ್ಯಯೋಜನೆ ರೂಪಿಸಲಾಗುವುದು’ ಎಂದು ಹೇಳಿದರು.

‘ಜನಸಂಖ್ಯೆ ಹೆಚ್ಚಾದಂತೆ ಈ ಕಾಯಿಲೆಗೆ ಒಳಗಾಗುವರ ಸಂಖ್ಯೆಯೂ ಹೆಚ್ಚಳವಾಗುತ್ತಿದೆ. ವೃದ್ಧರು ಹೆಚ್ಚಿನ ಸಂಖ್ಯೆಯಲ್ಲಿ ಈ ಕಾಯಿಲೆಯಿಂದ ಬಳಲುತ್ತಿದ್ದಾರೆ. ಆದ್ದರಿಂದ ರಾಜ್ಯದಲ್ಲಿ ರೋಗ ಪತ್ತೆಗೆ ಆದ್ಯತೆ ನೀಡಲಾಗಿದೆ. ಕ್ರಿಯಾ ಯೋಜನೆಯ-ಲ್ಲಿರುವ ಕೆಲ ಅಂಶಗಳನ್ನು ಈಗಾಗಲೇ ಕಾರ್ಯಗತ ಮಾಡಲಾಗಿದೆ’ ಎಂದು ತಿಳಿಸಿದರು.

ರಿಜಿಸ್ಟ್ರಿ ಅಗತ್ಯ: ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ, ‘ಈ ಕಾಯಿಲೆ ಎದುರಿಸುತ್ತಿರು-ವವರಲ್ಲಿ ರಾಜ್ಯದಲ್ಲಿ ಶೇ 5 ರಷ್ಟು ಮಂದಿಯನ್ನು ಮಾತ್ರ ಗುರುತಿಸಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಈ ಕಾಯಿಲೆ ಇರುವವರನ್ನು ಗುರುತಿಸುವುದು ಕಷ್ಟ. ಆದ್ದರಿಂದ 60 ವರ್ಷಗಳು ಮೇಲ್ಪಟ್ಟ ಎಲ್ಲರಿಗೂ ತಪಾಸಣೆ ನಡೆಸಬೇಕು. ಕರ್ನಾಟಕ ಡಿಮೆನ್ಶಿಯಾ ರಿಜಿಸ್ಟ್ರಿಯನ್ನು ಪ್ರಾರಂಭಿಸಬೇಕು. ಆರೈಕೆದಾರರಿಗೆ ತರಬೇತಿ ನೀಡಿ, ಕಾಯಿಲೆ ಇರುವವರಿಗೆ ಪುನರ್ವಸತಿ ಕಲ್ಪಿಸಬೇಕು. ಆರೈಕೆದಾರರಿಗೆ ಆರ್ಥಿಕ ನೆರವು ನೀಡುವ ಕೆಲಸವಾಗಬೇಕು’ ಎಂದರು.

ಡಿಮೆನ್ಶಿಯಾ ಇಂಡಿಯಾ ಅಲೈನ್ಸ್ ಅಧ್ಯಕ್ಷೆ ಡಾ. ರಾಧಾ ಮೂರ್ತಿ, ‘ಈ ಕಾಯಿಲೆಯು ಒಬ್ಬ ವ್ಯಕ್ತಿಗೆ ಸಿಮೀತವಾಗಿರದೆ ಇಡೀ ಕುಟುಂಬದ ಮೇಲೆ ಪರಿಣಾಮ ಬೀರುತ್ತದೆ. ಹಲವು ಕುಟುಂಬಗಳಲ್ಲಿ ಸಂಬಂಧಗಳು ಕೆಟ್ಟಿವೆ. ಈ ಕಾಯಿಲೆಗೆ ಒಳಗಾದವರನ್ನು ಯಾವ ರೀತಿ ನಿಭಾಯಿಸಬೇಕೆಂದು ತಿಳಿಯದಿರುವುದೇ ಇದಕ್ಕೆ ಮುಖ್ಯ ಕಾರಣ. ಈ ಕಾಯಿಲೆ ಬಗ್ಗೆ ಜಾಗೃತಿ ಮೂಡಿಸಿ, ನಿರ್ವಹಣೆಗೆ ರಾಷ್ಟ್ರಮ-ಟ್ಟದಲ್ಲಿ ನೀತಿ ರೂಪಿಸಬೇಕು’ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ದಿನೇಶ್ ಗುಂಡೂರಾವ್ ಅವರು ಮಹಿಳೆಯರೊಂದಿಗೆ ಸಮಾಲೋಚನೆ ನಡೆಸಿದರು. ಡಾ. ಪ್ರತಿಮಾ ಮೂರ್ತಿ ಇದ್ದಾರೆ —ಪ್ರಜಾವಾಣಿ ಚಿತ್ರ

ಮರೆವು ಕಾಯಿಲೆಗೆ ‘ಟೆಲಿ ಮನಸ್’ ನೆರವು

ಬೆಂಗಳೂರು: ‘ಅಲ್ಝೈಮರ್’ (ಬುದ್ಧಿಮಾಂದ್ಯತೆ) ಹಾಗೂ ‘ಡಿಮೆನ್ಶಿಯಾ’ (ಮರೆವು) ಕಾಯಿಲೆಗೆ ಒಳಗಾದವರಿಗೆ ‘ಟೆಲಿ ಮನಸ್’ ಸಹಾಯವಾಣಿ ಅಡಿ ನೆರವು ನೀಡಲಾಗುವುದು ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ವಿಶ್ವ ಅಲ್ಝೈಮರ್ ದಿನದ ಪ್ರಯುಕ್ತ ಪ್ರಕಟಣೆ ಹೊರಡಿಸಿರುವ ಇಲಾಖೆ, ‘ಈ ರೋಗದ ಬಗ್ಗೆ ಜಾಗೃತಿ ಮೂಡಿಸಿ, ತಪ್ಪು ಕಲ್ಪನೆಯನ್ನು ಹೋಗಲಾಡಿಸಬೇಕು. ಈ ಕಾಯಿಲೆ ಎದುರಿಸುತ್ತಿರುವವರಿಗೆ ಸಹಾನುಭೂತಿಯ ಆರೈಕೆ ಅಗತ್ಯ. ದಿನನಿತ್ಯದ ಜೀವನದಲ್ಲಿ ನೆನಪಿನ ಶಕ್ತಿ ಕಡಿಮೆಯಾಗುವುದು, ಸ್ಥಳ ಮತ್ತು ಸಮಯದ ಬಗ್ಗೆ ಗೊಂದಲ, ವಸ್ತುಗಳನ್ನು ಎಲ್ಲೆಂದರಲ್ಲಿ ಇಡುವುದು, ದೃಶ್ಯಗಳು ಹಾಗೂ ಚಿತ್ರಗಳನ್ನು ಗುರುತಿಸುವಲ್ಲಿ ವಿಫಲರಾಗುವುದು ಸೇರಿ ವಿವಿಧ ಲಕ್ಷಣಗ-ಳನ್ನು ಈ ಕಾಯಿಲೆಗೆ ಒಳಗಾದವರು ಎದುರಿಸುತ್ತಾರೆ’ ಎಂದು ತಿಳಿಸಿದೆ.

‘ಸಕ್ರಿಯವಾಗಿದ್ದಲ್ಲಿ ಕಾಯಿಲೆಯ ಅಪಾಯವನ್ನು ಕಡಿಮೆ ಮಾಡಬಹುದು. ಸಮುದಾಯದ ಚಟುವಟಿಕೆಯಲ್ಲಿ ಪಾಲ್ಗೊಳ್ಳುವುದು, ಸ್ನೇಹಿತರು ಮತ್ತು ಕುಟುಂಬದೊಂದಿಗೆ ಸಂಪರ್ಕದಲ್ಲಿರುವುದು, ನಿಯಮಿತ ವ್ಯಾಯಾಮ, ಧೂಮಪಾನ ಮತ್ತು ಮದ್ಯಪಾನದಿಂದ ದೂರವಿರುವುದು, ಆರೋಗ್ಯಕರ ಆಹಾರ ಪದ್ಧತಿ ಸೇರಿ ವಿವಿಧ ಕ್ರಮಗಳಿಂದ ರೋಗದ ಅಪಾಯ ಕಡಿಮೆ ಮಾಡಬಹುದು’ ಎಂದು ಇಲಾಖೆ ಹೇಳಿದೆ.

‘ಎಲ್ಲಾ ರೀತಿಯ ಮಾನಸಿಕ ಸಮಸ್ಯೆಗಳಿಗೆ ‘ಟೆಲಿ ಮನಸ್’ ಸಹಾಯವಾಣಿ ಮೂಲಕ 20 ಭಾಷೆಗಳಲ್ಲಿ ಸೇವೆ ಒದಗಿಸಲಾಗುತ್ತಿದೆ. ಮಾನಸಿಕ ಸಮಸ್ಯೆ ಎದುರಿಸುತ್ತಿರುವವರು ಇದರ ಪ್ರಯೋಜನ ಪಡೆದುಕೊಳ್ಳಬಹುದು. ಮಾರ್ಗದರ್ಶನ ಅಗತ್ಯ ಇರುವವರು ಟೆಲಿ ಮನಸ್ ಸಹಾಯವಾಣಿ 14416ಕ್ಕೆ ಸಂಪರ್ಕಿಸಬಹುದು’ ಎಂದು ತಿಳಿಸಿದೆ.

ಸ್ನಾತಕೋತ್ತರ ವೈದ್ಯಕೀಯ: ಅರ್ಜಿ ಸಲ್ಲಿಸಲು ಮತ್ತೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ಕನಿಷ್ಠ ಅರ್ಹತಾ ಅಂಕಗಳ ಮಾನದಂಡವನ್ನು ಕೇಂದ್ರ ಆರೋಗ್ಯ ಇಲಾಖೆ ಪರಿಷ್ಕರಿಸಿದ್ದು, ಆನ್‌ಲೈನ್ ನೋಂದಣಿ, ಅರ್ಜಿ ಸಲ್ಲಿಕೆ ಮತ್ತು ಶುಲ್ಕ ಪಾವತಿಗೆ ಮತ್ತೆ ಅವಕಾಶ ಕಲ್ಪಿಸಲಾಗಿದೆ.

ಅರ್ಹ ಅಭ್ಯರ್ಥಿಗಳು, ವೈದ್ಯಕೀಯ ಸೇವಾನಿರತರು ಸೆ. 22 ಬೆಳಿಗ್ಗೆ 10 ರಿಂದ ಸೆ.24ರ ಮಧ್ಯರಾತ್ರಿ 12ರ ಒಳಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ, ನಿಗದಿತ ಶುಲ್ಕ ಪಾವತಿಸಬಹುದು. ಇಲ್ಲಿವರೆಗೆ ನೋಂದಣಿ ಮಾಡದಿರುವ ಅಭ್ಯರ್ಥಿಗಳೂ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪೂರ್ಣಗೊಳಿಸಬಹುದು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ಮಾಹಿತಿ ನೀಡಿದ್ದಾರೆ.

ಪ್ರಕ್ರಿಯೆ ಪೂರ್ಣಗೊಳಿಸಿದ ಅಭ್ಯರ್ಥಿಗಳು ಸೆ. 25 ಮತ್ತು 26 ರಂದು ಮೂಲ ದಾಖಲಾತಿಗಳ ಪರಿಶೀಲನೆಗೆ ಹಾಜರಾಗಬೇಕು. ವಿಕಲಚೇತನ ಅಭ್ಯರ್ಥಿಗಳು ಸೆ.25 ರಂದು ಬೆಳಿಗ್ಗೆ 10 ಕ್ಕೆ ವೈದ್ಯಕೀಯ ಪ್ರಮಾಣಪತ್ರ ಹಾಗೂ ಗುರುತಿನ ಚೀಟಿಯೊಂದಿಗೆ ಹಾಜರಾಗಬೇಕು ಎಂದು ತಿಳಿಸಿದ್ದಾರೆ.

ಸೀಟು ಕಾಲಾವಕಾಶ ವಿಸ್ತರಣೆ: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಎರಡನೇ ಸುತ್ತಿನ ‘ಆಪ್ಶನ್’ ನಮೂದಿಸಲು ಸೆ.23 ರ ಬೆಳಿಗ್ಗೆ 11ರವರೆಗೆ ಕಾಲಾವಕಾಶ ನೀಡಲಾಗಿದೆ. ಮೊದಲ ಅಥವಾ ಎರಡನೇ ಸುತ್ತಿನಲ್ಲಿ ಸೀಟು ಪಡೆದುಕೊಂಡಿದ್ದು, ಹಿಂದಿರುಗಿಸಲು ಬಯಸುವವರು 23 ರ ಬೆಳಿಗ್ಗೆ 11ರ ಒಳಗೆ ಸೀಟು ಹಿಂದಿರುಗಿಸಿದರೆ ಕಟ್ಟಿರುವ ಶುಲ್ಕ ಹಿಂದಿರುಗಿಸಲಾಗುತ್ತದೆ.

‘ಸಿಡ್ಸ್ ಫಾರ್ಮ್’ ಆ್ಯಪ್ ಮೇಲ್ದರ್ಜೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೀಮಿಯಂ ಡೇರಿ ಬ್ರ್ಯಾಂಡ್ ತೆಲಂಗಾಣದ ‘ಸಿಡ್ಸ್ ಫಾರ್ಮ್’ (Sid's Farm) ಬೆಂಗಳೂರಿನ ಗ್ರಾಹಕರಿಗೆ ಉತ್ತಮ ಸೇವೆ ಒದಗಿಸುವ ಉದ್ದೇಶದಿಂದ ತನ್ನ ಮೊಬೈಲ್ ಆ್ಯಪ್ ಅನ್ನು ಮೇಲ್ದರ್ಜೆಗೇರಿಸಿದೆ.

ಬಳಕೆದಾರ ಸ್ನೇಹಿ ಅನುಭವಗಳನ್ನು ನೀಡುವ ನಿಟ್ಟಿನಲ್ಲಿ ಆ್ಯಪ್‌ನಲ್ಲಿ ಒಂದಿಷ್ಟು ಬದಲಾವಣೆಗಳನ್ನು ತರಲಾಗಿದೆ. ಆಂಡ್ರಾಯ್ಡ್ ಮತ್ತು ಐಒಎಸ್‌ನಲ್ಲಿ ಗುರುವಾರದಿಂದಲೇ ಸುಧಾರಿತ ಆ್ಯಪ್ ಡೌನ್‌ಲೋಡ್‌ಗೆ ಲಭ್ಯವಾಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಉತ್ಪನ್ನಗಳನ್ನು ಆರ್ಡರ್ ಮಾಡುವ ಪ್ರಕ್ರಿಯೆ ಸುಲಭಗೊಳಿಸಲಾಗಿದೆ. ಒಂದು ಉತ್ಪನ್ನಕ್ಕೆ ಆರ್ಡರ್ ಮಾಡಿದ 10 ನಿಮಿಷದ ಒಳಗಾಗಿ ಅದನ್ನು ಬದಲಿಸುವ ಆಯ್ಕೆ ನೀಡಲಾಗಿದೆ. ಬೆಂಗಳೂರು ಗ್ರಾಹಕರಿಂದ ನಿರೀಕ್ಷೆಗೂ ಮೀರಿದ ಸಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಹೀಗಾಗಿ ಗ್ರಾಹಕರ ಖರೀದಿ ಅನುಭವವನ್ನು ಇನ್ನಷ್ಟು ಹೆಚ್ಚಿಸುವ ನಿಟ್ಟಿನಲ್ಲಿ ಗಮನ ಹರಿಸಲಾಗುವುದು ಎಂದು ಕಂಪನಿಯ ಸ್ಥಾಪಕ ಕಿಶೋರ್ ಇಂದುಕುರಿ ತಿಳಿಸಿದ್ದಾರೆ.

ಗ್ಯಾರಂಟಿ ಸಮರ್ಥಿಸಿಕೊಂಡ ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆರ್ಥಿಕವಾಗಿ ದುರ್ಬಲವಾದ ಹಾಗೂ ಅವಕಾಶ ವಂಚಿತ ವರ್ಗಗಳ ಕಲ್ಯಾಣಕ್ಕಾಗಿ ಜಾರಿಗೆ ತರಲಾಗಿರುವ ಐದು ಗ್ಯಾರಂಟಿ ಯೋಜನೆಗಳು ಸಂವಿಧಾನ ಮತ್ತು ಚುನಾವಣಾ ಆಯೋಗದ ನಿಯಮಗಳಿಗೆ ಅನುಗುಣವಾಗಿಯೇ ಇವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೈಕೋರ್ಟ್‌ಗೆ ಲಿಖಿತ ಆಕ್ಷೇಪಣೆ ಸಲ್ಲಿಸಿದ್ದಾರೆ.

‘ಗ್ಯಾರಂಟಿಗಳ ಹೆಸರಲ್ಲಿ ಮತದಾರರಿಗೆ ಆಮಿಷವೊಡ್ಡುವ ಮೂಲಕ ಚುನಾವಣಾ ಅಕ್ರಮ ಎಸಗಿ ವರುಣ ಕ್ಷೇತ್ರದಿಂದ ಗೆದ್ದು ಬಂದಿರುವ ಸಿದ್ದರಾಮಯ್ಯ ಅವರ ಆಯ್ಕೆಯನ್ನು ಅಸಿಂಧುಗೊಳಿಸಬೇಕು’ ಎಂದು ಕೋರಿ ವರುಣ ಹೋಬಳಿಯ ಕೂಡನಹಳ್ಳಿ ನಿವಾಸಿ ಕೆ.ಎಂ. ಶಂಕರ್ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಗೆ ಸಂಬಂಧಿಸಿ ಈ ಆಕ್ಷೇಪಣೆ ಸಲ್ಲಿಸಲಾಗಿದೆ.

ಈ ಸಂಬಂಧ ವಾದಪತ್ರ ವಜಾಗೊಳಿಸುವಂತೆ ಕೋರಿ ಸಿದ್ದರಾಮಯ್ಯ ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಸಿದ್ದರಾಮಯ್ಯ ಪರ ವಕೀಲೆ ಲೀಲಾ ಪಿ.ದೇವಾಡಿಗ ಅವರು ಮೂಲ ಅರ್ಜಿಗೆ ಸಂಬಂಧಿಸಿ ನ್ಯಾಯಪೀಠಕ್ಕೆ ಲಿಖಿತ ಆಕ್ಷೇಪಣೆ ಸಲ್ಲಿಸಿದರು.

ಏನಿದೆ?: ‘ರಾಜ್ಯದ ಕೋಟ್ಯಂತರ ಕುಟುಂಬಗಳ ಶ್ರೇಯೋಭಿವೃದ್ಧಿಗಾಗಿ ಶಕ್ತಿ, ಗೃಹಜ್ಯೋತಿ, ಗೃಹಲಕ್ಷ್ಮಿ, ಅನ್ನಭಾಗ್ಯ, ಯುವನಿಧಿ ಹೆಸರಿನಲ್ಲಿ ಐದು ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಇವು ಜನರ ಅದರಲ್ಲೂ ವಿಶೇಷ ವಾಗಿ ಮಹಿಳೆಯರ ಸಬಲೀಕರಣ ಮತ್ತು ಉನ್ನತಿಗೆ ಸಹಾಯಕವಾಗಲಿವೆ. ಇದು ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಯ ಭಾಗ. ಚುನಾವಣಾ ಪ್ರಣಾಳಿಕೆ ವೈಯಕ್ತಿಕ ಘೋಷಣೆ ಎನಿಸುವುದಿಲ್ಲ’ ಎಂದು ಆಕ್ಷೇಪಣೆಯಲ್ಲಿ ವಿವರಿಸಲಾಗಿದೆ.

ಇದನ್ನು ಪರಿಗಣಿಸಿದ ನ್ಯಾಯಪೀಠವು ಅರ್ಜಿದಾರರಿಗೆ ಪ್ರತಿ ಆಕ್ಷೇಪಣೆ ಸಲ್ಲಿಸಲು ನಿರ್ದೇಶಿಸಿ ವಿಚಾರಣೆಯನ್ನು ಅಕ್ಟೋಬರ್ 6ಕ್ಕೆ ಮುಂದೂಡಿತು.

ಕಾರ್ಯಾಚರಣೆ ವಿಧಾನದ ಕೊರತೆಯಿಂದ ಬೆಂಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಕೇಂದ್ರ ಕಚೇ-ರಿಯಲ್ಲಿರುವ ಗುಣಮಟ್ಟ ಖಾತರಿ ಪ್ರ-ಯೋಗಾಲಯದಲ್ಲಿ ಸಂಭವಿಸಿದ ಬೆಂಕಿ ಅವಘಡಕ್ಕೆ ಗುಣಮಟ್ಟ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ಪಾಲಿಸದಿರುವುದೇ ಕಾರಣ ಎಂದು ವರದಿ ತಿಳಿಸಿದೆ.

ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಅವರು ಸಲ್ಲಿಸಿರುವ ಐದು ಪುಟಗಳ ತನಿಖಾ ವರದಿಯಲ್ಲಿ, ‘ಪ್ರಯೋಗಾಲಯ ದಲ್ಲಿ ಬಿಟುಮಿನಸ್ ಮಿಶ್ರಣವನ್ನು ಮೃದುಗೊಳಿಸಲು ಎಲೆಕ್ಟ್ರಿಕ್ ಸ್ಟೌ ಬಳಸಲಾಗಿದೆ. ಅದು ಒಣಗಲು ಬೆಂಕಿ ಉಪಯೋಗಿಸಲಾಗಿದೆ. ಮಿಶ್ರಣವನ್ನು ಬೇರ್ಪಡಿಸಲು, ಬೆಂಜೀನ್ ಬಳಸಲಾಗಿದೆ. ಈ ಪ್ರಕ್ರಿಯೆ ಎಸ್‌ಒಪಿಗೆ ವಿರುದ್ಧವಾಗಿದೆ ಎಂದು ತಿಳಿಸಿದ್ದಾರೆ.

ಆಗಸ್ಟ್ 11ರಂದು ಸಂಭವಿಸಿದ್ದ ಬೆಂಕಿ ಅವಘಡದಲ್ಲಿ ಮುಖ್ಯ ಎಂಜಿನಿಯರ್ ಶಿವಕುಮಾರ್ ಮೃತ-ಪಟ್ಟಿದ್ದರು. 8 ಜನ ತೀವ್ರವಾಗಿ ಗಾಯಗೊಂಡಿದ್ದರು.

ಬಸವನಗುಡಿಯ ರಸ್ತೆಯೊಂದರ ಕಾಮಗಾರಿಯ ಮಿಶ್ರಣವನ್ನು ಪರಿಶೀಲಿಸಲು ಪ್ರಯೋಗಾಲಯದಲ್ಲಿ ಪರೀಕ್ಷೆ ನಡೆಸಲಾಗುತ್ತಿತ್ತು. ಕ್ಲಾಸ್–4 ಸಿಬ್ಬಂದಿ ಸುರೇಶ್ ನೆರವಿನೊಂದಿಗೆ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಆನಂದ್ ಅವರು ಪರೀಕ್ಷೆ ನಡೆಸುತ್ತಿದ್ದರು. ಈ ಸಂದರ್ಭದಲ್ಲಿ ಬೆಂಕಿ ಅವಘಡ ಸಂಭವಿಸಿತ್ತು. ಶೈಕ್ಷಣಿಕ ತಜ್ಞರು ಈ ತನಿಖಾ ವರದಿಯಲ್ಲಿ ಬಿಬಿಎಂಪಿಗೆ ಸಹಕಾರ ನೀಡಿದ್ದರು. ‘ಈ ಪ್ರಯೋಗಾಲಯ ತೀರ ಚಿಕ್ಕದಾಗಿದೆ. ಇದು ಪರೀಕ್ಷೆ ನಡೆಸಲು ಯೋಗ್ಯವಾದು-ದಲ್ಲ. ಉಪಕರಣಗಳ ನಡುವೆ ಜಾಗವೂ ಇಲ್ಲ. ಪ್ರಯೋಗಾಲಯದ ಮೇಲ್ಭಾಗದಲ್ಲಿ ಸ್ಟೀಲ್‌ನಿಂದ ಅಂತಸ್ತು ನಿರ್ಮಿಸಿರುವುದು ತಪ್ಪು’ ಎಂದು ತಜ್ಞರು ಅಭಿಪ್ರಾಯಪ-ಟ್ಟಿದ್ದಾರೆ.

ಈಗ ಪ್ರಯೋಗಾಲಯವಿರುವ ಸ್ಥಳವನ್ನು ಕಚೇರಿಯನ್ನಾಗಿ ಬಳಸಿಕೊ-ಳ್ಳಬಹುದು. ಹೊಸದಾಗಿ ಪ್ರಯೋಗಾಲ-ಯವನ್ನು ಬೇರೆಡೆ ಸ್ಥಾಪಿಸಬೇಕು ಎಂದು ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ಅವರು ಸಲಹೆ ನೀಡಿದ್ದಾರೆ.

‘ಅರಣ್ಯ, ನೀರಿನ ಸಂರಕ್ಷಣೆ ಮುಖ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಭಿವೃದ್ಧಿಯ ಕಾರ್ಯಗಳ ಜೊತೆಗೆ ಅರಣ್ಯ, ನೀರಿನ ಸಂರಕ್ಷಣೆಯೂ ಮುಖ್ಯ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.

‘ಹವಾಮಾನ ಬದಲಾವಣೆಯತ್ತ ನಾವು ಗಮನಹರಿಸಬೇಕಿದ್ದು, ಅರಣ್ಯ ಇದ್ದರೆ ಉಸಿರಾಡಲು ಗಾಳಿ ಇರುತ್ತದೆ, ನೀರಿದ್ದರೆ ನಾಳೆಯ ಜೀವನ ಇರುತ್ತದೆ. ಹೀಗಾಗಿ ಅವುಗಳನ್ನು ರಕ್ಷಿಸಿದರೆ ಅವುಗಳಿಂದ ನಮಗೇ ಹೆಚ್ಚಿನ ಲಾಭವಾಗುತ್ತದೆ’ ಎಂದರು.

ಬೆಂಗಳೂರು ಮ್ಯಾನೇಜ್‌ಮೆಂಟ್ ಅಸೋಸಿಯೇಷನ್ (ಬಿಎಂಎ) ಗುರುವಾರ ಆಯೋಜಿಸಿದ್ದ ‘ವಿಷನ್ 2030– ಕರ್ನಾಟಕ’ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

‘ಜ್ಞಾನ, ವಿಜ್ಞಾನ ಕ್ಷೇತ್ರದಲ್ಲಿ ರಾಜ್ಯ ಮುಂದಿದ್ದು, ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಅಗ್ರಗಣ್ಯವಾಗಿದೆ. ಜವಳಿ ಕ್ಷೇತ್ರದಲ್ಲಿ ರಾಜ್ಯ ಅತ್ಯಂತ ವೇಗವಾಗಿ ಮುಂದು-ವರಿಯುತ್ತಿದೆ. ರೇಷ್ಮೆ ಉದ್ಯಮದಲ್ಲಿ ದೇಶದಲ್ಲಿ ಮೊದಲ ಸ್ಥಾನದಲ್ಲಿದೆ’ ಎಂದರು.

ಸ್ಟಾರ್ಟ್ ಅಪ್‌ಗಳಲ್ಲಿ ರಾಜ್ಯ ಅಗ್ರಸ್ಥಾ-ನದಲ್ಲಿದ್ದು, ವೆಂಚರ್ಸ್, ಪಬ್ಲಿಕ್ ಈಕ್ವಿಟಿ ಕ್ಷೇತ್ರಗಳಲ್ಲೂ ದೇಶದಲ್ಲಿ ಅಗ್ರಸ್ಥಾನದಲ್ಲಿ-ದೆ. ಮೊಬೈಲ್, ಎಲೆಕ್ಟ್ರಾನಿಕ್ಸ್, ಡಿಸೈನ್, ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್, ಸ್ಮಾರ್ಟ್ ಟ್ರಾಫಿಕ್ ಸೇರಿದಂತೆ ಹಲವು ಕ್ಷೇತ್ರಗಳ-ಲ್ಲಿ ಅಭಿವೃದ್ಧಿಗೆ ಹೆಚ್ಚಿನ ಅವಕಾಶವಿದೆ. ಈ ನಿಟ್ಟಿನಲ್ಲಿ ರಾಜ್ಯ ಹೆಚ್ಚಿನ ಕಾರ್ಯಯೋಜನೆ ರೂಪಿಸಬೇಕಿದೆ ಎಂದು ಹೇಳಿದರು.

‘ನಗರ ಪ್ರದೇಶಗಳ ಜೊತೆಗೆ ದೂರದ ಹಳ್ಳಿಗಳಲ್ಲೂ ಅಭಿವೃದ್ಧಿ ಕಾರ್ಯಗಳಾಗಬೇಕು. ಖಾಸಗಿ ವಲಯ ಬೆಳೆದರೆ ನಮ್ಮ ಆರ್ಥಿಕತೆಯೂ ಬೆಳೆಯುತ್ತದೆ. ಸುಸ್ಥಿರ ಅಭಿವೃದ್ಧಿ ಅತಿ ಮುಖ್ಯವಾಗಿದ್ದು, ಇದ್ದಕ್ಕಾಗಿ ವಿಷನ್–2030 ಮಾರ್ಗೋಪಾಯಗಳ ಯೋಜನೆ ರೂಪಿಸಲಾಗಿದೆ’ ಎಂದು ಅಭಿವೃದ್ಧಿ ಆಯುಕ್ತರಾದ ಶಾಲಿನಿ ರಜನೀಶ್ ತಿಳಿಸಿದರು.

‘ಉದ್ಯೋಗ ಕ್ಷೇತ್ರದಲ್ಲಿ ಶೇ 24ರಷ್ಟು ಮಹಿಳೆಯರು ಮಾತ್ರ ಇದ್ದಾರೆ. ಈ ಪ್ರಮಾಣವನ್ನು ಹೆಚ್ಚಿಸಬೇಕು. ಇದರಿಂದ ಆರ್ಥಿಕತೆ ವೃದ್ಧಿಯಾಗುತ್ತ-ದೆ. ಬೆಂಗಳೂರಿನ ಹೊರಗೂ ಕೈಗಾರಿಕೆ ಚಟುವಟಿಕೆಗಳು ಹೆಚ್ಚಾಗಬೇಕು’ ಎಂದು ರಾಜ್ಯ ಪರಿವರ್ತನಾ ಸಂಸ್ಥೆ ಉಪಾಧ್ಯಕ್ಷ ಎಂ. ರಾಜೀವ್ ಗೌಡ ಹೇಳಿದರು.

‘ರಾಜ್ಯ ಒಂದು ಟ್ರಿಲಿಯನ್ ಆರ್ಥಿಕ-ತೆಯತ್ತ ದಾಪುಗಾಲಿಡಲು ಕೆಲವೊಂದು ಅಂಶಗಳನ್ನು ಪರಿಗಣಿಸಬೇಕಿದೆ. ದಕ್ಷಿಣ ಹಾಗೂ ಉತ್ತರ ಕರ್ನಾಟಕದ ನಡುವಿನ ಅಭಿವೃದ್ಧಿ ಅಸಮಾನತೆಯನ್ನು ತೊಡೆದು ಹಾಕಬೇಕು. ಸಾಮಾಜಿಕ ಸೂಚ್ಯಂಕದಲ್ಲಿ ನಗರ ಹಾಗೂ ಗ್ರಾಮೀಣಗಳ ನಡುವೆ ವ್ಯತ್ಯಾಸ ಇರಬಾರದು’ ಎಂದು ನಿವೃತ್ತ ಐಎಎಸ್ ಅಧಿಕಾರಿ ಕೆ. ಜಯರಾಜ್ ಸಲಹೆ ನೀಡಿದರು.

ಬಿಎಂಎ ಅಧ್ಯಕ್ಷ ಕೆ.ಎಸ್. ನಾರಾಯಣಸ್ವಾಮಿ, ಎಫ್‌ಕೆಸಿಸಿಐ ಕರ್ನಾಟಕ ಕೌನ್ಸಿಲ್ ಅಧ್ಯಕ್ಷ ಕೆ. ಉಲ್ಲಾಸ್ ಕಾಮತ್ ಇದ್ದರು.

‘ವಿಷನ್–2023 ಕರ್ನಾಟಕ’ ವಿಚಾರ ಸಂಕಿರಣದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಕೆ.ಎಸ್. ನಾರಾಯಣಸ್ವಾಮಿ ಸನ್ಮಾನಿಸಿದರು. ಎಂ.ವಿ. ರಾಜೀವ್ ಗೌಡ, ಇದ್ದಾರೆ —ಪ್ರಜಾವಾಣಿ ಚಿತ್ರ

ಕೆ.ಆರ್. ಪುರ– ಬೈಯಪ್ಪನಹಳ್ಳಿ ಮೆಟ್ರೊ ಸುರಕ್ಷತೆ ಯಶಸ್ವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಯಪ್ಪನಹಳ್ಳಿ– ಕೆ.ಆರ್. ಪುರ ನಡುವೆ ಹೊಸದಾಗಿ ನಿರ್ಮಿಸಲಾಗಿರುವ ಮೆಟ್ರೊ ಮಾರ್ಗದಲ್ಲಿ ಗುರುವಾರ ನಡೆಸಲಾದ ಸುರಕ್ಷತೆ ಪರೀಕ್ಷೆ ಯಶಸ್ವಿಯಾಗಿದೆ.

ಬಿಎಂಆರ್‌ಸಿ ಮೆಟ್ರೊ ಸುರಕ್ಷತಾ ಆಯುಕ್ತ (ದಕ್ಷಿಣ ವೃತ್ತ) ನೇತೃತ್ವದ ತಂಡ, ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದಿಂದ ಕೆ.ಆರ್.ಪುರ ಮೆಟ್ರೊ ನಿಲ್ದಾಣದವರೆಗೆ ಗುರುವಾರ ಪ್ರಯಾಣಿಸಿದರು. ಈ ಮಾರ್ಗವು ಮೆಟ್ರೊ ಸಂಚಾರಕ್ಕೆ ಸುರಕ್ಷಿ-ತವಾಗಿರುವುದಾಗಿ ಘೋಷಿಸಿದರು.

2 ಕಿ.ಮೀ ಅಂತರದ ಮಾರ್ಗದಲ್ಲಿ ಸುರಕ್ಷತಾ ತಪಾಸಣೆ ಕೈಗೊಂಡಿದ್ದರಿಂದ, ಕೆ.ಆರ್.ಪುರ ಹಾಗೂ ಗರುಡಾಚಾರ್ ಪಾಳ್ಯದವರೆಗೆ ಮೆಟ್ರೊ ರೈಲ್ವೆ ಸಂಚಾರವನ್ನು ತಾತ್ಕಾಲಿಕವಾಗಿ ರದ್ದುಪಡಿಸಲಾಗಿತ್ತು.

ಮೆಟ್ರೊ ಆಯುಕ್ತ ನೇತೃತ್ವದ ತಂಡ ಬೈಯಪ್ಪನಹಳ್ಳಿ– ಕೆ.ಆರ್. ಪುರ ನಡುವಿನ ಮೆಟ್ರೊ ಮಾರ್ಗದಲ್ಲಿ ಗುರುವಾರ ಸುರಕ್ಷತೆ ಪರೀಕ್ಷೆ ನಡೆಸಿತು

ಕೆ.ಆರ್. ಪುರ ಹಾಗೂ ಬೈಯಪ್ಪನಹಳ್ಳಿ ಮಾರ್ಗದಲ್ಲಿ ಮೆಟ್ರೊ ಸಂಚಾರಕ್ಕೆ ಆಯುಕ್ತರ ತಂಡ ಒಪ್ಪಿಗೆ ನೀಡಿದೆ. ಇದರಿಂದಾಗಿ, ಕೆಂಗೇರಿ ಮೆಟ್ರೊ ನಿಲ್ದಾಣದಿಂದ ವೈಟ್‌ಫೀಲ್ಡ್ ನಿಲ್ದಾಣದವರೆಗೆ ತಡೆರಹಿತ ಸಂಚಾರ ಸದ್ಯದಲ್ಲೇ ಆರಂಭವಾಗಲಿದೆ.

2,488 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈದರಾಬಾದ್‌ನ ‘ಐಸಿಎಫ್‌ಎಐ ಫೌಂಡೇಶನ್ ಫಾರ್ ಹೈಯರ್ ಎಜುಕೇಶನ್’ ಡೀಮ್ಡ್ ವಿಶ್ವವಿ-ದ್ಯಾಲಯ ಆಯೋಜಿಸಿದ್ದ 13ನೇ ಘಟಿ-ಕೋತ್ಸವದಲ್ಲಿ 2,488 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಸಮಾರಂಭದಲ್ಲಿ ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಎಂ. ಜಗದೀಶ್ ಕುಮಾರ್ ಅವರು ಪದವಿ ಪ್ರದಾನ ಮಾಡಿದರು. 8 ಅಭ್ಯರ್ಥಿಗಳಿಗೆ ಪಿಎಚ್‌.ಡಿ, 1,142 ವಿದ್ಯಾರ್ಥಿಗಳಿಗೆ ಎಂಬಿಎ ಪದವಿ ವಿತರಿಸಲಾಯಿತು. ಎಲ್‌ಎಲ್‌ಎಂ, ಬಿಬಿಎ-ಎಲ್‌ಎಲ್‌ಬಿ, ಬಿ.ಟೆಕ್ ಸೇರಿ ವಿವಿಧ ವಿಭಾಗಗಳಲ್ಲಿಯೂ ಪದವಿ ಪ್ರದಾನ ಮಾಡಲಾಯಿತು. ಎಸ್.ಜೆ. ಯಶಸ್ವಿ, ವಿಕಾಸ್ ಗೌತಮ್ ಹಾಗೂ ದಿಲೀಪ್ ಶರ್ಮಾ ಅವರಿಗೆ ‘ಉತ್ತಮ ಶಿಕ್ಷಕ ಪ್ರಶಸ್ತಿ’ ವಿತರಿಸಲಾಯಿತು.

ಜಗದೀಶ್ ಕುಮಾರ್, ‘ಜಗತ್ತು ಅತ್ಯಂತ ವೇಗವಾಗಿ ಬದಲಾಗುತ್ತಿದೆ. ಈ ಅವಧಿಯಲ್ಲಿ ಹೆಚ್ಚಿನ ಅವಕಾಶಗಳು ಹಾಗೂ ಸವಾಲುಗಳಿವೆ. ದೇಶವು ಜಗತ್ತಿನಲ್ಲಿಯೇ ಐದನೆ ಬಲಿಷ್ಠ ಆರ್ಥಿಕ ಶಕ್ತಿಯಾಗಿ ಹೊರಮ್ಮಿದೆ. ನವೋದ್ಯ-ಮಗಳಲ್ಲಿಯೂ ಮುಂಚೂಣಿಯಲ್ಲಿದೆ. ಈ ಅವಕಾಶವನ್ನು ವಿದ್ಯಾರ್ಥಿಗಳು ಸದುಪಯೋಗ ಮಾಡಿಕೊಳ್ಳಬೇಕು. ಉನ್ನತ ಶಿಕ್ಷಣದಲ್ಲಿ ಸಂಶೋಧನೆಗೆ ಹೆಚ್ಚಿನ ಆದ್ಯತೆ ನೀಡಬೇಕು’ ಎಂದು ಹೇಳಿದರು.

ವಿಶ್ವವಿದ್ಯಾಲಯದ ಕುಲಾಧಿಪತಿ ರಂಗರಾಜನ್, ‘ಇತ್ತೀಚೆಗೆ ಎಲ್ಲಾ ಕ್ಷೇತ್ರದಲ್ಲಿಯೂ ಜ್ಞಾನದ ಸ್ಪರ್ಧೆ ನಡೆಯುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿ ಹೊಂದಿದರೂ ಉನ್ನತ ಶಿಕ್ಷಣದ ಗುಣಮಟ್ಟ ಇನ್ನಷ್ಟು ಸುಧಾರಿಸಬೇಕು’ ಎಂದು ತಿಳಿಸಿದರು.

ಘಟಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಎಂ. ಜಗದೀಶ್ ಕುಮಾರ್ ಅವರು ಪದವಿ ಪ್ರದಾನ ಮಾಡಿದರು. ರಂಗರಾಜನ್, ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಲ್.ಎಸ್. ಗಣೇಶ್ ಇದ್ದಾರೆ

ನಗರದಲ್ಲಿ ಇಂದು

ಮುಖ್ಯಮಂತ್ರಿಗಳ ಪದಕ ಪ್ರದಾನ ಹಾಗೂ ಅಗ್ನಿಶಾಮಕ ಠಾಣಾಧಿಕಾರಿಗಳ ನಿರ್ಗಮನ ಪಥಸಂಚಲನ: ಅತಿಥಿ: ಜಿ. ಪರಮೇಶ್ವರ, ಆಯೋಜನೆ: ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ಗೃಹ ರಕ್ಷಕ ದಳ, ಪೌರ ರಕ್ಷಣೆ ಹಾಗೂ ರಾಜ್ಯ ವಿಪತ್ತು ಸ್ಪಂದನಾ ಪಡೆ, ಸ್ಥಳ: ಆರ್.ಎ. ಮುಂಡ್ಕೂರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 8.30

ಅನುಷಾ ಅಡಬಾಲ ಮತ್ತು ರಾಮನ್ ಕುಮಾರ್ ಅವರ ಕಲಾಕೃತಿಗಳ ಪ್ರದರ್ಶನ: ಅತಿಥಿಗಳು: ಸಿಂಧು ಭೈರವಿ, ಗೌತಮ ಬನ್ಸಾಲ್, ದಿಬೋಲಿನಾ ಮಜುಂದಾರ್, ಸ್ಥಳ: ವಿಸ್ಮಯ ಗ್ಯಾಲರಿ, ರಂಗೋಲಿ ಮೆಟ್ರೊ ಆರ್ಟ್ ಸೆಂಟರ್, ಎಂ.ಜಿ. ರಸ್ತೆ, ಬೆಳಿಗ್ಗೆ 10

ಟಿ. ಕೆಂಪಣ್ಣ ಅವರ ಛಾಯಾಚಿತ್ರಗಳ ಪ್ರದರ್ಶನದ ಉದ್ಘಾಟನೆ: ಜಯರಾಮ್ ರಾಯಪುರ, ಅತಿಥಿಗಳು: ಟಿ. ಪ್ರಭಾಕರ್, ಕೆ.ವಿ. ಸುಬ್ರಮಣ್ಯಂ, ಅಧ್ಯಕ್ಷತೆ: ಎಸ್. ತಿಪ್ಪೇಸ್ವಾಮಿ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11ರಿಂದ

ದಕ್ಷಿಣ ಭಾರತ ಉತ್ಸವದ ಅನಾವರಣ ಕಾರ್ಯಕ್ರಮ: ಅತಿಥಿಗಳು: ಸಿದ್ದರಾಮಯ್ಯ, ಎಚ್.ಕೆ. ಪಾಟೀಲ, ಕಪಿಲ್ ಮೋಹನ್, ರಾಮ ಪ್ರಸಾತ್ ಮನೋಹರ್, ಅಧ್ಯಕ್ಷತೆ: ಬಿ.ವಿ. ಗೋಪಾಲ್ ರೆಡ್ಡಿ, ಆಯೋಜನೆ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ, ಪ್ರವಾಸೋದ್ಯಮ ಇಲಾಖೆ, ಸ್ಥಳ: ಸರ್ ಎಂ. ವಿ. ಸಭಾಂಗಣ, ಎಫ್‌ಕೆಸಿಸಿಐ, ಕೆ.ಜಿ. ರಸ್ತೆ, ಸಂಜೆ 4.30

ವಿಜಯಾ ಸುಬ್ಬರಾಜ್ ಅವರ ‘1984’, ‘ಕುರುಡು’ ಮತ್ತು ‘ಲೇಖನ ಸಂಕೀರ್ಣ’ ಪುಸ್ತಕಗಳ ಬಿಡುಗಡೆ: ಪುಸ್ತಕಗಳ ಪರಿಚಯ: ಸುರೇಶ್ ಪಾಟೀಲ್, ಕೆ.ಈ. ರಾಧಾಕೃಷ್ಣ, ಎಸ್. ಶಾಂಭವಿ, ಸ್ಥಳ: ಬಿ.ಎಂ. ಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5.30

ಚೈತನ್ಯ ಸಂಜೆ: ಅಧ್ಯಕ್ಷತೆ: ದಿಬ್ಬೂರು ವಿ. ಗಿರೀಶ್, ಉಪನ್ಯಾಸ: ಶಿವಕುಮಾರ್ ಎ.ಆರ್., ಉಪಸ್ಥಿತಿ: ಗುರುಪ್ರಸಾದ್, ರೇಣುಕಾ ಶಂಕರ್, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆ.ಎಸ್.ಎಸ್. ಕಾಲೇಜು ಸಭಾಂಗಣ, ಜಯನಗರ, ಸಂಜೆ 5.30

ನೃತ್ಯೋತ್ಸವ: ಪ್ರಸ್ತುತಿ: ಸಾಧನ ನೃತ್ಯ ಶಾಲೆಯ ವಿದ್ಯಾರ್ಥಿಗಳು, ನಿರ್ದೇಶನ: ಭಾವನ ವೆಂಕಟೇಶ್ವರ, ಆಯೋಜನೆ ಮತ್ತು ಸ್ಥಳ: ಬನಶಂಕರಿ ದೇವಸ್ಥಾನ, ಬನಶಂಕರಿ, ಸಂಜೆ 6

ಪ್ರವಚನ ವಾಹಿನಿ: ‘ಪುಟ್ಟ ಕಥೆಗಳು–ದಿಟ್ಟ ಸಂದೇಶ’ ಕುರಿತ ಉಪನ್ಯಾಸ: ಕೆ.ಪಿ. ಪುತ್ತೂರಾಯ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

‘ಕಂಸವಧೆ’ ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ಲಂಬೋದರ ಹೆಗಡೆ, ಚಿನ್ಮಯಿ, ಶ್ರೀನಿವಾಸ ಪ್ರಭು, ಮುಮ್ಮೇಳ: ಬಾಲಕೃಷ್ಣ ಭಟ್, ತಮ್ಮಣ್ಣ ಗಾಂವ್ಕರ್, ಮನೋಜ್ ಭಟ್, ಶ್ರೀನಿಧಿ ಹೊಳ್ಳ, ಆದಿತ್ಯ ಹೊಳ್ಳ, ದೇವರಾಜ್ ಕರಬ, ಪ್ರಕಾಶ್ ಉಳ್ಳೂರ, ಶ್ರೀರಾಮ, ಶ್ರೀವತ್ಸ, ಶ್ರೀವಿದ್ಯಾ, ನಿರ್ದೇಶನ: ಕೆ. ಮೋಹನ್, ಸಂಯೋಜನೆ: ಕೋಟ ಸುದರ್ಶನ ಉರಾಳ, ಆಯೋಜನೆ: ಗಾನ ಗಣೇಶ ಗೆಳೆಯರ ಬಳಗ, ಸ್ಥಳ: ಗಾನ ರೆಸಿಡೆನ್ಸಿ, ದಯಾನಂದಸಾಗರ್ ಕಾಲೇಜಿನ ಹಿಂಭಾಗ, ಕುಮಾರಸ್ವಾಮಿ ಬಡಾವಣೆ, ಸಂಜೆ 7

ಮಿಲ್ಕ್ ಕಾಲೊನಿ ಗಣೇಶ ಹಬ್ಬ–2023: ಸಂಗೀತ ಸಂಜೆ: ಗಾಯನ: ಸುಮಂತ್ ವಸಿಷ್ಠ, ಮಳವಳ್ಳಿ ಮಹಾದೇವಸ್ವಾಮಿ, ದಿವ್ಯ ರಾಮಚಂದ್ರ, ಆಯೋಜನೆ ಮತ್ತು ಸ್ಥಳ: ಸ್ವಸ್ತಿಕ್ ಯುವಕರ ಸಂಘ, ಮಿಲ್ಕ್‌ಕಾಲೊನಿ, ರಾಜಾಜಿನಗರ, 2ನೇ ಹಂತ, ಸಂಜೆ 7



ಶ್ರೀನಾಥ್

ಗಾನಸಾರ್ವಭೌಮ ‘ಪಿ.ಬಿ. ಶ್ರೀನಿವಾಸ್ ಗೀತ ನಮನ’, ‘ಪಿ. ಬಿ. ಶ್ರೀನಿವಾಸ್ ಯಶೋನಿಧಿ ಪ್ರಶಸ್ತಿ ಪ್ರದಾನ–2023’: ಉದ್ಘಾಟನೆ: ಶ್ರೀನಾಥ್, ಅಧ್ಯಕ್ಷತೆ: ಎ. ಅಮೃತ್ ರಾಜ್, ಅತಿಥಿಗಳು: ಎಚ್.ಆರ್. ಭಾರ್ಗವ, ಡಿ. ಫಿಲಿಪ್ ರಾಜ್, ಪ್ರಶಸ್ತಿ ಪುರಸ್ಕೃತರು: ಲಕ್ಷ್ಮಿದೇವಿ, ಡಿ.ವಿ. ದಾಶರಥಿ, ಬಿ.ಎಂ. ಬತ್ತದ್, ಆಯೋಜನೆ: ಗಾನಧಾರೆ ಪ್ರತಿಷ್ಠಾನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

‘ಪಿ.ಬಿ. ಶ್ರೀನಿವಾಸ್’ ಜನ್ಮೋತ್ಸವ, ಪ್ರತಿಷ್ಠಾನದ ಉದ್ಘಾಟನೆ: ರಮೇಶ್ ಭಟ್, ಎನ್.ಎಸ್. ಶ್ರೀಧರಮೂರ್ತಿ, ಅತಿಥಿಗಳು: ವಿಠ್ಠಲ ಕೊಪ್ಪದ, ಕೆ. ಕಲ್ಯಾಣ್, ಲಹರಿ ವೇಲು, ಪಲ್ಲವಿ ಮಣಿ, ಅಶ್ವತ್ಥ್ ನಾರಾಯಣ, ಆಯೋಜನೆ: ಜನ್ಮಭೂಮಿ ರಂಗ ಪ್ರತಿಷ್ಠಾನ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 2

ರಮೇಶ್ ಭಟ್

‘ಪಿ.ಬಿ. ಶ್ರೀನಿವಾಸ್’ ಅವರ ಜನ್ಮದಿನ ಗೀತಗಾಯನ: ಗಾಯನ: ಜಿ.ಎಸ್. ವೆಂಕಟೇಶ್, ರವಿಸಂತು, ಅಬ್ಬೂರು ಮಧುಸೂದನ್, ಲಕ್ಷ್ಮಿ, ಚಂದ್ರಕಲಾ, ಆಯೋಜನೆ: ಹಸಿರುವನ ಟ್ರಸ್ಟ್, ಸ್ಥಳ: ಉದಯ ಸಹಕಾರ ಭವನ, ಹನುಮಂತನಗರ, ಸಂಜೆ 5.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಚಲನಚಿತ್ರ ವಾಣಿಜ್ಯ ಮಂಡಳಿಗೆ ನಾಳೆ ಚುನಾವಣೆ: ನಾಲ್ವರು ಕಣದಲ್ಲಿ

ಅಧ್ಯಕ್ಷ ಸ್ಥಾನಕ್ಕೆ ತುರುಸಿನ ಸ್ಪರ್ಧೆ

• ವಿನಾಯಕ ಕೆ.ಎಸ್.

ಬೆಂಗಳೂರು: ಆಡಳಿತ ಮಂಡಳಿಯ ಅವಧಿ ಮುಗಿದು ನಾಲ್ಕು ತಿಂಗಳಾದ ಬಳಿಕ ಅಂತಿಮವಾಗಿ ಸೆಪ್ಟೆಂಬರ್ 23ರಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ ಚುನಾವಣೆ ನಡೆಯಲಿದ್ದು, ಅಧ್ಯಕ್ಷ ಸ್ಥಾನಕ್ಕೆ ಬಿರುಸಿನ ಸ್ಪರ್ಧೆ ಏರ್ಪಟ್ಟಿದೆ.

ಈಗಿನ ಆಡಳಿತ ಮಂಡಳಿಯ ಅವಧಿ ಮೇ 28ಕ್ಕೆ ಮುಕ್ತಾಯಗೊಂಡಿದ್ದು, ಜೂನ್‌ನಲ್ಲಿ ಚುನಾವಣೆ ನಡೆಯಬೇಕಿತ್ತು. ಆದರೆ ಲೆಕ್ಕಪರಿಶೋಧನೆಯ ಕಾರಣ ನೀಡಿ ಹಾಲಿ ಆಡಳಿತ ಮಂಡಳಿ ಚುನಾವಣೆ ನಡೆಸಿರಲಿಲ್ಲ. ಹೀಗಾಗಿ ದೂರು ದಾಖಲಾಗಿತ್ತು. ಬಳಿಕ ಚುನಾವಣೆ ನಡೆಸುವಂತೆ ಸಹಕಾರ ಸಂಘಗಳ ಜಿಲ್ಲಾ ನೋಂದಣಾಧಿಕಾರಿಯು ಮಂಡಳಿ ಅಧ್ಯಕ್ಷರಿಗೆ ನೋಟಿಸ್ ನೀಡಿದ್ದರು.

‘65 ವರ್ಷಗಳ ವಾಣಿಜ್ಯ ಮಂಡಳಿ ಇತಿಹಾಸದಲ್ಲಿ ಇದೇ ಮೊದಲು ಅಧ್ಯಕ್ಷ ಸ್ಥಾನಕ್ಕೆ ನಾಲ್ವರು ಸ್ಪರ್ಧಿಗಳು ಕಣದ-ಲ್ಲಿದ್ದಾರೆ. ಈ ವರ್ಷ ಒಟ್ಟಾರೆ ಸ್ಪರ್ಧಿಗಳ ಸಂಖ್ಯೆ ಕೂಡ ಗಣನೀಯವಾಗಿ ಏರಿಕೆಯಾಗಿದೆ’ ಎನ್ನುತ್ತಾರೆ ಹಾಲಿ ಆಡಳಿತ ಮಂಡಳಿ ಪದಾಧಿಕಾರಿ-ಯೊಬ್ಬರು.

ನಿರ್ಮಾಪಕ, ಹಂಚಿಕೆದಾರ, ಪ್ರದರ್ಶಕ ವಲಯಗಳಿಂದ ಒಟ್ಟು 93 ಸ್ಥಾನಗಳಿಗೆ 158 ಅಭ್ಯರ್ಥಿಗಳು ಕಣದ-ಲ್ಲಿದ್ದಾರೆ. ಹಿಂದಿನ ವರ್ಷ ಈ ಅಭ್ಯರ್ಥಿಗಳ ಸಂಖ್ಯೆ 100ರ ಆಸುಪಾಸಿನಲ್ಲಿತ್ತು.

ಪದಾಧಿಕಾರಿಗಳ ಸ್ಥಾನಕ್ಕೆ ತೀವ್ರ ಪೈಪೋಟಿ: ಪ್ರತಿ ವರ್ಷ ವಾಣಿಜ್ಯ ಮಂಡಳಿ ಪದಾಧಿಕಾರಿಗಳಾಗಿ ಒಬ್ಬರು ಅಧ್ಯಕ್ಷ, ಮೂರು ವಲಯಗಳಿಂದ ತಲಾ ಒಬ್ಬರು ಖಜಾಂಚಿ, ಮೂರು ವಲಯಕ್ಕೆ ಪ್ರತ್ಯೇಕ ಉಪಾಧ್ಯಕ್ಷ, ಕಾರ್ಯದರ್ಶಿಗಳ ಆಯ್ಕೆ ನಡೆಯುತ್ತದೆ.

ಈ ಸಲ ಅಧ್ಯಕ್ಷ ಸ್ಥಾನಕ್ಕೆ ‘ಎಕ್ಸ್‌ಕ್ಯೂಸ್ ಮಿ’ ಸೇರಿದಂತೆ ಕೆಲ ಚಿತ್ರಗಳನ್ನು ನಿರ್ಮಿಸಿದ್ದ ನಿರ್ಮಾಪಕ ಎನ್.ಎಮ್. ಸುರೇಶ್, ವಿತರಕ ಮಾರ್ಸ್ ಸುರೇಶ್, ವಿತರಕ ಹಾಗೂ ನಿರ್ಮಾಪಕ ಶಿಲ್ಪ ಶ್ರೀನಿವಾಸ್, ವಿತರಕ ಎ.ಗಣೇಶ್ ಕಣದಲ್ಲಿದ್ದಾರೆ.

ಹಾಲಿ ಅಧ್ಯಕ್ಷ ಭಾ.ಮಾ. ಹರೀಶ್ ಸಹೋದರ ಭಾ.ಮಾ. ಗಿರೀಶ್ ನಿರ್ಮಾಪಕ ವಲಯದಿಂದ ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸಿದ್ದಾ-ರೆ. ಪತ್ರಕರ್ತ ವೀರೇಶ್ ಕೆ.ಎಂ ಹಾಗೂ ರಾಜೇಶ್ ಬ್ರಹ್ಮಾವರ ಕೂಡ ಈ ವಿಭಾಗದಲ್ಲಿ ಸ್ಪರ್ಧಿಸಿದ್ದಾರೆ.

ವಿತರಕ ವಲಯದಿಂದ ಕಾರ್ಯದರ್ಶಿ ಸ್ಥಾನಕ್ಕೆ ನಟ ಕರಿಸುಬ್ಬು ಸೇರಿದಂತೆ ಇನ್ನಿಬ್ಬರು ಅದೃಷ್ಟ ಪರೀಕ್ಷೆ-ಗಿಳಿದಿದ್ದಾರೆ. ಪ್ರದರ್ಶಕ ವಲಯದಿಂದ ಗೌರವ ಕಾರ್ಯದರ್ಶಿಯಾಗಿ ವಜ್ರೇಶ್ವರಿ ಚಿತ್ರಮಂದಿರದ ಮಾಲೀಕ ಆರ್. ಸುಂದರರಾಜು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಿರ್ಮಾಪಕರ ವಲಯದಿಂದ ಉಪಾಧ್ಯಕ್ಷ ಸ್ಥಾನಕ್ಕೆ ನಟಿ ಪ್ರಮೀಳಾ ಜೋಷಾಯ್, ನಿರ್ಮಾಪಕ ಸೂರಪ್ಪ ಬಾಬು, ಚಿಂಗಾರಿ ಮಹದೇವ್, ರೂಪಾ ಅಯ್ಯರ್ ಆಯ್ಕೆ ಬಯಸಿದ್ದಾರೆ. ಖಜಾಂಚಿ ಸ್ಥಾನಕ್ಕೆ ನಿರ್ದೇಶಕ ದಯಾಳ್ ಪದ್ಮನಾಭನ್ ಸ್ಪರ್ಧಿಯಾಗಿದ್ದಾರೆ.

ಭರವಸೆಗಳ ಮಹಾಪೂರ: ₹5 ಲಕ್ಷ ಕಲ್ಯಾಣ ನಿಧಿ, ಸರ್ಕಾರದಿಂದ ಸುಲಭ ಕೆಲಸ, ಸಬ್ಸಿಡಿ ಸಿನಿಮಾಗಳ ಸಂಖ್ಯೆ ಏರಿಕೆ, ಚಿತ್ರಮಂದಿರಗಳಿಗೆ ಸಿನಿಮಾ ಅಪ್‌ಲೋಡ್ ಮಾಡಲು ಬೆಂಗಳೂರಿನಲ್ಲಿಯೇ ವ್ಯವಸ್ಥೆ ಮೊದಲಾದ ಭರವಸೆಗಳನ್ನು ಅಭ್ಯರ್ಥಿಗಳು ನೀಡುತ್ತಿದ್ದಾರೆ.

ಚಿರತೆ, ಜಿಂಕೆಗಳ ಸರಣಿ ಸಾವು

ತನಿಖೆಗೆ ಸೂಚನೆ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಚಿರತೆ ಮರಿಗಳು ಮತ್ತು ಜಿಂಕೆಗಳ ಸರಣಿ ಸಾವಿನ ಹಿನ್ನೆಲೆಯಲ್ಲಿ ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಗುರುವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ನಂತರ ಮಾತನಾಡಿ, ಹಿರಿಯ ಅಧಿಕಾರಿಗಳು ಸಮಗ್ರ ತನಿಖೆ ನಡೆಸಿ ವರದಿ ನೀಡಲು ಸೂಚಿಸಿದ್ದೇನೆ. ಸರಣಿ ಸಾವಿನ ಸಂಬಂಧ ಯಾವುದೇ ಲೋಪವಾಗಿದ್ದರೂ ಸಂಬಂಧಿಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವು-ದು. ಸೋಂಕು ಹರಡದಂತೆ ತಡೆಗಟ್ಟುವ ಸಲುವಾಗಿ ಬನ್ನೇರುಘಟ್ಟ ಉದ್ಯಾನದ ಸಿಬ್ಬಂದಿ, ಅಧಿಕಾರಿಗಳು ತಕ್ಷಣಕ್ಕೆ ಬೇರೆ ಉದ್ಯಾನಗಳಿಗೆ ಭೇಟಿ ನೀಡದಂತೆ ಸೂಚಿಸಲಾಗಿದೆ ಎಂದರು.

ಮುಂದುವರಿದ ಜಿಂಕೆಗಳ ಸಾವಿನ ಸರಣಿ: ಬುಧವಾರ ತಡ ರಾತ್ರಿ ಮತ್ತೆ 3 ಜಿಂಕೆಗಳು ಸಾವನ್ನಪ್ಪಿವೆ. ಸಾವಿನ ಸಂಖ್ಯೆ 19ಕ್ಕೆ ಏರಿಕೆಯಾಗಿದೆ. ಬೆಂಗಳೂರಿನ ಸೇಂಟ್ ಜಾನ್ಸ್ ಆಸ್ಪತ್ರೆ ಉದ್ಯಾನದಿಂದ 37 ಜಿಂಕೆಗಳನ್ನು ಸಂರಕ್ಷಿಸಿ ಜೈವಿಕ ಉದ್ಯಾನಕ್ಕೆ ತರಲಾಗಿತ್ತು.

ಬಿಡಿಎ ವಿರುದ್ಧ ಹೋರಾಟಕ್ಕೆ ಸಿದ್ಧತೆ

ಯಲಹಂಕ: ಡಾ.ಶಿವರಾಮ ಕಾರಂತ ಬಡಾವಣೆಗಾಗಿ ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ (ಬಿಡಿಎ) ವಶಪಡಿಸಿಕೊಂಡಿರುವ ಜಮೀನುಗಳ ಮಾಲೀಕರಿಗೆ ಪರಿಹಾರ ನೀಡದ ಹೊರತು, ಜಮೀನುಗಳನ್ನು ಬಿಟ್ಟುಕೊಡುವುದಿಲ್ಲ ಎಂದು ಪಟ್ಟುಹಿಡಿದಿರುವ ರೈತರು, ಹೋರಾಟಕ್ಕೆ ಸಿದ್ಧತೆ ನಡೆಸಿದ್ದಾರೆ.

ಕರ್ನಾಟಕ ರೈತಸಂಘ ಹಾಗೂ ಹಸಿರುನೇನೆಯ ರಾಜ್ಯ ಘಟಕದ ಅಧ್ಯಕ್ಷೆ ಚುಕ್ಕಿ ನಂಜುಂಡಸ್ವಾಮಿ ಅವರೊಂದಿಗೆ ರಾಮಗೊಂಡನಹಳ್ಳಿಯಲ್ಲಿ ಸಭೆ ನಡೆಸಿದ ರೈತ ಮುಖಂಡರು ಹಾಗೂ ಸಂತ್ರಸ್ತರು, ಮುಂದಿನ ಹೋರಾಟದ ಕುರಿತು ಚರ್ಚಿಸಿದರು.

ಕರ್ನಾಟಕ ರಾಜ್ಯ ರೈತಸಂಘ ಹಾಗೂ ಹಸಿರುಸೇನೆಯ ರಾಜ್ಯ ಪ್ರಧಾನಕಾರ್ಯದರ್ಶಿ ಮಂಜುಕಿರಣ್, ರೈತ ಮುಖಂಡರಾದ ರಾಮಗೊಂಡನಹಳ್ಳಿ ಮುನಿರಾಜು, ಬಸವರಾಜ ಪಾದಯಾತ್ರಿ, ರಘು, ಪಂಚಾಕ್ಷರಿ, ವೀರಸಾಗರ ವಸಂತ್ ಉಪಸ್ಥಿತರಿದ್ದರು.

ವಿಧಾನಸೌಧ ಮುತ್ತಿಗೆಗೆ ಯತ್ನ ಕರವೇ ಕಾರ್ಯಕರ್ತರು ವಶಕ್ಕೆ

ಬೆಂಗಳೂರು: 'ಕಾವೇರಿ ನದಿ ನೀರನ್ನು ತಮಿಳುನಾಡಿಗೆ ಹರಿಸಬಾರದು' ಎಂದು ಆಗ್ರಹಿಸಿ ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಮುಂದಾಗಿದ್ದ ಕರ್ನಾಟಕ ರಕ್ಷಣಾ ವೇದಿಕೆಯ (ಟಿ. ನಾರಾಯಣಗೌಡ ಬಣ) ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

ಗಾಂಧಿನಗರದಿಂದ ವಿಧಾನಸೌಧದವರೆಗೆ ಮೆರವಣಿಗೆ ಹಮ್ಮಿಕೊಳ್ಳಲಾಗಿತ್ತು. 100ಕ್ಕೂ ಹೆಚ್ಚು ಕಾರ್ಯಕರ್ತರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ವಿಧಾನಸೌಧದತ್ತ ಮೆರವಣಿಗೆಯಲ್ಲಿ ಹೊರಟಿದ್ದ ಕಾರ್ಯಕರ್ತರನ್ನು ಗಾಂಧಿ ಪ್ರತಿಮೆ ವೃತ್ತದಲ್ಲೇ ಪೊಲೀಸರು ತಡೆದರು. 'ವಿಧಾನಸೌಧ ಸುತ್ತಮುತ್ತ ನಿಷೇಧಾಜ್ಞೆ ಜಾರಿಯಲ್ಲಿದೆ. ಪ್ರತಿಭಟನೆಗೂ ಅವಕಾಶವಿಲ್ಲ. ಮೆರವಣಿಗೆ ಕೈ ಬಿಟ್ಟು ವಾಪಸು ಹೋಗಿ' ಎಂದು ಪೊಲೀಸರು ಎಚ್ಚರಿಸಿದರು.

ಅದಕ್ಕೆ ಒಪ್ಪದ ಕಾರ್ಯಕರ್ತರು, ವಾಹನಗಳ ಸಂಚಾರ ತಡೆದು ಪ್ರತಿಭಟನೆಗೆ ಮುಂದಾದರು. ಬ್ಯಾರಿ ಕೇಡ್ ಹಾಗೂ ಪೊಲೀಸರನ್ನು ತಳ್ಳಿ ಮುಂದಕ್ಕೆ ಹೋಗಲು ಯತ್ನಿಸಿದರು. ಈ ವೇಳೆ ಕಾರ್ಯಕರ್ತರು–ಪೊಲೀಸರ ನಡುವೆ ನೂಕುನುಗ್ಗಲು ಉಂಟಾಯಿತು.

ಇದೇ ಸಂದರ್ಭದಲ್ಲಿ ಪೊಲೀಸರು, ಟಿ. ನಾರಾಯಣಗೌಡ ಸೇರಿದಂತೆ 50ಕ್ಕೂ ಹೆಚ್ಚು ಕಾರ್ಯಕರ್ತರನ್ನು ವಶಕ್ಕೆ ಪಡೆದರು.

ಭಿಕ್ಷಾಟನೆ ನಿರ್ಮೂಲನಾ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲು

ಭಿಕ್ಷಾಟನೆ: 115 ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯ ರಸ್ತೆ ಬದಿ ಮತ್ತು ಸಂಚಾರ ಸಿಗ್ನಲ್‌ಗಳಲ್ಲಿ ಭಿಕ್ಷೆ ಬೇಡುವುದು ಹಾಗೂ ಆಟಿಕೆಗಳನ್ನು ಮಾರಾಟ ಮಾಡಲು ಮಕ್ಕಳನ್ನು ಬಳಕೆ ಮಾಡಿದವರ ವಿರುದ್ಧ ಕರ್ನಾಟಕ ಭಿಕ್ಷಾಟನೆ ನಿರ್ಮೂಲನಾ ಕಾಯ್ದೆ ಅಡಿಯಲ್ಲಿ 115 ಎಫ್‌ಐಆರ್‌ ದಾಖಲು ಮಾಡಲಾಗಿದೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಈ ಸಂಬಂಧ, 'ಲೆಟ್ಸ್ ಕಿಟ್ ಫೌಂಡೇಷನ್' ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಿಬಿಎಂಪಿ ಪರ ವಕೀಲರು ನ್ಯಾಯಪೀಠಕ್ಕೆ ಪ್ರಮಾಣ ಪತ್ರ ಸಲ್ಲಿಸಿ, '2021ರಿಂದ ಈಚೆಗೆ 115 ಮಂದಿಯ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದ್ದು 99 ಮಕ್ಕಳನ್ನು ಸಂರಕ್ಷಿಸಲಾಗಿದೆ' ಎಂದು ತಿಳಿಸಿದರು.

144 ಬಂಧನ: 'ಭಿಕ್ಷಾಟನೆ ಮಾಡುತ್ತಿದ್ದ 37 ಪುರುಷರು, 74 ಮಹಿಳೆಯರು, 54 ಬಾಲಕರು ಹಾಗೂ 45 ಬಾಲಕಿಯರೂ ಸೇರಿದಂತೆ ಒಟ್ಟು 210 ಜನರನ್ನು ಸಂರಕ್ಷಿಸಲಾಗಿದೆ. 115 ಎಫ್‌ಐಆರ್ ದಾಖಲಿಸಿ 82 ಪುರುಷರು ಹಾಗೂ 62 ಮಹಿಳೆಯರು ಸೇರಿದಂತೆ 144 ಮಂದಿಯನ್ನು ಬಂಧಿಸಲಾಗಿದೆ' ಎಂದು ಪ್ರಮಾಣ ಪತ್ರದಲ್ಲಿ ವಿವರಿಸಲಾಗಿದೆ.

ಮನವಿ: ವಿಚಾರಣೆ ವೇಳೆ ಬಿಬಿಎಂಪಿ ಪರ ವಕೀಲರು, 'ಭಿಕ್ಷುಕರ ಸಂರಕ್ಷಣೆಗಾಗಿ ಸಂಗ್ರಹಿಸಲಾದ ₹ 55.65 ಕೋಟಿ ಸೆಸ್ ಮೊತ್ತವನ್ನು ಕೇಂದ್ರ ಪರಿಹಾರ ಸಮಿತಿಗೆ ಪಾವತಿ ಮಾಡಲು ಆರು ತಿಂಗಳ ಕಾಲಾವಕಾಶ ನೀಡಬೇಕು' ಎಂದು ಮನವಿ ಮಾಡಿದರು.

ಆದರೆ, ಇದನ್ನು ಒಪ್ಪದ ನ್ಯಾಯಪೀಠ, 'ಮುಂದಿನ ನಾಲ್ಕು ತಿಂಗಳಲ್ಲಿ ಎಲ್ಲ ಬಾಕಿ ಮೊತ್ತವನ್ನು ಕೇಂದ್ರ ಪರಿಹಾರ ಸಮಿತಿಗೆ ಪಾವತಿ ಮಾಡಬೇಕು' ಎಂದು ಸೂಚಿಸಿ ವಿಚಾರಣೆಯನ್ನು ನಾಲ್ಕು ವಾರಗಳ ಕಾಲ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?

'ಬೆಂಗಳೂರಿನ ಬೀದಿಗಳಲ್ಲಿ ಪ್ರಮುಖವಾಗಿ ಸಂಚಾರಿ ಸಿಗ್ನಲ್‌ಗಳಲ್ಲಿ ಪೆನ್, ಆಟಿಕೆಗಳು, ಇಯರ್ ಬಡ್ ಮತ್ತಿತರ ವಸ್ತುಗಳನ್ನು ಮಾರಾಟ ಮಾಡಲು ಹಾಗೂ ಭಿಕ್ಷಾಟನೆಗೆ ಮಕ್ಕಳನ್ನು ಬಳಸಿಕೊಳ್ಳಲಾಗುತ್ತಿದೆ. ಇದು ಬಾಲ ನ್ಯಾಯ ಕಾಯ್ದೆ ಹಾಗೂ ಸಂವಿಧಾನದ 21ನೇ ವಿಧಿಯ ಉಲ್ಲಂಘನೆ. ಆದ್ದರಿಂದ, ಮಕ್ಕಳನ್ನು ಮಾರಾಟದ ಕೆಲಸಕ್ಕೆ ಬಳಸಿಕೊಳ್ಳದಂತೆ ಹಾಗೂ ಅವರನ್ನು ಶಾಲೆಗಳಿಗೆ ದಾಖಲಿಸುವ ಅಗತ್ಯ ಕ್ರಮ ಜರುಗಿಸುವಂತೆ ರಾಜ್ಯ ಸರ್ಕಾರ, ಬಿಬಿಎಂಪಿ ಮತ್ತು ಶಿಕ್ಷಣ ಸಂಸ್ಥೆಗಳಿಗೆ ನಿರ್ದೇಶಿಸಬೇಕು' ಎಂಬುದು ಅರ್ಜಿದಾರರ ಕೋರಿಕೆ.

ಇಎಸ್‌ಐ: ವೇತನ ಮಿತಿ ಹೆಚ್ಚಿಸಲು ಆಗ್ರಹ

ಬೆಂಗಳೂರು: ಕಾರ್ಮಿಕರ ರಾಜ್ಯ ವಿಮಾ ಯೋಜನೆಗೆ (ಇಎಸ್‌ಐ) ನಿಗದಿಪಡಿಸಿರುವ ವೇತನ ಮಿತಿಯನ್ನು ₹50 ಸಾವಿರಕ್ಕೆ ನಿಗದಿಪಡಿಸಬೇಕೆಂದು ಆಗ್ರಹಿಸಿ ಕರ್ನಾಟಕ ವರ್ಕರ್ಸ್ ಯೂನಿಯನ್ ಸದಸ್ಯರು ಗುರುವಾರ ಮೈಸೂರು ರಸ್ತೆಯಲ್ಲಿರುವ ಇಎಸ್‌ಐ ಪ್ರಾಂತೀಯ ನಿರ್ದೇಶಕರ ಕಚೇರಿ ಮುಂಭಾದಲ್ಲಿ ಪ್ರತಿಭಟನೆ ನಡೆಸಿದರು.

'ಇಎಸ್‌ಐ ಕಾಯ್ದೆಯ ಅಡಿಯಲ್ಲಿ ಕಾರ್ಮಿಕರು ಆರೋಗ್ಯ ಸೌಲಭ್ಯ ಪಡೆದುಕೊಳ್ಳಲು ₹21 ಸಾವಿರ ವೇತನ ನಿಗದಿಪಡಿಸಲಾಗಿದೆ. ಆದರೆ, ಬಹುತೇಕ ಕಾರ್ಮಿಕರ ವೇತನ ಹೆಚ್ಚಾಗಿದ್ದು, ಈ ಸೌಲಭ್ಯಗಳನ್ನು ಪಡೆದುಕೊಳ್ಳಲು ಅರ್ಹರಾಗಿಲ್ಲ. ಆದ್ದರಿಂದ ಈ ಮಿತಿಯನ್ನು ₹ 50 ಸಾವಿರಕ್ಕೆ ನಿಗದಿಪಡಿಸಬೇಕು' ಎಂದು ಯೂನಿಯನ್ ಅಧ್ಯಕ್ಷ ಗಣಪತಿ ಹೆಗಡೆ ಒತ್ತಾಯಿಸಿದರು.

ಕಾರ್ಮಿಕರ ರಾಜ್ಯ ವಿಮಾ ಯೋಜನೆಗೆ ನಿಗದಿಪಡಿಸಿರುವ ವೇತನ ಮಿತಿಯನ್ನು ₹50 ಸಾವಿರಕ್ಕೆ ನಿಗದಿಪಡಿಸಬೇಕೆಂದು ಆಗ್ರಹಿಸಿ ಕರ್ನಾಟಕ ವರ್ಕರ್ಸ್ ಯೂನಿಯನ್ ಸದಸ್ಯರು ಗುರುವಾರ ಮೈಸೂರು ರಸ್ತೆಯಲ್ಲಿರುವ ಇಎಸ್‌ಐ ಪ್ರಾಂತೀಯ ನಿರ್ದೇಶಕರ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

'ಸದ್ಯ ಇಎಸ್‌ಐ ಸೌಲಭ್ಯ ಪಡೆದುಕೊಳ್ಳಲು ಮಿತಿ ಇರುವ ಕಾರಣ ಕಾರ್ಮಿಕರು ಖಾಸಗಿ ಆರೋಗ್ಯ ವಿಮಾ ಸೌಲಭ್ಯ ಪಡೆದುಕೊಳ್ಳುತ್ತಿದ್ದಾರೆ. ಈ ಆರೋಗ್ಯ ವಿಮೆ ನೀತಿಯಲ್ಲಿ ಸೂಚಿಸಿದ ಆಸ್ಪತ್ರೆಗಳಲ್ಲಿ ನಿಗದಿತ ಕಾಯಿಲೆಗಳಿಗೆ ಮಾತ್ರ ಚಿಕಿತ್ಸೆ ನೀಡಲಾಗುತ್ತದೆ. ಇದರಲ್ಲಿ ಕುಟುಂಬದ ಸದಸ್ಯರಿಗೆ ಚಿಕಿತ್ಸೆ ನೀಡಲು ಅವಕಾಶವಿಲ್ಲ' ಎಂದು ದೂರಿದರು.

'ಸುಪ್ರೀಂ' ಆದೇಶ ತಿರಸ್ಕಾರಕ್ಕೆ ಆಗ್ರಹ

ಬೆಂಗಳೂರು: ಕಾವೇರಿ ನೀರಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಆದೇಶ ತಿರಸ್ಕರಿಸಬೇಕು ಎಂದು ಕನ್ನಡ ಗೆಳೆಯರ ಬಳಗ ಹಾಗೂ ಕರ್ನಾಟಕ ವಿಕಾಸ ರಂಗ ಜಂಟಿಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆಗ್ರಹಿಸಿವೆ.

'ಕನ್ನಡಿಗರ ಹಕ್ಕು ಮತ್ತು ಸ್ವಾಭಿಮಾನವನ್ನು ಕಾಪಾಡಲು ಸುಪ್ರೀಂ ಕೋರ್ಟ್ ಆದೇಶವನ್ನು ತಿರಸ್ಕರಿಸುವುದೇ ರಾಜ್ಯ ಸರ್ಕಾರಕ್ಕೆ ಉಳಿದಿರುವ ಮಾರ್ಗ' ಎಂದು ವಿಕಾಸರಂಗದ ಅಧ್ಯಕ್ಷ ವ.ಚ. ಚನ್ನೇಗೌಡ, ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ಹೇಳಿದ್ದಾರೆ.

ಬಾಲಕಿ ಅಪಹರಿಸಿ ಲೈಂಗಿಕ ದೌರ್ಜನ್ಯ: 3 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಕಿಯನ್ನು ಅಪಹರಿಸಿ ಲೈಂಗಿಕ ದೌರ್ಜನ್ಯ ಎಸಗಿದ್ದ ಅಪರಾಧಿ ವಿಷ್ಣು (24) ಎಂಬಾತನಿಗೆ ಮೂರು ವರ್ಷಗಳ ಜೈಲು ಶಿಕ್ಷೆ ವಿಧಿಸಿ ನಗರದ 1ನೇ ತ್ವರಿತ ವಿಶೇಷ ನ್ಯಾಯಾಲಯ (ಎಫ್‌ಟಿಎಸ್‌ಸಿ) ಆದೇಶ ಹೊರಡಿಸಿದೆ.

ಅಪರಾಧ ಸುದ್ದಿ

ಬಾಗಲಗುಂಟೆ ಠಾಣೆಯಲ್ಲಿ 2019ರಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶೆ ರೂಪಾ ಕೆ.ಎನ್ ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಪಿ. ಕೃಷ್ಣವೇಣಿ ವಾದಿಸಿದ್ದರು.

'17 ವರ್ಷದ ಬಾಲಕಿ, ಕಾಲೇಜು ವ್ಯಾಸಂಗ ಮಾಡುತ್ತಿದ್ದಳು. ಟಿ. ದಾಸರಹಳ್ಳಿ ನಿವಾಸಿ ವಿಷ್ಣು, ಬಾಲಕಿಯನ್ನು ಹಿಂಬಾಲಿಸುತ್ತಿದ್ದ. ಪ್ರೀತಿಸುವಂತೆ ದುಂಬಾಲು ಬಿದ್ದಿದ್ದ. ರಸ್ತೆಯಲ್ಲಿ ಬಾಲಕಿಯನ್ನು ಅಡ್ಡಗಟ್ಟಿ ಕಿರುಕುಳ ನೀಡುತ್ತಿದ್ದ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'2019ರ ಮೇ 21ರಂದು ಬಾಲಕಿಯನ್ನು ಅಪಹರಿಸಿ ಆಟೊದಲ್ಲಿ ಕರೆದೊಯ್ದಿದ್ದ ಆರೋಪಿ, ಮನೆಯೊಂದರಲ್ಲಿ ಅಕ್ರಮ ಬಂಧನದಲ್ಲಿಟ್ಟಿದ್ದ. ಅದೇ ಸಂದರ್ಭದಲ್ಲಿ ಬಾಲಕಿ ಮೇಲೆ ನಿರಂತರವಾಗಿ ಲೈಂಗಿಕ ದೌರ್ಜನ್ಯ ಎಸಗಿದ್ದ. ಮಗಳ ಮೇಲಾದ ಲೈಂಗಿಕ ದೌರ್ಜನ್ಯದ ಬಗ್ಗೆ ತಂದೆ ದೂರು ನೀಡಿದ್ದರು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿತ್ತು. ತನಿಖೆ ನಡೆಸಿದ್ದ ಇನ್‌ಸ್ಪೆಕ್ಟರ್ ಎಂ. ಕುಮಾರ್, ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು' ಎಂದರು.

ಪೊಲೀಸರ ವಿರುದ್ಧ ಸಿಸಿಬಿ ತನಿಖೆ

ಬೆಂಗಳೂರು: 'ವೈಯಾಲಿಕಾವಲ್ ಠಾಣೆಯ ಪೊಲೀಸರು ಹಾಗೂ ಇತರರು ಕಿರುಕುಳ ನೀಡಿದ್ದಾರೆ' ಎಂದು ಆರೋಪಿಸಿ ಮರಣಪತ್ರ ಬರೆದಿಟ್ಟು ನಾಗರಾಜ್ (47) ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣದ ತನಿಖೆಯನ್ನು ಸಿಸಿಬಿಗೆ ವಹಿಸಲಾಗಿದೆ.

ತಲಘಟ್ಟಪುರ ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ ನಾಗರಾಜ್, ಉದ್ಯಮಿ ಸನಾವುಲ್ಲ ಒಡೆತನದ ಇಪಿಪಿ (ಎನ್ವಿರಾನ್‌ಮೆಂಟ್ ಪೊಲ್ಯೂಷನ್ ಪ್ರಾಜೆಕ್ಟ್) ಕಂಪನಿ ಉದ್ಯೋಗಿ. ಬುಧವಾರ ಮಧ್ಯಾಹ್ನ ಆತ್ಮಹತ್ಯೆ ಮಾಡಿಕೊಂಡಿದ್ದರು.

'ಇಪಿಪಿ ಕಂಪನಿಯಿಂದ ವಂಚನೆಯಾಗಿರುವ ಬಗ್ಗೆ ವ್ಯಕ್ತಿಯೊಬ್ಬರು ವೈಯಾಲಿಕಾವಲ್ ಠಾಣೆಗೆ ದೂರು ನೀಡಿದ್ದರು. ಉದ್ಯಮಿ ಸನಾವುಲ್ಲ ಬದಲು ನಾಗರಾಜ್ ಅವರನ್ನು ವಶಕ್ಕೆ ಪಡೆದಿದ್ದ ಪೊಲೀಸರು, ಠಾಣೆಗೆ ಕರೆತಂದು ಕಿರುಕುಳ ನೀಡಿದ್ದರು. ಇದರಿಂದ ನೊಂದ ನಾಗರಾಜ್, ಮರಣಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂಬ ಆರೋಪವಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಪೊಲೀಸರ ಮೇಲೆ ಆರೋಪವಿರುವುದರಿಂದ ಪ್ರಕರಣದ ತನಿಖೆಯನ್ನು ಸಿಸಿಬಿಗೆ ವಹಿಸಲಾಗಿದೆ. ಸನಾವುಲ್ಲ ಹಾಗೂ ಇತರರ ಹೆಸರು ಮರಣಪತ್ರದಲ್ಲಿದೆ. ಅವರನ್ನೂ ಸಿಸಿಬಿ ವಿಚಾರಣೆ ನಡೆಸಲಿದೆ' ಎಂದು ತಿಳಿಸಿದರು.

ಕಾರು ಡಿಕ್ಕಿ: ರಸ್ತೆ ದಾಟುತ್ತಿದ್ದ ಯುವಕ ಸಾವು

ಬೆಂಗಳೂರು: ಹೆಣ್ಣೂರು ಠಾಣೆ ವ್ಯಾಪ್ತಿಯಲ್ಲಿ ಕಾರು ಡಿಕ್ಕಿಯಾಗಿ ಪಾದಚಾರಿ ರಾಘವೇಂದ್ರ (21) ಮೃತಪಟ್ಟಿದ್ದು, ಅಪಘಾತದ ಬಳಿಕ ಕಾರು ಸಮೇತ ಚಾಲಕ ಪರಾರಿಯಾಗಿದ್ದಾನೆ.

'ಕೊಪ್ಪಳದ ರಾಘವೇಂದ್ರ, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಹೋಟೆಲೊಂದರಲ್ಲಿ ಸಹಾಯಕ ಕೆಲಸಕ್ಕೆ ಸೇರಿದ್ದರು. ಸ್ನೇಹಿತರ ಜೊತೆ ಕೊಠಡಿಯಲ್ಲಿ ವಾಸವಿದ್ದರು' ಎಂದು ಪೊಲೀಸರು ಹೇಳಿದರು.

'ಸೆ. 17ರಂದು ರಾತ್ರಿ ಕೆಲಸ ಮುಗಿಸಿದ್ದ ರಾಘವೇಂದ್ರ, ಇಬ್ಬರು ಸ್ನೇಹಿತರ ಜೊತೆ ಕೊಠಡಿಯತ್ತ ನಡೆದುಕೊಂಡು ಹೊರಟಿದ್ದರು. ಹೋಟೆಲ್ ಬಳಿ ರಸ್ತೆ ದಾಟುತ್ತಿದ್ದರು. ಇದೇ ಸಂದರ್ಭದಲ್ಲಿ ಅತೀ ವೇಗವಾಗಿ ಬಂದ ಕಾರು ಅವರಿಗೆ ಡಿಕ್ಕಿ ಹೊಡೆದಿತ್ತು. ಸ್ಥಳದಿಂದ ಹಾರಿಬಿದ್ದು ತೀವ್ರ ಗಾಯಗೊಂಡು ರಾಘವೇಂದ್ರ ಮೃತಪಟ್ಟಿದ್ದಾರೆ' ಎಂದು ತಿಳಿಸಿದರು.

'ಅಪಘಾತದ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಚಾಲಕನ ವಿರುದ್ಧ ಪ್ರಕರಣ ದಾಖಲಿಸಿ, ತನಿಖೆ ನಡೆಸಲಾಗುತ್ತಿದೆ' ಎಂದು ಹೇಳಿದರು.

ನಿಧನ ವಾರ್ತೆ

ಮಂಜುನಾಥ್ ಭಟ್



ಬೆಂಗಳೂರು: ಜರಗನಹಳ್ಳಿಯ ನಿವಾಸಿ ವಿದ್ವಾನ್ ಮಂಜುನಾಥ ಭಟ್ ಎಚ್.ವಿ (70) ಗುರುವಾರ ನಿಧನರಾದರು. ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಮೃತರ ಅಂತ್ಯಕ್ರಿಯೆಯು ಶುಕ್ರವಾರ ಬೆಳಿಗ್ಗೆ ಬೆಂಗಳೂರಿನಲ್ಲಿ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಶಿವಮೊಗ್ಗ ಜಿಲ್ಲೆಯ ತಾಳಗುಪ್ಪ ಸಮೀಪದ ಹಿರೇಮನೆಯವರಾದ ಮಂಜುನಾಥ್ ಅವರು ಬೆಂಗಳೂರಿನ ವಿಜಯ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕರ್ಯನಿರ್ವಹಿಸಿದ್ದರು. ಯಕ್ಷಗಾನ ಕಲಾವಿದರೂ ಆದ ಅವರು, ಜಿ ವಿ ಅಯ್ಯರ್ ನಿರ್ದೇಶನದ 'ಆದಿ ಶಂಕರಾಚಾರ್ಯ' ಚಿತ್ರಕ್ಕೆ ಸಂಸ್ಕೃತ ಸಂಭಾಷಣೆ ಬರೆದಿದ್ದರು. ಜತೆಗೆ, ಅದೇ ಚಿತ್ರದಲ್ಲಿ ಪ್ರಮುಖ ಪಾತ್ರವನ್ನೂ ನಿರ್ವಹಿಸಿದ್ದರು.

ಬಾಲಕೃಷ್ಣರಾಜು



ಬೆಂಗಳೂರು: ಕತ್ರಿಗುಪ್ಪೆಯ ವಿವೇಕಾನಂದನಗರದ ಕೆಇಬಿ ಬಡಾವಣೆಯ ನಿವಾಸಿ ಜಿ.ಆರ್. ಬಾಲಕೃಷ್ಣರಾಜು (82) ಅವರು ಗುರುವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ.

ಮೃತ ಬಾಲಕೃಷ್ಣರಾಜು ಅವರ ಅಂತ್ಯಕ್ರಿಯೆಯು ಶುಕ್ರವಾರ ಸಂಜೆ 4 ಗಂಟೆಗೆ ಟಿ.ಆರ್. ಮಿಲ್‌ನ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಕುವೆಂಪು ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ನಿಯಮಿತ

(ಸನಿ.44, ನೋಂದಣಿ 21/19776/95-96 ದಿನಾಂಕ 04-09-1995)
ನಂ.899/ಎ, 1ನೇ ಅಡ್ಡ ರಸ್ತೆ, 'ಡಿ' ಬ್ಲಾಕ್, (ಶನಿಮಹಾತ್ಮ ದೇವಸ್ಥಾನದ ಹಿಂಭಾಗ),
ರಾಜಾಜಿನಗರ 2ನೇ ಹಂತ, ಬೆಂಗಳೂರು-560010, ದೂ: 08023422918

ಲಗ್ಗೆರೆ ಶಾಖೆ	ನಾಗರಭಾವಿ ಶಾಖೆ	ಬಸವೇಶ್ವರನಗರ ಶಾಖೆ
08028397755	08026744674	08023108899

ಸಹಕಾರಿ ಬಂಧುಗಳೇ

ದಿನಾಂಕ 23-09-2023 ರಂದು ಶನಿವಾರ ಬೆಳಿಗ್ಗೆ 11:00 ಘಂಟೆಗೆ 2022-23 ನೇ ಸಾಲಿನ **28ನೇ ಸರ್ವ ಸದಸ್ಯರ ಸಭೆಯನ್ನು ಡಾ. ರಾಜ್‌ಕುಮಾರ್ ಒಳಾಂಗಣ ಕ್ರೀಡಾಂಗಣ**, ಗೆಳೆಯರ ಬಳಗ, ಶನಿಮಹಾತ್ಮ ದೇವಸ್ಥಾನದ ಮುಂಭಾಗ, ಮಹಾಲಕ್ಷ್ಮೀಪುರಂ, ಬೆಂಗಳೂರು-86 ಇಲ್ಲಿ ಏರ್ಪಡಿಸಲಾಗಿದೆ. ಈ ಮಹಾಸಭೆಯ ನೋಟೀಸನ್ನು ಈಗಾಗಲೇ ಸಂಘದ ಎಲ್ಲಾ ಸದಸ್ಯರಿಗೆ ಅಂಚೆ ಮೂಲಕ ಕಳುಹಿಸಿಕೊಡಲಾಗಿದೆ. ಒಂದು ವೇಳೆ ಅಂಚೆ ತಲುಪದಿದ್ದರೆ ಈ ಪ್ರಕಟಣೆಯನ್ನೇ ಆಹ್ವಾನ ಪತ್ರವೆಂದು ಪರಿಗಣಿಸಿ ತಪ್ಪದೇ ಹಾಜರಾಗಲು ಕೋರಿದೆ.

ಆಡಳಿತ ಮಂಡಳಿ ಪರವಾಗಿ

ಸ್ಥಳ: ಬೆಂಗಳೂರು
ದಿನಾಂಕ: 22-09-2023
ಸಹಿ/- **ಕೆ. ಪುಟ್ಟಸ್ವಾಮಿಗೌಡ**, ಕಾರ್ಯದರ್ಶಿ

ಗ್ರೇಟರ್ ಬೆಂಗಳೂರು–ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರ

ಬಿ.ಎಂ.ಆರ್.ಡಿ.ಎ. ಕಛೇರಿ ಆವರಣ, ನಂ.1, ಆಲಿ ಆಸ್ಕರ್ ರಸ್ತೆ,
ಬೆಂಗಳೂರು–560 052. ದೂರವಾಣಿ : 22263479

ಸಂಖ್ಯೆ: GBBSCPA/CLU/02/2023-24 ದಿನಾಂಕ: 20–09–2023

ತಿದ್ದುಪಡಿ ಪ್ರಕಟಣೆ

ದಿನಾಂಕ: 08.06.2023 ರಂದು ನೀಡಲಾದ ಈ ಪ್ರಾಧಿಕಾರದ ಸಮಸಂಖ್ಯೆ ಪ್ರಕಟಣೆಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015ರ ಕಲಂ 69(2), 69(3) ಮತ್ತು 69(4)ರ ಅಡಿಯಲ್ಲಿ ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕಾಕರಾಮನಹಳ್ಳಿ ಗ್ರಾಮದ ಸ.ನಂ.21/4ರಲ್ಲಿ 01 ಎಕರೆ ವಿಸ್ತೀರ್ಣದ ಜಮೀನನ್ನು **'ಉದ್ಯಾನವನ ಮತ್ತು ಬಯಲುಜಾಗ'** ವಲಯದಿಂದ **'ವಸತಿ'** ವಲಯಕ್ಕೆ ಭೂಉಪಯೋಗ ನಿಗಧಿಪಡಿಸುವುದು ಎಂದು ಇರುವುದನ್ನು **'ಸಾರ್ವಜನಿಕ/ಅರೆ ಸಾರ್ವಜನಿಕ ಮತ್ತು ಭಾಗಶಃ ಉದ್ಯಾನವನ/ಬಯಲು ಜಾಗ'** ವಲಯದಿಂದ **'ವಸತಿ'** ವಲಯಕ್ಕೆ ಭೂಉಪಯೋಗ ನಿಗಧಿಪಡಿಸುವುದು ಎಂದು ತಿದ್ದಿ ಓದಿಕೊಳ್ಳುವುದು.

ಸದರಿ ಜಮೀನಿಗೆ ವಸತಿ ಭೂಉಪಯೋಗ ನಿಗಧಿಪಡಿಸುವ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ತಿದ್ದುಪಡಿ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಯನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಗ್ರೇಟರ್ ಬೆಂಗಳೂರು–ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಸದಸ್ಯ ಕಾರ್ಯದರ್ಶಿಗಳು,
ಗ್ರೇಟರ್ ಬೆಂಗಳೂರು–ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರ, ಬೆಂಗಳೂರು.

DIPR/CP/RO1379/AAPL/2023-24

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560 020.

ಸಂ: ಬೆಂಅಪ್ರಾ/ನಯೋಸ/CLU-30/1338/2023–24 ದಿನಾಂಕ: 21.09.2023

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(3)ರನ್ವಯ)

ಶ್ರೀ ಅನುರಾಗ್ ಜೈನ್ ರವರು ಯಲಹಂಕ ತಾಲ್ಲೂಕು, ಯಲಹಂಕ ಹೋಬಳಿ, ಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂ. 14/2ರಲ್ಲಿ 4 ಎಕರೆ 30 ಗುಂಟೆ ರ ಪೈಕಿ 2 ಎಕರೆ 32 ಗುಂಟೆ ಉದ್ಯಾನವನ/ಬಯಲು ಜಾಗ ವಲಯದಲ್ಲಿರುವ ವಿಸ್ತೀರ್ಣದ ಪ್ರದೇಶವನ್ನು ವಾಣಿಜ್ಯ ಉಪಯೋಗಕ್ಕಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69 ರಂತೆ ಭೂಉಪಯೋಗ ನಿಗದಿಪಡಿಸುವಂತೆ ಕೋರಿರುತ್ತಾರೆ.

ಯಲಹಂಕ ಹೋಬಳಿ, ಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂ. 14/2ರಲ್ಲಿ 4ಎಕರೆ 30 ಗುಂಟೆ ರ ಪೈಕಿ 2 ಎಕರೆ 32 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ಪ್ರಾಧಿಕಾರವು ಕೆ.ಟಿ.ಸಿ.ಪಿ. ಕಾಯ್ದೆ 1961ರ ಕಲಂ 69ರಡಿಯಲ್ಲಿ ಭೂಉಪಯೋಗ ಮರುನಿಗದಿಪಡಿಸಲು ಪರಿಶೀಲಿಸಬೇಕಾಗಿರುವುದರಿಂದ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳಿದ್ದಲ್ಲಿ ಪೂರಕ ಮಾಹಿತಿಯೊಂದಿಗೆ ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು, ನಿಗದಿತ ಅವಧಿಯ ನಂತರ ಬಂದ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ತಿಳಿಸಲಾಗಿದೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.
BDA/PRO/CLU/29/2023-24

ನೋಟಿಸ್

ಈ ನೋಟಿಸ್ ಮೂಲಕ ತಿಳಿಸುವುದು ಏನೆಂದರೆ, ಶ್ರೀಮತಿ. ಪದ್ಮಿನಿ ಗೋಪಾಲರತ್ನಂ ಎಂಬುವರ ಹೆಸರಿನಲ್ಲಿರುವ 3776 ಷೇರುಗಳಿಗೆ ಸಂಬಂಧಿತ ಸೆಂಚುರಿ ಗೆಲಾಕ್ಸಿ ಡೆವಲಪರ್ಸ್ ಲಿಮಿಟೆಡ್‌ನ ಸೆಕ್ಯೂರಿಟಿ ಡೆಪಾಸಿಟ್ ರಸೀದಿ **ನಂ.002279 ಮತ್ತು 002280** ಡೆಪಾಸಿಟ್ ರಸೀದಿ ಕಳೆದಿರುತ್ತವೆ. ಸದರಿ ಡೆಪಾಸಿಟ್ ರಸೀದಿಗಳಿಗೆ ಸಂಬಂಧಿಸಿದಂತೆ ಯಾವುದಾದರೂ ವ್ಯಕ್ತಿಗೆ ಕ್ಲೇಮ್‌ಗಳಿದ್ದಲ್ಲಿ, ಅಂತಹವರು ಈ ಜಾಹೀರಾತು ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗೆ ಬಿ ಟವರ್, 9ನೇ ಮಹಡಿ, ಕಾರ್ಪೊರೇಟ್ ಬ್ಲಾಕ್, ಡೈಮಂಡ್ ಡಿಸ್ಟ್ರಿಕ್ಟ್, ಕೋಡಿಹಳ್ಳಿ, ಬೆಂಗಳೂರು – 560008 ವಿಳಾಸದಲ್ಲಿರುವ ಕಂಪನಿಯ ನೋಂದಾಯಿತ ಕಚೇರಿ ವಿಳಾಸಕ್ಕೆ ತಮ್ಮ ಕ್ಲೇಮ್‌ಗಳನ್ನು ಸಲ್ಲಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಡೂಪ್ಲಿಕೇಟ್ ಷೇರು ಸರ್ಟಿಫಿಕೇಟ್‌ಗಳನ್ನು ನೀಡಲು ಮುಂದಾಗುತ್ತದೆ.

ದಿನಾಂಕ: 22.09.2023 ಜಿ.ಎನ್.ಗೋಪಾಲರತ್ನಂ
ಸ್ಥಳ: ಬೆಂಗಳೂರು 98410–37852

PUBLIC NOTICE

My client is interested to purchase the property bearing municipal No. 57/2, PID No. 92-1-57/2 measuring 3,784 square feet of site area, situated at Nandidurga Road, Bengaluru, together with a residential structure constructed thereon **(the "Schedule Property")** from **(i) Mr S D Reuben,** son of Mr A S Dorairaj, and **(ii) Mrs Esther Cynthia Reuben,** wife of Mr S D Reuben (collectively, the **"Sellers"**). The Sellers represent that they are the joint and absolute owners of the Schedule Property having marketable, right, title and interest therein and that there are no other person/s having any right or claim over the Schedule Property apart from them. The Sellers have stated that they have not mortgaged, created any lien or encumbered the Schedule Property or part thereof in any manner and that the Sellers have not entered into any other agreement of sale/ development agreement/memorandum of understanding/ arrangement etc., with any person/s with regard to the Schedule Property. Any person/s having objection/s or claims shall with documentary evidence lodge their objections/claims ***within fifteen (15) days*** from the date of this notice with the undersigned, failing which, my client shall proceed with the above-mentioned transaction.

Description of the Schedule Property

All that piece and parcel of the **residential property bearing municipal No. 57/2** (old municipal No. 7-B, corporation division No. 46), PID No. 92-1-57/2 **measuring 3,784 square feet** inclusive of 877 square feet 94.45 square meters exclusive passage for use and occupation of the Sellers leading from Nandidurga Road, together with a residential structure constructed thereon, situated at Nandidurg Road, Bengaluru Urban District and bounded as follows:

East: Property belonging to Mrs Indira
West: House property belonging to Mrs Susy George;
North: Drainage; and
South: Property belonging to Lt. Col. Punj and Col. Marcus.

Sd/-
Ms Sparsha S Pai, Advocate
25/1, 1st Cross, Ulsoor Road,
Bengaluru - 560 042
Place: Bengaluru Date: 22.09.2023

PUBLIC NOTICE

My client intends to purchase the residential property bearing municipal No. 60 (old No. 190), PID No. 92-1-60, measuring 2,400 square feet of site area, situated at Nandidurga Road, Jayamahal, Bengaluru, together with a residential building constructed thereon consisting two (2) floors with four (4) bedrooms , one (1) drawing room, one (1) study room, one (1) dining room, one (1) kitchen, one (1) garage, one (1) covered verandah along with a servant quarters, having a total built up area of 2,200 square feet (**the "Property"**) from **Mr Ajit Punj,** son of late Mr Vikram Punj and **Mrs Taruna Vikram Punj** (**the "Seller"**). The Seller has represented that he is the sole and absolute owner of the Property having marketable, right, title and interest therein and that apart from him there are no other person/s having any right or claim over the Property. The Seller further represents that he has not mortgaged, created any lien or encumbered the Property or part thereof in any manner and that the Seller has not entered into any other agreement of sale/development agreement/memorandum of understanding/arrangement etc., with any person/s with regard to the Property. Any person/s having objection/s or claims shall with documentary evidence lodge their objections/claims ***within fifteen (15) days*** from the date of this notice with the undersigned, failing which, my client shall proceed with the above-mentioned transaction.

Schedule
Description of the Property

All that piece and parcel of the **residential property bearing municipal No. 60** (old No. 190), PID No. 92-1-60, **measuring 2,400 square feet** of site area, situated at **Nandidurga Road, Jayamahal, Bengaluru,** together with a residential building constructed thereon consisting two (2) floors with four (4) bedrooms , one (1) drawing room, one (1) study room, one (1) dining room, one (1) kitchen, one (1) garage, one (1) covered verandah along with a servant quarters, having a total built up area of 2,200 square feet, and bounded on the:

East by : Kamath Residence, 172 and Nandidurga Road;
West by : Reuben Residence;
North by: Bhalla Residence, 61, Nandidurga Road; and
South by: Menon Residence, 59, Nandidurga Road.

Sd/-
Ms Sparsha S Pai Advocate
25/1, 1st Cross, Ulsoor Road,
Bengaluru - 560 042
Place: Bengaluru Date: 22.09.2023

PUBLIC NOTICE

Public are hereby notified that my Client has entered into an Agreement of Sale dt.21.06.2023 to purchase the house property bearing No.24 (New No.87), 11th Cross, 4th Main, National House Building Co-operative Society Limited Layout, Prashanthanagar, Bengaluru-560079, measuring East to West 57.6 feet + 51.6 feet/2 = 54.6 feet and North to South 45 feet + 55 feet/2 = 50 feet from its owners **1. Smt. KRISHNA VASANTHA,** Wife of late Kodi Urukundappa, **2. Sri. K. VASANTHA KUMAR,** Son of late Kodi Urukundappa, **3. Sri. SHEKHAR,** Son of late Kodi Urukundappa, **4. Smt. JAYASHREE,** Daughter of late Kodi Urukundappa, which is more fully described in the schedule hereunder.

The public or any of the persons having interest in the said property described in the schedule may lodge their objection to the below mentioned address **within 15 days** Subsequently filed objections will not be considered.

SCHEDULE

All that piece and parcel of House property bearing No.24 (New No.87), 11th Cross, 4th Main, National House Building Co-operative Society Limited Layout, Prashanthnagar, Basaveshwaranagar, Bengaluru-560079, measuring East to West 57.6 feet + 51.6 feet/2 = 54.6 feet and North to South 45 feet + 55 feet/2 = 50 feet, which is bounded on the:
East by : Site No.86 ; **West by :** 30 feet Road ; **North by :** Site No.88 ; **South by :** 30 feet Road.

(G. VINAY)
No.145/G2, Krishna Residency, 5th Cross, Gandhinagara, Bengaluru-560009.

IN THE HIGH COURT OF KARNATAKA AT BENGALURU
[ORIGINAL JURISDICTION]
IN THE MATTER OF A PETITION FOR LETTERS OF ADMINISTRATION OF THE ESTATE OF LATE SRI ANISINGARAJU VENUGOPAL, DECEASED TESTATE

PROBATE CIVIL PETITION NO. 20 OF 2023

BETWEEN:

1. SMT. ANISINGARAJU VENKATA RAMANAMMA Wife of late Sri. Anisingaraju Venugopal Aged 78 years Residing at Plot No: 17 G-62; 3rd Main Near KSRTC Layout Park, Uttarahalli, Bengaluru-560 061.
...Petitioner No.1

2. SRI. VIJAKUMAR ANISINGARAJU Son of late Sri. Anisingaraju Venugopal Aged 59 years Residing at 79 Everbrook Crescent SW Calgary, Alberta T2Y OL7 Canada. Represented by GPA Holder Smt. Anisingaraju Venkata Ramanamma
...Petitioner No.2

3. SMT. PADMA MALYALA Daughter of late Sri. Anisingaraju Venugopal, Aged 56 years, Residing at 1 Patridge Lane, Burlington MA 01803 USA Represented by GPA Holder Smt. Anisingaraju Venkata Ramanamma
...Petitioner No.3

4. SMT. VEENA VANKAMAMIDI Daughter of late Sri. Anisingaraju Venugopal, Aged 48 years, Residing at 2700 Rio Mesa Dr. Austin, Texas 78732 USA Represented by GPA Holder Smt. Anisingaraju Venkata Ramanamma
...Petitioner No.4

AND: NIL ...Respondent

Whereas Petitioners above named have made an Application under section 278 of the Indian Succession Act, 1925 for grant of Letters of Administration of a Will annexed to the Petition said to have been executed by deceased Sri. Anisingaraju Venugopal, at Uttarahalli, Bangalore in respect of the properties described in the Schedule annexed:

Be it known that no Caveat has been entered and that the said Petition is posted for hearing on the **06/10/2023** and all persons claiming to have any interest in the estate of the deceased may come and see the proceedings before the grant of Letters of Administration.

Given under my hand and the seal of this Court, this the 7th day of September 2023.

By order of the Hon'ble Court,
Assistant Registrar,
High Court of Karnataka, Bangalore
Advocate for Petitioners:
Ms. Sharada Reddy & Mr. Pratik Pany
4601-02 High Point IV, 6th Floor,
45 Palace Road, Bangalore-560 001.

ಶ್ರೀ ಸುಬ್ರಮಣ್ಯೇಶ್ವರ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

"ರಜತ ಭವನ" ನಂ. 106, ಆರ್. ವಿ. ರಸ್ತೆ, ವಿ.ವಿ.ಪುರಂ, ಬೆಂಗಳೂರು–560 004
ಫೋನ್: 080-22422461/3, 26500879, 26622462

ESTD : 1971
RBI Licence No. : UBD KA 550 P

SREE SUBRAMANYESWARA CO-OPERATIVE BANK LTD.
'Rajatha Bhavana', # 106, R. V. Road, Visveswarapuram, Bengaluru-560 004
Ph: 080-22422461, 22422463, 26500879, 26622462,
Fax: 080-41312650, E-mail: sscbank@yahoo.com, Website: www. subcobank.com

2022–2023 ನೇ ಸಾಲಿನ ಬ್ಯಾಂಕಿನ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ಬ್ಯಾಂಕಿನ 2022–2023ನೇ ಸಾಲಿನ 53ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ: 23–09–2023ನೇ ಶನಿವಾರ ಬೆಳಿಗ್ಗೆ 10:00 ಘಂಟೆಗೆ "ಚಾಮರಾಜು ಕಲ್ಯಾಣ ಮಂದಿರ", 16ನೇ ಕ್ರಾಸ್, 3ನೇ ಬ್ಲಾಕ್, ಜಯನಗರ (ಸೌತ್ ಎಂಡ್ ಸರ್ಕಲ್ ಹತ್ತಿರ) ಬೆಂಗಳೂರು–560 011 ರಲ್ಲಿ ಏರ್ಪಡಿಸಲಾಗಿದೆ.

ಈಗಾಗಲೇ ಎಲ್ಲಾ ಸದಸ್ಯರಿಗೆ ಮಹಾಸಭೆಯ ಆಹ್ವಾನ ಪತ್ರಿಕೆಗಳನ್ನು ದೃಢೀಕೃತ ಅಂಚೆ ಮೂಲಕ ಕಳುಹಿಸಲಾಗಿರುತ್ತದೆ. ಆಹ್ವಾನ ಪತ್ರಿಕೆ ತಲುಪದೆ ಇರುವವರು ಈ ಪ್ರಕಟಣೆಯನ್ನು ಆಹ್ವಾನ ಪತ್ರಿಕೆಯೆಂದು ತಿಳಿದು ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ಸವಿನಯ ಪ್ರಾರ್ಥನೆ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
(ಕೆ.ಎನ್. ಕೃಷ್ಣಯ್ಯ ಶೆಟ್ಟಿ)
ಪ್ರಧಾನ ವ್ಯವಸ್ಥಾಪಕರು (ಪ್ರಭಾರ)

ಸ್ಥಳ: ಬೆಂಗಳೂರು
ದಿನಾಂಕ: 26–07–2023

ವಿಶೇಷ ಸೂಚನೆ: ಮಹಾಸಭೆಗೆ ಆಗಮಿಸುವವರಿಗೆ ಗುರುತಿನ ಚೀಟಿ ಕಡ್ಡಾಯವಾಗಿರುತ್ತದೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Machinery & Tools

USED MACHINES FOR SALE

Factory Printer Useful For Offset & Web Offset Printing, 2015 -MODEL RICOH PRO C5100S WITH LARGE CAPACITY TRAY-MULTI COLOR 300GSM, upto 13inch x 25inch Duplex upto 250 GSM
info.sketchmatrix@gmail.com
90032 58681
98407 68362

JOB OPPORTUNITIES

General

CAREER OFFER: For Retired Officials/ Bankers/ Self Employed/ Housewives/ IT Employees. Excellent Income/ Recognition & Reward. Contact:- 9448670516 Phone & WhatsApp.

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

REAL ESTATE SELLING

Commercial Building

Malleshwaram

FULLY FURNISHED 16,000Sft. A/C Showroom For Rent/Sale On Prime Busy Commercial Area,8th Cross, Malleshwaram. Call: 9663001940/ 9845358544.

Mysore Road

MYSORE ROAD Cross Near Chamrajpet Anantharamaiah Compound G +3 (Built-up area 5600 sqft) Commercial New Building with lift available for Sale. Contact: 9845173914.

Flat

Rajajinagar

DNR HIGHLINE @ Okalipuram near LULU Mall Rajajinagar 3 & 4 Bedroom FLATS with 7 Star Luxurious Amenities for Sale. for details Contact: 9844027560.

AUTOMOTIVE

Four Wheelers Selling

Maruti

DAMAGED BY ACCIDENT KA-11-N-3309 MarutiDzire-VDI (Diesel) 2019 at Nexa Mysore Road for Sale Quote for with RC & RC cancelled after inspection within seven days SampatSurveyor :9900182098

PERSONAL

Change of Name

I PRAVEEN KUMAR RAJKUMAR R/a, #N-14 LIC Housing Colony, 24th main road, JP Nagar 1st phase, Bangalore-78 Have Changed my Name to PRAVEEN RAJKUMAR Vide Affidavit Dated 21/09/2023 before Notary Mamatha N.K Bangalore

PROPERTY CORNER

Divine Euphoria
AGRICULTURAL **Farmland FOR Sale**
@ KANAKAPURA
600+ CUSTOMERS 65+ COTTAGES BUILT
• Fully Developed • Swimming Pool • Clubhouse • Children Play area • Temple • Meditation Center • Birds & Animals • Adventure Sports
Rs. 14.5 Lakhs
78921 54461-77605 74999
www.divineeuphoria.co.in

CHANGE OF NAME

I, LAKSHMI Spouse of No. 7089492X Rank: EX NK, Name: A.M. Ponnappa residing at No. 878, 6th Main, 9th Cross, BEML Layout, 3rd Stage, Rajarajeshwarinagar, Bengaluru-98, have changed my name to **LAKSHMI B S** vide affidavit dated 15-09-2023, before Notary N.Thulasi, Bengaluru

CHANDANI, WIFE/O 6494114A, NK, THANKI HIREN SHIVLAL, Vill - Jubile, Porbandar, Gujarat changed name CHANDANI to CHANDANI HIRENBHAI THANKI, 14/09/2023, Notary SAMIR B HINDOCHA, Porbandar

6494114A, NK, THANKI HIREN SHIVLAL, Vill - Jubile, Porbandar, Gujarat changed daughter's name SHARDHA to SHARDHA HIREN THANKI, 14/09/2023 , Notary SAMIR B HINDOCHA, Porbandar

6494114A, NK, THANKI HIREN SHIVLAL, Vill - Jubile, Porbandar, Gujarat changed daughter's name SHEETAL to SHEETAL HIREN THANKI, 14/09/2023 , Notary SAMIR B HINDOCHA, Porbandar

I, SUSHEELAMMA SRINIVASA have changed my name to SUSHEELAMMA vide affidavit dated: 21/9/2023 Before Notary Manohar Jeerige Bangalore.

I STEPHEN SMITH #106, 5th cross, Ashwathnagar, Bengaluru-77, have changed my name to S STEPHEN SMITH vide affidavit dated- 21/09/2023

Lost

DOCUMENT LOST

I, VASUDEVA MURTHY S, S/o Late Pushpa M.D Alias Pushpa S Murthy, R/at #6, 4th Cross, Magadi Main Road, A.D.Halli,Bangalore-79, have lost original **Sale Deed document number 2865/1978-79,** document no.**SR No. 1055/59,** site measurement of 41x30, Rajajinagar Sub Register office, while in travelling. Finders please Contact: **8970222091**

EDUCATIONAL

Private Tuitions

WANTED SPECIAL Education teacher to teach first standard boy at home near Whitefield after school hours Contact 9845427900

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd. Bengaluru

DH Classifieds ಪ್ರಜಾವಾಣಿ
More value, more impact
The 1st thing to do when Selling/Buying your Property
REAL ESTATE
PLACE YOUR AD HERE
www.dhclassifieds.com
BOOK NOW
Book your ad with us now! For more details contact:
+91 9886213331 | +91 9901641752 |
+91 9845114560 | +91 9900428036 |
+91 9731810277 | 080- 45557163/164

ಮಧ್ಯ ಪ್ರವೇಶಿಸಲು ಸುಪ್ರೀಂ ಕೋರ್ಟ್ ನಕಾರ; ತೀವ್ರಗೊಂಡ ಹೋರಾಟ– ರೈತ ಮುಖಂಡರ ಬಂಧನ, ಬಿಡುಗಡೆ

ಬೀದಿಗಿಳಿದ ರೈತರು; ಮಂಡ್ಯ ಬಂದ್ ನಾಳೆ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣದಲ್ಲಿ ರೈತ ಮುಖಂಡರು ಕಾವೇರಿ ನದಿಗೆ ಇಳಿದು ಪ್ರತಿಭಟನೆ ನಡೆಸಿದರು

ಮಂಡ್ಯ: ತಮಿಳುನಾಡಿಗೆ ನಿತ್ಯ 5 ಸಾವಿರ ಕ್ಯೂಸೆಕ್ ನೀರು ಹರಿಸಬೇಕೆಂಬ ಪ್ರಾಧಿಕಾರದ ಆದೇಶಕ್ಕೆ ಸುಪ್ರೀಂ ಕೋರ್ಟ್‌ನಿಂದ ತಡೆಯಾಜ್ಞೆ ಸಿಗದಿದ್ದರಿಂದ ಆಕ್ರೋಶ ವ್ಯಕ್ತಪಡಿಸಿದ ಜಿಲ್ಲೆಯ ವಿವಿಧೆಡೆ ಸಂಘಟನೆಗಳ ಮುಖಂಡರು ಗುರುವಾರ ಬೀದಿಗಿಳಿದು ಪ್ರತಿಭಟಿಸಿದರು. ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಸದಸ್ಯರು ಸೆ.23ರಂದು ಮಂಡ್ಯ ಜಿಲ್ಲಾ ಬಂದ್‌ಗೆ ಕರೆ ನೀಡಿದರು.

ಸುಪ್ರೀಂ ಕೋರ್ಟ್ ನಿರ್ದೇಶನ ಬರುತ್ತಿದ್ದಂತೆ ಹಿತರಕ್ಷಣಾ ಸಮಿತಿ ಸದಸ್ಯರು ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿ ತಡೆದು ಆಕ್ರೋಶ ವ್ಯಕ್ತಪಡಿಸಿದರು. ಸರ್‌ಎಂವಿ ಪ್ರತಿಮೆ ಎದುರು ಸಭೆ ನಡೆಸಿ ಬಂದ್ ತೀರ್ಮಾನ ಕೈಗೊಂಡರು.

‘ಶುಕ್ರವಾರ ಇನ್ನೊಂದು ಸುತ್ತಿನ ಸಭೆ ನಡೆಯಲಿದ್ದು ಬಂದ್ ಬೆಂಬಲಿಸುವಂತೆ ರಾಜಕೀಯ ಪಕ್ಷಗಳ ಮುಖಂಡರು, ವರ್ತಕರು, ವಿದ್ಯಾರ್ಥಿಗಳು, ಆಟೊ, ಹಾಗೂ ವಾಹನ ಚಾಲಕರ ಸಂಘಟನೆಗಳನ್ನು ಕೋರಲಾಗುವುದು’ ಎಂದು ಸಮಿತಿಯ ಮುಖಂಡ ಕೆ.ಬೋರಯ್ಯ ತಿಳಿಸಿದರು.

ಹೆದ್ದಾರಿಯಲ್ಲೇ ಮಲಗಿದರು: ನಗರದ ಜೆ.ಸಿ ವೃತ್ತದಲ್ಲಿ ರೈತಸಂಘದ ಮುಖಂಡರು ಬೆಂಗಳೂರು– ಮೈಸೂರು ಹೆದ್ದಾರಿಯಲ್ಲೇ ಮಲಗಿ ಆಕ್ರೋಶ ವ್ಯಕ್ತಪಡಿಸಿದರು. ಪೊಲೀಸರೊಂದಿಗೆ ವಾಗ್ವಾದ ನಡೆಸಿ, ಸಾರಿಗೆ ಸಂಸ್ಥೆ ಬಸ್ ಅಡಿ ಮಲಗಿ ತಮ್ಮನ್ನು ತೆರವುಗೊಳಿಸದಂತೆ ಒತ್ತಾಯಿಸಿದರು. ಅರ್ಧಗಂಟೆಗೂ ಹೆಚ್ಚು ಕಾಲ ರಸ್ತೆ ತಡೆ ನಡೆಸಿದ್ದರಿಂದ ವಾಹನ ಸಂಚಾರ ಸ್ಥಗಿತಗೊಂಡಿತ್ತು.

ನದಿಗಿಳಿದರು: ಶ್ರೀರಂಗಪಟ್ಟಣದಲ್ಲಿ ರೈತಸಂಘದ ಸದಸ್ಯರು ಹರಿಯುತ್ತಿದ್ದ ಕಾವೇರಿ ನದಿಗಿಳಿದು ಪ್ರತಿಭಟಿಸಿದ್ದರಿಂದ ಆತಂಕದ ಪರಿಸ್ಥಿತಿ ನಿರ್ಮಾಣವಾಗಿತ್ತು. ನಂತರ ಪೊಲೀಸರು ನದಿ ದಡಕ್ಕೆ ಕರೆತಂದರು.

ಕೆಆರ್‌ಎಸ್‌ಗೆ ನುಗ್ಗಲು ಯತ್ನ: ಕೆಆರ್‌ಎಸ್ ಜಲಾಶಯದ ಪ್ರವೇಶ ದ್ವಾರದಲ್ಲಿ ಪ್ರತಿಭಟಿಸಿದ ಭೂಮಿತಾಯಿ ರೈತ ಹೋರಾಟ ಸಮಿತಿ ಸದಸ್ಯರು ಅಣೆಕಟ್ಟೆಯೊಳಗೆ ನುಗ್ಗಲು ಯತ್ನಿಸಿದರು. ಪ್ರವೇಶದ್ವಾರವನ್ನು ಸುತ್ತುವರಿದಿದ್ದ ಪೊಲೀಸರು, ಗಡಿ ಭದ್ರತಾ ಪಡೆ ಸಿಬ್ಬಂದಿಯು ಪ್ರತಿಭಟನಾಕಾರರನ್ನು ಬಂಧಿಸಿ, ಬಿಡುಗಡೆ ಮಾಡಿದರು.

ಪಾಂಡವಪುರದಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಮದ್ದೂರಿನಲ್ಲಿ ಕಸ್ತೂರಿ ಜನಪರ ವೇದಿಕೆ ಸದಸ್ಯರು ಕಣ್ಣಿಗೆ ಕಪ್ಪು ಬಟ್ಟೆ ಕಟ್ಟಿಕೊಂಡು ಪ್ರತಿಭಟಿಸಿದರು. ಕೆಆರ್‌ಎಸ್ ಪಕ್ಷದ ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟಿಸಿದರು.

ಕೇಂದ್ರ ಸರ್ಕಾರ ಮಧ್ಯಪ್ರವೇಶ ಅಸಾಧ್ಯ: ಸುಮಲತಾ

ಮಂಡ್ಯ: ‘ಕರ್ನಾಟಕ ಹಾಗೂ ತಮಿಳುನಾಡು ಸರ್ಕಾರ ಮಾತುಕತೆಯ ಮೂಲಕವೇ ಕಾವೇರಿ ನೀರಿನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು. ಈ ವಿಚಾರದಲ್ಲಿ ಕೇಂದ್ರ ಸರ್ಕಾರ ಮಧ್ಯ ಪ್ರವೇಶ ಮಾಡಲು ಸಾಧ್ಯವಿಲ್ಲ’ ಎಂದು ಸಂಸದೆ ಸುಮಲತಾ ಗುರುವಾರ ಪ್ರತಿಪಾದಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ‘ಶತ್ರು ರಾಷ್ಟ್ರ ಪಾಕಿಸ್ತಾನದ ಜೊತೆ ಮಾತುಕತೆ ನಡೆಸಿ ಹಲವು ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲಾಗಿದೆ. ಇನ್ನು ಕರ್ನಾಟಕ -ತಮಿಳುನಾಡಿನ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಸಾಧ್ಯವಿಲ್ಲವೇ? ಕಾವೇರಿ ವಿಚಾರವಾಗಿ ಲೋಕಸಭೆಯಲ್ಲಿ ಮಾತನಾಡಲು ಸಮಯ ಕೇಳಿದ್ದೇನೆ. ಇಲ್ಲಿನ ರೈತರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಮಾತನಾಡುತ್ತೇನೆ’ ಎಂದರು.

‘ಕಾವೇರಿ ತೀರ್ಪು ಖಂಡಿಸಿ ಅಂಬರೀಷ್ ಅವರು ಕೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ನನ್ನ ವ್ಯಾಪ್ತಿಯಲ್ಲಿ ಏನು ಮಾಡಬಹುದು ಎಂಬ ಬಗ್ಗೆ ಚಿಂತನೆ ನಡೆಸುವೆ. ರೈತರ ಸಲಹೆ ಕೇಳುವೆ. ನೀರಿನ ವಿಚಾರದಲ್ಲಿ ಯಾರೂ ರಾಜಕೀಯ ಮಾಡಬಾರದು. ರಾಜಕೀಯ ಬೆರೆಸದೇ ರಾಜ್ಯ ಸರ್ಕಾರದೊಂದಿಗೆ ನಿಲ್ಲಲು ನಾನು ಸಿದ್ಧ’ ಎಂದು ಹೇಳಿದರು.

‘ಮಳೆ ಕೊರತೆ, ನೀರಿನ ಲಭ್ಯತೆ ಕುರಿತು ಅಧಿಕಾರಿಗಳ ಮಾತು ಕೇಳಿದರೆ ಆತಂಕವಾಗುತ್ತದೆ. ಮುಂದೆ ಕುಡಿಯುವ ನೀರಿಗೂ ತೊಂದರೆಯಾಗಲಿದೆ. ಸುಪ್ರೀಂ ಕೋರ್ಟ್ ಮುಂದೆ ವಾಸ್ತವಾಂಶಗಳನ್ನು ಇಡಲು ನಾವು ವಿಫಲರಾಗಿದ್ದೇವೆ. ತಮಿಳುನಾಡಿನ ಅಧಿಕಾರಿಗಳು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆಗೆ ಹೋಗುತ್ತಾರೆ. ಆದರೆ ನಮ್ಮ ರಾಜ್ಯದ ಪ್ರತಿನಿಧಿಗಳು ವಿಡಿಯೊ ಸಭೆಯಲ್ಲಷ್ಟೇ ಪಾಲ್ಗೊಳ್ಳುತ್ತಿರುವುದು ಸರಿಯಲ್ಲ’ ಎಂದರು.

‘ಈಗ ಸುಪ್ರೀಂ ಕೋರ್ಟ್ ಆದೇಶವನ್ನು ಪಾಲಿಸಲೇಬೇಕಾದ ಅನಿವಾರ್ಯತೆ ಇದೆ. ತಮಿಳುನಾಡಿಗೆ ನೀರು ಹರಿಸಿ ನಮ್ಮ ಪಾಲಿಗೂ ಉಳಿಸಿಕೊಳ್ಳಬೇಕಾಗಿದೆ. ಮುಂದೆ ಮಳೆಯಾಗುವ ಮುನ್ಸೂಚನೆ ಇದ್ದು ಮಳೆ ಬಂದರೆ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ’ ಎಂದು ಹೇಳಿದರು.

ಕಣ್ಣೀರು ಹಾಕಿದರು, ನಿಂದಿಸಿದರು

ಸುಪ್ರೀಂ ಕೋರ್ಟ್‌ನಿಂದ ನಿರ್ದೇಶನ ಬರುತ್ತಿದ್ದಂತೆ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಹೋರಾಟ ಸ್ಥಳದಲ್ಲಿ ದುಃಖದ ಕಟ್ಟೆಯೊಡೆಯಿತು. ಮಾಜಿ ನಗರಸಭೆ ಅಧ್ಯಕ್ಷೆ ಅಂಬುಜಮ್ಮ ಸೇರಿದಂತೆ ಹಲವರು ಕಣ್ಣೀರು ಹಾಕಿದರು. ನಂತರ ರೈತರೊಬ್ಬರು ತಲೆಯ ಮೇಲೆ ನೀರು ಸುರಿದುಕೊಂಡು ‘ಮುಖ್ಯಮಂತ್ರಿ ತಮಿಳುನಾಡು ಸರ್ಕಾರದ ಜೊತೆ ಒಪ್ಪಂದ ಮಾಡಿಕೊಂಡಿದ್ದಾರೆ. ರಾಜ್ಯ ಸರ್ಕಾರಕ್ಕೆ ಬೆಂಕಿ ಹಾಕಾ, ರಾಜಕಾರಣಿಗಳ ಮನೆ ಹಾಳಾಗಾ’ ಎಂದು ನಿಂದಿಸಿದರು.

‘ಆಡಳಿತ, ವಿರೋಧ ಪಕ್ಷ ಒಗ್ಗೂಡಲಿ’

ಮೈಸೂರು: ‘ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ರಾಜ್ಯದ ಹಿತಾಸಕ್ತಿ ಕಾಪಾಡಲು ಆಡಳಿತ ಹಾಗೂ ಪ್ರತಿಪಕ್ಷಗಳು ಒಗ್ಗೂಡಬೇಕು’ ಎಂದು ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್ ಸಲಹೆ ನೀಡಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ನಾಡಿನ ನೆಲ-ಜಲದ ವಿಚಾರ ಬಂದಾಗ ಆಂತರಿಕ ಬಿಕ್ಕಟ್ಟು ಉಂಟಾಗದಂತೆ ನೋಡಿಕೊಂಡು ಸಾಂಘಿಕ ಹೋರಾಟ ನಡೆಸುವ ಅಗತ್ಯವಿದೆ. ಕಾವೇರಿ ನೀರಿನ ವಿಚಾರದಲ್ಲಿ ವಿಶೇಷ ಅಧಿವೇಶನ ಕರೆಯುವ ಸಂದರ್ಭ ಒದಗಿ ಬಂದಿಲ್ಲ’ ಎಂದರು.

ಪ್ರತಿಭಟನೆ: ಸುಪ್ರೀಂ ಕೋರ್ಟ್ ಆದೇಶವನ್ನು ಖಂಡಿಸಿ ಮೈಸೂರಿನಲ್ಲಿ ಸಾಮೂಹಿಕ ನಾಯಕತ್ವ, ಹಸಿರುಸೇನೆ, ರಾಜ್ಯ ರೈತ ಸಂಘಟನೆಗಳ ನೇತೃತ್ವದಲ್ಲಿ ನೂರಾರು ರೈತರು, ಚಾಮರಾಜನಗರದಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘ, ರಾಜ್ಯ ರೈತ ಸಂಘ ಮತ್ತು ಹಸಿರುಸೇನೆ ಹಾಗೂ ಕರ್ನಾಟಕ ಸೇನಾ ಪಡೆಯ ನೂರಾರು ಕಾರ್ಯಕರ್ತರು ಪ್ರತಿಭಟಿಸಿದರು.

‘ವಾಸ್ತವ ಸ್ಥಿತಿ ಗಮನಿಸದ ಕೋರ್ಟ್’

ಬೆಂಗಳೂರು: ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ಸುಪ್ರೀಂಕೋರ್ಟ್ ಕೇವಲ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶವನ್ನು ಪರಿಗಣಿಸದೇ ವಾಸ್ತವ ಸ್ಥಿತಿಯನ್ನು ಆಧರಿಸಿ ತೀರ್ಪು ನೀಡಬೇಕಿತ್ತು ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಕಾವೇರಿ ವಿಚಾರದಲ್ಲಿ ಸುಪ್ರೀಂಕೋರ್ಟ್ ಎರಡು ರಾಜ್ಯಗಳ ವಾದ ಕೇಳಿ ಪ್ರಾಧಿಕಾರದ ಆದೇಶವನ್ನು ಎತ್ತಿ ಹಿಡಿದಿದೆ. ಮುಂದಿನ 15 ದಿನ ಪ್ರಾಧಿಕಾರದ ಆದೇಶ ಪಾಲನೆ ಮಾಡಬೇಕು ಎಂದು ಹೇಳಿರುವುದು ದುರದೃಷ್ಟಕರ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

‘ಮತ್ತೊಮ್ಮೆ ಕರ್ನಾಟಕದ ವಸ್ತುಸ್ಥಿತಿಯನ್ನು ಸುಪ್ರೀಂಕೋರ್ಟ್‌ಗೆ ಮನವರಿಕೆ ಮಾಡಬೇಕಿದೆ. ಪ್ರಾಧಿಕಾರದ ಆದೇಶವೇ ಅಂತಿಮವಲ್ಲ. ಸುಪ್ರೀಂಕೋರ್ಟ್ ಈ ವಿಚಾರದಲ್ಲಿ ತನಗೆ ಸಂಬಂಧವೇ ಇಲ್ಲ ಎನ್ನುವುದು ಸರಿಯಲ್ಲ. ಕೇವಲ ಕರ್ನಾಟಕದ ಅಣೆಕಟ್ಟುಗಳ ನೀರಿನ ಮಟ್ಟ ಲೆಕ್ಕ ಹಾಕುವುದಲ್ಲ. ತಮಿಳುನಾಡು ಅಣೆಕಟ್ಟೆಗಳಲ್ಲಿನ ನೀರಿನ ಮಟ್ಟವನ್ನೂ ಲೆಕ್ಕ ಹಾಕಬೇಕು’ ಎಂದು ಬೊಮ್ಮಾಯಿ ಆಗ್ರಹಿಸಿದರು.

ಸರಿಯಾಗಿ ವಾದ ಮಂಡಿಸದ ಸರ್ಕಾರ: ಯಡಿಯೂರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡಿಗೆ ಕಾವೇರಿ ನೀರು ಬಿಡುವ ಕುರಿತು ರಾಜ್ಯ ಸರ್ಕಾರ ಸುಪ್ರೀಂಕೋರ್ಟ್‌ನಲ್ಲಿ ಸಮರ್ಪಕವಾಗಿ ವಾದ ಮಂಡಿಸದೇ ತಪ್ಪು ಮಾಡಿದೆ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅಭಿಪ್ರಾಯಪಟ್ಟಿದ್ದಾರೆ.

ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಸುಪ್ರೀಂಕೋರ್ಟ್ ಆದೇಶ ಬರುವುದಕ್ಕೂ ಮೊದಲೇ ತಮಿಳುನಾಡಿಗೆ ನೀರು ಬಿಡಬಾರದಿತ್ತು. ಸಿದ್ದರಾಮಯ್ಯ ಸರ್ಕಾರ ನೀರು ಬಿಟ್ಟು ತಪ್ಪು ಮಾಡಿದೆ ಎಂದರು.

‘ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ನೀಡಿರುವ ಆದೇಶದಲ್ಲಿ ಮಧ್ಯಪ್ರವೇಶ ಮಾಡುವುದಿಲ್ಲ ಎಂದು ಸುಪ್ರೀಂಕೋರ್ಟ್ ಹೇಳಿದೆ. ಇದರಿಂದ ಕರ್ನಾಟಕಕ್ಕೆ ಹಿನ್ನಡೆಯಾಗಿದೆ. ಕುಡಿಯುವ ನೀರಿಗೂ ಸಂಕಷ್ಟ ಉಂಟಾಗಲಿದೆ. ಆದ್ದರಿಂದ ಕರ್ನಾಟಕದಲ್ಲಿ ಕಾವೇರಿ ನದಿಯಲ್ಲಿನ ವಾಸ್ತವ ಸ್ಥಿತಿ ಅರಿಯಲು ಒಂದು ಸಮಿತಿಯನ್ನು ರಚಿಸಲು ಮನವಿ ಮಾಡಬೇಕು. ಸಮಿತಿ ನೀಡುವ ವರದಿಯ ಆಧಾರದಲ್ಲಿ ನೀರು ಹಂಚಿಕೆ ಕುರಿತು ಆದೇಶ ನೀಡಲು ಮನವಿ ಮಾಡಬೇಕು’ ಎಂದು ಯಡಿಯೂರಪ್ಪ ಹೇಳಿದರು.

ಡಿಎಂಕೆ ಇಂಡಿಯಾ ಮೈತ್ರಿಕೂಟದ ಭಾಗವಾಗಿರುವುದರಿಂದ ಅಲ್ಲಿನ ಸರ್ಕಾರದೊಂದಿಗೆ ಮುಖ್ಯಮಂತ್ರಿಯವರು ಮಾತುಕತೆ ನಡೆಸಿ, ಸಮಸ್ಯೆ ಬಗಹರಿಸಿಕೊಳ್ಳಬಹುದು ಎಂದೂ ಅವರು ಸಲಹೆ ನೀಡಿದರು.

ಎಚ್‌ಡಿಕೆ ದೆಹಲಿಗೆ ಹೋಗಿದ್ದು ಗೊತ್ತಿಲ್ಲ: ‘ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರು ದೆಹಲಿಗೆ ಹೋಗಿರುವುದು ಮತ್ತು ಬಿಜೆಪಿ ವರಿಷ್ಠರನ್ನು ಭೇಟಿ ಮಾಡುವ ವಿಚಾರ ನನಗೆ ಗೊತ್ತಿಲ್ಲ’ ಎಂದು ಯಡಿಯೂರಪ್ಪ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಅನ್ಯಾಯ ತಪ್ಪಿಸದ ರಾಜ್ಯ ಸರ್ಕಾರ’

ಬೆಂಗಳೂರು: ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶ ಹೊರಬಿದ್ದ ತಕ್ಷಣ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರೆ ರಾಜ್ಯದ ರೈತರಿಗೆ ಆಗುವ ಅನ್ಯಾಯ ತಪ್ಪಿಸಬಹುದಿತ್ತು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ನೀರಾವರಿ ಕುರಿತು ಕನಿಷ್ಠ ಜ್ಞಾನವೂ ಇಲ್ಲದ ಪಕ್ಷ ಅಧಿಕಾರಕ್ಕೆ ಬಂದರೆ ಏನಾಗುತ್ತದೆ ಎನ್ನುವುದಕ್ಕೆ ರಾಜ್ಯ ಸರ್ಕಾರ ನಡೆ ಸ್ಪಷ್ಟ ಉದಾಹರಣೆ. ಪ್ರಾಧಿಕಾರ ಆದೇಶ ನೀಡಿದ ತಕ್ಷಣ ನೀರು ಹರಿಸಿದ್ದರಿಂದಲೇ ಸಂಕಷ್ಟದ ಸ್ಥಿತಿ ಎದುರಾಗಿದೆ. ಸರ್ವಪಕ್ಷ ಸಭೆಯಲ್ಲಿ ಈ ಕುರಿತು ಸಲಹೆ ನೀಡಿದ್ದರೂ, ಕೇಳಿಸಿಕೊಳ್ಳುವ ಸಹನೆ ಸರ್ಕಾರಕ್ಕೆ ಇರಲಿಲ್ಲ. ಪ್ರಾಧಿಕಾರದ ಆದೇಶ ಎತ್ತಿಹಿಡಿದಿರುವ ಸುಪ್ರೀಂಕೋರ್ಟ್ ತೀರ್ಪು ದುರದೃಷ್ಟಕರ ಎಂದಿದ್ದಾರೆ.

ರಾಜ್ಯ ಸರ್ಕಾರಕ್ಕೆ ಜನರಿಗಿಂತ ರಾಜಕೀಯ ಹಿತ ಮುಖ್ಯವಾಗಿದೆ. ತಮಿಳುನಾಡಿನ ಜತೆ ಕಾಂಗ್ರೆಸ್‌ನ ರಾಜಕೀಯ ಹಿತಾಸಕ್ತಿ ತಳುಕು ಹಾಕಿಕೊಂಡಿರುವುದರಿಂದ ಕಾವೇರಿ ಹಿತ ಬಲಿ ಕೊಡಲಾಗಿದೆ. ರಾಜ್ಯಗಳ ನಡುವಿನ ಸಂಘರ್ಷ ಒಕ್ಕೂಟ ವ್ಯವಸ್ಥೆಯ ಗೌರವಕ್ಕೆ ಚ್ಯುತಿ ತಂದಿದೆ ಎಂದು ಹೇಳಿದ್ದಾರೆ.

ರಾಜ್ಯಸಭೆಯಲ್ಲಿ ದೇವೇಗೌಡರು ಕಾವೇರಿ ವಿಷಯ ಪ್ರಸ್ತಾಪಿಸಿದಾಗ ಎಐಸಿಸಿ ಅಧ್ಯಕ್ಷರೂ ಆದ ಮಲ್ಲಿಕಾರ್ಜುನ ಖರ್ಗೆ ಮೌನವಾಗಿದ್ದರು. ಅವರ ಮೌನ ಅಚ್ಚರಿ ತಂದಿದೆ. ಕರ್ನಾಟಕದ ಹಿತದ ಬಗ್ಗೆ ಅವರ ನಿಲುವೇನು ಎಂದು ಪ್ರಶ್ನಿಸಿದ್ದಾರೆ.

ಕೆಆರ್‌ಎಸ್‌ನಲ್ಲಿ ಈಗ 20 ಟಿಎಂಸಿ ಅಡಿ ನೀರಿದೆ. ಮೂರು ದಿನಕ್ಕೆ ಒಂದು ಟಿಎಂಸಿ ಅಡಿ ಹರಿದು ಹೋಗುತ್ತದೆ. ದಿನಕ್ಕೆ 5 ಸಾವಿರ ಕ್ಯೂಸೆಕ್ ಹರಿದರೆ 15 ದಿನಕ್ಕೆ 7 ಟಿಎಂಸಿ ಅಡಿ ಖಾಲಿಯಾಗುತ್ತದೆ. ಉಳಿಯುವ 13 ಟಿಎಂಸಿ ಅಡಿಯಲ್ಲಿ ಡೆಡ್ ಸ್ಟೋರೇಜ್ 7 ಟಿಎಂಸಿ ಅಡಿ. ಈಗಾದರೆ ಬೆಂಗಳೂರಿನ ಜನರಿಗೆ ಕುಡಿಯಲೂ ನೀರು ಇರುವುದಿಲ್ಲ ಎಂದಿದ್ದಾರೆ.

ಬಿಜೆಪಿ ವರಿಷ್ಠರೊಂದಿಗೆ ಎಚ್‌ಡಿಕೆ ಸಮಾಲೋಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ– ಜೆಡಿಎಸ್ ಮೈತ್ರಿ ಸಂಬಂಧ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರು ಬಿಜೆಪಿ ವರಿಷ್ಠರೊಂದಿಗೆ ಗುರುವಾರ ರಾತ್ರಿ ಸಮಾಲೋಚನೆ ನಡೆಸಿದರು.

ಕೆಲವು ದಿನಗಳ ಹಿಂದೆ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿ ‘ಮೈತ್ರಿ’ ಮಾತುಕತೆ ನಡೆಸಿದ್ದರು. ಬಿಜೆಪಿ ವರಿಷ್ಠರೊಂದಿಗೆ ಕುಮಾರಸ್ವಾಮಿ ಅವರು ಮುಂದಿನ ಮಾತುಕತೆಗಳನ್ನು ನಡೆಸಲಿದ್ದಾರೆ ಎಂದು ಹೇಳಿದ್ದರು. ಗುರುವಾರ ಮಧ್ಯಾಹ್ನ ನವದೆಹಲಿಗೆ ಬಂದ ಕುಮಾರಸ್ವಾಮಿ ಅವರು ಅಮಿತ್ ಶಾ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಭೇಟಿ ಮಾಡಿ ಚರ್ಚಿಸಿದರು. 28 ಲೋಕಸಭಾ ಕ್ಷೇತ್ರಗಳ ಪೈಕಿ ನಾಲ್ಕು ಕ್ಷೇತ್ರಗಳನ್ನು ಬಿಟ್ಟು ಕೊಡಬೇಕು ಎಂದು ಜೆಡಿಎಸ್ ಪಟ್ಟು ಹಿಡಿದಿದೆ. ಮುಂದಿನ ದಿನಗಳಲ್ಲಿ ಉಭಯ ಪಕ್ಷಗಳ ನಾಯಕರು ಇನ್ನೆರಡು ಸಭೆಗಳನ್ನು ನಡೆಸಿ ಮೈತ್ರಿಗೆ ಅಂತಿಮ ರೂಪ ನೀಡುವ ಸಾಧ್ಯತೆ ಇದೆ.

ಕಾಂಗ್ರೆಸ್ ನಾಯಕರ ಚರ್ಚೆ

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನವದೆಹಲಿಯ ತಮ್ಮ ನಿವಾಸದಲ್ಲಿ ಬುಧವಾರ ರಾತ್ರಿ ಭೋಜನಕೂಟ ನಡೆಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಸಂಪುಟದ ಹಿರಿಯ ಸಹೋದ್ಯೋಗಿಗಳಾದ ಎಚ್.ಕೆ. ಪಾಟೀಲ, ಚಲುವರಾಯಸ್ವಾಮಿ, ಎಚ್.ಸಿ. ಮಹದೇವಪ್ಪ ಮತ್ತಿತರರು ಪಾಲ್ಗೊಂಡರು. ಸುಮಾರು ಮೂರು ತಾಸುಗಳಿಗೂ ಹೆಚ್ಚು ಸಮಯವಿದ್ದ ಮುಖ್ಯಮಂತ್ರಿಯವರು ಕಾವೇರಿ, ರಾಜ್ಯಕ್ಕೆ ಸಂಬಂಧಪಟ್ಟ ಮತ್ತಿತರ ವಿಚಾರಗಳ ಬಗ್ಗೆ ಚರ್ಚೆ ನಡೆಸಿದರು. ಇದೇ ವೇಳೆ, ಬಿಜೆಪಿ–ಜೆಡಿಎಸ್ ಸಂಭಾವ್ಯ ಮೈತ್ರಿ ಕುರಿತು ‘ಕೈ’ ನಾಯಕರು ಚರ್ಚಿಸಿದರು.

ಈ ಸಂಬಂಧ ಬಿಜೆಪಿಯ ರಾಜ್ಯ ನಾಯಕರೊಂದಿಗೆ ಸಹ ಬಿಜೆಪಿ ವರಿಷ್ಠರು ಮಾತುಕತೆ ನಡೆಸಿ ಅಭಿಪ್ರಾಯ ಪಡೆಯಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕುಲಪತಿ ನೇಮಕ ರದ್ದತಿಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಅವರ ನೇಮಕಾತಿ ರದ್ದುಪಡಿಸಿದ್ದ ಏಕಸದಸ್ಯ ನ್ಯಾಯಪೀಠದ ಆದೇಶಕ್ಕೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ನೇತೃತ್ವದ ವಿಭಾಗೀಯ ನ್ಯಾಯಪೀಠ ತಡೆ ನೀಡಿದೆ.

‘ಏಕಸದಸ್ಯ ನ್ಯಾಯಪೀಠದ ಆದೇಶವನ್ನು ರದ್ದುಪಡಿಸಬೇಕು’ ಎಂದು ಕೋರಿ ಪ್ರೊ.ಎನ್.ಕೆ.ಲೋಕನಾಥ್ ಸಲ್ಲಿಸಿದ್ದ ಮೇಲ್ಮನವಿಯನ್ನುಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಲೋಕನಾಥ್ ಪರ ವಾದ ಮಂಡಿಸಿದ ಹಿರಿಯ ವಕೀಲ ಅಶೋಕ ಹಾರನಹಳ್ಳಿ, ‘ಕುಲಪತಿ ಹುದ್ದೆಗೆ ಲೋಕನಾಥ್ ಅರ್ಹರಿದ್ದಾರೆ ನಿಜ. ಆದರೆ, ನೇಮಕಾತಿ ಪ್ರಕ್ರಿಯೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಕಾಯ್ದೆ–2000 ಮತ್ತು ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ನಿಯಮಗಳನ್ನು ಅನುಸರಿಸಿಲ್ಲ ಎಂಬುದಷ್ಟೇ ಏಕಸದಸ್ಯ ನ್ಯಾಯಪೀಠದ ಆಕ್ಷೇಪ’ ಎಂದರು.

‘ದಶಕದ ಹಿಂದಿನ ನಿವೇಶನಕ್ಕೆ ಸಂಬಂಧಿಸಿದ ತಗಾದೆಯೊಂದರಲ್ಲಿ ಲೋಕನಾಥ್ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ಅನ್ನು ಕೋರ್ಟ್ ಈಗಾಗಲೇ ರದ್ದುಪಡಿಸಿದೆ. ಅರ್ಜಿದಾರರ ವಿರುದ್ಧ ದುರುದ್ದೇಶಪೂರ್ವಕ ಆರೋಪಗಳನ್ನು ಮಾಡಲಾಗಿದೆ. ಅಂತೆಯೇ, ನೇಮಕಾತಿ ಪ್ರಕ್ರಿಯೆ ಸರಿಯಿಲ್ಲ ಎಂಬ ಏಕೈಕ ತಕರಾರನ್ನೇ ನೆಪವಾಗಿರಿಸಿಕೊಂಡ ಏಕಸದಸ್ಯ ನ್ಯಾಯಪೀಠ ನೇಮಕಾತಿಯನ್ನೇ ರದ್ದುಪಡಿಸಿರುವುದು ಅರ್ಜಿದಾರರಿಗೆ ಮಾಡಿರುವ ಅನ್ಯಾಯ. ಆದ್ದರಿಂದ, ಈ ಆದೇಶವನ್ನು ರದ್ದುಪಡಿಸಬೇಕು’ ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ವಿಭಾಗೀಯ ನ್ಯಾಯಪೀಠವು, ‘ಅರ್ಜಿದಾರರು ಆಡಳಿತಾತ್ಮಕವಾಗಿ ಯಾವುದೇ ಪ್ರಮುಖ ನಿರ್ಣಯಗಳನ್ನು ಕೈಗೊಳ್ಳುವಂತಿಲ್ಲ’ ಎಂದು ಆದೇಶಿಸಿತಲ್ಲದೇ, ಮೇಲ್ಮನವಿಯ ಪ್ರತಿವಾದಿಗಳಾದ, ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ, ಮೈಸೂರು ವಿವಿ ರಿಜಿಸ್ಟ್ರಾರ್, ಮೈಸೂರು ವಿವಿ ಕುಲಪತಿಯ ಶೋಧನಾ ಸಮಿತಿ ಅಧ್ಯಕ್ಷರಿಗೆ ನೋಟಿಸ್ ಜಾರಿಗೊಳಿಸಲು ನಿರ್ದೇಶಿಸಿ ವಿಚಾರಣೆಯನ್ನು ಅಕ್ಟೋಬರ್ 25ಕ್ಕೆ ಮುಂದೂಡಿತು.

ಪ್ರಕರಣವೇನು?

ಮೈಸೂರು ವಿವಿ ಕುಲಪತಿ ಹುದ್ದೆಗೆ ಲೋಕನಾಥ್ ಅವರನ್ನು ನೇಮಕ ಮಾಡಿ 2023ರ ಮಾರ್ಚ್ 23ರಂದು ರಾಜ್ಯಪಾಲರು ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಪ್ರೊ.ಶರತ್ ಅನಂತಮೂರ್ತಿ ಮತ್ತು ಡಾ.ಜಿ. ವೆಂಕಟೇಶ್ ಕುಮಾರ್ ಹೈಕೋರ್ಟ್‌ನಲ್ಲಿ ಪ್ರತ್ಯೇಕ ರಿಟ್ ಅರ್ಜಿಗಳನ್ನು ದಾಖಲಿಸಿದ್ದರು. ಇವುಗಳ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎನ್.ಎಸ್.ಸಂಜಯಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ, ನೇಮಕಾತಿ ರದ್ದುಗೊಳಿಸಿ ಇದೇ 12ರಂದು ಆದೇಶಿಸಿತ್ತು.

ಮಧ್ಯಪ್ರವೇಶಕ್ಕೆ ನಕಾರ

ಒಂದನೇ ಪುಟದಿಂದ

ಕಾವೇರಿ ನೀರು ನಿಯಂತ್ರಣ ಸಮಿತಿಯ ಸಭೆ ಇದೇ 26ಕ್ಕೆ ನಿಗದಿಯಾಗಿದೆ.

5,000 ಕ್ಯೂಸೆಕ್ ನೀರು ಹರಿಸಲು ಪ್ರಾಧಿಕಾರ ಹೊರಡಿಸಿರುವ ಆದೇಶಕ್ಕೆ ತಡೆಯಾಜ್ಞೆ ನೀಡಬೇಕು ಎಂದು ಕೋರಿ ಕರ್ನಾಟಕ ಸರ್ಕಾರ ಸಲ್ಲಿಸಿದ ಅರ್ಜಿಯನ್ನೂ ಪೀಠ ತಿರಸ್ಕರಿಸಿದೆ. ಈ ಪ್ರಕರಣದಲ್ಲಿ ತಮ್ಮನ್ನು ಪ್ರತಿವಾದಿಗಳನ್ನಾಗಿ ಸೇರಿಸುವಂತೆ ಕರ್ನಾಟಕ ಹಾಗೂ ತಮಿಳುನಾಡಿನ ರೈತರು ಮಾಡಿದ ಮನವಿಯನ್ನೂ ಪೀಠ ಮಾನ್ಯ ಮಾಡಿಲ್ಲ.

ಕೇಂದ್ರ ಸರ್ಕಾರದ ಪರವಾಗಿ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಬಾಟಿ ಹಾಗೂ ಹಿರಿಯ ವಕೀಲ ಎಸ್. ವಾಸಿಂ ಖಾದ್ರಿ, ‘ಪ್ರಾಧಿಕಾರದ ನಿರ್ದೇಶನದ ಪ್ರಕಾರ ಕರ್ನಾಟಕವು ನೀರು ಪೂರೈಕೆ ಮಾಡಿದೆ’ ಎಂದರು.

ವಾದ ಪ್ರತಿವಾದ ಆಲಿಸಿದ ನ್ಯಾಯಪೀಠ, ‘ಶೇ 48ರಷ್ಟು ಕಡಿಮೆ ಮಳೆಯಾಗಿರುವ ಅಂಶ ಸೇರಿದಂತೆ ಎಲ್ಲ ಪ್ರಸ್ತುತ ಅಂಶಗಳನ್ನು ಪರಿಗಣಿಸಿ ಪ್ರಾಧಿಕರ ಹಾಗೂ ಸಮಿತಿ ಈ ನಿರ್ಧಾರಕ್ಕೆ ಬಂದಿವೆ. ಪ್ರಾಧಿಕಾರವು ಸಮರ್ಥ ಸಂಸ್ಥೆಯಾಗಿದೆ. ಪ್ರಾಧಿಕಾರವೇ ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡಲು ಅವಕಾಶ ಮಾಡಿಕೊಡಿ’ ಎಂದು ಹೇಳಿತು.

ಪ್ರಾಧಿಕಾರವು ಪ್ರತಿ 15 ದಿನಗಳಿಗೊಮ್ಮೆ ಪರಿಸ್ಥಿತಿ ಪರಿಶೀಲಿಸಿ, ಮೇಲ್ವಿಚಾರಣೆ ಮಾಡಿ ಅಗತ್ಯ ನಿರ್ದೇಶನಗಳನ್ನು ನೀಡಬೇಕು ಎಂದು ಪೀಠ ಸೂಚಿಸಿತು.

ಮೂರು ದಿನ ಗುಡುಗು ಸಹಿತ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವೆಡೆ ಮುಂದಿನ ಮೂರು ದಿನಗಳು ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿಯ ಎಲ್ಲಾ ಜಿಲ್ಲೆಗಳಲ್ಲಿ ಒಂದೆರಡು ಕಡೆ ಶುಕ್ರವಾರ ಭಾರಿ ಮಳೆಯಾಗಲಿದೆ. ಒಳನಾಡಿನ ಕೆಲವೆಡೆ ಸಾಧಾರಣ ಮಳೆಯಾಗಲಿದೆ. ಉತ್ತರ ಒಳನಾಡಿನಲ್ಲಿ ಬಿರುಗಾಳಿಯ ವೇಗವು ಗಂಟೆಗೆ 30 ಕಿ.ಮೀ.ಯಿಂದ 40 ಕಿ.ಮೀ. ಇರುವ ಸಾಧ್ಯತೆಯಿದೆ. ಬೆಂಗಳೂರು ನಗರದಲ್ಲಿ ಸಾಮಾನ್ಯವಾಗಿ ಮೋಡ ಕವಿದ ವಾತಾವರಣ ಇರುತ್ತದೆ. ಸಂಜೆ ಅಥವಾ ರಾತ್ರಿ ಅವಧಿಯಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಮುಂದಿನ ಒಂದು ವಾರ ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಹಲವೆಡೆ ಹಾಗೂ ಉತ್ತರ ಒಳನಾಡಿನ ಕೆಲವೆಡೆ ಸಾಧಾರಣ ಮಳೆಯಾಗಲಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಚಿಕಿತ್ಸಾ ಕೇಂದ್ರಗಳಲ್ಲಿ ವೈದ್ಯಾಧಿಕಾರಿ, ಶುಶ್ರೂಷಕ ಹುದ್ದೆಗಳು ಖಾಲಿ

ನಮ್ಮ ಕ್ಲಿನಿಕ್: ಶುಶ್ರೂಷಕರೇ ವೈದ್ಯರು!

• ವರುಣ ಹೆಗಡೆ

ಬೆಂಗಳೂರು: ನಮ್ಮ ಕ್ಲಿನಿಕ್‌ಗಳಲ್ಲಿ ಕಾರ್ಯನಿರ್ವಹಿಸಲು ವೈದ್ಯರು, ಶುಶ್ರೂಷಕರು ಹಾಗೂ ಪ್ರಯೋಗಾಲಯ ತಂತ್ರಜ್ಞರು ನಿರಾಸಕ್ತಿ ತೋರಿದ್ದು, ರಾಜ್ಯದಲ್ಲಿನ ಹಲವು ಚಿಕಿತ್ಸಾ ಕೇಂದ್ರಗಳಲ್ಲಿ ಈ ಹುದ್ದೆಗಳಿಗೆ ಈವರೆಗೂ ನೇಮಕಾತಿ ನಡೆದಿಲ್ಲ. ಇದರಿಂದಾಗಿ ಕ್ಲಿನಿಕ್‌ಗಳಲ್ಲಿ ವೈದ್ಯಕೀಯ ಸೇವೆ ವ್ಯತ್ಯಯವಾಗುತ್ತಿದೆ.

ರಾಜ್ಯದಲ್ಲಿ 415 ನಮ್ಮ ಕ್ಲಿನಿಕ್‌ಗಳು ಕಾರ್ಯನಿರ್ವಹಿಸುತ್ತಿವೆ. ಮೊದಲ ಹಂತದಲ್ಲಿ ಕಳೆದ ಫೆಬ್ರುವರಿ ತಿಂಗಳಲ್ಲಿ ನೂರಕ್ಕೂ ಅಧಿಕ ಕ್ಲಿನಿಕ್‌ಗಳಿಗೆ ಚಾಲನೆ ನೀಡಲಾಗಿತ್ತು. ಇನ್ನುಳಿದ ಕ್ಲಿನಿಕ್‌ಗಳು ತದನಂತರ ಕಾರ್ಯಾರಂಭಿಸಿವೆ. ಜ್ವರದಂತಹ ಸಾಮಾನ್ಯ ಸಮಸ್ಯೆಗಳಿಗೆ ಚಿಕಿತ್ಸೆ ಒದಗಿಸುವ ಜತೆಗೆ ರಕ್ತ ಸೇರಿ ವಿವಿಧ ಪರೀಕ್ಷೆಗಳನ್ನೂ ನಡೆಸುವ ವ್ಯವಸ್ಥೆ ಇಲ್ಲಿದೆ. ಈ ಕ್ಲಿನಿಕ್‌ಗಳಲ್ಲಿ ತಲಾ ಒಬ್ಬರು ವೈದ್ಯಾಧಿಕಾರಿ, ಶುಶ್ರೂಷಕರು, ಪ್ರಯೋಗಶಾಲಾ ತಂತ್ರಜ್ಞರು, ಡಿ-ದರ್ಜೆ ನೌಕರರು ಕಾರ್ಯನಿರ್ವಹಿಸಬೇಕು. ಆದರೆ, ಧಾರವಾಡ, ರಾಯಚೂರು, ಯಾದಗಿರಿ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ ಸೇರಿ 15ಕ್ಕೂ ಅಧಿಕ ಜಿಲ್ಲೆಗಳಲ್ಲಿನ ಕ್ಲಿನಿಕ್‌ಗಳಲ್ಲಿ ವೈದ್ಯಾಧಿಕಾರಿ ಸೇರಿ ವಿವಿಧ ಹುದ್ದೆಗಳು ಖಾಲಿಯಿವೆ. ಇದರಿಂದಾಗಿ ಕೆಲವೆಡೆ ಶುಶ್ರೂಷಕರೇ ತಪಾಸಣೆ ಮಾಡಿ, ಔಷಧ ನೀಡುತ್ತಿದ್ದಾರೆ.

ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ರಾಯಚೂರು ಹಾಗೂ ಬಳ್ಳಾರಿಯಲ್ಲಿ ತಲಾ 8 ಕ್ಲಿನಿಕ್‌ಗಳು ಕಾರ್ಯನಿರ್ವಹಿಸುತ್ತಿವೆ. ಎರಡೂ ಜಿಲ್ಲೆಗಳಲ್ಲಿ ತಲಾ ನಾಲ್ಕು ವೈದ್ಯರು ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ. ಚಿಕ್ಕಮಗಳೂರಿನಲ್ಲಿ ನಾಲ್ಕು ಕ್ಲಿನಿಕ್‌ಗಳಲ್ಲಿ ಮೂರು ಕೇಂದ್ರಗಳಿಗೆ ವೈದ್ಯರಿಲ್ಲ. ಧಾರವಾಡದಲ್ಲಿ 6 ಕ್ಲಿನಿಕ್‌ಗಳಲ್ಲಿ ಮೂರು ಕ್ಲಿನಿಕ್‌ಗಳಿಗೆ ಮಾತ್ರ ವೈದ್ಯರ ನೇಮಕಾತಿ ನಡೆದಿದೆ. ಕೋಲಾರದಲ್ಲಿ ಮೂರು ಕ್ಲಿನಿಕ್‌ಗಳು ಕಾರ್ಯನಿರ್ವಹಿಸುತ್ತಿದ್ದು, ವೈದ್ಯಾಧಿಕಾರಿ ಹುದ್ದೆಗೆ ಇತ್ತೀಚೆಗೆ ಸಂದರ್ಶನ ನಡೆಸಲಾಗಿದೆ. ಚಿಕ್ಕಬಳ್ಳಾಪುರದಲ್ಲಿ ಮೂರು ಕ್ಲಿನಿಕ್‌ಗಳಲ್ಲಿ ಒಂದು ಕ್ಲಿನಿಕ್‌ಗೆ ಮಾತ್ರ ವೈದ್ಯರು ನೇಮಕರಾಗಿದ್ದಾರೆ. ಬೆಳಗಾವಿಯಲ್ಲಿ 21 ಕ್ಲಿನಿಕ್‌ಗಳು ಕಾರ್ಯನಿರ್ವಹಿಸುತ್ತಿದ್ದು, 7 ಕ್ಲಿನಿಕ್‌ಗಳಿಗೆ ಮಾತ್ರ ವೈದ್ಯರ ನೇಮಕಾತಿ ನಡೆದಿದೆ. ಇದೇ ರೀತಿ ಹಲವೆಡೆ ವೈದ್ಯಾಧಿಕಾರಿ ಹುದ್ದೆ ಖಾಲಿಯಿದೆ.

ಶುಶ್ರೂಷಕರಿಂದ ಚಿಕಿತ್ಸೆ: ನಮ್ಮ ಕ್ಲಿನಿಕ್‌ಗಳು ಸೋಮವಾರದಿಂದ ಶನಿವಾರದವರೆಗೆ ಬೆಳಿಗ್ಗೆ 9 ರಿಂದ ಸಂಜೆ 4.30ರವರೆಗೆ ಕಾರ್ಯನಿರ್ವಹಿಸುತ್ತಿವೆ. ಈ ಕ್ಲಿನಿಕ್‌ಗಳಿಗೆ ತಲಾ ಒಬ್ಬರು ವೈದ್ಯರನ್ನು ಒಂದು ವರ್ಷಕ್ಕೆ ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲಾಗುತ್ತದೆ. ಎಂಬಿಬಿಎಸ್ ಮುಗಿಸಿದ ವೈದ್ಯಾಧಿಕಾರಿಗೆ ₹ 47,250 ವೇತನ ನಿಗದಿಪಡಿಸಲಾಗಿದೆ. ವೇತನ ಕಡಿಮೆ, ಗ್ರಾಮೀಣ ಭಾಗದಲ್ಲಿ ಸೇವೆ ಸೇರಿ ವಿವಿಧ ಕಾರಣಗಳಿಂದ ಈ ಕ್ಲಿನಿಕ್‌ಗಳಲ್ಲಿ ಕಾರ್ಯನಿರ್ವಹಿಸಲು ಎಂಬಿಬಿಎಸ್ ಮುಗಿಸಿದವರು ಹಿಂದೇಟು ಹಾಕುತ್ತಿದ್ದಾರೆ. ಈಗಾಗಲೇ ಕಾರ್ಯನಿರ್ವಹಿಸುತ್ತಿರುವವರು ರಜಾ ಹಾಕಿದಲ್ಲಿ ಶುಶ್ರೂಷಕರೇ ತಪಾಸಣೆ ನಡೆಸಿ, ಔಷಧಗಳನ್ನು ವಿತರಿಸುತ್ತಿದ್ದಾರೆ.

‘ಹಳೆಯ ಕಟ್ಟಡಗಳಲ್ಲಿಯೇ ನಮ್ಮ ಕ್ಲಿನಿಕ್ ಪ್ರಾರಂಭಿಸಿರುವುದರಿಂದ ಹಲವೆಡೆ ಯೋಗ ಕೊಠಡಿ, ಆಸ್ಪತ್ರೆ ಸಿಬ್ಬಂದಿ, ಮಹಿಳಾ ಮತ್ತು ಪುರುಷ ರೋಗಿಗಳಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಸೇರಿ ವಿವಿಧ ಸೌಲಭ್ಯ ಸಾಧ್ಯವಾಗಿಲ್ಲ. ಒಂದು ವರ್ಷಕ್ಕೆ ಗುತ್ತಿಗೆ ಆಧಾರದಲ್ಲಿ ನೇಮಕಾತಿ, ಕಡಿಮೆ ವೇತನದ ಕಾರಣ ವೈದ್ಯರು, ಶುಶ್ರೂಷಕರು ಆಸಕ್ತಿ ತೋರುತ್ತಿಲ್ಲ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

₹ 15 ಸಾವಿರ ವೇತನ

ನಮ್ಮ ಕ್ಲಿನಿಕ್‌ಗಳಲ್ಲಿ ಶುಶ್ರೂಷಕ ಹುದ್ದೆಗೆ ಬಿಎಸ್‌ಸಿ, ನರ್ಸಿಂಗ್‌ನಲ್ಲಿ ಡಿಪ್ಲೊಮಾ ಮಾಡಿದವರನ್ನು ನೇಮಿಸಿಕೊಳ್ಳಲಾಗಿದೆ. ವೈದ್ಯರ ಗೈರು ಹಾಜರಿಯಲ್ಲಿ ಶುಶ್ರೂಷಕರೇ ತಪಾಸಣೆ ನಡೆಸುತ್ತಿದ್ದಾರೆ. ಗರ್ಭಿಣಿಯರಿಗೆ ಸೂಕ್ತ ಆರೈಕೆ ಮಾಡಿ, ಮಾರ್ಗದರ್ಶನ ಮಾಡುತ್ತಿದ್ದಾರೆ. ಅವರಿಗೆ ₹ 15,750 ನಿಗದಿಪಡಿಸಲಾಗಿದೆ. ಪ್ರಯೋಗಾಲಯ ತಂತ್ರಜ್ಞ ಹುದ್ದೆಗೆ ಪ್ರಯೋಗಶಾಲೆ ತಂತ್ರಜ್ಞಾನದಲ್ಲಿ ಡಿಪ್ಲೊಮಾ ಪದವಿ ಪಡೆದಿರಬೇಕು. ಅವರಿಗೆ ಮಾಸಿಕ ₹ 14,609 ನಿಗದಿಪಡಿಸಲಾಗಿದೆ. ರಾಜ್ಯದ ಹಲವು ನಮ್ಮ ಕ್ಲಿನಿಕ್‌ಗಳಲ್ಲಿ ಶುಶ್ರೂಷಕರು ಹಾಗೂ ಪ್ರಯೋಗಾಲಯ ತಂತ್ರಜ್ಞ ಹುದ್ದೆ ಖಾಲಿಯಿದೆ.

ವೈದ್ಯರ ಕೊರತೆ ನಿವಾರಣೆಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಕಡ್ಡಾಯ ಗ್ರಾಮೀಣ ಸೇವೆಯಡಿ ಸಾಕಷ್ಟು ವೈದ್ಯರು ಲಭ್ಯವಾಗುತ್ತಾರೆ. ಕ್ಲಿನಿಕ್‌ಗಳಲ್ಲಿ ಸಂಜೆಯೂ ಸೇವೆ ಒದಗಿಸಲು ಕ್ರಮವಹಿಸಲಾಗುತ್ತಿದೆ

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ಜಿಲ್ಲಾವಾರು ಖಾಲಿ ಇರುವ ಹುದ್ದೆಗಳು

ಜಿಲ್ಲೆ	ವೈದ್ಯಾಧಿಕಾರಿ	ಶುಶ್ರೂಷಕರು	ತಂತ್ರಜ್ಞರು
ಧಾರವಾಡ	03	00	00
ಬೆಂಗಳೂರು ಗ್ರಾಮಾಂತರ	03	06	07
ಕೋಲಾರ	03	00	00
ಯಾದಗಿರಿ	02	00	00
ದಕ್ಷಿಣ ಕನ್ನಡ	02	01	00
ಕೊಪ್ಪಳ	01	00	00
ರಾಮನಗರ	01	00	00
ಹಾವೇರಿ	01	01	01
ತುಮಕೂರು	01	02	00
ಉತ್ತರ ಕನ್ನಡ	00	00	01
ಚಿಕ್ಕಮಗಳೂರು	03	00	00
ಚಿಕ್ಕಬಳ್ಳಾಪುರ	02	00	00
ಬಳ್ಳಾರಿ	04	03	00
ವಿಜಯಪುರ	00	03	00
ರಾಯಚೂರು	04	00	00
ಬೆಳಗಾವಿ	14	04	04
ಬಿಬಿಎಂಪಿ	00	30	35



ದಿವ್ಯಾ ಉರುಡುಗ

‘ಅರ್ದಂಬರ್ಧ ಪ್ರೇಮಕಥೆ’ಯ ದಿವ್ಯಾನುಭವ

‘ಹುಲಿರಾಯ’ ಚಿತ್ರದಿಂದ ತಮ್ಮ ಸಿನಿಪಯಣ ಆರಂಭಿಸಿದ್ದ ನಟಿ ದಿವ್ಯಾ ಉರುಡುಗ, ಬಿಗ್‌ಬಾಸ್‌ನಲ್ಲಿ ಜೊತೆಯಾದ ಅರವಿಂದ್ ಕೆ.ಪಿ ಜೊತೆಗೆ ‘ಅರ್ದಂಬರ್ಧ ಪ್ರೇಮಕಥೆ’ಯಲ್ಲಿ ನಟಿಸಿದ್ದಾರೆ. ಅರವಿಂದ್ ಕೌಶಿಕ್ ನಿರ್ದೇಶನದ ಈ ಚಿತ್ರದ ಕುರಿತು ದಿವ್ಯಾ ಜೊತೆ ಮಾತಿಗಿಳಿದಾಗ...

ಅಭಿಲಾಷ ಪಿ.ಎಸ್.

- **ಇಲ್ಲಿಯವರೆಗಿನ ಸಿನಿಪಯಣದ ಗ್ರಾಫ್ ಅವಲೋಕಿಸಿದಾಗ...**

ಎಲ್ಲಾ ಸಿನಿಮಾಗಳೂ ಬಾಕ್ಸ್‌ಆಫೀಸ್‌ನಲ್ಲಿ ಸದ್ದು ಮಾಡಲೇಬೇಕೆಂದಿಲ್ಲ. ಕೆಲವು ಸಿನಿಮಾಗಳನ್ನು, ಅವುಗಳ ಒಳಗಿನ ಪಾತ್ರಗಳನ್ನು ಪ್ರೇಕ್ಷಕರು ಮೆಚ್ಚಿಕೊಳ್ಳುತ್ತಾರೆ, ವಿಮರ್ಶಕರು ಸೂಕ್ಷ್ಮವಾಗಿ ಗಮನಿಸಿ ಅಭಿಪ್ರಾಯ ಹೇಳುತ್ತಾರೆ. ನಾನು ಆಯ್ದುಕೊಂಡಿದ್ದ ಪಾತ್ರಗಳು, ಸಿನಿಮಾಗಳು ಬಾಕ್ಸ್‌ಆಫೀಸ್‌ನಲ್ಲಿ ಸದ್ದು ಮಾಡದೇ ಇದ್ದರೂ, ವಿಮರ್ಶಕರ ಮೆಚ್ಚುಗೆ ಪಡೆದಿವೆ. ಇದಕ್ಕೆ ಅರವಿಂದ್ ಕೌಶಿಕ್ ಅವರ ‘ಹುಲಿರಾಯ’ನೇ ಸಾಕ್ಷಿ. ಇದೊಂದು ಸಂದೇಶ ನೀಡುವ ಸಿನಿಮಾವಾಗಿತ್ತು. ನನ್ನ ಸ್ಕ್ರೀನ್‌ಸ್ಪೇಸ್ ಇದರಲ್ಲಿ ಹೆಚ್ಚು ಇಲ್ಲದೇ ಇದ್ದರೂ, ಪರಿಣಾಮ ಬೀರಿದ ಪಾತ್ರವಾಗಿತ್ತು. ಅದೇ ರೀತಿಯ ಸದೃಢ ಪಾತ್ರಗಳು ನನಗೆ ‘ಧ್ವಜ’, ‘ಫೇಸ್ ಟು ಫೇಸ್’, ‘ಗಿರ್ಕಿ’ ಸಿನಿಮಾಗಳಲ್ಲೂ ದೊರಕಿತ್ತು.

ಅರವಿಂದ್ ಕೌಶಿಕ್ ತಮ್ಮ ಗುರುಗಳು ಎಂದು ಪರಿಗಣಿಸುವ ಅಶೋಕ್ ಕಶ್ಯಪ್ ಅವರು ‘ಧ್ವಜ’ ಸಿನಿಮಾದ ನಿರ್ದೇಶಕರಾಗಿದ್ದರು. ಹೀಗೆ ನನ್ನ ಗುರುವಿನ ಗುರುಗಳ ಸಿನಿಮಾದಲ್ಲಿ ನಟಿಸುವ ಅವಕಾಶ ದೊರಕಿತು. ಜೊತೆಗೆ ‘ಧ್ವಜ’ ಸಿನಿಮಾದಲ್ಲಿ ಪ್ರಿಯಾಮಣಿ ಅವರಂತಹ ಖ್ಯಾತ ನಟಿಯ ಜೊತೆಗೆ ತೆರೆ ಹಂಚಿಕೊಳ್ಳುವ ಅವಕಾಶ ಲಭಿಸಿತು. ‘ಫೇಸ್ ಟು ಫೇಸ್’ ಸಿನಿಮಾದಲ್ಲಿ ನನ್ನ ‘ಸ್ನೇಹ’ ಎನ್ನುವ ಪಾತ್ರ ಹೀರೊ ಪಾತ್ರಕ್ಕೆ ಕಡಿಮೆಯೇನಿರಲಿಲ್ಲ. ಹೀಗೆ ಇಲ್ಲಿಯವರೆಗೆ ಮಾಡಿರುವ ಎಲ್ಲ ಪಾತ್ರಗಳ ಬಗ್ಗೆ ನನಗೆ ತೃಪ್ತಿ, ಖುಷಿ ಇದೆ.

- **ಬಿಗ್‌ಬಾಸ್ ಪಯಣದ ಪರಿಣಾಮ ಹೇಗಿತ್ತು?**

ನಾನು ಧಾರಾವಾಹಿ, ಸಿನಿಮಾಗಳಲ್ಲಿ ನಟಿಸಿದ್ದರೂ ಹೆಚ್ಚಿನ ಜನರಿಗೆ ನನ್ನ ಪರಿಚಯ ಇರಲಿಲ್ಲ. ಆದರೆ ಬಿಗ್‌ಬಾಸ್ ಮನೆಗೆ ಎರಡು ಬಾರಿ ಪ್ರವೇಶವಾದ ಬಳಿಕ ನಾನು ಕನ್ನಡಿಗರ ಮನೆಮಗಳಾದೆ. ಬಿಗ್‌ಬಾಸ್ ಪ್ರವೇಶಕ್ಕೂ ಮುನ್ನ ಈ ಒಂದು ನಿರ್ಧಾರ ನನ್ನ ಜೀವನದ ಮೇಲೆ ಇಷ್ಟೊಂದು ಪರಿಣಾಮ ಬೀರಬಹುದು ಎಂದು ಊಹಿಸಿಯೂ ಇರಲಿಲ್ಲ. ಜನರು ನನ್ನ ಹಾಗೂ ಅರವಿಂದ್ ಕೆ.ಪಿ. ಪಯಣವನ್ನು ಈಗಲೂ ಮೆಲುಕುಹಾಕುತ್ತಲೇ ಇರುತ್ತಾರೆ. ಈ ಪಯಣ ನನ್ನ ಸಿನಿಮಾ ಪಯಣದಲ್ಲೂ ಸಕಾರಾತ್ಮಕವಾದ ಪರಿಣಾಮ ಬೀರಿದೆ.

- **‘ಅರ್ದಂಬರ್ಧ ಪ್ರೇಮಕಥೆ’ಯಲ್ಲಿ ಸಿಲುಕಿದ್ದು ಹೇಗೆ?**

ಅರವಿಂದ್ ಕೌಶಿಕ್ ಅವರು ಸಿನಿಮಾದ ಕಥೆಯೊಂದನ್ನು ಹೇಳಲು ನನ್ನನ್ನು ಕಾಫಿ ಡೇಗೆ ಕರೆದಿದ್ದರು. ಈ ಸಂದರ್ಭದಲ್ಲಿ ಅರವಿಂದ್(ಅವಿ) ಕೂಡ ನನ್ನ ಜೊತೆಗಿದ್ದರು. ಕಥೆ ಹೇಳುವಾಗ ನಾನು, ಅವಿ ಇಬ್ಬರೂ ಅದರ ಜೊತೆ ಹೆಜ್ಜೆ ಹಾಕುತ್ತಿದ್ದೆವು. ಅವಿ ಕಥೆ ಕೇಳುತ್ತಾ ಅದಕ್ಕೆ ಪ್ರತಿಕ್ರಿಯೆಯನ್ನೂ ನೀಡುತ್ತಿದ್ದರು. ಈ ಸಂದರ್ಭದಲ್ಲಿ ನನ್ನ ಹಾಗೂ ಅವಿಯ ಕೆಮಿಸ್ಟ್ರಿ ನೋಡಿ ಅರವಿಂದ್ ಕೌಶಿಕ್ ಅವರು ‘ನೀವಿಬ್ಬರೇ ಏಕೆ ಲೀಡ್ ಆಗಬಾರದು?’ ಎಂದು ಕೇಳಿದರು. ಹೀಗೆ ಅವಿಗೆ ಏಕಾಏಕಿ ಸಿಕ್ಕ ಆಫರ್ ಇದು. ಅರವಿಂದ್ ಕೌಶಿಕ್ ಅವರ ನಿರ್ದೇಶನ ಹಾಗೂ ಅರವಿಂದ್ ನಾಯಕರಾಗಿದ್ದು, ಈ ಸಿನಿಮಾವನ್ನು ಒಪ್ಪಿಕೊಳ್ಳಲು ಕಾರಣ.

- **ಸಿನಿಮಾದಲ್ಲಿನ ನಿಮ್ಮ ಪಾತ್ರದ ಬಗ್ಗೆ ಹೇಳಿ...**

ಇದೊಂದು ರೊಮ್ಯಾಂಟಿಕ್ ಕಾಮಿಡಿ ಸಿನಿಮಾ. ಹಾಗೆಂದು ಪೋಸ್ಟರ್‌ನಲ್ಲಿ ಅರವಿಂದ್ ಕೈಯಲ್ಲಿ ಗನ್ ಏಕೆ ಇದೆ ಎಂದು ಕೇಳಬೇಡಿ. ಕೊಂಚ ಥ್ರಿಲ್ಲರ್ ಅಂಶ ಇರಬಹುದು. ಸಾಮಾನ್ಯ ಹುಡುಗಿಯ ಪಾತ್ರ ನನ್ನದು. ನನ್ನ ಪಾತ್ರದ ವಿಶೇಷ ಏನೆಂದರೆ, ಪಾತ್ರದ ಹೆಸರು ರಿವೀಲ್ ಆಗುವುದೇ ಕ್ಲೈಮ್ಯಾಕ್ಸ್‌ನಲ್ಲಿ. ಹೆಸರೇ ಗೊತ್ತಿಲ್ಲದ ಪಾತ್ರದ ಜೊತೆಗಿನ ನಾಯಕನ ಪಯಣ ಇಲ್ಲಿದೆ.

- **ದಿವ್ಯಾ ಅವರ ಕೈಯಲ್ಲಿರುವ ಪ್ರಾಜೆಕ್ಟ್‌ಗಳು ಯಾವುವು?**

ವಿಜಯ ರಾಘವೇಂದ್ರ ಅವರ ಜೊತೆಗೆ ನಟಿಸಿರುವ ಹಾರರ್ ಥ್ರಿಲ್ಲರ್ ಸಿನಿಮಾ ‘3ಬಿಎಚ್‌ಕೆ’ ಹಾಗೂ ನೈಜ ಘಟನೆ ಆಧಾರಿತ ‘ರಾಂಚಿ’ ಎನ್ನುವ ಸಿನಿಮಾ ಬಿಡುಗಡೆಗೆ ಸಿದ್ಧ ಇವೆ. ‘ಅರ್ದಂಬರ್ಧ ಪ್ರೇಮಕಥೆ’ ಸಿನಿಮಾ ಅಕ್ಟೋಬರ್ ಮಾಸಾಂತ್ಯಕ್ಕೆ ಅಥವಾ ನವೆಂಬರ್ ಮೊದಲ ವಾರದಲ್ಲಿ ಬಿಡುಗಡೆಯಾಗಬಹುದು. ಒಂದು ಹೊಸ ಸಿನಿಮಾ ಒಪ್ಪಿಕೊಂಡಿದ್ದೇನೆ. ಅದರ ಮಾಹಿತಿಯನ್ನು ಚಿತ್ರತಂಡವೇ ಮುಂದಿನ ದಿನಗಳಲ್ಲಿ ನೀಡಲಿದೆ. ಹಲವು ಸ್ಕ್ರಿಪ್ಟ್‌ಗಳನ್ನು ಕೇಳುತ್ತಿದ್ದು, ಪಾತ್ರಕ್ಕೆ ತೂಕವಿದ್ದರೆ ಒಪ್ಪಿಕೊಳ್ಳುತ್ತೇನೆ. ❖

- **ಆನ್‌ಸ್ಕ್ರೀನ್ ಜೋಡಿ ಆಫ್‌ಸ್ಕ್ರೀನ್‌ನಲ್ಲಿ ಜೋಡಿಯಾಗೋದು ಯಾವಾಗ?**

ಪ್ರೀತಿಯ ನಿವೇದನೆ(ಪ್ರಪೋಸ್) ಮಾಡಿಕೊಳ್ಳುವ ಕ್ಷಣ ತುಂಬಾ ವಿಶೇಷವಾಗಿರಬೇಕು ಎನ್ನುವ ಯೋಚನೆ ನನ್ನಲ್ಲಿ ಇತ್ತು. ಯಾರೋ ಹೇಳಿಸಿ, ಮಾಡಿಸಿ ಅಥವಾ ನಾನು ಕೇಳಿ ಮಾಡಿಕೊಳ್ಳಬಾರದು ಎನ್ನುವುದು ನನ್ನ ಭಾವನೆಯಾಗಿತ್ತು. ಆದರೆ ಇತ್ತೀಚೆಗೆ ರಿಯಾಲಿಟಿ ಶೋದಲ್ಲಿ ಹೇಳಿ ಮಾಡಿಸಿದ್ದು ನಿಜವಾಗಿಯೂ ಇಷ್ಟ ಆಗಲಿಲ್ಲ. ಆ ಕ್ಷಣ ಇಷ್ಟವಾದರೂ, ಹೇಳಿಸಿ ಮಾಡಿಸಬಾರದು ಎಂದೆನಿಸಿತು. ವೇದಿಕೆಯಲ್ಲಿ ಒತ್ತಾಯಕ್ಕೆ ಅವರು ಹೇಳಿದ ಹಾಗೆ ಮಾಡಬೇಕಾಗಿ ಬರುತ್ತದೆ. ಅಲ್ಲಿಯೂ ನಾವು ‘ಐ ಲವ್ ಯೂ’ ಎಂದಿಲ್ಲ. ಮನಸಾರೆ ಪ್ರಪೋಸ್ ಮಾಡುವ ಕ್ಷಣಕ್ಕಾಗಿ ನಾನು ಕಾಯುತ್ತಿದ್ದೇನೆ. ಅದೇ ಸಹಜ ಪ್ರೀತಿ. ನಿಜ ಹೇಳಬೇಕೆಂದರೆ ನಾನು ಹಾಗೂ ಅವಿ ಇಲ್ಲಿಯವರೆಗೂ ಒಬ್ಬರಿಗೊಬ್ಬರು ‘ಐ ಲವ್ ಯು’ ಎಂದಿಲ್ಲ. ಹೋದಲ್ಲೆಲ್ಲಾ ‘ಮದುವೆ ಯಾವಾಗ’ ಎನ್ನುವ ಪ್ರಶ್ನೆ ಸಾಮಾನ್ಯವಾಗಿದೆ. ಮನೆಯ ಕಡೆಯಿಂದಲೂ ಮದುವೆಗೆ ಒತ್ತಾಯವಿದೆ. ಅರವಿಂದ್‌ಗೆ ಮದುವೆ ಕುರಿತಾಗಿ ಯಾರಾದರೂ ಪ್ರಶ್ನಿಸಿದರೆ, ಅವರು ಹೇಳುವ ಉತ್ತರವೇ ನನ್ನ ಉತ್ತರವೂ ಆಗಿರುತ್ತದೆ.

ಪ್ರಜಾವಾಣಿ ನೋಡಿಯಾ
ಸಿನಿಮಾತು ನೋಡಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಮೇಘಾ ಶೆಟ್ಟಿ

‘ಗ್ರಾಮಾಯಣ’ ಆರಂಭಿಸಿದ ಮೇಘಾ

‘ಪೆಪೆ’ ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿರುವ ಸಂದರ್ಭದಲ್ಲೇ ವಿನಯ್ ರಾಜ್‌ಕುಮಾರ್ ‘ಗ್ರಾಮಾಯಣ’ ಸೆಟ್‌ಗೆ ಧುಮುಕಿದ್ದಾರೆ. ಇದೀಗ ಸೆಟ್‌ನಿಂದ ಹೊಸ ಸುದ್ದಿಯೊಂದು ಸಿಕ್ಕಿದ್ದು, ವಿನಯ್‌ಗೆ ‘ಜೊತೆಜೊತೆಯಲಿ’ ಖ್ಯಾತಿಯ ನಟಿ ಮೇಘಾ ಶೆಟ್ಟಿ ಜೋಡಿಯಾಗಿದ್ದಾರೆ.

ಕಿರುತೆರೆಯಿಂದ ಬೆಳ್ಳಿತೆರೆಗೆ ಹೆಜ್ಜೆ ಇಟ್ಟ ಮೇಘಾ ‘ತ್ರಿಬಲ್ ರೈಡಿಂಗ್’, ‘ದಿಲ್‌ಪಸಂದ್’ ಸಿನಿಮಾಗಳ ಮೂಲಕ ಚಂದನವನದಲ್ಲಿ ಸದ್ದು ಮಾಡಿದವರು. ಸದ್ಯ ಇವರ ನಟನೆಯ ‘ಕೈವ’ ಹಾಗೂ ‘After ಆಪರೇಷನ್ ಲಂಡನ್ ಕೆಫೆ’ ಸಿನಿಮಾಗಳು ಬಿಡುಗಡೆ ಹಂತದಲ್ಲಿವೆ. 2018ರಲ್ಲೇ ಸೆಟ್ಟೇರಿದ್ದ ‘ಗ್ರಾಮಾಯಣ’ ಸಿನಿಮಾ ಹಲವು ಕಾರಣಗಳಿಂದ ಮಧ್ಯದಲ್ಲೇ ಸ್ಥಗಿತಗೊಂಡಿದ್ದು, ದೇವನೂರು ಚಂದ್ರು ಆ್ಯಕ್ಷನ್ ಕಟ್ ಹೇಳಿದ್ದ ಈ ಸಿನಿಮಾಗೆ ಇತ್ತೀಚೆಗಷ್ಟೇ ಮರುಜೀವ ಸಿಕ್ಕಿತ್ತು. ನಿರ್ಮಾಪಕ ಕೆ.ಪಿ. ಶ್ರೀಕಾಂತ್ ಅವರು ಲಹರಿ ಫಿಲ್ಮ್ಸ್ ಮನೋಹರ್ ನಾಯ್ಡು ಜೊತೆಗೂಡಿ ಈ ಪ್ರಾಜೆಕ್ಟ್‌ಗೆ ಮರುಜೀವ ನೀಡಿದ್ದರು.

ಹಳೆಯ ಸಿನಿಮಾದ ಯಾವುದೇ ದೃಶ್ಯಾವಳಿಗಳನ್ನು ಬಳಸದೇ, ಹೊಸ ಕಥೆ ಮಾಡಿಕೊಂಡು ಮತ್ತೆ ಹೊಸದಾಗಿ ಚಿತ್ರೀಕರಣ ನಡೆಸಲು ಚಿತ್ರತಂಡ ನಿರ್ಧರಿಸಿತ್ತು. ಈ ಸಿನಿಮಾದಲ್ಲಿ ವಿನಯ್ ಅವರು ಹೊಸ ಲುಕ್‌ನಲ್ಲಿ ಪ್ರೇಕ್ಷಕರ ಎದುರಿಗೆ ಬರಲಿದ್ದು, ಅಚ್ಯುತ್ ಕುಮಾರ್, ಗೋಪಾಲಕೃಷ್ಣ ದೇಶಪಾಂಡೆ, ಅರುಣ್ ಸಾಗರ್, ಅಪರ್ಣ(ನಿರೂಪಕಿ), ಸೀತಾ ಕೋಟೆ, ಶ್ರೀನಿವಾಸ ಪ್ರಭು, ಮಂಜುನಾಥ್ ಹೆಗಡೆ ಮುಂತಾದವರು ತಾರಾಬಳಗದಲ್ಲಿದ್ದಾರೆ. ❖

‘ಭೀಮ’ನೊಂದಿಗೆ ಬಂದ ವಿಜಯ್ ಪುತ್ರ

ವಿಜಯ್, ಸಾಮ್ರಾಟ್

ತಮ್ಮದೇ ನಿರ್ದೇಶನದ ‘ಸಲಗ’ ಸಿನಿಮಾ ಸೂಪರ್ ಹಿಟ್ ಆದ ನಂತರ ದುನಿಯಾ ವಿಜಯ್ ‘ಭೀಮ’ ಸಿನಿಮಾಕ್ಕೆ ಕೈ ಹಾಕಿದ್ದರು. ಚಿತ್ರ ಬಿಡುಗಡೆಗೆ ಸಿದ್ಧವಾಗಿದ್ದು, ಹಾಡೊಂದು ಹೊರಬಂದಿದೆ.

ದುನಿಯಾ ವಿಜಯ್ ನಟಿಸಿ, ನಿರ್ದೇಶನ ಮಾಡಿರುವ ಸಿನಿಮಾದ ‘ದ ಸ್ನೇಕ್ ಸಾಂಗ್’ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ದುನಿಯಾ ವಿಜಯ್, ಈ ಚಿತ್ರದ ಮೂಲಕ ತಮ್ಮ ಪುತ್ರ ಸಾಮ್ರಾಟ್‌ನನ್ನು ಸ್ಯಾಂಡಲ್‌ವುಡ್‌ಗೆ ಪರಿಚಯಿಸುತ್ತಿದ್ದಾರೆ. ಸಾಮ್ರಾಟ್ ‘ಭೀಮ’ ಸಿನಿಮಾದಲ್ಲಿ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದ್ದಾರೆ.

‘ಬ್ಯಾಡ್ ಬಾಯ್ಸ್ ಆನ್ ದಿ ಸ್ಟ್ರೀಟ್’ ಎಂದು ಪ್ರಾರಂಭವಾಗುವ ಗೀತೆಯಲ್ಲಿ ಕನ್ನಡ, ಹಿಂದಿ, ಇಂಗ್ಲಿಷ್ ಪದಗಳನ್ನು ಸೇರಿಸಿ ರ‍್ಯಾಪ್ ಮಾಡಲಾಗಿದೆ. ಚರಣ್ ರಾಜ್ ಸಂಗೀತ ಸಂಯೋಜನೆಯಲ್ಲಿ ಹಾಡು ಮೂಡಿಬಂದಿದೆ.

ರಾಹುಲ್ ಡಿಟ್ಟೋ, ನಾಗಾರ್ಜುನ್ ಶರ್ಮಾ ಮತ್ತು ಎಂ.ಸಿ.ಬಿಜ್ಜು ಈ ಹಾಡನ್ನು ಬರೆದಿದ್ದು, ರಾಹುಲ್ ಮತ್ತು ಬಿಜ್ಜು ಹಾಡಿದ್ದಾರೆ. ಕೃಷ್ಣ ಸಾರ್ಥಕ್, ಜಗದೀಶ್ ಗೌಡ ಜಂಟಿಯಾಗಿ ನಿರ್ಮಿಸುತ್ತಿರುವ ಈ ಚಿತ್ರಕ್ಕೆ ಶಿವಸೇನಾ ಛಾಯಾಗ್ರಹಣವಿದೆ. ❖

ಈ ವಾರ ತೆರೆಗೆ

ತಿಲಕ್

ದ್ವಂದ್ವ

ತಿಲಕ್ ನಾಯಕನಾಗಿ ನಟಿಸಿರುವ ‘ದ್ವಂದ್ವ’ ಸಿನಿಮಾಗೆ ಎಲ್.ಭರತ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಚಿತ್ರವು ಪೊಲಿಟಿಕಲ್ ಡ್ರಾಮಾ, ಸೈನ್ಸ್ ಫಿಕ್ಷನ್ ಎಳೆಯನ್ನು ಹೊಂದಿದೆ. ‘ಕನ್ಯಾಕುಮಾರಿ’ ಧಾರಾವಾಹಿಯಲ್ಲಿ ನಟಿಸಿದ್ದ ಆಸಿಯಾ ಫಿರ್ದೋಸಿ ಹಾಗೂ ನಯನ ಚಿತ್ರದ ನಾಯಕಿಯರು. ಅನಿತಾ ಭಟ್, ಶೋಭರಾಜ್, ದಿನೇಶ್ ಮಂಗಳೂರು, ಹೆಚ್.ಎಂ.ಟಿ.ವಿಜಯ್, ರಘು ರಮಣಕೊಪ್ಪ, ಬಲರಾಜವಾಡಿ, ಮಿಮಿಕ್ರಿಗೋಪಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಕಾಮನ್‌ಮ್ಯಾನ್ ಪ್ರೊಡಕ್ಷನ್ ಅಡಿಯಲ್ಲಿ ಪ್ರದೀಪ್ ಕೌದಳ್ಳಿ ಚಿತ್ರವನ್ನು ನಿರ್ಮಿಸಿದ್ದಾರೆ.

ವರ್ಷಾಂತ್ಯದಲ್ಲಿ ಸಿನಿಮಾ ಬಿಡುಗಡೆಯ ಭರಾಟೆ ಹೆಚ್ಚಾಗುತ್ತಿದೆ. ಇಂದು(ಸೆ.22) ಬೆಳ್ಳಿತೆರೆಯಲ್ಲಿ ಸಾಲು ಸಾಲು ಹೊಸಬರ ಸಿನಿಮಾಗಳು ಬಿಡುಗಡೆಯಾಗುತ್ತಿವೆ.

ದಿಗ್ವಿಜಯ

ಜೆ.ಪಿ. ಎಂಟರ್‌ಟೇನ್‌ಮೆಂಟ್ ಸಂಸ್ಥೆಯಲ್ಲಿ ಜಯಪ್ರಭು ಆರ್. ಲಿಂಗಾಯ್, ಹರೀಶ್ ಸುಖಧರ್ ಹಾಗೂ ಹರೀಶ್ ಆರ್.ಸಿ ನಿರ್ಮಾಣ ಮಾಡಿರುವ ಸಿನಿಮಾ ‘ದಿಗ್ವಿಜಯ’. ಚಿತ್ರವನ್ನು ದುರ್ಗಾ ಪಿ.ಎಸ್ ಮತ್ತು ಹೊನ್ನವಳ್ಳಿ ಶ್ರೀಕಾಂತ್ ಸೇರಿ ಕಥೆ, ಚಿತ್ರಕಥೆ, ಸಂಭಾಷಣೆ, ಸಾಹಿತ್ಯ ರಚಿಸಿ ನಿರ್ದೇಶನ ಮಾಡಿದ್ದಾರೆ. ಚಿತ್ರಕ್ಕೆ ಹರ್ಷ ಸಂಗೀತ, ವೀನಸ್ ಮೂರ್ತಿ ಛಾಯಾಚಿತ್ರಗ್ರಹಣ, ದುರ್ಗಾ ಪಿ.ಎಸ್ ಸಂಕಲನ, ಸೂಪರ್ ಸುಬ್ಬು ಸಾಹಸ, ಜಗ್ಗು ನೃತ್ಯ ನಿರ್ದೇಶನವಿದೆ. ಚಿತ್ರದಲ್ಲಿ ಜಯಪ್ರಭು, ಸ್ನೇಹ, ಸುಚೇಂದ್ರ ಪ್ರಸಾದ್, ಪಟ್ಟೆ ನಾಗರಾಜ್, ಹೊನ್ನವಳ್ಳಿ ಕೃಷ್ಣ, ಸುಜಾತ ಹಿರೇಮಠ್, ಶಿವಕುಮಾರ್ ಆರಾಧ್ಯ ಮುಂತಾದವರು ನಟಿಸಿದ್ದಾರೆ.

ಒಲವೇ ಮಂದಾರ 2

ಎಸ್. ಆರ್. ಪಾಟೀಲ್ ನಿರ್ದೇಶನದಲ್ಲಿ ಸನತ್ ನಾಯಕನಾಗಿ ನಟಿಸಿರುವ ಸಿನಿಮಾ ಇದು. ‘ಒಬ್ಬರನ್ನೊಬ್ಬರು ಅರಿತುಕೊಂಡು ಮಾಡುವ ಪ್ರೀತಿ ಯಾವತ್ತೂ ತಪ್ಪಲ್ಲ, ಹಾಗೆ ಪ್ರೀತಿ ಮಾಡಿದವರು ಕೊನೆಯ ಕ್ಷಣದವರೆಗೂ ತಮ್ಮ ಪ್ರೀತಿಯನ್ನು ಅವರ ತಂದೆ ತಾಯಿಗೆ ಒಪ್ಪಿಸಲು ಪ್ರಯತ್ನಿಸಬೇಕು ಹೊರತು ಬೇರೆ ನಿರ್ಧಾರ ತೆಗೆದುಕೊಳ್ಳಬಾರದು ಎಂಬ ಸಂದೇಶ ಈ ಚಿತ್ರದಲ್ಲಿದೆ’ ಎಂದಿದ್ದಾರೆ ನಿರ್ದೇಶಕರು. ‘ಕಮರೊಟ್ಟು ಚೆಕ್ ಪೋಸ್ಟ್’ ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದ ಸನತ್ ಅವರಿಗೆ ಇದು ಎರಡನೇ ಚಿತ್ರ. ಪ್ರಜ್ಞಾ ಭಟ್, ಅನುಪಾ ಸತೀಶ್, ಭವ್ಯ, ಡಿಂಗ್ರಿ ನಾಗರಾಜ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಬನ್‌–ಟೀ

ಯುವ ಸಿನಿಮೋತ್ಸಾಹಿ ತಂಡವೊಂದು ಸೇರಿ ಮಾಡಿರುವ ಸಿನಿಮಾ ಬನ್‌–ಟೀ. ಆನ್‌ಲೈನ್ ಎಡಿಟರ್ ಆಗಿ ಗುರುತಿಸಿಕೊಂಡಿರುವ ಉದಯ್ ಕುಮಾರ್ ಪಿ.ಎಸ್. ಅವರ ಎರಡನೇ ಹೆಜ್ಜೆ ಇದು. ‘ಬನ್‌–ಟೀ ಏಳು ವರ್ಷಗಳ ಕನಸು. ಸಿನಿಮಾ ಅವಕಾಶಕ್ಕಾಗಿ ಗಾಂಧಿನಗರ ಸುತ್ತುವಾಗ ಬನ್, ಟೀ ನಮ್ಮ ಊಟ. ಶೀರ್ಷಿಕೆ ವಿಭಿನ್ನವಾಗಿ ಇದ್ದರೆ ಕುತೂಹಲ ಮೂಡುತ್ತದೆ. ಕಷ್ಟಪಟ್ಟು ಓದು ಅನ್ನುವ ಬದಲು ಇಷ್ಟಪಟ್ಟು ಓದು ಅನ್ನೋದನ್ನು ಯಾಕೆ ಹೇಳುವುದಿಲ್ಲ ಎನ್ನುವುದೇ ಚಿತ್ರದ ಸಾರಾಂಶ’ ಎಂದಿದ್ದಾರೆ ಉದಯ್. ಮೌರ್ಯ, ತನ್ಮಯ್ ಮುಂತಾದವರು ನಟಿಸಿರುವ ಈ ಚಿತ್ರವನ್ನು ರಾಧಾಕೃಷ್ಣ ಬ್ಯಾನರ್‌ನಡಿ ಆರ್. ಕೇಶವ ನಿರ್ಮಾಣ ಮಾಡಿದ್ದಾರೆ.

ಈ ಸಿನಿಮಾಗಳ ಜೊತೆಗೆ ‘ಆರಾರಿರಾರೋ’ ಹಾಗೂ ‘ಪರಿಶುದ್ಧಂ’ ಎನ್ನುವ ಸಿನಿಮಾಗಳೂ ತೆರೆಕಾಣುತ್ತಿವೆ. ❖

ಅಂಕಿತಾ ಅಮರ್

‘ಜಸ್ಟ್ ಮ್ಯಾರೀಡ್’ ಎಂದ ಶೈನ್–ಅಂಕಿತಾ

‘ಕಿರಿಕ್ ಪಾರ್ಟಿ’, ‘ಕಾಂತಾರ’, ‘ವಿಕ್ರಾಂತ್ ರೋಣ’ ಮುಂತಾದ ಹಿಟ್ ಸಿನಿಮಾಗಳ ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ಸಿನಿಮಾ ನಿರ್ಮಾಣಕ್ಕೆ ಕೈಹಾಕಿದ್ದಾರೆ. ಶೈನ್ ಶೆಟ್ಟಿ ಹಾಗೂ ಅಂಕಿತಾ ಅಮರ್ ನಟನೆಯ ‘ಜಸ್ಟ್ ಮ್ಯಾರೀಡ್’ ಸಿನಿಮಾ ಮೂಲಕ ಅಜನೀಶ್ ನಿರ್ಮಾಪಕರಾಗಿದ್ದಾರೆ.

ಇತ್ತೀಚೆಗೆ ಈ ಸಿನಿಮಾದ ಹಾಡು ರಿಲೀಸ್ ಆಗಿದ್ದು, ಎಬಿಬಿಎಸ್ ಸ್ಟುಡಿಯೊಸ್ ಲಾಂಛನದಲ್ಲಿ ಅಜನೀಶ್ ಹಾಗೂ ಸಿ.ಆರ್. ಬಾಬಿ ನಿರ್ಮಿಸುತ್ತಿರುವ ಮೊದಲ ಚಿತ್ರ ಇದಾಗಿದೆ. ‘ಇಬ್ಬನಿ ತಬ್ಬಿದ ಇಳೆಯಲಿ’, ‘ಅಬ ಜಬ ದಬ’ ಸಿನಿಮಾ ಬಳಿಕ ಅಂಕಿತಾ ಅವರ ಹೊಸ ಪ್ರಾಜೆಕ್ಟ್ ಇದಾಗಿದೆ. ಸಿ.ಆರ್. ಬಾಬಿ ಅವರೇ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದು, ಇದು ಇವರ ನಿರ್ದೇಶನದ ಚೊಚ್ಚಲ ಸಿನಿಮಾ. ಸಿ.ಆರ್. ಬಾಬಿ ಹಲವು ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿ ಸಂಗೀತ ನಿರ್ದೇಶಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಹೆಸರೇ ಹೇಳುವಂತೆ ‘ಜಸ್ಟ್ ಮ್ಯಾರೀಡ್’ ಪ್ರೇಮ ಕಥೆಯ ಚಿತ್ರ. ಈಗಾಗಲೇ ಮೊದಲ ಹಂತದ ಚಿತ್ರೀಕರಣ ಮುಕ್ತಾಯವಾಗಿದೆ. ಎರಡನೇ ಹಂತದ ಚಿತ್ರೀಕರಣ ಈ ತಿಂಗಳ ಕೊನೆಗೆ ಬೆಂಗಳೂರಿನಲ್ಲಿ ಆರಂಭವಾಗಲಿದೆ ಎಂದಿದೆ ಚಿತ್ರತಂಡ.

ಶ್ರುತಿ ಹರಿಹರನ್, ಅಚ್ಯುತ್ ಕುಮಾರ್, ಸಾಕ್ಷಿ ಅಗರವಾಲ್, ರವಿಶಂಕರ್ ಗೌಡ, ವಾಣಿ ಹರಿಕೃಷ್ಣ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ. ಬಿ.ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ, ಅಶಿಕ್ ಕುಸುಗೊಳ್ಳಿ ಸಂಕಲನ, ಅಮರ್ ಕಲಾ ನಿರ್ದೇಶನ ಹಾಗೂ ಬಾಬಾ ಭಾಸ್ಕರ್ ಅವರ ನೃತ್ಯ ನಿರ್ದೇಶನ ಚಿತ್ರಕ್ಕಿದೆ. ❖

ಧನಂಜಯ

ತೋತಾಪುರಿಗೆ ಶಿವಣ್ಣನ ಬೆಂಬಲ

ಜಗ್ಗೇಶ್, ಡಾಲಿ ಧನಂಜಯ ನಟನೆಯ ‘ತೋತಾಪುರಿ–2’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

‘ತೋತಾಪುರಿ’ ಚಿತ್ರದಲ್ಲಿ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದ ಧನಂಜಯ, ಈ ಚಿತ್ರದಲ್ಲಿ ಪೂರ್ಣ ಪ್ರಮಾಣದ ನಾಯಕರಾಗಿದ್ದಾರೆ. ಕಾಮಿಡಿ ಜೊತೆಗೆ ಗಟ್ಟಿಯಾದ ಸಂದೇಶ ಹೊಂದಿರುವ ‘ತೋತಾಪುರಿ–2’ ಚಿತ್ರದ ಟ್ರೇಲರ್ ಅನ್ನು ನಟ ಶಿವರಾಜ್‌ಕುಮಾರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

ವಿಜಯಪ್ರಸಾದ್ ನಿರ್ದೇಶನದ ಈ ಚಿತ್ರದ ಎರಡನೇ ಭಾಗದಲ್ಲಿ ನವರಸ ನಾಯಕ ಜಗ್ಗೇಶ್, ಅದಿತಿ ಪ್ರಭುದೇವ, ಸುಮನಾ ರಂಗನಾಥ್ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಶಿವಲಿಂಗ ಖ್ಯಾತಿಯ ನಿರ್ಮಾಪಕ ಕೆ.ಎ.ಸುರೇಶ್ ಬಂಡವಾಳ ಹೂಡಿದ್ದಾರೆ.

‘ತೋತಾಪುರಿ–2 ಮೊದಲ ಭಾಗಕ್ಕಿಂತ ಹೆಚ್ಚಿನ ನಿರೀಕ್ಷೆಯನ್ನು ಹುಟ್ಟುಹಾಕಿದೆ. ಡಾಲಿ ಅಭಿಮಾನಿಗಳಿಗಂತೂ ಹಬ್ಬ. ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿದ್ದು, ಸದ್ಯದಲ್ಲೇ ಬಿಡುಗಡೆ ದಿನಾಂಕ ಘೋಷಿಸುತ್ತೇವೆ’ ಎಂದು ಚಿತ್ರದ ನಿರ್ಮಾಪಕ ಕೆ.ಎ.ಸುರೇಶ್ ಹೇಳಿದ್ದಾರೆ. ❖

ಹರದೀಪ್ ಸಿಂಗ್ ನಿಜ್ಜರ್ ಹತ್ಯೆ ಪ್ರಕರಣದ ಮಾಹಿತಿ ಹಂಚಿಕೊಳ್ಳದ ಕೆನಡಾ: ಬಾಗ್ಚಿ

‘ಟ್ರುಡೊ ಆರೋಪ ರಾಜಕೀಯ ಪ್ರೇರಿತ’

ನವದೆಹಲಿ/ವಿಶ್ವಸಂಸ್ಥೆ (ಪಿಟಿಐ): ಖಾಲಿಸ್ತಾನ ಪ್ರತ್ಯೇಕತಾವಾದಿ ನಾಯಕನ ಹತ್ಯೆಗೆ ಸಂಬಂಧಿಸಿದಂತೆ ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಅವರು ಮಾಡಿರುವ ಆರೋಪ ಪೂರ್ವಗ್ರಹದಿಂದ ಕೂಡಿದೆ ಮತ್ತು ರಾಜಕೀಯ ಪ್ರೇರಿತವಾಗಿದೆ ಎಂದು ಭಾರತ ಗುರುವಾರ ಹೇಳಿದೆ

ಹರದೀಪ್ ಸಿಂಗ್ ನಿಜ್ಜರ್ ಹತ್ಯೆ ಪ್ರಕರಣದಲ್ಲಿ ಕೆನಡಾ ಭಾರತದೊಂದಿಗೆ ಯಾವುದೇ ನಿರ್ದಿಷ್ಟ ಮಾಹಿತಿ ಹಂಚಿಕೊಂಡಿಲ್ಲ ಎಂದು ಅರಿಂದಮ್ ಬಾಗ್ಚಿ ತಿಳಿಸಿದ್ದಾರೆ.

ಕೆನಡಾ ಜತೆಗಿನ ರಾಜತಾಂತ್ರಿಕ ವಿವಾದದ ಬಗ್ಗೆ ಭಾರತ ತನ್ನ ಮಿತ್ರರಾಷ್ಟ್ರಗಳಿಗೆ ಅಭಿಪ್ರಾಯಗಳನ್ನು ತಿಳಿಸಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಬಾಗ್ಚಿ, ‘ಭಾರತವು ತನ್ನ ನಿಲುವನ್ನು ತಿಳಿಸಿದೆ’ ಎಂದರು.

ಪ್ರತಿಕ್ರಿಯೆ ನೀಡದ ಟ್ರುಡೊ: ಖಾಲಿಸ್ತಾನ ಪ್ರತ್ಯೇಕತಾವಾದಿ ನಾಯಕನ ಹತ್ಯೆಗೆ ಸಂಬಂಧಿಸಿದಂತೆ ಕೆನಡಾ ಸಂಸತ್ತಿನಲ್ಲಿ ತಾವು ಮಾಡಿದ್ದ ಆರೋಪಗಳನ್ನು ಭಾರತ ನಿರಾಕರಿಸಿರುವ ಬಗ್ಗೆ ಪ್ರಧಾನಿ ಜಸ್ಟಿನ್ ಟ್ರುಡೊ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

ಖಾಲಿಸ್ತಾನ ನಾಯಕ ಹರದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾರತದ ಕೈವಾಡವಿರುವುದಾಗಿ ಟ್ರುಡೊ ಆರೋಪಿಸಿದ್ದರು.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ 78ನೇ ಅಧಿವೇಶನದಲ್ಲಿ ಭಾಗವಹಿಸುವ ಸಲುವಾಗಿ ಕೆನಡಾ ಪ್ರಧಾನಿ ಇಲ್ಲಿಗೆ ಬಂದಿದ್ದರು. ವಿಶ್ವಸಂಸ್ಥೆ ಆವರಣದೊಳಗೆ ಎರಡು ಪ್ರತ್ಯೇಕ ಸ್ಥಳಗಳಲ್ಲಿ ಮತ್ತು ಸಂದರ್ಭಗಳಲ್ಲಿ ಪಿಟಿಐ ಸುದ್ದಿ ಸಂಸ್ಥೆಯ ಪ್ರತಿನಿಧಿಯು ಅವರನ್ನು ಮಾತನಾಡಿಸಲು ಯತ್ನಿಸಿದರು.

ಆರೋಪವನ್ನು ಭಾರತ ನಿರಾಕರಿಸಿರುವ ಕುರಿತು ಕೇಳಿದಾಗ ಅವರು ಯಾವುದೇ ಪ್ರತಿಕ್ರಿಯೆ ನೀಡದೆ ಮುಂದೆ ಸಾಗಿದರು. ಅವರನ್ನು ಭದ್ರತಾ ಸಿಬ್ಬಂದಿ ಸುತ್ತುವರೆದಿದ್ದರು.

ಕೆನಡಾ ತಿರಸ್ಕಾರ: ಕೆನಡಾಕ್ಕೆ ಪ್ರಯಾಣ ಕೈಗೊಳ್ಳಬಯಸುವವರಿಗೆ ಸುರಕ್ಷತೆ ದೃಷ್ಟಿಯಿಂದ ಭಾರತ ನೀಡಿದ್ದ ಮುನ್ನೆಚ್ಚರಿಕೆಗಳನ್ನು ಅಲ್ಲಿನ ಸರ್ಕಾರ ತಿರಸ್ಕರಿಸಿದ್ದು ಸಾವಧಾನದಿಂದ ಇರುವಂತೆ ಕರೆ ನೀಡಿದೆ. ವಿಶ್ವದಲ್ಲಿಯೇ ಕೆನಡಾ ಅತ್ಯಂತ ಸುರಕ್ಷಿತ ಸ್ಥಳ ಎಂದು ಹೇಳಿಕೊಂಡಿದೆ.

ಕೆನಡಾದ ಪ್ರಜೆಗಳಿಗೆ ವೀಸಾ ಸೇವೆಯನ್ನು ಭಾರತ ರದ್ದುಗೊಳಿಸಿದ ಬಳಿಕ ಸ್ವದೇಶಕ್ಕೆ ವಾಪಸಾಗಲು ಸಜ್ಜಾದ ಕೆನಡಿಯನ್ನರು ವಿಮಾನ ನಿಲ್ದಾಣಕ್ಕೆ ತೆರಳಲು ಪಂಜಾಬ್‌ನ ಜಲಂಧರ್‌ನಲ್ಲಿ ಬಸ್ ಏರಿದ ದೃಶ್ಯ —ಪಿಟಿಐ ಚಿತ್ರ

ಶಾ ಭೇಟಿಯಾದ ಬಾದಲ್

ಭಾರತ ಮತ್ತು ಕೆನಡಾ ನಡುವಿನ ಸಂಬಂಧ ಹದಗೆಡುತ್ತಿರುವುದರಿಂದ ಶಿರೋಮಣಿ ಅಕಾಲಿ ದಳ (ಎಸ್ಎಡಿ) ಅಧ್ಯಕ್ಷ ಸುಖ್‌ಬೀರ್ ಸಿಂಗ್ ಬಾದಲ್ ಅವರು ಗುರುವಾರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿ ಉಭಯ ದೇಶಗಳ ನಡುವಿನ ವಿವಾದಗಳಿಗೆ ತ್ವರಿತ ಪರಿಹಾರ ಕೋರಿದರು.

ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಬಾದಲ್, ಹೆಚ್ಚಿನ ಸಂಖ್ಯೆಯ ಸಿಖ್ಖರು ಸೇರಿದಂತೆ ಪಂಜಾಬಿಗಳ ಸಂಕಟದಲ್ಲಿದ್ದಾರೆ. ಉಭಯ ದೇಶಗಳಿಗೆ ಸಂಬಂಧಿಸಿದ ಸಮಸ್ಯೆಗಳು ಉಲ್ಬಣಗೊಳ್ಳುವ ಬದಲು ಇತ್ಯರ್ಥವಾಗಬೇಕು. ಕೆನಡಾದಲ್ಲಿ 18 ಲಕ್ಷಕ್ಕೂ ಹೆಚ್ಚು ಭಾರತೀಯರಿದ್ದಾರೆ ಮತ್ತು ಅವರಲ್ಲಿ ಪಂಜಾಬಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಎಂದು ಹೇಳಿದರು.

ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ತ್ಯಾಗ ಮಾಡಿದ ಅತ್ಯಂತ ದೇಶಭಕ್ತ ಜನರು ಸಿಖ್ಖರು. ಕೆಲವೇ ವ್ಯಕ್ತಿಗಳು ಮಾಡುವ ಕೆಲಸಕ್ಕೆ ಸಮುದಾಯವನ್ನು ದೂಷಿಸಬಾರದು ಎಂದು ಹೇಳಿದರು.

ಬ್ರಾರ್ ಜತೆ ನಂಟು: ಆರೋಪಿಗಳ ಬಂಧನಕ್ಕೆ ಕಾರ್ಯಾಚರಣೆ

ಚಂಡೀಗಢ: ಖ್ಯಾತ ಗಾಯಕ ಸಿಧು ಮೂಸೆವಾಲ ಹತ್ಯೆ ಪ್ರಕರಣದ ಆರೋಪಿ ಸತೀಂದರ್ ಸಿಂಗ್ ಬ್ರಾರ್ ಅಲಿಯಾಸ್ ಗೋಲ್ಡಿ ಬ್ರಾರ್ ಜೊತೆ ನಂಟು ಹೊಂದಿರುವ ಆರೋಪಿಗಳ ಬಂಧಿಸಲು ಪಂಜಾಬ್ ಪೊಲೀಸರು ಗುರುವಾರ ಹಲವಾರು ಸ್ಥಳಗಳಲ್ಲಿ ಶೋಧ ನಡೆಸಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಾಜ್ಯದಾದ್ಯಂತ 1,200 ಕ್ಕೂ ಹೆಚ್ಚು ಸ್ಥಳಗಳಲ್ಲಿ ಕಾರ್ಯಾಚರಣೆ ನಡೆಸಲಾಗುತ್ತಿದೆ. ಸುಮಾರು 5,000 ಪೊಲೀಸರು ಈ ಕಾರ್ಯದಲ್ಲಿ ಭಾಗಿಯಾಗಿದ್ದಾರೆ ಎಂದು ಎಂದು ವಿಶೇಷ ಪೊಲೀಸ್ ಮಹಾನಿರ್ದೇಶಕ (ಕಾನೂನು ಮತ್ತು ಸುವ್ಯವಸ್ಥೆ) ಅರ್ಪಿತ್ ಶುಕ್ಲಾ ಅವರು ಮಾಹಿತಿ ನೀಡಿದ್ದಾರೆ.

ಪೊಲೀಸ್ ಮಹಾನಿರ್ದೇಶಕರು, ಪೊಲೀಸ್ ಆಯುಕ್ತರು ಮತ್ತು ಹಿರಿಯ ಪೊಲೀಸ್ ವರಿಷ್ಠಾಧಿಕಾರಿಗಳು ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ವೈಯಕ್ತಿಕವಾಗಿ ಕಾರ್ಯಾಚರಣೆಯ ಮೇಲ್ವಿಚಾರಣೆ ನಡೆಸುತ್ತಿದ್ದಾರೆ ಎಂದು ಅವರು ಹೇಳಿದರು.

ಗಾಯಕ ಸಿಧು ಮೂಸೆವಾಲ ಅವರನ್ನು ಕಳೆದ ವರ್ಷ ಮೇ 29ರಂದು ಪಂಜಾಬ್‌ನ ಮಾನ್ಸ್ ಜಿಲ್ಲೆಯಲ್ಲಿ ಗುಂಡಿಕ್ಕಿ ಕೊಲ್ಲಲಾಗಿತ್ತು.

ಪಂಜಾಬ್‌ನ ಗೋಲ್ಡಿ ಬ್ರಾರ್ 2017 ರಲ್ಲಿ ವಿದ್ಯಾರ್ಥಿ ವೀಸಾದಲ್ಲಿ ಕೆನಡಾಕ್ಕೆ ತೆರಳಿದ್ದ. ಈತ ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್ ನ ಸಕ್ರಿಯ ಸದಸ್ಯ.

ಹಿಂದೂಗಳನ್ನು ಗುರಿ ಮಾಡಿಕೊಂಡು ದ್ವೇಷಾಪರಾಧ: ಚಂದ್ರ ಆರ್ಯ

ಚಂದ್ರ ಆರ್ಯ

ಟೊರಾಂಟೊ (ಪಿಟಿಐ): ‘ಅಭಿವ್ಯಕ್ತಿ ಸ್ವಾತಂತ್ರ್ಯ’ದ ಹೆಸರಿನಲ್ಲಿ ಹಿಂದೂಗಳನ್ನು ಗುರಿಯಾಗಿಸಿಕೊಂಡು ಕೆನಡಾದಲ್ಲಿ ದ್ವೇಷಾಪರಾಧಗಳನ್ನು ನಡೆಸಲಾಗುತ್ತಿದೆ ಎಂದು ಅಲ್ಲಿಯ ಪ್ರಧಾನಿ ಜಸ್ಟಿನ್ ಟ್ರುಡೊ ಅವರ ನೇತೃತ್ವದ ‘ಲಿಬರಲ್ ಪಾರ್ಟಿ ಆಫ್ ಕೆನಡಾ’ ಪಕ್ಷದ ಭಾರತ ಮೂಲದ ಸಂಸದ ಚಂದ್ರ ಆರ್ಯ ಅವರು ಆತಂಕ ವ್ಯಕ್ತಪಡಿಸಿದ್ದಾರೆ.

‘ಕೆನಡಾದಲ್ಲಿ ನೆಲೆಸಿರುವ ಭಾರತೀಯ ಹಿಂದೂಗಳು ಸ್ವದೇಶಕ್ಕೆ ಮರಳಿ’ ಎಂದು ಖಾಲಿಸ್ತಾನಿ ಸಂಘಟನೆಯಾದ ‘ದಿ ಸಿಖ್ ಫಾರ್ ಜಸ್ಟೀಸ್’ (ಎಸ್ಎಫ್‌ಜೆ) ಬಹಿರಂಗವಾಗಿ ಬೆದರಿಕೆ ಒಡ್ಡಿದ ಬಳಿಕ ಕರ್ನಾಟಕ ಮೂಲದವರಾದ ಚಂದ್ರ ಅವರು ಹೀಗೆ ಪ್ರತಿಕ್ರಿಯಿಸಿದ್ದಾರೆ.

ಭಾರತ– ಕೆನಡಾ ನಡುವಿನ ರಾಜತಾಂತ್ರಿಕ ಬಿಕ್ಕಟ್ಟು ತೀವ್ರವಾಗುತ್ತಿರುವ ವೇಳೆಯೇ ‘ಕೆನಡಾದಲ್ಲಿ ಭಯೋತ್ಪಾದನೆಯನ್ನು ವೈಭವೀಕರಿಸಲಾಗುತ್ತಿದೆ’ ಎಂದು ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ಎಸ್ಎಫ್‌ಜೆ ಬಹಿರಂಗ ಹೇಳಿಕೆ ನೀಡಿದ ಬಳಿಕ ಆತಂಕಗೊಂಡಿರುವುದಾಗಿ ಕೆನಡಾದಲ್ಲಿರುವ ಹಿಂದೂ ಸಮುದಾಯದ ಹಲವರು ನನಗೆ ತಿಳಿಸಿದ್ದಾರೆ. ಹಿಂದೂಗಳಿಗೆ ಶಾಂತಿಯಿಂದ ಇರುವಂತೆ, ಆದರೆ ಎಚ್ಚರಿಕೆ ಕಾಯ್ದುಕೊಳ್ಳುವಂತೆ ಹೇಳಿದ್ದೇನೆ. ಹಿಂದೂ ವಿರೋಧಿ ಕೃತ್ಯಗಳು ಕಂಡುಬಂದರೆ ಸ್ಥಳೀಯ ಕಾನೂನು ಜಾರಿ ಸಂಸ್ಥೆಗಳಿಗೆ ಮಾಹಿತಿ ನೀಡಿ ಎಂದು ತಿಳಿಸಿದ್ದೇನೆ’ ಎಂದು ಚಂದ್ರ ಆರ್ಯ ಅವರು ‘ಎಕ್ಸ್’ ವೇದಿಕೆಯಲ್ಲಿ ಪೋಸ್ಟ್ ಮಾಡಿದ್ದಾರೆ.

ಹಿಂದೂ ಮತ್ತು ಸಿಖ್ ಸಮುದಾಯದ ಮಧ್ಯೆ ಬಿರುಕು ಮೂಡಿಸುವ ಸಲುವಾಗಿ ಖಾಲಿಸ್ತಾನ ಪರ ಹೋರಾಟದ ನಾಯಕ ಗುರುಪತ್ವಂತ್ ಸಿಂಗ್ ಪನ್ನುನ್ (ನಿಜ್ಜರ್ ಪರ ವಕೀಲ) ಪ್ರಚೋದನೆ ನೀಡುತ್ತಿದ್ದಾನೆ ಎಂದು ಹೇಳಿದ್ದಾರೆ.

‘ಕೆನಡಾದಲ್ಲಿರುವ ಸಿಖ್ ಸಮುದಾಯದ ಬಹುತೇಕರು ಖಾಲಿಸ್ತಾನ ಪರ ಹೋರಾಟವನ್ನು ಬೆಂಬಲಿಸುವುದಿಲ್ಲ. ಹಲವಾರು ಕಾರಣಗಳಿಂದಾಗಿ ಇಲ್ಲಿಯ ಸಿಕ್ಖರು ಖಾಲಿಸ್ತಾನಿಗಳ ವಿರುದ್ಧ ಸಾರ್ವಜನಿಕವಾಗಿ ಮಾತನಾಡುವುದಿಲ್ಲ. ಆದರೆ ಅವರು ಇಲ್ಲಿಯ ಹಿಂದೂ ಸಮುದಾಯದ ಜೊತೆ ನಿಕಟವಾದ ಬಂಧ ಹೊಂದಿದ್ದಾರೆ. ಇಲ್ಲಿಯ ಹಿಂದೂಗಳು ಮತ್ತು ಸಿಕ್ಖರು ಕೌಟುಂಬಿಕ ಸಂಬಂಧ ಬೆಳೆಸಿದ್ದಾರೆ. ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಬೆಸೆದುಕೊಂಡಿದ್ದಾರೆ’ ಎಂದು ಹೇಳಿದ್ದಾರೆ.

‘ಕೆನಡಾ ಉನ್ನತ ಮೌಲ್ಯಗಳನ್ನು ಹೊಂದಿದೆ ಮತ್ತು ಕಾನೂನನ್ನು ಎತ್ತಿಹಿಡಿಯುತ್ತದೆ. ಆದರೆ, ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಲ್ಲಿ ನಿರ್ದಿಷ್ಟ ಸಮುದಾಯವನ್ನು ಗುರಿಯಾಗಿಸಿಕೊಂಡು ದ್ವೇಷಾಪರಾಧ ನಡೆಸುವುದನ್ನು ಹೇಗೆ ಅನುವು ಮಾಡಲಾಗುತ್ತಿದೆ’ ಎಂದು ಚಂದ್ರ ಅವರು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ.

‘ಈ ಸಂದರ್ಭದಲ್ಲಿ ನಾವೆಲ್ಲ ಒಟ್ಟಾಗಿ ಇರೋಣ ಮತ್ತು ನ್ಯಾಯಾಂಗ ವ್ಯವಸ್ಥೆಗೆ ಕಾರ್ಯನಿರ್ವಹಿಸಲು ಬಿಡೋಣ’ ಎಂದು ಕೆನಡಾದ ಹಿಂದೂಗಳನ್ನು ಉದ್ದೇಶಿಸಿ ಹೇಳಿದ್ದಾರೆ.

ಬಿಕ್ಕಟ್ಟು ಉಲ್ಬಣ ಕೆನಡಾದವರಿಗೆ ವೀಸಾ ಇಲ್ಲ

ಒಂದನೇ ಪುಟದಿಂದ

ಎಲ್ಲ ರೀತಿಯ ವೀಸಾ ನೀಡಿಕೆಯನ್ನೂ ನಿಲ್ಲಿಸಲಾಗಿದೆ. ಬೇರೊಂದು ದೇಶದಿಂದ ಭಾರತದ ವೀಸಾಕ್ಕೆ ಸಲ್ಲಿಸುವ ಕೆನಡಾ ಪ್ರಜೆಗಳ ವೀಸಾ ಅರ್ಜಿಗಳನ್ನೂ ಪರಿಗಣಿಸಲಾಗುವುದಿಲ್ಲ. ಕೆನಡಾದಲ್ಲಿರುವ ಭಾರತದ ರಾಯಭಾರ ಕಚೇರಿಗಳು ಎದುರಿಸುತ್ತಿರುವ ಸುರಕ್ಷತಾ ಬೆದರಿಕೆಯೇ ಇದಕ್ಕೆ ಕಾರಣ ಎಂದು ಬಾಗ್ಚಿ ಅವರು ತಿಳಿಸಿದ್ದಾರೆ.

ಸಾಗರೋತ್ತರ ಭಾರತೀಯ ಪೌರತ್ವ ಕಾರ್ಡ್ ಹೊಂದಿರುವವರು ಭಾರತಕ್ಕೆ ಬರುವುದಕ್ಕೆ ಯಾವುದೇ ಸಮಸ್ಯೆ ಇಲ್ಲ ಎಂದು ಅವರು ಮಾಹಿತಿ ನೀಡಿದ್ದಾರೆ.

ವೀಸಾ ಅರ್ಜಿಗಳ ಆರಂಭಿಕ ಪರಿಶೀಲನೆ ನಡೆಸುವುದಕ್ಕಾಗಿ ನಿಯೋಜಿಸಿರುವ ಖಾಸಗಿ ಸಂಸ್ಥೆಯು ವೀಸಾ ಅರ್ಜಿ ಪರಿಶೀಲನೆಯನ್ನು ‘ಕಾರ್ಯನಿರ್ವಹಣೆಯ ತೊಡಕುಗಳ ಕಾರಣ’ದಿಂದ ನಿಲ್ಲಿಸಲಾಗಿದೆ ಎಂದು ಗುರುವಾರ ಪ್ರಕಟಿಸಿತ್ತು. ಆದರೆ, ಸ್ವಲ್ಪ ಹೊತ್ತಿನ ಬಳಿಕ ಅದನ್ನು ಹಿಂದಕ್ಕೆ ಪಡೆಯಲಾಯಿತಾದರೂ ಮತ್ತೆ ಆನ್‌ಲೈನ್‌ನಲ್ಲಿ ಪ್ರಕಟಿಸಲಾಯಿತು.

ಖಾಲಿಸ್ತಾನಿ ಪ್ರತ್ಯೇಕತಾವಾದಿ ನಾಯಕ ಹರ್‌ದೀಪ್ ಸಿಂಗ್ ನಿಜ್ಜರ್ ಅವರನ್ನು ಜೂನ್‌ನಲ್ಲಿ ಹತ್ಯೆ ಮಾಡಿರುವುದಕ್ಕೆ ಸಂಬಂಧಿಸಿ ಭಾರತ ಮತ್ತು ಕೆನಡಾ ನಡುವೆ ರಾಜತಾಂತ್ರಿಕ ಬಿಕ್ಕಟ್ಟು ತಲೆದೋರಿದೆ. ಹತ್ಯೆಯ ಹಿಂದೆ ಭಾರತದ ಏಜೆಂಟರ ಕೈವಾಡ ಇದೆ ಎಂದು ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಮಾಡಿರುವ ಆರೋಪದ ಬಳಿಕ ಬಿಕ್ಕಟ್ಟು ಸೃಷ್ಟಿಯಾಗಿದೆ.

ಇದು ‘ಅಸಂಗತ’ ಮತ್ತು ‘ದುರುದ್ದೇಶ’ದ ಆರೋಪ ಎಂದು ಭಾರತವು ಮಂಗಳವಾರವೇ ತಳ್ಳಿ ಹಾಕಿತ್ತು. ತಿರುಗೇಟಿನ ಕ್ರಮವಾಗಿ ಕೆನಡಾದ ಹಿರಿಯ ರಾಜತಾಂತ್ರಿಕರೊಬ್ಬರನ್ನು ಭಾರತ ಉಚ್ಚಾಟನೆ ಮಾಡಿದೆ. ಅದಕ್ಕೂ ಮೊದಲು, ಭಾರತದ ರಾಜತಾಂತ್ರಿಕ ಅಧಿಕಾರಿಯನ್ನು ಕೆನಡಾ ಉಚ್ಚಾಟನೆ ಮಾಡಿತ್ತು.

ರಾಯಭಾರ ಕಚೇರಿಯ ಕೆಲವು ಅಧಿಕಾರಿಗಳಿಗೆ ವಿವಿಧ ಸಾಮಾಜಿಕ ಜಾಲತಾಣಗಳ ಮೂಲಕ ಬೆದರಿಕೆಗಳು ಬಂದಿವೆ. ಅಧಿಕಾರಿಗಳ ಸುರಕ್ಷತೆಯ ಕುರಿತು ಪರಿಶೀಲನೆ ನಡೆಸಲಾಗುತ್ತಿದೆ ಎಂದು ಕೆನಡಾ ಹೇಳಿದೆ. ರಾಯಭಾರ ಕಚೇರಿಯ ಅಧಿಕಾರಿಗಳು ಮತ್ತು ರಾಜತಾಂತ್ರಿಕ ಅಧಿಕಾರಿಗಳಿಗೆ ಭಾರತ ಸರ್ಕಾರವು ರಕ್ಷಣೆ ಒದಗಿಸಬೇಕು ಎಂದು ಕೋರಿದೆ.



ಪಾತಕಿ ಸುಖ್‌ದೂಲ್ ಸಿಂಗ್ ಹತ್ಯೆ

ಒಂದನೇ ಪುಟದಿಂದ....

ಬುಧವಾರ ಎನ್ಐಎ ಬಿಡುಗಡೆ ಮಾಡಿದ ಪಟ್ಟಿಯಲ್ಲಿ ಖಾಲಿಸ್ತಾನ ಮತ್ತು ಕೆನಡಾದೊಂದಿಗೆ ಸಂಪರ್ಕ ಹೊಂದಿರುವ 43 ದರೋಡೆಕೋರರಲ್ಲಿ ಈತನೂ ಒಬ್ಬ ಎಂದು ಹೇಳಲಾಗಿತ್ತು.

ಈತ ನಕಲಿ ಪಾಸ್‌ಪೋರ್ಟ್‌ನಲ್ಲಿ ಪಂಜಾಬ್‌ನ ಮೊಗಾದಿಂದ ಕೆನಡಾಕ್ಕೆ ಪಲಾಯನ ಮಾಡಿದ್ದ.

ನವೋದಯ ವಿದ್ಯಾಲಯ ಸಮಿತಿ

(ಶಿಕ್ಷಣ ಸಚಿವಾಲಯದ ಅಧೀನ ಸ್ವಾಯತ್ತ ಸಂಸ್ಥೆ, ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ವಿಭಾಗ, ಭಾರತ ಸರ್ಕಾರ)

ಜವಾಹರ್ ನವೋದಯ ವಿದ್ಯಾಲಯಗಳಲ್ಲಿ 9 ಮತ್ತು 11 ನೇ ತರಗತಿಯಲ್ಲಿ 2024–25 ಶೈಕ್ಷಣಿಕ ವರ್ಷಕ್ಕಾಗಿ ಖಾಲಿ ಇರುವ ಸೀಟುಗಳ ಭರ್ತಿಗಾಗಿ ಆಯ್ಕೆ ಪರೀಕ್ಷೆಯ ಅಧಿಸೂಚನೆ

ಜವಾಹರ್ ನವೋದಯ ವಿದ್ಯಾಲಯಗಳಲ್ಲಿ 9 ಮತ್ತು 11ನೇ ತರಗತಿಯಲ್ಲಿ 2024–25 ಶೈಕ್ಷಣಿಕ ವರ್ಷಕ್ಕಾಗಿ ಖಾಲಿ ಇರುವ ಸೀಟುಗಳನ್ನು ಲ್ಯಾಟೆರಲ್ (Lateral) ಪ್ರವೇಶ ಪರೀಕ್ಷೆಯ ಮೂಲಕ ಆಯ್ಕೆ ಮಾಡಲು ಅರ್ಹ ಅಭ್ಯರ್ಥಿಗಳಿಂದ ಆನ್ ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31.10.2023 | **ಪ್ರವೇಶ ಪರೀಕ್ಷೆಯ ದಿನಾಂಕ : 10.02.2024**

ಮುಖ್ಯ ವೈಶಿಷ್ಟ್ಯಗಳು:
- 6 ರಿಂದ 12ನೇ ತರಗತಿಯವರೆಗೂ ಸಹ–ಶಿಕ್ಷಣ ಮತ್ತು ಸಂಪೂರ್ಣ ವಸತಿ ಶಾಲೆಗಳು.
- ಗ್ರಾಮೀಣ ಪ್ರದೇಶದ ಪ್ರತಿಭಾವಂತ ಮಕ್ಕಳಿಗೆ ಉತ್ತಮ ಗುಣಮಟ್ಟದ ಆಧುನಿಕ ಶಿಕ್ಷಣ.
- ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ವಸತಿ ಸೌಲಭ್ಯ. ಸಾಮಾನ್ಯವಾಗಿ ವಿದ್ಯಾಲಯಗಳು ಗ್ರಾಮೀಣ ಪ್ರದೇಶದಲ್ಲಿವೆ.
- ಊಟ, ವಸತಿ, ಸಮವಸ್ತ್ರ, ಪಠ್ಯಪುಸ್ತಕಗಳು, ಲೇಖನ ಸಾಮಗ್ರಿ ಮತ್ತು ಅವಶ್ಯಕ ದಿನ ಬಳಕೆಯ ವಸ್ತುಗಳು ಸೇರಿದಂತೆ ಉಚಿತ ಶಿಕ್ಷಣ.
- ಸಹ–ಪಠ್ಯಚಟುವಟಿಕೆಗಳು, ಕ್ರೀಡೆಗಳು, ಎನ್.ಸಿ.ಸಿ., ಎನ್.ಎಸ್.ಎಸ್., ಯೋಗದ ಮೂಲಕ ಮಕ್ಕಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಆದ್ಯತೆ.

ಪ್ರಮುಖ ಸಾಧನೆಯ ಅಂಶಗಳು:
- JEE MAIN -2023 ರಲ್ಲಿ 11458 ವಿದ್ಯಾರ್ಥಿಗಳಲ್ಲಿ 4726 [41.25%] ವಿದ್ಯಾರ್ಥಿಗಳು ಅರ್ಹತೆ ಪಡೆದಿರುತ್ತಾರೆ.
- JEE ADVANCE–2023ರಲ್ಲಿ 1228 [32.35%] ವಿದ್ಯಾರ್ಥಿಗಳು ಅರ್ಹತೆ ಪಡೆದಿರುತ್ತಾರೆ.
- NEET - 2023 ರಲ್ಲಿ 17809 [76.24%] ವಿದ್ಯಾರ್ಥಿಗಳು ಅರ್ಹತೆ ಪಡೆದಿರುತ್ತಾರೆ.
- 2022–23ರಲ್ಲಿ 10ನೇ ತರಗತಿಯಲ್ಲಿ 99.14% ಮತ್ತು 12ನೇ ತರಗತಿಯಲ್ಲಿ 97.51% ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುತ್ತಾರೆ.
- ಪ್ರತಿವರ್ಷ UPSC ಪರೀಕ್ಷೆಯಲ್ಲಿ ನವೋದಯ ವಿದ್ಯಾಲಯದ ಸುಮಾರು 25 ವಿದ್ಯಾರ್ಥಿಗಳು ತೇರ್ಗಡೆ ಹೊಂದುತ್ತಾರೆ.

11ನೇ ತರಗತಿ | ಅರ್ಹತೆ:
- ಜವಾಹರ್ ನವೋದಯ ವಿದ್ಯಾಲಯವು ಕಾರ್ಯ ನಿರ್ವಹಿಸುತ್ತಿರುವ ಜಿಲ್ಲೆಯಲ್ಲಿ, ಅಭ್ಯರ್ಥಿಯು 2023–24ರ ಶೈಕ್ಷಣಿಕ ಅವಧಿಯಲ್ಲಿ [ಏಪ್ರಿಲ್ 2023 ರಿಂದ ಮಾರ್ಚ್ 2024ರ ಅವಧಿ]/2023 [ಜನವರಿಯಿಂದ ಡಿಸೆಂಬರ್ 2023ರ ಅವಧಿಯವರೆಗೆ] ಸರ್ಕಾರ / ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಯಲ್ಲಿ 10ನೇ ತರಗತಿಯನ್ನು ಓದಿರಬೇಕು.
- ವಿದ್ಯಾರ್ಥಿಯ ಜನ್ಮ ದಿನಾಂಕವು 01.06.2007 ರಿಂದ 31.07.2009ರ ಒಳಗೆ ಇರಬೇಕಾದದ್ದು ಕಡ್ಡಾಯ [ಎರಡೂ ದಿನಾಂಕಗಳು ಒಳಗೊಂಡಂತೆ].

ಆಯ್ಕೆ ಪರೀಕ್ಷೆ:
- ಮಾನಸಿಕ ಸಾಮರ್ಥ್ಯ, ಆಂಗ್ಲ ಭಾಷೆ, ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ.
- OMR ಆಧಾರಿತ ವಸ್ತುನಿಷ್ಠ ಪ್ರಕಾರ [Objective Type]
- ದ್ವಿಭಾಷೆಯಲ್ಲಿ ಪ್ರಶ್ನೆ ಪತ್ರಿಕೆ. [ಆಂಗ್ಲ ಮತ್ತು ಹಿಂದಿ]
- ಪಠ್ಯಕ್ರಮ ಮತ್ತು ಆಯ್ಕೆಯ ಮಾನದಂಡಗಳಿಗಾಗಿ ದಯವಿಟ್ಟು ಎನ್.ವಿ.ಎಸ್. ಅಧಿಸೂಚನೆಯನ್ನು ನೋಡಿ.
- ವಿದ್ಯಾರ್ಥಿಯ 10ನೇ ತರಗತಿಯ ಅಧ್ಯಯನದ ಜಿಲ್ಲೆ ಮತ್ತು ನಿವಾಸ ಒಂದೇ ಆಗಿದ್ದರೆ ಮಾತ್ರ ಅಭ್ಯರ್ಥಿಯನ್ನು ಅದೇ ಜಿಲ್ಲೆಯ ಜೆ.ಎನ್.ವಿ.ಗೆ ಪರಿಗಣಿಸಲಾಗುತ್ತದೆ.

9ನೇ ತರಗತಿ | ಅರ್ಹತೆ:
- ಜವಾಹರ್ ನವೋದಯ ವಿದ್ಯಾಲಯವು ಕಾರ್ಯ ನಿರ್ವಹಿಸುತ್ತಿರುವ ಜಿಲ್ಲೆಯಲ್ಲಿ ಅಭ್ಯರ್ಥಿಯು 2023–24ರ ಶೈಕ್ಷಣಿಕ ಅವಧಿಯಲ್ಲಿ ಸರ್ಕಾರ / ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಯಲ್ಲಿ 8ನೇ ತರಗತಿಯಲ್ಲಿ ಓದುತ್ತಿರಬೇಕು ಮತ್ತು ಅದೇ ಜಿಲ್ಲೆಯ ನಿವಾಸಿಯಾಗಿರಬೇಕು.
- ವಿದ್ಯಾರ್ಥಿಯ ಜನ್ಮ ದಿನಾಂಕವು 01.05.2009 ರಿಂದ 31.07.2011ರ ಒಳಗೆ ಇರಬೇಕಾದದ್ದು ಕಡ್ಡಾಯ [ಎರಡೂ ದಿನಾಂಕಗಳು ಒಳಗೊಂಡಂತೆ]. ಈ ನಿಯಮವು SC / ST / OBC ವರ್ಗಗಳಿಗೆ ಸೇರಿದಂತೆ ಉಳಿದ ಎಲ್ಲಾ ಅಭ್ಯರ್ಥಿಗಳಿಗೆ ಅನ್ವಯಿಸುತ್ತದೆ.

ಆಯ್ಕೆ ಪರೀಕ್ಷೆ:
- ಹಿಂದಿ, ಆಂಗ್ಲ ಭಾಷೆ, ಗಣಿತ ಮತ್ತು ವಿಜ್ಞಾನ.
- OMR ಆಧಾರಿತ ವಸ್ತುನಿಷ್ಠ ಪ್ರಕಾರ [Objective Type]
- ದ್ವಿಭಾಷೆಯಲ್ಲಿ ಪ್ರಶ್ನೆ ಪತ್ರಿಕೆ. [ಆಂಗ್ಲ ಮತ್ತು ಹಿಂದಿ]
- ಪಠ್ಯಕ್ರಮ ಮತ್ತು ಆಯ್ಕೆಯ ಮಾನದಂಡಗಳಿಗಾಗಿ ದಯವಿಟ್ಟು ಎನ್.ವಿ.ಎಸ್. ಅಧಿಸೂಚನೆಯನ್ನು ನೋಡಿ.

ಹೆಚ್ಚಿನ ಮಾಹಿತಿಯನ್ನು NVS Website www.navodaya.gov.in ಮೂಲಕ ಪಡೆಯಬಹುದು.

ನವೋದಯ ವಿದ್ಯಾಲಯ ಸಮಿತಿಯ ಪ್ರಕಟಣೆ.

ಜವಾಹರ್‌ಲಾಲ್ ನೆಹರು ತಾರಾಲಯ

ಬೆಂಗಳೂರು ಅಸೋಸಿಯೇಷನ್ ಫಾರ್ ಸೈನ್ಸ್ ಎಜುಕೇಷನ್

(ಕರ್ನಾಟಕ ಸರ್ಕಾರದ ನೋಂದಾಯಿತ ಸೊಸೈಟಿ)

ಪ್ರಕಟಣೆ

ತಾರಾಲಯವು **ಆಡಳಿತಾಧಿಕಾರಿಯ** ಹುದ್ದೆಗೆ ಅರ್ಜಿಯನ್ನು ಆಹ್ವಾನಿಸುತ್ತಿದ್ದು, ವಿವರಗಳು ವೆಬ್‌ಸೈಟ್ **www.taralaya.org** ಲಭ್ಯವಿದೆ. ಸಂಪೂರ್ಣ ವಿವರಗಳುಳ್ಳ (ಡೌನ್‌ಲೋಡ್ ಮಾಡಬಹುದಾದ) ಅರ್ಜಿಯನ್ನು **ದಿನಾಂಕ: 13.10.2023** ರೊಳಗೆ ನಿರ್ದೇಶಕರು, **ಜವಾಹರ್‌ಲಾಲ್ ನೆಹರು ತಾರಾಲಯ,** ಶ್ರೀ ಟಿ.ಚೌಡಯ್ಯ ರಸ್ತೆ, **ಬೆಂಗಳೂರು – 560 001** ಇವರಿಗೆ ಕಳುಹಿಸಬಹುದಾಗಿದೆ.

ಸಹಿ/– ಆಡಳಿತಾಧಿಕಾರಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು, ಬಿಟಿಎಂ ಬಡಾವಣೆ ವಿಭಾಗ, ಬಿಬಿಎಂಪಿ ವಾಣಿಜ್ಯ ಸಂಕೀರ್ಣ 2ನೇ ಮಹಡಿ, ಲಸ್ಕರ್ ಹೊಸೂರು ರಸ್ತೆ, ಆಡುಗೋಡಿ, ಬೆಂಗಳೂರು–560 030.

ಸಂ: ಕಾಪಾಅ/ಬಿಟಿಎಂ/ಸಅ/ಇ-ಪ್ರೊಕ್/05/2023–24 ದಿನಾಂಕ:20.09.2023

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ

(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿ–ಲಕೋಟೆ ಪದ್ಧತಿ) (2ನೇ ಕರೆ)

ಕಾರ್ಯಪಾಲಕ ಅಭಿಯಂತರರು, ಬಿಟಿಎಂ ಬಡಾವಣೆ ವಿಭಾಗ ಇವರು ಅರ್ಹ ಗುತ್ತಿಗೆದಾರರಿಂದ 2023–24ನೇ ಸಾಲಿನ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ	ಕಾಮಗಾರಿಯ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
	ಪರಿಶಿಷ್ಟ ಜಾತಿ		
1.	ವಾರ್ಡ್ ಸಂಖ್ಯೆ 152, ಎಸ್.ಜಿ. ಪಾಳ್ಯದಲ್ಲಿ ರಸ್ತೆಗಳು, ಒಳ ಚರಂಡಿಗಳು ಮತ್ತು ಫುಟ್‌ಪಾತ್‌ಗಳ ನಿರ್ವಹಣಾ ಕಾಮಗಾರಿ.	55.00	55,000/-
2.	ವಾರ್ಡ್ ಸಂಖ್ಯೆ 147, ಆಡುಗೋಡಿಯಲ್ಲಿ ರಸ್ತೆಗಳು, ಒಳ ಚರಂಡಿಗಳು ಮತ್ತು ಫುಟ್‌ಪಾತ್‌ಗಳ ನಿರ್ವಹಣಾ ಕಾಮಗಾರಿ.	55.00	55,000/-
	ಪರಿಶಿಷ್ಟ ಪಂಗಡ		
3.	ವಾರ್ಡ್ ಸಂಖ್ಯೆ 151, ಕೋರಮಂಗಲದಲ್ಲಿ ರಸ್ತೆಗಳು, ಒಳ ಚರಂಡಿಗಳು ಮತ್ತು ಫುಟ್‌ಪಾತ್‌ಗಳ ನಿರ್ವಹಣಾ ಕಾಮಗಾರಿ.	55.00	55,000/-
	ಸಾಮಾನ್ಯ		
4.	ವಾರ್ಡ್ ಸಂಖ್ಯೆ 172, ಮಡಿವಾಳದಲ್ಲಿ ರಸ್ತೆಗಳು, ಒಳ ಚರಂಡಿಗಳು ಮತ್ತು ಫುಟ್‌ಪಾತ್‌ಗಳ ನಿರ್ವಹಣಾ ಕಾಮಗಾರಿ.	55.00	1,10,000/-
5.	ವಾರ್ಡ್ ಸಂಖ್ಯೆ 176, ಬಿ.ಟಿ.ಎಂ. ಬಡಾವಣೆಯಲ್ಲಿ ರಸ್ತೆಗಳು, ಒಳಚರಂಡಿಗಳು ಮತ್ತು ಫುಟ್‌ಪಾತ್‌ಗಳ ನಿರ್ವಹಣಾ ಕಾಮಗಾರಿ.	55.00	1,10,000/-
6.	ವಾರ್ಡ್ ಸಂಖ್ಯೆ 148, ಈಜೀಪುರದಲ್ಲಿ ರಸ್ತೆಗಳು, ಒಳ ಚರಂಡಿಗಳು ಮತ್ತು ಫುಟ್‌ಪಾತ್‌ಗಳ ನಿರ್ವಹಣಾ ಕಾಮಗಾರಿ.	55.00	1,10,000/-

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆ ದಿನಾಂಕ : **25.09.2023 ರ ಅಪರಾಹ್ನ 3.00 ಗಂಟೆಗೆ.** 3) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:**29.09.2023 ರ ಸಂಜೆ 4.00 ಗಂಟೆಯವರೆಗೆ.** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : **30.09.2023ರ ಸಂಜೆ 4.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: www.kppp.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಬಿಟಿಎಂ ಬಡಾವಣೆ ವಿಭಾಗ

ಆಯುಕ್ತರವರ ಕಾರ್ಯಾಲಯ, ನಗರ ಭೂ ಸಾರಿಗೆ ನಿರ್ದೇಶನಾಲಯ

ನಗರಾಭಿವೃದ್ಧಿ ಇಲಾಖೆ, ಬಿಎಂಟಿಸಿ, ಟಿಟಿಎಂಸಿ, ‘ಬಿ’ ಬ್ಲಾಕ್,(ಬಸ್ ಸ್ಟ್ಯಾಂಡ್ ಮೇಲ್ಭಾಗ) 4ನೇ ಮಹಡಿ, ಕೆ.ಹೆಚ್.ರಸ್ತೆ , ಶಾಂತಿನಗರ, ಬೆಂಗಳೂರು-560 027 ದೂ.080-22226627/6628

ಇ-ಮೇಲ್: dultbangalore@gmail.com / dult@karnataka.gov.in

ಸಂಖ್ಯೆ:DULT-ITSOITSP/1/2022 ದಿನಾಂಕ:20.09.2023

ಪ್ರಕಟಣೆ

ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ನಗರ ಭೂ ಸಾರಿಗೆ ನಿರ್ದೇಶನಾಲಯವು ಬೆಂಗಳೂರು ನಗರದಲ್ಲಿ ATIMS ಯೋಜನೆಗಾಗಿ (1) ಇಂಟರ್‌ನೆಟ್ ಲೀಸ್ ಲೈನ್ (2) ಬ್ರಾಡ್ ಬ್ಯಾಂಡ್ ಸಂಪರ್ಕವನ್ನು ಒದಗಿಸುವ ಏಜೆನ್ಸಿಗಳಿಂದ (ಸೇವಾ ಪೂರೈಕೆದಾರರಿಂದ) ಸೇವೆಗಳನ್ನು ಪಡೆಯಲು ಉದ್ದೇಶಿಸಿದೆ. ಆಸಕ್ತ ಏಜೆನ್ಸಿಗಳು ಹೆಚ್ಚಿನ ವಿವರಗಳಿಗಾಗಿ https://kppp.karnataka.gov.in / dult.karnataka.gov.in ಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು. ಬಿಡ್ ಸಲ್ಲಿಸಲು ಕೊನೆಯ **ದಿನಾಂಕ: 04.10.2023 ಸಂಜೆ 5.30** ಆಗಿರುತ್ತದೆ. ನಂತರ ಸಲ್ಲಿಸುವ ಟೆಂಡರು ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ವಾಸಾಸಂಇ/ಉನಿ–ಸಿ.ಪಿ/1375/ಕೆಎಸ್ಎಂಸಿಎ/2023–24 ಸಹಿ/– ಆಡಳಿತಾಧಿಕಾರಿ

ಕಂದಾಯ ಇಲಾಖೆ

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ, (ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)

3 ಮತ್ತು 4ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–560001.

ದೂರವಾಣಿ : 080–29604556, 29566556, 29565353 E-Mail: splocaima-21@ka.gov.in

No. SPLOCA/Claims/P-Gri/07/2023-24 Date: 19.09.2023

ಪ್ರಕಟಣೆ

ಮಾನ್ಯ ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಛೇರಿ (ಐ ಎಂ ಎ ಮತ್ತು ಇತರ ಕ ಪಿಐ ಡಿಎಫ್‌ಇ ಪ್ರಕರಣಗಳ) ಕಾರ್ಯಾಲಯದ ಅಧೀನ ಸಕ್ಷಮ ಪ್ರಾಧಿಕಾರಿಗಳು, ಮೆ: ಮುಜರಿಬಾ ಬುಲಿಯನ್ ಟ್ರೇಡಿಂಗ್ ದೂಷಿತ ಕಂಪನಿಯ ಅರ್ಹ ಠೇವಣಿದಾರರು/ಫಲಾನುಭವಿಗಳಿಂದ ಕ್ಲೇಮುಗಳನ್ನು ಪಡೆದಿದ್ದು, ಪರಿಶೀಲನೆ ಮಾಡಲು ಅಗತ್ಯ ದಾಖಲೆಗಳ ಅವಶ್ಯಕತೆ ಇರುತ್ತದೆ. ಕ್ಲೇಮು ಅರ್ಜಿಗಳನ್ನು ಈಗಾಗಲೇ ಸಲ್ಲಿಸಿದ್ದು, ಅವು ಅಪೂರ್ಣವಾಗಿರುವುದರಿಂದ, ನಿಮ್ಮ ಕ್ಲೇಮುಗಳನ್ನು ನಿರ್ಧರಿಸಲು ಕಷ್ಟ ಸಾಧ್ಯವಾಗಿರುತ್ತದೆ. ಆದರಿಂದ ನಿಮ್ಮ ಕ್ಲೇಮು ಮೊತ್ತವನ್ನು ನಿರ್ಧರಿಸಲು ಅಗತ್ಯವಾದ ದಾಖಲೆಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಈ ನಿಟ್ಟಿನಲ್ಲಿ ನೀವು ಸಲ್ಲಿಸಬೇಕಾದ ಮಾಹಿತಿ ಮತ್ತು ದಾಖಲೆಗಳ ಬಗ್ಗೆ ನಮೂನೆಯೊಂದನ್ನು ಸಿದ್ಧಪಡಿಸಿ https://sploca.kamataka.gov.in/website ನಲ್ಲಿ upload ಮಾಡಲಾಗಿದ್ದು ಸದರಿ ಅರ್ಜಿಯನ್ನು Download ಮಾಡಿಕೊಂಡು ಪೂರ್ತಿ ಭರ್ತಿ ಮಾಡಿ ಹಾಗೂ ಅವಶ್ಯವಾದ ಎಲ್ಲಾ ದಾಖಲಾತಿಗಳನ್ನು ಲಗತ್ತಿಸಿ. ವಿಶೇಷಾಧಿಕಾರಿ ಮತ್ತು ಪ್ರಾಧಿಕಾರಿಯವರ ಕಾರ್ಯಾಲಯ, (ಐ ಎಂ ಎ ಹಾಗೂ ಇತರ ಕೆಪಿಐಡಿಎಫ್ ಇ ಪ್ರಕರಣಗಳು) 4ನೇ ಮಹಡಿ ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಬೆಂಗಳೂರು–560001 ಇಲ್ಲಿ ದಿನಾಂಕ: 25/09/2023 ರಿಂದ 25/10/2023 ರವರೆಗೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

ಸಹಿ/– ವಿಶೇಷಾಧಿಕಾರಿಗಳು ಮತ್ತು ಸಕ್ಷಮ ಪ್ರಾಧಿಕಾರಿಗಳು, ಐಎಂಎ ಮತ್ತು ಇತರೆ ಕೆಪಿಐಡಿಎಫ್‌ಇ ಪ್ರಕರಣಗಳು

DIPR/CP/1381/Zenkar/2023-24

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಕಾರ್ಯಪಾಲಕ ಅಭಿಯಂತರರು (ಪೂರ್ವ ಮತ್ತು ಪಶ್ಚಿಮ)ರವರ ಕಛೇರಿ, ಸಯ್ಯಾಜಿರಾವ್ ರಸ್ತೆ, ಮೈಸೂರು ಮಹಾನಗರ ಪಾಲಿಕೆ, ಮೈಸೂರು–570024. ಇಮೇಲ್: eewmccmys@gmail.com

ಸಂಖ್ಯೆ:ಮೈನಪಾ/ಕಾ.ಇಂ(ಪೂ&ಪ)/ಸಾ.ಟೆಂ.ಪ್ರ–07/2023–24 ದಿನಾಂಕ: 20.09.2023

ಟೆಂಡರ್ ಪ್ರಕಟಣೆ (ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಅನುದಾನದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಒಟ್ಟು ಕಾಮಗಾರಿಗಳು	ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ:	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1.	ಟೆಂ.ಪ್ರ.ಸಂಖ್ಯೆ:ಮೈನಪಾ/ಕಾಇಂ(ಪೂ&ಪ)/ ಟಿಎನ್–11/2023–24, ದಿನಾಂಕ: 19.09.2023	01	20.09.2023 ಬೆಳಿಗ್ಗೆ 11 ರ ನಂತರ	20.10.2023 ಸಂಜೆ 5.30 ಗಂಟೆಗೆ	21.10.2023 ಸಂಜೆ 5.30ರ ನಂತರ
2.	ಟೆಂ.ಪ್ರ.ಸಂಖ್ಯೆ:ಮೈನಪಾ/ಕಾಇಂ(ಪೂ&ಪ)/ ಟಿಎನ್–12/2023–24, ದಿನಾಂಕ: 20.09.2023	04	20.09.2023 ಬೆಳಿಗ್ಗೆ 11 ರ ನಂತರ	27.09.2023 ಸಂಜೆ 5.30 ಗಂಟೆಗೆ	29.09.2023 ಸಂಜೆ 5.30ರ ನಂತರ
3.	ಟೆಂ.ಪ್ರ.ಸಂಖ್ಯೆ:ಮೈನಪಾ/ಕಾಇಂ(ಪೂ&ಪ)/ ಟಿಎನ್–13/2023–24, ದಿನಾಂಕ:20.09.2023	01	19.09.2023 ಬೆಳಿಗ್ಗೆ 10.30 ರ ನಂತರ	19.10.2023 ಸಂಜೆ 5.00 ಗಂಟೆಗೆ	20.10.2023 ಸಂಜೆ 5.30ರ ನಂತರ
4.	ಟೆಂ.ಪ್ರ.ಸಂಖ್ಯೆ:ಮೈನಪಾ/ಕಾಇಂ(ಪೂ&ಪ)/ ಟಿಎನ್–14/2023–24, ದಿನಾಂಕ: 20.09.2023	01	21.09.2023 ಬೆಳಿಗ್ಗೆ 10.30 ರ ನಂತರ	29.09.2023 ಸಂಜೆ 5.30 ಗಂಟೆಗೆ	30.09.2023 ಸಂಜೆ 5.30ರ ನಂತರ

ಅರ್ಹ ಗುತ್ತಿಗೆದಾರರು (https://kppp.karnataka.gov.in) ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರವನ್ನು ಕಚೇರಿ ಸಮಯದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಸಿವಿಲ್ ಕಾ.ಅ(ಪೂ&ಪ) ರವರ ಕಛೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು. **ವಿಶೇಷ ಸೂಚನೆ:** ಮುಂದೆ ಯಾವುದೇ ಸೂಚನೆ / ಬದಲಾವಣೆ / ತಿದ್ದುಪಡಿಗಳಿದ್ದಲ್ಲಿ (https://kppp.karnataka.gov.in) ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು(ಪೂರ್ವ) ಮೈಸೂರು ಮಹಾನಗರ ಪಾಲಿಕೆ, ಮೈಸೂರು | ಸಹಿ/– ಕಾರ್ಯಪಾಲಕ ಅಭಿಯಂತರರು(ಪಶ್ಚಿಮ) ಮೈಸೂರು ಮಹಾನಗರ ಪಾಲಿಕೆ, ಮೈಸೂರು

DIPR/MYS/KAVITA/406/23-24

Hubli-Dharwad Municipal Corporation

Sir. Siddappa Kambali Road, Hubballi-580020

Ph : 2213898, 2213888 website : www.hdmc.gov.in

No. HDMC:15:02:523:2023-24/ Dated : 21.09.2023

IT Department (it.hdmc@gmail.com)

Inviting Rates

To,
M/s. ____________________

Sub : You are hereby requested to submit the Unit rates through sealed Quotation for the below mentioned IT Dept. Related materials and works.

1. Providing Unit Rates for Supplying of Biometric Attendance system with Finger Print and Face Recognition devices to Poura Karmikas and Auto Tipper Drivers of HDMC.
2. Providing Unit Rates for Supplying and installation of Various types of OEM/OEM Compatible toners.
3. Providing Annual Comprehensive & Non Comprehensive Unit Rates for Printers and Unit rates for Spare Parts(OEM/OEM Compatible) of Normal Mono Laser Printers, Multi Function Laser printers & Color Inkjet printers.
4. Providing Unit Rates for Supplying and installation of Desktop Computer, All in one PCs, Laptop System Spare parts(OEM/OEM Compatible) and computer network related materials.
5. Providing Unit Rates for Supplying and installation of CCTV Surveillance System related materials.
6. Inviting rates for Outsourcing of Annual Maintenance contract of various types of Photocopier Machines under Per Page Rate Contract for the year 2023-24 at various offices of HDMC of Hubli & Dharwad Division.

The details of the above mentioned materials and condition document is uploaded in our website www.hdmc.mrc.gov.in, interested agencies to download the document of detailed specifications from our website and should submit the sealed quotation separately for above works to Executive Engineer(IT), Siddappa kambali road, HDMC, Hubli-580020 office or to office email id: it.hdmc@gmail.com on or before Date : **28.09.2023** up to @4:00 p.m.

Sd/- Executive Engineer (IT)
Hubballi-Dharwad Municipal Corporation, Hubballi

DIPR/DWD/KSMCA/303/2023-24

ಮೈಸೂರು ಜಿಲ್ಲಾ ಪಂಚಾಯತ್

(ಕೈಗಾರಿಕೆ ವಿಭಾಗ)

ಉಪ ನಿರ್ದೇಶಕರವರ ಕಛೇರಿ, ಗ್ರಾಮೀಣ ಕೈಗಾರಿಕೆ ವಿಭಾಗ, ಜಿಲ್ಲಾ ಪಂಚಾಯತ್, ಕೈಗಾರಿಕೆ ಇಲಾಖೆ,

ಸಿ.ಟಿ.ಐ ಕಟ್ಟಡ, ಸಯ್ಯಾಜಿರಾವ್ ರಸ್ತೆ, ಮೈಸೂರು

ದಿನಾಂಕ: 19.09.2023

2023–2024 ನೇ ಸಾಲಿಗೆ ಮೈಸೂರು ದಸರಾ ಮಹೋತ್ಸವ 2023ರಲ್ಲಿ ಜಂಬೂ ಸವಾರಿ ಮೆರವಣಿಗೆ ಸ್ತಬ್ಧಚಿತ್ರ ನಿರ್ಮಾಣ, ಮೈಸೂರು ದೊಡ್ಡಕೆರೆ ಮೈದಾನ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಮಳಿಗೆಗಳ ನಿರ್ಮಾಣ ಹಾಗೂ ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಮಳಿಗೆಗಳ ನಿರ್ಮಾಣ ಮತ್ತು ತಾಲ್ಲೂಕು ಮಟ್ಟದ ಇಲಾಖಾ ಕಾರ್ಯಕ್ರಮ ಕುರಿತು ಪ್ರಚಾರ ಪಡಿಸುವ ಜಾಗೃತಿ ಶಿಬಿರಗಳನ್ನು ನಡೆಸುವ ಸಲುವಾಗಿ (ಇ–ಪ್ರೊಕ್ಯೂರ್‌ಮೆಂಟ್) ಇ–ಟೆಂಡರ್ ಪ್ರಕಟಣೆ **ಟೆಂಡರ್ ಆದೇಶ ಸಂಖ್ಯೆ:** ಉನಿ/ಗ್ರಾಕೈ/ಜಿಪಂ/ಮೈ/ಟೆಂಡರ್/2023–2024 ದಿ:19.09.2023. **ಇ–ಪ್ರೊಕ್ಯೂರ್ ಮೆಂಟ್ ಮೂಲಕ ಅರ್ಜಿ ಸ್ವೀಕರಿಸುವ ದಿ:** 19.09.2023 ರಿಂದ 27.09.2023 ಸಂಜೆ 04.30 ಗಂಟೆಯೊಳಗೆ. **ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ:** 27.09.2023 ಸಂಜೆ 04.30 ಗಂಟೆಯೊಳಗೆ https://kppp.karnataka.gov.in **ಟೆಂಡರ್ ತೆರೆಯುವ ತಾತ್ಕಾಲಿಕ ದಿನಾಂಕ ಮತ್ತು ಸಮಯ:** 29.09.2023 ಬೆಳಿಗ್ಗೆ 11.00 ಗಂಟೆ. **ಟೆಂಡರ್ ತೆರೆಯುವ ಅಧಿಕಾರಿ:** ಉಪ ನಿರ್ದೇಶಕರು, ಗ್ರಾಮೀಣ ಕೈಗಾರಿಕೆಗಳು, ಕೈಗಾರಿಕೆ ಇಲಾಖೆ, ಜಿ.ಪಂ.ಮೈಸೂರು. **ಸಂಪರ್ಕಿಸಬೇಕಾದ ಕಛೇರಿ ವಿಳಾಸ:** ಉಪ ನಿರ್ದೇಶಕರು, ಗ್ರಾಮೀಣ ಕೈಗಾರಿಕೆ ವಿಭಾಗ, ಜಿಲ್ಲಾ ಪಂಚಾಯತ್, ಕೈಗಾರಿಕೆ ಇಲಾಖೆ, ಸಿ.ಟಿ.ಐ ಕಟ್ಟಡ, ಸಯ್ಯಾಜಿರಾವ್ ರಸ್ತೆ, ಮೈಸೂರು. **ಮೇಲ್ಮನವಿ ಪ್ರಾಧಿಕಾರ:** ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು.

ಉಪನಿರ್ದೇಶಕರು, ಗ್ರಾಮೀಣ ಕೈಗಾರಿಕೆಗಳು, ಕೈಗಾರಿಕೆ ಇಲಾಖೆ, ಜಿಲ್ಲಾ ಪಂಚಾಯತ್, ಮೈಸೂರುರವರ ಕಛೇರಿಯಿಂದ ವಿಚಾರಗೋಷ್ಠಿಗಳು/ಕ್ಷೇತ್ರೋತ್ಸವಗಳು ಮತ್ತು ವಸ್ತುಪ್ರದರ್ಶನಗಳು ಯೋಜನೆಯಡಿ ಒಟ್ಟು 39.00 ಲಕ್ಷಗಳ ಅನುದಾನಕ್ಕೆ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಲಾಗಿದ್ದು, ಕ್ರಿಯಾ ಯೋಜನೆಯಲ್ಲಿ ಅನುಮೋದನೆಗೊಂಡಂತೆ ಮೈಸೂರು ದಸರಾ ಮಹೋತ್ಸವ 2023ರಲ್ಲಿ ನಡೆಯುವ ವಿಜಯದಶಮಿ ದಿನದ ಜಂಬೂಸವಾರಿ ಮೆರವಣಿಗೆಯಲ್ಲಿ ಪ್ರದರ್ಶಿಸಲು ಸ್ತಬ್ಧಚಿತ್ರ ನಿರ್ಮಾಣ, ಮೈಸೂರು ದೊಡ್ಡಕೆರೆ ಮೈದಾನದ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಮಳಿಗೆಗಳ ನಿರ್ಮಾಣ ಹಾಗೂ ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಮಳಿಗೆಗಳ ನಿರ್ಮಾಣ ಮತ್ತು ತಾಲ್ಲೂಕು ಮಟ್ಟದ ಇಲಾಖಾ ಕಾರ್ಯಕ್ರಮ ಕುರಿತು ಪ್ರಚಾರ ಪಡಿಸುವ ಜಾಗೃತಿ ಶಿಬಿರಗಳನ್ನು ಕರ್ನಾಟಕ ಪಾರದರ್ಶಕ ಅಧಿನಿಯಮದಡಿ ನಡೆಸಿಕೊಡಲು ಅರ್ಹ ಸಂಸ್ಥೆ/ವ್ಯಕ್ತಿಗಳಿಂದ ದರಗಳನ್ನು ಕೋರಿದೆ. ಸ್ತಬ್ಧಚಿತ್ರ ನಿರ್ಮಾಣದ ವಿನ್ಯಾಸ ಹಾಗೂ ವಸ್ತು ಪ್ರದರ್ಶನದ ಮಳಿಗೆಗಳ ನಿರ್ಮಾಣದ ವಿನ್ಯಾಸವನ್ನು ಜಿಲ್ಲಾಡಳಿತ/ಜಿಲ್ಲಾ ಪಂಚಾಯತಿ/ಸಂಬಂದಿಸಿದ ಉಪಸಮಿತಿಯಿಂದ ಅನುಮೋದನೆಗೊಂಡಂತೆ ಸಂಸ್ಥೆಯವರಿಗೆ ಕಾರ್ಯಾದೇಶ ನೀಡಲಾಗುವುದು ಹಾಗೂ ಅದರಂತೆ ನಿರ್ಮಿಸುವ ಷರತ್ತಿಗೊಳಪಟ್ಟು ದರಗಳನ್ನು ನಮೂದಿಸುವುದು. ಟೆಂಡರ್ ಅರ್ಜಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದಿ: 27.09.2023ರ ಸಂಜೆ 4.30 ಗಂಟೆಯವರೆಗೆ ಸ್ವೀಕರಿಸಲಾಗುವುದು ಹಾಗೂ ದಿ: 29.09.2023ರ ಬೆಳಿಗ್ಗೆ 11.00 ಗಂಟೆಗೆ ತಾಂತ್ರಿಕ ಬಿಡ್‌ನ್ನು ಈ ಕಛೇರಿಯಲ್ಲಿ ತೆರಯಲಾಗುವುದು. ಟೆಂಡರ್ ಅನ್ನು ಅಂತಿಮವಾಗಿ ಅಂಗೀಕರಿಸುವ, ತಿರಸ್ಕರಿಸುವ, ಮುಂದೂಡವ ಮತ್ತು ಮರು ಟೆಂಡರ್ ಕರೆಯುವ ಅಧಿಕಾರವು ಉಪನಿರ್ದೇಶಕರು, (ಖಾಗ್ರಾ) ರವರದ್ದಾಗಿರುತ್ತದೆ. ಹಾಗೂ ಹೆಚ್ಚಿನ ವಿವರಗಳನ್ನು www.kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ಸಹಿ/– ಉಪ ನಿರ್ದೇಶಕರು, ಖಾದಿ ಮತ್ತು ಗ್ರಾಮೋದ್ಯೋಗ ವಿಭಾಗ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಪಂಚಾಯತ್, ಮೈಸೂರು.

DIPR/DDMYS/KSMCA/382/2023-24

ಡಿಕೆಶಿ ವೇಗಕ್ಕೆ ಕಡಿವಾಣ ಹಾಕಲು 'ಮೂರು ಡಿಸಿಎಂ' ಸೃಷ್ಟಿ ಮುನ್ನೆಲೆಗೆ

ಕಾಂಗ್ರೆಸ್‌ನಲ್ಲಿ ಬಣ ರಾಜಕೀಯ ಉಲ್ಬಣ

• ವೈ.ಗ. ಜಗದೀಶ್

ಸುದ್ದಿ ವಿಶ್ಲೇಷಣೆ

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದು ನಾಲ್ಕು ತಿಂಗಳು ಕಳೆಯುವಷ್ಟರಲ್ಲೇ ನಾಯಕರ 'ಪ್ರತಿಷ್ಠೆ'ಗಾಗಿ ನಡೆಯುತ್ತಿರುವ ಒಳಜಗಳ ಬೀದಿಗೆ ಬಂದಿದೆ.

ಬೆಲೆ ಏರಿಕೆ, ಬರ, ಬೆಳೆ ಹಾನಿಯಿಂದ ಸಂಕಷ್ಟಕ್ಕೆ ಸಿಲುಕಿಸಿದ ಜನ ಸಮುದಾಯವನ್ನು ಸಂತೈಸಬೇಕಾದ ಸಚಿವರು, ಶಾಸಕರು ಪಕ್ಷದ ವೇದಿಕೆಯಲ್ಲಿ ಇತ್ಯರ್ಥ ಮಾಡಿಕೊಳ್ಳಬೇಕಾದ ವಿಚಾರವನ್ನು ಮಾಧ್ಯಮದ ಮುಂದೆ ಹಲುಬಲಾರಂಭಿಸಿದ್ದಾರೆ. ಇದು, ಬಣ ರಾಜಕೀಯ ಮತ್ತಷ್ಟು ಬಣ್ಣ ಪಡೆದುಕೊಳ್ಳುತ್ತಿರುವುದನ್ನು ತೋರಿಸುತ್ತದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಎರಡು ಪ್ರತ್ಯೇಕ ಶಕ್ತಿಕೇಂದ್ರಗಳಾಗಿ ತಮ್ಮದೇ ಪ್ರಭಾ ವಲಯವನ್ನು ಗಟ್ಟಿಗಳಿಸಿಕೊಳ್ಳಲು ಕಸರತ್ತು ನಡೆಸುತ್ತಿರುವುದು ರಹಸ್ಯವೇನಲ್ಲ.

135 ಸ್ಥಾನ ಗೆಲ್ಲಿಕೊಂಡು ಬಂದಿದ್ದು ತಮ್ಮದೇ ಸಾಧನೆ ಎಂದು ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಬಿಂಬಿಸಿಕೊಂಡಿದ್ದುಂಟು. ಹೀಗಾಗಿಯೇ ಸರ್ಕಾರದ ಹಕ್ಕುಸ್ವಾಮ್ಯ ಯಾರದ್ದೆಂಬ ವಿವಾದ ಇನ್ನೂ ಜೀವಂತವಾಗಿಯೇ ಇದೆ. ಕೆಲವೊಮ್ಮೆ ಫೋಟೋಕ್ಕಾಗಿ ಒಟ್ಟಾಗಿ ಕೈ ಹಿಡಿದು ನಿಂತಿದ್ದರು. ಆದರೆ, ಹಿಂದಿನಿಂದ ಅಂಗಿ ಜಗ್ಗುವ ರಾಜಕಾರಣವನ್ನು ಇಬ್ಬರೂ ನಿಲ್ಲಿಸಿಲ್ಲ ಎಂಬುದಕ್ಕೆ ಮೂವರು ಉಪ ಮುಖ್ಯಮಂತ್ರಿ(ಡಿಸಿಎಂ) ಸೃಷ್ಟಿಯ ವಿವಾದವೇ ಸಾಕ್ಷಿ. ಲೋಕಸಭೆ ಚುನಾವಣೆಗೆ ಎಂಟು ತಿಂಗಳು ಬಾಕಿ ಇರುವಾಗ, ಚುನಾವಣೆಯಲ್ಲಿ ಗೆಲುವು ಸಾಧಿಸಬೇಕಾದರೆ ಜಾತಿ ಆಧಾರದಲ್ಲಿ ಮತ್ತೆ ಮೂವರಿಗೆ ಡಿಸಿಎಂ ಪಟ್ಟ ನೀಡಬೇಕು ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿಕೆಯೇ ವಿವಾದ ಮೂಲ. ಇದೇನು ಸುಖಾಸುಮ್ಮನೇ ಶೂನ್ಯದಿಂದ ಸೃಷ್ಟಿಯಾದ ಹೇಳಿಕೆಯಲ್ಲ; ಶಿವಕುಮಾರ್ ವೇಗ ಹಾಗೂ ಮುಖ್ಯಮಂತ್ರಿ ಗಾದಿಗೆ ಟವೆಲ್ ಹಾಕುವ ಭವಿಷ್ಯದ ನಡೆಯನ್ನು ಕಟ್ಟಿಹಾಕುವ ಯತ್ನದ ಭಾಗ.

ಕಿಡಿ ಹಚ್ಚಿದರೇ ಹರಿಪ್ರಸಾದ್?

ಅಧಿಕಾರ ಸಿಗದೇ ಪರಿತಪಿಸುತ್ತಿರುವ ಬಿ.ಕೆ. ಹರಿಪ್ರಸಾದ್, ಈಡಿಗ ಮತ್ತು ಅತಿ ಹಿಂದುಳಿದ ಜಾತಿಗಳ ಸಮಾವೇಶದ ಮೂಲಕ ತಮ್ಮ ರಾಜಕೀಯ ಭವಿಷ್ಯ ಕಟ್ಟಿಕೊಳ್ಳಲು ಮುಂದಾಗಿದ್ದಾರೆ. ಸಿದ್ದರಾಮಯ್ಯನವರ ವರ್ಚಸ್ಸು, ರಾಜಕೀಯ ಚಾತುರ್ಯ ಇಲ್ಲದೇ ಹರಿಪ್ರಸಾದ್, ಜಾತಿ ಅಂಬು ಹಿಡಿದು ಹೊರಟಿದ್ದಾರೆ. ತಾವು ಯಶಸ್ಸು ಪಡೆಯದೇ ಇದ್ದರೂ ಪರವಾಗಿಲ್ಲ; ಸಿದ್ದರಾಮಯ್ಯನವರ ಸುಖನಿದ್ರೆಗೆ ಭಂಗ ತರಬೇಕೆಂಬ ಒಂದಂಶದ ಕಾರ್ಯಕ್ರಮ ಹರಿಪ್ರಸಾದ್‌ರದ್ದಾಗಿದೆ.

ಸಿದ್ದರಾಮಯ್ಯನವರನ್ನು ವೈಯಕ್ತಿಕ ನೆಲೆಯಲ್ಲಿ ಟೀಕಿಸುವ ಮಟ್ಟಕ್ಕೆ ಹರಿಪ್ರಸಾದ್ ಇಳಿದಿದ್ದಾರೆ. ಇದಕ್ಕೆ ಅನೇಕ ನಾಯಕರು ಆಕ್ಷೇಪ ವ್ಯಕ್ತಪಡಿಸಿದ್ದರು. ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿ.ಕೆ.ಶಿವಕುಮಾರ್ ಮಾತ್ರ ಇದರ ಬಗ್ಗೆ ಚಕಾರ ಎತ್ತಲಿಲ್ಲ. ಸರ್ಕಾರದ ಪ್ರಮುಖ ಭಾಗೀದಾರರಾಗಿ, ಕೆಪಿಸಿಸಿ ಚುಕ್ಕಾಣಿಯನ್ನು ಹಿಡಿದಿರುವ ಶಿವಕುಮಾರ್ ಈ ರೀತಿಯ ಮೌನವಹಿಸಿರುವುದು ಸಹಜವಾಗಿಯೇ ಸಿದ್ದರಾಮಯ್ಯನವರ ಬಣವನ್ನು ಕೆರಳಿಸಿದೆ.

ಸರ್ಕಾರದ ಎಲ್ಲ ಇಲಾಖೆಗಳ ಮೇಲೆ ಕಣ್ಣಿಡುವ ಅಧಿಕಾರ ಮುಖ್ಯಮಂತ್ರಿಗೆ ಸಹಜವಾಗಿಯೇ ಇರುತ್ತದೆ. ತಮ್ಮ ಬಳಿ ಇರುವ ಬೆಂಗಳೂರು ಅಭಿವೃದ್ಧಿ ಮತ್ತು ಜಲಸಂಪನ್ಮೂಲ ಖಾತೆಯತ್ತ ಮುಖ್ಯಮಂತ್ರಿ ಕಣ್ಣೆತ್ತಿನೋಡಲು ಶಿವಕುಮಾರ್ ಅವಕಾಶ ನೀಡುತ್ತಿಲ್ಲ. ಬೆಂಗಳೂರು ಬ್ರ್ಯಾಂಡ್‌ಗೆ ಮತ್ತಷ್ಟು ರಂಗು ತರಲು ಹಾಗೂ ಹೂಡಿಕೆಯನ್ನು ಆಕರ್ಷಿಸಲು ಅನೇಕ ಯೋಜನೆಗಳನ್ನು ಶಿವಕುಮಾರ್ ರೂಪಿಸುತ್ತಿದ್ದಾರೆ. ಮುಖ್ಯಮಂತ್ರಿ ಹೊರಗಿಟ್ಟು, ಈ ಯೋಜನೆ ಹೆಣೆಯುತ್ತಿರುವುದು ಸಹಜವಾಗಿಯೇ ಸಿದ್ದರಾಮಯ್ಯನವರಲ್ಲಿ ಅಸಮಾಧಾನ ಮೂಡಿಸಿದೆ. ಈ ವೇಗಕ್ಕೆ ಕಡಿವಾಣ ಹಾಕದಿದ್ದರೆ, ಲೋಕಸಭೆ ಚುನಾವಣೆ ಮುಗಿದ ಬಳಿಕ ಶುರುವಾಗಬಹುದಾದ 'ಅಧಿಕಾರದ ಆಟ'ಕ್ಕೆ ತಡೆಹಾಕಲು ಸಾಧ್ಯವಿಲ್ಲ ಎಂದರಿತಿರುವ ಸಿದ್ದರಾಮಯ್ಯ ಬಣ ಈಗಿನಿಂದ ಚುರುಕುಗೊಂಡಿದ್ದೇ ಮೂವರು ಡಿಸಿಎಂ ವಿವಾದದ ಕೇಂದ್ರ.

ಡಿಸಿಎಂ ಸೂತ್ರ ಹೊಸತೇನಲ್ಲ: ಸರ್ಕಾರ ರಚನೆಯ ಹೊತ್ತಿನಲ್ಲಿ ಮುಖ್ಯಮಂತ್ರಿ ಸ್ಥಾನ ಕೊಡದಿದ್ದರೆ ಸರ್ಕಾರದಿಂದ ಹೊರಗೆ ಉಳಿಯುವ ನಿರ್ಧಾರಕ್ಕೆ ಶಿವಕುಮಾರ್ ಬಂದಿದ್ದರು. ಆಗ ಮೂರು ಅಥವಾ ಐದು ಡಿಸಿಎಂ ಹುದ್ದೆ ಸೃಷ್ಟಿಸುವ ಚಿಂತನೆ ಅಂತಿಮ ರೂಪ ಪಡೆದಿತ್ತು. ಮೂರಾದರೆ ಪರಿಶಿಷ್ಟ ಜಾತಿ, ಲಿಂಗಾಯತ, ಒಕ್ಕಲಿಗರಿಗೆ, ಐದಾದರೆ ಮುಸ್ಲಿಂ ಮತ್ತು ವಾಲ್ಮೀಕಿ ಸಮುದಾಯಕ್ಕೆ ಅವಕಾಶ ನೀಡುವ ತೀರ್ಮಾನವಾಗಿತ್ತು. ಶಿವಕುಮಾರ್ ಬದಲಿಗೆ ಕೃಷ್ಣ ಬೈರೇಗೌಡರಿಗೆ ಡಿಸಿಎಂ ಪಟ್ಟ ಸಿಗಲಿತ್ತು. ಇದು ಬಹಿರಂಗವಾಗಿದ್ದೇ ತಡ ಶಿವಕುಮಾರ್, ಜಾಗೃತರಾದರು. ಒಬ್ಬರೇ ಡಿಸಿಎಂ ಇರಬೇಕೆಂದು ಪಟ್ಟು ಹಾಕಿ ಗೆದ್ದರು.

ಮುಖ್ಯಮಂತ್ರಿ ಹುದ್ದೆಗೆ ಸಮನಾದ ಗೌರವ–ಅಧಿಕಾರ ಬೇಕೆಂಬುದು ಶಿವಕುಮಾರ್ ಅಪೇಕ್ಷೆ ಮತ್ತು ನಡೆ. ಅವರನ್ನು ಕಟ್ಟಿಹಾಕಬೇಕೆಂಬ ತವಕದಲ್ಲಿರುವ ಅನೇಕ ನಾಯಕರು ಈಗ ಒಗ್ಗೂಡಿದಂತಿದ್ದಾರೆ. ಮೂವರು ಉಪ ಮುಖ್ಯಮಂತ್ರಿ ಸೃಷ್ಟಿಯ ಬಗ್ಗೆ ಮೊದಲು ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ಯಾರು ಹೇಳಿದ್ದರೋ ಅವರನ್ನೇ ಕೇಳಿ ಎಂದು ಸಿಡುಕಿದ್ದರು; ಮಾರನೇ ದಿನ, ಈಗಾಗಲೇ ಒಬ್ಬರು ಡಿಸಿಎಂ ಇದ್ದಾರೆ. ಹೈಕಮಾಂಡ್‌ಗೆ ಪತ್ರ ಬರೆಯುವುದಾಗಿ ರಾಜಣ್ಣ ಹೇಳಿದ್ದಾರೆ. ಹೈಕಮಾಂಡ್ ಒಪ್ಪಿದರೆ, ಆ ತೀರ್ಮಾನಕ್ಕೆ ಬದ್ಧ' ಎಂದು ಹೇಳಿಕೆ ನೀಡಿದ್ದರು. ಬಳಿಕ, ಅನೇಕ ಸಚಿವರು, ಶಾಸಕರು ರಾಜಣ್ಣ ಹೇಳಿಕೆಗೆ ಬೆಂಬಲ ವ್ಯಕ್ತಪಡಿಸಿದ್ದರು.

ಮೂವರು ಡಿಸಿಎಂ ಸೃಷ್ಟಿಯ ಪ್ರಶ್ನೆಗೆ ಶಿವಕುಮಾರ್ ಸಿಡಿಮಿಡಿಯಾಗಿದ್ದರು. ಅವರ ಷಡ್ಡಕ(ಪತ್ನಿಯ ತಂಗಿಯ ಗಂಡ) ಹಾಗೂ ಕುಣಿಗಲ್ ಶಾಸಕ ಎಚ್.ಡಿ. ರಂಗನಾಥ್ ಹಾಗೂ ಮಾಗಡಿ ಶಾಸಕ ಎಚ್.ಸಿ. ಬಾಲಕೃಷ್ಣ ಅವರು ಶಿವಕುಮಾರ್ ಪರ ನಿಂತಿದ್ದಾರೆ. ಬಣ ರಾಜಕೀಯ ಬಿರುಸುಗೊಳ್ಳುತ್ತಿದ್ದು, ಬೀದಿ ಜಗಳವನ್ನು ರಂಗೇರಿಸುವ ಲಕ್ಷಣ ಕಾಣಿಸುತ್ತಿದೆ.

ಸುದ್ದಿ 2 ನಿಮಿಷ

ಅಸ್ಪೃಶ್ಯತೆ: ಅಂಗನವಾಡಿಗೆ ಮಕ್ಕಳ ಕಳುಹಿಸದ ಪಾಲಕರು

ಖಟಕಚಿಂಚೋಳಿ(ಬೀದರ್ ಜಿಲ್ಲೆ): ಭಾಲ್ಕಿ ತಾಲ್ಲೂಕಿನ ಬ್ಯಾಲಹಳ್ಳಿ(-ಡಬ್ಲ್ಯು) ಗ್ರಾಮದ ಅಂಗನವಾಡಿ ಕೇಂದ್ರಕ್ಕೆ ಪರಿಶಿಷ್ಟ ಸಮುದಾಯದ ಅಂಬಿಕಾ ಕಾರ್ಯಕರ್ತೆಯಾಗಿ ನೇಮಕಗೊಂಡಿರುವುದರಿಂದ ಹಲವು ಪೋಷಕರು ತಮ್ಮ ಮಕ್ಕಳನ್ನು ಅಂಗನವಾಡಿಗೆ ಕಳುಹಿಸುತ್ತಿಲ್ಲ ಎಂಬ ಆರೋಪ ಕೇಳಿಬಂದಿದೆ.

'ತಾಲ್ಲೂಕು ಕೇಂದ್ರದಿಂದ 13 ಕಿ.ಮೀ ದೂರದಲ್ಲಿರುವ ಗ್ರಾಮದ ಅಂಗನವಾಡಿ ಕೇಂದ್ರಕ್ಕೆ ಸ್ವಂತ ಕಟ್ಟಡ ಇಲ್ಲ. ಕಳೆದ ವರ್ಷ ನಾನು ಕಾರ್ಯಕರ್ತೆಯಾಗಿ ನೇಮಕಗೊಂಡಿದ್ದೇನೆ. ಸಹಾಯಕಿ ಇಲ್ಲದೇ ಇರುವುದರಿಂದ ನಾನೇ ಅಡುಗೆಯನ್ನೂ ತಯಾರಿಸುವ ಕೆಲಸ ಮಾಡುತ್ತಿದ್ದೇನೆ. ಗ್ರಾಮದ ಮನೆ–ಮನೆಗೆ ತೆರಳಿ ಮಕ್ಕಳನ್ನು ಕಳುಹಿಸಿಕೊಡುವಂತೆ ಮನವಿ ಮಾಡಿದ್ದೇನೆ. ಆದರೂ ಹಲವು ಪೋಷಕರು ತಮ್ಮ ಮಕ್ಕಳನ್ನು ಕಳುಹಿಸುತ್ತಿಲ್ಲ ಎಂದು ಅಂಗನವಾಡಿ ಕಾರ್ಯಕರ್ತೆ ಅಂಬಿಕಾ ಬೇಸರ ವ್ಯಕ್ತಪಡಿಸಿದರು.

ದಾಖಲಾತಿಯಲ್ಲಿ 36 ವಿದ್ಯಾರ್ಥಿಗಳಿದ್ದಾರೆ. ಆದರೆ, ಸದ್ಯ ಐದಾರು ಮಕ್ಕಳಷ್ಟೇ ಅಂಗನವಾಡಿಗೆ ಬರುತ್ತಿದ್ದಾರೆ.

'ಬ್ಯಾಲಹಳ್ಳಿ(ಡಬ್ಲ್ಯು) ಅಂಗನವಾಡಿ ಕೇಂದ್ರಕ್ಕೆ ಈ ಹಿಂದೆಯೇ ಭೇಟಿ ನೀಡಿ ಪಾಲಕರಿಗೆ ತಿಳಿವಳಿಕೆ ನೀಡಲಾಗಿತ್ತು. ಆದರೂ, ಮಕ್ಕಳನ್ನು ಕಳುಹಿಸದಿರುವುದು ಬೇಸರದ ಸಂಗತಿ. ಎರಡು ದಿನಗಳಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಮುಖಂಡರ ಜೊತೆಗೆ ಅಂಗನವಾಡಿಗೆ ಭೇಟಿ ನೀಡಿ ಸಮಸ್ಯೆ ಬಗೆಹರಿಸಲಾಗುವುದು' ಎಂದು ಭಾಲ್ಕಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶ್ರೀನಿವಾಸ ಬಾಳುವಾಲೆ 'ಪ್ರಜಾವಾಣಿ'ಗೆ ತಿಳಿಸಿದರು.

6.40 ಲಕ್ಷ ಸ್ವಯಂಸೇವಕರಿಗೆ 'ಲರ್ನಿಂಗ್ ಆ್ಯಪ್'

ಬೆಂಗಳೂರು: ರಾಜ್ಯದ ವಿಶ್ವವಿದ್ಯಾಲಯಗಳು, ನಿರ್ದೇಶನಾಲಯಗಳಲ್ಲಿ 'ಲರ್ನಿಂಗ್ ಆ್ಯಪ್' ಮೂಲಕ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ ನೀಡಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಎನ್‌ಎಸ್‌ಎಸ್ ಕೋಶ ಮತ್ತು ಡಾ.ರಾಜ್‌ಕುಮಾರ್ ಅಕಾಡೆಮಿ ಮಧ್ಯೆ ಗುರುವಾರ ಒಪ್ಪಂದ ಮಾಡಿಕೊಳ್ಳಲಾಯಿತು.

ಒಪ್ಪಂದದ ನಂತರ ಮಾತನಾಡಿದ ಸಚಿವ ಬಿ.ನಾಗೇಂದ್ರ, ರಾಷ್ಟ್ರೀಯ ಸೇವಾ ಯೋಜನೆ ಅಳವಡಿಸಿಕೊಂಡಿರುವ ರಾಜ್ಯದ 65 ವಿಶ್ವವಿದ್ಯಾಲಯಗಳು ಹಾಗೂ ನಾಲ್ಕು ನಿರ್ದೇಶನಾಲಯಗಳ ಸುಮಾರು 6.40 ಲಕ್ಷ ಸ್ವಯಂ ಸೇವಕರು ಸ್ಪರ್ಧಾ ಪರೀಕ್ಷೆಗಳಿಗೆ ಸಿದ್ಧತೆ ನಡೆಸಲು ಸಹಾಯವಾಗಲಿದೆ ಎಂದರು.

ಡಾ.ರಾಜ್‌ಕುಮಾರ್ ಅಕಾಡೆಮಿ ಮುಖ್ಯಸ್ಥ ರಾಘವೇಂದ್ರ ರಾಜ್‌ಕುಮಾರ್ ಮತ್ತು ಗುರು ರಾಜ್‌ಕುಮಾರ್ ಮಾತನಾಡಿ, 'ನಮ್ಮ ಕುಟುಂಬ ಅಕಾಡೆಮಿ ಮೂಲಕ ಬಡ ಮಕ್ಕಳು, ಪ್ರತಿಭಾವಂತರ ವಿದ್ಯಾವಿಕಾಸಕ್ಕೆ ಸಹಕಾರ ನೀಡುತ್ತಿದೆ. ಆನ್‌ಲೈನ್ ಮೂಲಕ ಸ್ಪರ್ಧಾ ಪರೀಕ್ಷೆಗಳಿಗೆ ತರಬೇತಿ ನೀಡಲು ಲರ್ನಿಂಗ್ ಆ್ಯಪ್ ಸಿದ್ಧಪಡಿಸಲಾಗಿದೆ' ಎಂದರು.

ಶತದಿನ: 62 ಕೋಟಿ ಮಹಿಳೆಯರ ಪ್ರಯಾಣ

• ಸಿದ್ದು ಆರ್.ಜಿ.ಹಳ್ಳಿ

ಹಾವೇರಿ: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ 'ಶಕ್ತಿ ಯೋಜನೆ' ನೂರು ದಿನ ಪೂರೈಸಿದ್ದು, ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಬರೋಬ್ಬರಿ 62 ಕೋಟಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಿದ್ದಾರೆ.

ಜೂನ್ 11ರಿಂದ ಸೆಪ್ಟೆಂಬರ್ 18ರವರೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಕೆ.ಎಸ್.ಆರ್.ಟಿ.ಸಿ), ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿ.ಎಂ.ಟಿ.ಸಿ) ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಿದ ಮಹಿಳಾ ಪ್ರಯಾಣಿಕರ ಒಟ್ಟು ಟಿಕೆಟ್ ಮೌಲ್ಯ ₹1,442 ಕೋಟಿ.

ಜೂನ್‌ನಲ್ಲಿ 10.54 ಕೋಟಿ ಮಹಿಳಾ ಪ್ರಯಾಣಿಕರಿಂದ ₹248 ಕೋಟಿ, ಜುಲೈನಲ್ಲಿ 19.63 ಕೋಟಿ ಮಹಿಳಾ ಪ್ರಯಾಣಿಕರಿಂದ ₹453 ಕೋಟಿ ಮತ್ತು ಆಗಸ್ಟ್‌ನಲ್ಲಿ ₹20.03 ಕೋಟಿ ಮಹಿಳಾ ಪ್ರಯಾಣಿಕರಿಂದ ₹459 ಕೋಟಿ ಟಿಕೆಟ್ ಮೌಲ್ಯವನ್ನು ಅಂದಾಜಿಸಲಾಗಿದೆ.

ಪ್ರತಿದಿನ ₹73 ಲಕ್ಷ ಆದಾಯ:

'ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಹಾವೇರಿ ವಿಭಾಗದಲ್ಲಿ ಶಕ್ತಿ ಯೋಜನೆಗೂ ಮುನ್ನ ಪ್ರತಿ ದಿನ ಸರಾಸರಿ ₹55 ಲಕ್ಷ ಬಂದರೆ, ಯೋಜನೆ ಜಾರಿಯಾದ ಬಳಿಕ ಸರಾಸರಿ ₹73 ಲಕ್ಷ ಆದಾಯ ಬರುತ್ತಿದೆ. ಸಮರ್ಪಕ ಸಾರಿಗೆಗಾಗಿ 13 ಅಂತರರಾಜ್ಯ ಬಸ್ ಮತ್ತು 24 ವೇಗದೂತ ಬಸ್‌ಗಳನ್ನು ಮರುಹೊಂದಾಣಿಕೆ ಮಾಡಿ 172 ಸರತಿಗಳನ್ನು ಪ್ರಯಾಣಿಕರ ಬೇಡಿಕೆಗೆ ತಕ್ಕಂತೆ ಪರಿಷ್ಕರಿಸಿ, ಅನುಕೂಲ ಕಲ್ಪಿಸಿದ್ದೇವೆ' ಎಂದು ಹಾವೇರಿ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಶಶಿಧರ ವಿ.ಎಂ 'ಪ್ರಜಾವಾಣಿ'ಗೆ ತಿಳಿಸಿದರು.

ಹಾವೇರಿ ವಿಭಾಗದ ಸಾರಿಗೆ ಸಂಸ್ಥೆ ಬಸ್‌ನಲ್ಲಿ ಪ್ರಯಾಣಿಸಿದ ಮಹಿಳೆಯರು – ಪ್ರಜಾವಾಣಿ ಚಿತ್ರ: ಮಾಲತೇಶ ಇಚ್ಚಂಗಿ

> **ದುಡಿಮೆಗಾಗಿ ನಿತ್ಯ ಬಸ್‌ಗಳಲ್ಲಿ ಸಂಚರಿಸುವ ಕಾರ್ಮಿಕ ಮಹಿಳೆಯರಿಗೆ ಉಚಿತ ಪ್ರಯಾಣದ ಸೌಲಭ್ಯದಿಂದ ಅನುಕೂಲವಾಗಿದೆ. ಮಹಿಳಾ ಸಬಲೀಕರಣಕ್ಕೆ ಈ ಯೋಜನೆ 'ಶಕ್ತಿ' ತುಂಬಿದೆ**
>
> **ನೀಲಾ ಮಠಪತಿ,** ಹಾವೇರಿ

₹384 ಕೋಟಿ ಬಾಕಿ: 'ಶಕ್ತಿ ಯೋಜನೆಯಡಿ ಜೂನ್ 23ರಿಂದ ಆಗಸ್ಟ್ 23ರವರೆಗೆ ನಾಲ್ಕು ಸಾರಿಗೆ ನಿಗಮಗಳಿಂದ ರಾಜ್ಯ ಸರ್ಕಾರಕ್ಕೆ ₹1,168 ಕೋಟಿ ಮರುಪಾವತಿಗೆ ಪ್ರಸ್ತಾವ ಸಲ್ಲಿಸಲಾಗಿದೆ. ಈವರೆಗೆ ₹784 ಕೋಟಿ ಬಿಡುಗಡೆಯಾಗಿದ್ದು, ಬಾಕಿ ₹384 ಕೋಟಿ ಬರಬೇಕಿದೆ' ಎಂದು ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ನಿಗಮವಾರು ಮಹಿಳಾ ಪ್ರಯಾಣಿಕರು ಮತ್ತು ಟಿಕೆಟ್ ಮೌಲ್ಯ (ಜೂನ್ 11ರಿಂದ ಸೆಪ್ಟೆಂಬರ್ 18ರವರೆಗೆ)

ನಿಗಮ	ಮಹಿಳಾ ಪ್ರಯಾಣಿಕರು ಕೋಟಿಗಳಲ್ಲಿ	ಟಿಕೆಟ್ ಮೌಲ್ಯ ₹ಕೋಟಿಗಳಲ್ಲಿ
ಕೆ.ಎಸ್.ಆರ್.ಟಿ.ಸಿ	18.47	₹536
ಬಿ.ಎಂ.ಟಿ.ಸಿ	20.53	₹261
ವಾಯವ್ಯ ಕರ್ನಾಟಕ ಸಾರಿಗೆ	14.44	₹365
ಕಲ್ಯಾಣ ಕರ್ನಾಟಕ ಸಾರಿಗೆ	8.53	₹279

ಶಕ್ತಿ ಯೋಜನೆ: ಅನುದಾನದ ವಿವರ (ಜೂನ್ 23ರಿಂದ ಆಗಸ್ಟ್ 23ರವರೆಗೆ– ₹ ಕೋಟಿಗಳಲ್ಲಿ)

ನಿಗಮ	ಸರ್ಕಾರಕ್ಕೆ ಬೇಡಿಕೆ ಮೊತ್ತ	ಬಿಡುಗೊಳಿಸಿದ ಮೊತ್ತ	ಒಟ್ಟಾರೆ ಕೊರತೆ
ಕೆ.ಎಸ್.ಆರ್.ಟಿ.ಸಿ	442	294	148
ಬಿ.ಎಂ.ಟಿ.ಸಿ	211	140	71
ವಾಯವ್ಯ ಕರ್ನಾಟಕ ಸಾರಿಗೆ	292	201	91
ಕಲ್ಯಾಣ ಕರ್ನಾಟಕ ಸಾರಿಗೆ	223	149	74
ಒಟ್ಟು	1,168	784	384

ಬವಣೆಯೇ ಪ್ರೇರಕ ಶಕ್ತಿ: ಮುಖ್ಯಮಂತ್ರಿ

100 ದಿನಗಳು ತುಂಬಿದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಎಕ್ಸ್' ಮೂಲಕ ಹರ್ಷ ವ್ಯಕ್ತಪಡಿಸಿದ್ದಾರೆ. 'ಶಾಲೆಗೆ ಹೋಗುವ ಪ್ರತಿ ಹೆಣ್ಣು ಮಗಳು, ಕುಟುಂಬದ ಹೊಣೆಯನ್ನು ತನ್ನ ಹೆಗಲ ಮೇಲೆ ಹೊತ್ತು, ನಿತ್ಯದ ದುಡಿಮೆಗೆ ತೆರಳುವ ನಾಡಿನ ಅಕ್ಕ– ತಂಗಿಯರು, ವೈದ್ಯಕೀಯ ಚಿಕಿತ್ಸೆಗಾಗಿ ಪ್ರಯಾಣ ಬೆಳೆಸುವ ಬಡ ತಾಯಂದಿರ ಬದುಕಿನ ಬವಣೆ ನಮ್ಮ ಶಕ್ತಿ ಯೋಜನೆಯ ಪ್ರೇರಕ ಶಕ್ತಿ' ಎಂದು ಅವರು ಹೇಳಿದ್ದಾರೆ. 'ಶಕ್ತಿ ಯೋಜನೆ ಅಸಂಖ್ಯ ತಾಯಂದಿರಲ್ಲಿ ನೆಮ್ಮದಿಯ ನಿಟ್ಟುಸಿರಿಗೆ ಎಂಬುದು ಖುಷಿಯ ಸಂಗತಿ' ಎಂದೂ ಸಿದ್ದರಾಮಯ್ಯ ಹೇಳಿದ್ದಾರೆ.

ಸಮಸ್ಯೆಗಳೆಲ್ಲ ನೀಗಿವೆ: ರಾಮಲಿಂಗಾರೆಡ್ಡಿ

ಬೆಂಗಳೂರು: 'ಈ ಯೋಜನೆ ಆರಂಭಿಸುವ ಸಂದರ್ಭದಲ್ಲಿ ಸಾಕಷ್ಟು ಸಮಸ್ಯೆಗಳು ಇದ್ದವು. ಮುಖ್ಯವಾಗಿ ಚಾಲಕರು ಮತ್ತು ನಿರ್ವಾಹಕರ ಕೊರತೆ ಇತ್ತು. ಬಸ್ಸುಗಳ ಸಂಖ್ಯೆಯೂ ಕಡಿಮೆ ಇತ್ತು. ಈ ಸಮಸ್ಯೆಗಳನ್ನು ನಿಭಾಯಿಸಿಕೊಳ್ಳುವ ಮೂಲಕ ಯೋಜನೆಯನ್ನೂ ಯಶಸ್ವಿಗೊಳಿಸಿದ್ದೇವೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ವಿವರಿಸಿದರು.

'ಸಿಬ್ಬಂದಿ ಕೊರತೆ ನೀಗಿಸಲು ನೇಮಕಾತಿ ಪ್ರಕ್ರಿಯೆ ಆರಂಭಿಸಲಾಗಿದೆ. 5,000 ಬಸ್ಸುಗಳನ್ನು ಖರೀದಿಸಲು ತೀರ್ಮಾನಿಸಲಾಗಿದೆ. ಇವೆಲ್ಲದರ ಮಧ್ಯೆಯೂ ನಮ್ಮ ಸಾರಿಗೆ ಸಂಸ್ಥೆಗಳಿಗೆ 25 ಪ್ರಶಸ್ತಿಗಳು ಬಂದಿವೆ. ವಿರೋಧ ಪಕ್ಷಗಳೂ ಈ ಯೋಜನೆ ಯಶಸ್ವಿ ಆಗುವುದಿಲ್ಲ ಎಂದು ಕಾಲೆಳೆದಿದ್ದವು. ಈ ಯೋಜನೆಗಳನ್ನು ಬಳಸಿಕೊಂಡು ಮಹಿಳೆಯರು ಹಲವು ಧಾರ್ಮಿಕ ಮತ್ತು ಪ್ರವಾಸಿ ಕ್ಷೇತ್ರಗಳಿಗೆ ಭೇಟಿ ನೀಡಿದ್ದಾರೆ. ಸ್ತ್ರೀಸಬಲೀಕರಣಕ್ಕೆ ಇದೊಂದು ಉತ್ತಮ ಯೋಜನೆ' ಎಂದು ಹೇಳಿದರು.

ರಾಜಣ್ಣ ವಿರುದ್ಧ ದೂರು

ನವದೆಹಲಿ: ಕರ್ನಾಟಕದಲ್ಲಿ ಮೂರು ಉಪ ಮುಖ್ಯಮಂತ್ರಿಗಳನ್ನು ನೇಮಿಸಬೇಕು ಎಂಬ ಹೇಳಿಕೆ ನೀಡಿರುವ ಸಹಕಾರ ಸಚಿವ ಕೆ.ಎನ್. ರಾಜಣ್ಣ ವಿರುದ್ಧ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕಾಂಗ್ರೆಸ್ ಹೈಕಮಾಂಡ್‌ಗೆ ದೂರು ನೀಡಿದ್ದಾರೆ.

ನವದೆಹಲಿ ಭೇಟಿಯ ಸಂದರ್ಭದಲ್ಲಿ ಶಿವಕುಮಾರ್ ಅವರು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರಿಗೆ ದೂರು ನೀಡಿ, 'ಇಂತಹ ಹೇಳಿಕೆಗಳಿಂದ ಪಕ್ಷದಲ್ಲಿ ಗೊಂದಲ ಸೃಷ್ಟಿಯಾಗಿದೆ. ಮುಂದಿನ ದಿನಗಳಲ್ಲಿ ಇಂತಹ ಹೇಳಿಕೆ ನೀಡದಂತೆ ತಾಕೀತು ಮಾಡಬೇಕು' ಎಂದು ಒತ್ತಾಯಿಸಿದ್ದಾರೆ.

'ಮುಖ್ಯಮಂತ್ರಿ ಅವರ ಹೆಸರು ಉಲ್ಲೇಖಿಸದೆಯೇ ಹೇಳಿಕೆ ನೀಡಿರುವ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರಿಗೆ ನೋಟಿಸ್ ನೀಡಲಾಗಿದೆ. ಅದೇ ರೀತಿ, ರಾಜಣ್ಣ ಅವರಿಗೂ ನೋಟಿಸ್ ನೀಡಬೇಕು' ಎಂಬುದಾಗಿ ಆಗ್ರಹಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

'3 ಸಿಎಂ, 15 ಡಿಸಿಎಂ ಮಾಡಿ'

ಒಂದನೇ ಪುಟದಿಂದ

'10 ಜನರನ್ನು ಡಿಸಿಎಂ ಮಾಡಿದರೆ ಏನಾದರೂ ಬದಲಾಗುತ್ತದೆಯೇ? ಡಿಸಿಎಂ ಹುದ್ದೆಗಾಗಿ ಬಡಿದಾಡುವ ಇವರು ಪಕ್ಷದ ಕಾರ್ಯಕರ್ತರಿಗೆ ಏನು ಕೊಟ್ಟಿದ್ದಾರೆ? ನಿಗಮ, ಮಂಡಳಿಗಳು ಇನ್ನೂ ಹಂಚಿಕೆ ಆಗಿಲ್ಲ. ಕಾರ್ಯಕರ್ತರಿಗೆ ಸೂಕ್ತ ಸ್ಥಾನಮಾನ ನೀಡುವ ಕುರಿತು ಯಾವ ಸಚಿವರೂ ಮಾತನಾಡುತ್ತಿಲ್ಲ. ಸಚಿವರಾದವರು ಮಜಾ ಮಾಡಿಕೊಂಡು ಇದ್ದಾರೆ. ಯಾರನ್ನೋ ಮೆಚ್ಚಿಸಲು ಇಂತಹ ಹೇಳಿಕೆ ನೀಡುತ್ತಿದ್ದಾರೆ. ನನಗೂ ಸಚಿವನಾಗುವ ಆಸೆ ಇತ್ತು. ನಾನೂ ರಾಜಣ್ಣನಿಗಿಂತ ಹಿರಿಯ. ಆದರೆ, ಸಚಿವನಾಗಲಿಲ್ಲವೆಂದು ಕುಸ್ತಿ ಆಡಲೇ' ಎಂದು ಪ್ರಶ್ನಿಸಿದರು.

ರಾಜಣ್ಣ ಸೇರಿದಂತೆ ಯಾರೇ ಆಗಲಿ ಏನೇ ಬೇಡಿಕೆ ಇದ್ದರೂ, ನಾಲ್ಕು ಗೋಡೆ ಮಧ್ಯೆ ಹೇಳಲಿ. ಬೀದಿಯಲ್ಲಿ ಬಂದು ಹೇಳಿಕೆ ಕೊಟ್ಟು ಗೊಂದಲ ಸೃಷ್ಟಿ ಮಾಡುವುದು ಬೇಡ ಎಂದರು.

ಮಂಜಮ್ಮ ಜೋಗತಿ ಸೇರಿ ಐವರಿಗೆ ಚುಂಚಶ್ರೀ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮಂಜಮ್ಮ ಜೋಗತಿ

ಪ್ರೊ.ಜಯ ಪ್ರಕಾಶಗೌಡ



ಡಿ.ಮಾದೇಗೌಡ



ಎನ್.ಎಸ್. ರಾಮೇಗೌಡ



ಹೆಚ್.ಎಂ.ಶಿವಣ್ಣ

ನಾಗಮಂಗಲ: ನಾಡಿನ ವಿವಿಧ ಕ್ಷೇತ್ರಗಳ ಐವರು ಸಾಧಕರಿಗೆ ಚುಂಚಶ್ರೀ ಪ್ರಶಸ್ತಿ ಪ್ರಕಟಿಸಲಾಗಿದೆ.

ಜಾನಪದ ವಿಭಾಗದಲ್ಲಿ ಮಂಜಮ್ಮ ಜೋಗತಿ, ಸಮಾಜ ಸೇವೆಗಾಗಿ ಡಿ.ಮಾದೇಗೌಡ, ಶೈಕ್ಷಣಿಕ ಕ್ಷೇತ್ರ ಸೇವೆಗಾಗಿ ಎನ್.ಎಸ್. ರಾಮೇಗೌಡ, ಸಾಹಿತ್ಯ ಕ್ಷೇತ್ರದಲ್ಲಿ ಪ್ರೊ. ಜಯಪ್ರಕಾಶಗೌಡ ಮತ್ತು ಪರಿಸರ ಕ್ಷೇತ್ರದಲ್ಲಿ ಎಚ್.ಎಮ್.ಶಿವಣ್ಣ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಆದಿಚುಂಚನಗಿರಿ ಮಠದ ಪ್ರಧಾನ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ ತಿಳಿಸಿದ್ದಾರೆ.

ಆದಿಚುಂಚನಗಿರಿ ಮಠದಲ್ಲಿ 44ನೇ ರಾಜ್ಯಮಟ್ಟದ ಕಾಲಭೈರವೇಶ್ವರ ಜಾನಪದ ಕಲಾಮೇಳ ಮತ್ತು ಬಾಲಗಂಗಾಧರ ಸ್ವಾಮೀಜಿ ಸಂಸ್ಮರಣೋತ್ಸವ ಸಂದರ್ಭ ಸೆ.24ರಂದು ಬೆಳಗ್ಗೆ 9.30 ಗಂಟೆಗೆ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶೌರ್ಯ ಜಾಗರಣ ರಥಯಾತ್ರೆ 25ರಿಂದ

ಪ್ರಜಾವಾಣಿ ವಾರ್ತೆ

ಮಂಗಳೂರು: 'ವಿಶ್ವ ಹಿಂದೂ ಪರಿಷತ್‌ಗೆ 2024ಕ್ಕೆ 60 ವರ್ಷ ತುಂಬಲಿರುವ ಪ್ರಯುಕ್ತ ಬಜರಂಗ ದಳವು ಇದೇ 25ರಿಂದ ರಾಜ್ಯದಾದ್ಯಂತ ಶೌರ್ಯ ಜಾಗರಣ ರಥಯಾತ್ರೆ ಹಮ್ಮಿಕೊಳ್ಳಲಿದೆ' ಎಂದು ವಿಎಚ್‌ಪಿ ಪ್ರಾಂತ ಸಹಕಾರ್ಯದರ್ಶಿ ಶರಣ್ ಪಂಪ್‌ವೆಲ್ ತಿಳಿಸಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ಚಿತ್ರದುರ್ಗದಲ್ಲಿ ಇದೇ 25ರಂದು ರಥಯಾತ್ರೆಗೆ ಚಾಲನೆ ನೀಡಲಾಗುವುದು. ದಾವಣಗೆರೆ, ಶಿವಮೊಗ್ಗ, ಸಾಗರ, ಶೃಂಗೇರಿ, ಬಾಳೆಹೊನ್ನೂರು, ಚಿಕ್ಕಮಗಳೂರು, ಹಾಸನ, ತುಮಕೂರು, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಮಂಡ್ಯ, ಮೈಸೂರು, ಕೊಡಗು, ಸುಳ್ಯ, ಪುತ್ತೂರು, ಮಂಗಳೂರು ಮೂಲಕ ಸಾಗುವ ಈ ಯಾತ್ರೆಯು ಉಡುಪಿಯಲ್ಲಿ ಅ.10ರಂದು ಸಮಾರೋಪಗೊಳ್ಳಲಿದೆ. ಆ ಪ್ರಯುಕ್ತ ಹಿಂದೂ ಸಮಾಜೋತ್ಸವವನ್ನು ಏರ್ಪಡಿಸಲಿದ್ದು, 25 ಸಾವಿರ ಮಂದಿ ಭಾಗವಹಿಸುವ ನಿರೀಕ್ಷೆ ಇದೆ' ಎಂದರು.

'ರಾಜ್ಯದಲ್ಲಿ ಬಜರಂಗ ದಳದ 2000 ಶಾಖೆಗಳಿವೆ. 2024ರ ವೇಳೆಗೆ 5 ಸಾವಿರಕ್ಕೆ ಹೆಚ್ಚಿಸುವ ಗುರಿಯನ್ನು ಹೊಂದಿದ್ದೇವೆ. ಪಾಶ್ಚಾತ್ಯ ಸಂಸ್ಕೃತಿಯಿಂದ, ದುಶ್ಚಟಗಳಿಂದ ಮುಕ್ತಿ ಪಡೆದು ಸ್ವಾವಲಂಬಿ ಬದುಕು ಕಟ್ಟಿಕೊಳ್ಳುವಂತೆ ಯುವಪೀಳಿಗೆಯನ್ನು ಪ್ರೇರೇಪಿಸುವುದು ಈ ರಥಯಾತ್ರೆಯ ಉದ್ದೇಶ. ಲವ್ ಜಿಹಾದ್, ಮತಾಂತರ ಹಾಗೂ ಗೋಹತ್ಯೆ ತಡೆಯ ಬಗ್ಗೆಯೂ ಜಾಗೃತಿ ಮೂಡಿಸಲಿದ್ದೇವೆ' ಎಂದರು.

'2024ರಲ್ಲಿ ನಡೆಯುವ ಲೋಕಸಭಾ ಚುನಾವಣೆಗೂ ಈ ರಥಯಾತ್ರೆಗೂ ಸಂಬಂಧ ಇಲ್ಲ' ಎಂದು ಅವರು ಪ್ರತಿಕ್ರಿಯಿಸಿದರು.

ವಿಜಯ್ ಗೋಖಲೆ ಸಿಯುಕೆ ನೂತನ ಕುಲಾಧಿಪತಿ

ಕಲಬುರಗಿ: ಜಿಲ್ಲೆಯ ಕಡಗಂಚಿಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಾಧಿಪತಿಯನ್ನಾಗಿ ಮಾಜಿ ವಿದೇಶಾಂಗ ಕಾರ್ಯದರ್ಶಿ ವಿಜಯ್ ಗೋಖಲೆ ಅವರನ್ನು ನೇಮಕ ಮಾಡಿ ರಾಷ್ಟ್ರಪತಿ ಆದೇಶ ಹೊರಡಿಸಿದ್ದಾರೆ.

ಇದುವರೆಗೂ ಎನ್.ಆರ್. ಶೆಟ್ಟಿ ಅವರು ಕುಲಾಧಿಪತಿಯಾಗಿದ್ದರು. ಅವರ ಅವಧಿ ಮುಗಿದಿದ್ದರಿಂದ ವಿಜಯ್ ಗೋಖಲೆ ಅವರನ್ನು ನೇಮಕ ಮಾಡಲಾಗಿದೆ ಎಂದು ಸಿಯುಕೆ ಕುಲಸಚಿವ ಪ್ರೊ. ಆರ್.ಆರ್. ಬಿರಾದಾರ ತಿಳಿಸಿದ್ದಾರೆ.

ವಿಶ್ವವಿದ್ಯಾಲಯ ಆರಂಭವಾದ ಬಳಿಕ ಗೋಖಲೆ ಅವರು ಮೂರನೇ ಕುಲಾಧಿಪತಿಯಾಗಲಿದ್ದಾರೆ. ಯು.ಆರ್. ಅನಂತಮೂರ್ತಿ ಅವರು ಮೊದಲ ಕುಲಾಧಿಪತಿಯಾಗಿದ್ದರು.

ನೀರಿನ ತೊಟ್ಟಿ ಗೋಡೆ ಕುಸಿದು ವಿದ್ಯಾರ್ಥಿ ಸಾವು

ರಾಮನಗರ: ತಾಲ್ಲೂಕಿನ ಎಚ್. ಗೊಲ್ಲಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಗುರುವಾರ ಬೆಳಿಗ್ಗೆ ನೀರಿನ ತೊಟ್ಟಿ ಗೋಡೆ ಕುಸಿದು ವಿದ್ಯಾರ್ಥಿಯೊಬ್ಬ ಮೃತಪಟ್ಟಿದ್ದು, ಮತ್ತೊಬ್ಬ ವಿದ್ಯಾರ್ಥಿ ಕಾಲಿಗೆ ತೀವ್ರ ಗಾಯವಾಗಿದೆ.

ಆರನೇ ತರಗತಿ ಓದುತ್ತಿದ್ದ ಅದೇ ಗ್ರಾಮದ ಕೆ.ಕೌಶಿಕ್‌ಗೌಡ (12) ಮೃತ ವಿದ್ಯಾರ್ಥಿ. ಬೆಳಿಗ್ಗೆ 8.30ರ ಸುಮಾರಿಗೆ ಕೌಶಿಕ್ ಹಾಗೂ 7ನೇ ತರಗತಿಯ ಚರಣ್ ಉಪಾಹಾರ ಸೇವಿಸಿದ ಬಳಿಕ ಐದು ಅಡಿ ಎತ್ತರದ ನೀರಿನ ತೊಟ್ಟಿ ಬಳಿ ತಟ್ಟೆ ತೊಳೆಯುತ್ತಿದ್ದರು. ಶಿಥಿಲಗೊಂಡಿದ್ದ ತೊಟ್ಟಿಯ ಒಂದು ಭಾಗದ ಗೋಡೆಯು ವಿದ್ಯಾರ್ಥಿಗಳ ಮೇಲೆ ಉರುಳಿದೆ.

ನೀರಿನ ರಭಸದೊಂದಿಗೆ ಉರುಳಿದ ಗೋಡೆ ಅವಶೇಷಗಳಡಿ ಸಿಲುಕಿ ತೀವ್ರವಾಗಿ ಗಾಯಗೊಂಡಿದ್ದ ಕೌಶಿಕ್‌ನನ್ನು ಶಾಲೆ ಶಿಕ್ಷಕರು ಹಾಗೂ ಸಿಬ್ಬಂದಿ ಹೊರಗೆಳೆದು ಸಮೀಪದ ಆಸ್ಪತ್ರೆಗೆ ಸಾಗಿಸುವಾಗ ಸಾವನ್ನಪ್ಪಿದ್ದಾನೆ.

ಸಿಸಿಬಿ ಪೊಲೀಸರಿಂದ ₹ 2.76 ಕೋಟಿ ಜಪ್ತಿ

ಬೆಂಗಳೂರು: ಬಿಜೆಪಿ ಟಿಕೆಟ್ ಕೊಡಿಸುವ ಆಮಿಷವೊಡ್ಡಿ ₹ 5 ಕೋಟಿ ಪಡೆದು ವಂಚಿಸಿದ್ದ ಪ್ರಕರಣದ ತನಿಖೆ ನಡೆಸುತ್ತಿರುವ ಸಿಸಿಬಿ ಪೊಲೀಸರು, ಬಂಧಿತ ಆರೋಪಿಗಳಿಂದ ₹ 2.76 ಕೋಟಿ ಜಪ್ತಿ ಮಾಡಿದ್ದಾರೆ.

ಪ್ರಕರಣದ ಬಗ್ಗೆ ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಪೊಲೀಸ್ ಕಮಿಷನರ್ ಬಿ. ದಯಾನಂದ್, 'ಆರೋಪಿ ಚೈತ್ರಾ ಕುಂದಾಪುರ ಹಾಗೂ ಇತರರಿಂದ ₹ 2 ಕೋಟಿ (ನಗದು, ಕಾರು, ಬ್ಯಾಂಕ್ ಠೇವಣಿ, ಚಿನ್ನಾಭರಣ) ಜಪ್ತಿ ಮಾಡಲಾಗಿದೆ' ಎಂದರು.

'ವಿಜಯನಗರ ಜಿಲ್ಲೆ ಹೂವಿನ ಹಡಗಲಿ ತಾಲ್ಲೂಕಿನ ಹಿರೇಹಡಗಲಿ ಹಾಲಸ್ವಾಮಿ ಮಠದಲ್ಲಿದ್ದ ಅಭಿನವ ಹಾಲವೀರಪ್ಪ ಸ್ವಾಮೀಜಿಗೆ ಸೇರಿದ್ದ ₹ 56 ಲಕ್ಷ ಹಾಗೂ ಸ್ವಾಮೀಜಿಯ ಪರಿಚಯಸ್ಥರೊಬ್ಬರ ಬಳಿಯಿದ್ದ ₹ 20 ಲಕ್ಷವನ್ನು ಜಪ್ತಿ ಮಾಡಲಾಗಿದೆ' ಎಂದು ಹೇಳಿದರು.

'ಉದ್ಯಮಿ ಗೋವಿಂದ ಬಾಬು ಪೂಜಾರಿ ನೀಡಿದ್ದ ದೂರು ಆಧರಿಸಿ ತನಿಖೆ ನಡೆಸುತ್ತಿರುವ ಸಿಸಿಬಿ ಪೊಲೀಸರು, ಈಗಾಗಲೇ ಎಂಟು ಮಂದಿಯನ್ನು ಬಂಧಿಸಿದ್ದಾರೆ. ₹ 5 ಕೋಟಿ ಪೈಕಿ ₹ 2.76 ಕೋಟಿ ಜಪ್ತಿ ಮಾಡಿದ್ದಾರೆ. ಉಳಿದ ಹಣ ಎಲ್ಲಿದೆ? ಎಂಬುದನ್ನು ಪತ್ತೆ ಮಾಡುತ್ತಿದ್ದಾರೆ. ಸ್ವಾಮೀಜಿಯಿಂದ ಹಣ ಪಡೆದಿದ್ದ ಪ್ರಣವ್ ಪ್ರಸಾದ್, ತಿಪ್ಪೇಸ್ವಾಮಿ ಹಾಗೂ ಇತರೆ ಮೂವರಿಗೆ ವಿಚಾರಣೆಗಾಗಿ ನೋಟಿಸ್ ನೀಡಲಾಗಿತ್ತು. ಅವರೆಲ್ಲರೂ ವಿಚಾರಣೆಗೆ ಹಾಜರಾಗಿ ಹೇಳಿಕೆ ನೀಡಿದ್ದಾರೆ' ಎಂದು ತಿಳಿಸಿದರು.

ಮಂಜುಗೆ ಸಿಸಿಬಿ ಬುಲಾವ್

ಚಿಕ್ಕಮಗಳೂರು: ಉದ್ಯಮಿ ಗೋವಿಂದ ಬಾಬು ಪೂಜಾರಿಗೆ ಚೈತ್ರಾ ಕುಂದಾಪುರ ಮತ್ತು ತಂಡ ವಂಚನೆ ಮಾಡಿರುವ ಆರೋಪದ ಪ್ರಕರಣದಲ್ಲಿ ಬಜರಂಗದಳದ ಮುಖಂಡ ತುಡುಕೂರು ಮಂಜು ಅವರನ್ನು ಸಿಸಿಬಿ ಪೊಲೀಸರು ವಿಚಾರಣೆಗೆ ಕರೆದಿದ್ದಾರೆ. ಗೋವಿಂದ ಬಾಬು ಪೂಜಾರಿ ಮತ್ತು ತುಡಕೂರು ಮಂಜು ಸ್ನೇಹಿತರಾಗಿದ್ದು, ಮೇ ತಿಂಗಳಿನಲ್ಲಿ ಇಬ್ಬರು ಭೇಟಿಯಾಗಿ ಪ್ರಕರಣದ ಸಂಬಂಧ ಚರ್ಚೆ ನಡೆಸಿದ್ದರು. ಆರೋಪಿಗಳಾದ ರಮೇಶ್, ಧನರಾಜ್, ಚೆನ್ನಾ ನಾಯ್ಕ ಪತ್ತೆಗೆ ಸಹಾಯ ಮಾಡಿದ್ದರು ಎನ್ನಲಾಗಿದೆ.

ಪ್ರಧಾನಿ ಹೆಸರಿನಲ್ಲಿ ಹಣ ಪಡೆದಿದ್ದ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಟಿಕೆಟ್ ಕೊಡಿಸುವ ಆಮಿಷವೊಡ್ಡಿ ವಂಚಿಸಿದ್ದ ಪ್ರಕರಣದ ಆರೋಪಿಯಾಗಿರುವ ಅಭಿನವ ಹಾಲವೀರಪ್ಪ ಸ್ವಾಮೀಜಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಹೆಸರಿನಲ್ಲಿ ₹ 1.50 ಕೋಟಿ ಪಡೆದಿದ್ದ ಸಂಗತಿ ತನಿಖೆಯಿಂದ ಗೊತ್ತಾಗಿದೆ.

ವಿಜಯನಗರ ಜಿಲ್ಲೆ ಹೂವಿನಹಡಗಲಿ ತಾಲ್ಲೂಕಿನ ಹಿರೇಹಡಗಲಿ ಹಾಲಸ್ವಾಮಿ ಮಠದ ಹಾಲವೀರಪ್ಪ ಸ್ವಾಮೀಜಿ ಅವರನ್ನು ವಿಚಾರಣೆ ನಡೆಸಿದ್ದ ಸಿಸಿಬಿ ಪೊಲೀಸರು, ಸಾಕಷ್ಟು ಮಾಹಿತಿ ಕಲೆಹಾಕಿದ್ದಾರೆ. ಲಿಖಿತ ಹೇಳಿಕೆ ಪಡೆದು, ಬೆಂಗಳೂರು ಹಾಗೂ ಹಿರೇಹಡಗಲಿಯಲ್ಲಿ ಮಹಜರು ನಡೆಸುತ್ತಿದ್ದಾರೆ.

ಸಿಸಿಬಿ ಪೊಲೀಸರು ತನಿಖೆಯನ್ನು ಚುರುಕುಗೊಳಿಸಿದ್ದು, ಬಂಧಿತ ಆರೋಪಿಗಳನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಿ ಮಾಹಿತಿ ಕಲೆಹಾಕುತ್ತಿದ್ದಾರೆ.

ಪ್ರಭಾವಿ ಸ್ವಾಮೀಜಿ ಎಂದಿದ್ದ ಚೈತ್ರಾ: 'ದೂರುದಾರ ಗೋವಿಂದ ಬಾಬು ಪೂಜಾರಿಗೆ 2022ರ ಸೆಪ್ಟೆಂಬರ್‌ನಲ್ಲಿ ಕರೆ ಮಾಡಿದ್ದ ಚೈತ್ರಾ ಹಾಗೂ ರಮೇಶ್ ಅಲಿಯಾಸ್ ವಿಶ್ವನಾಥ್ ಜೀ, 'ಬೈಂದೂರಿನಿಂದ ಸ್ಪರ್ಧಿಸಲು ನಿಮಗೆ ಟಿಕೆಟ್ ನೀಡಲು ಬಿಜೆಪಿ ಕೇಂದ್ರದ ನಾಯಕರು ಒಪ್ಪಿದ್ದಾರೆ. ಕರ್ನಾಟಕದಲ್ಲಿ ಸೀಟು ಹಂಚಿಕೆ ಮಾಡಲು ಹೊಸಪೇಟೆಯ ಹಿರೇಹಡಗಲಿಯ ಅಭಿನವ ಹಾಲಶ್ರೀ ಸ್ವಾಮೀಜಿ ಅವರ ಶಿಫಾರಸು ಬೇಕು. ಪ್ರಭಾವಿಗಳಾಗಿರುವ ಅವರನ್ನು ಭೇಟಿಯಾಗಿ' ಎಂದಿದ್ದರು. ಇದನ್ನು ನಂಬಿದ್ದ ದೂರುದಾರ, ಸ್ವಾಮೀಜಿಯನ್ನು ಬೆಂಗಳೂರಿನ ವಿಜಯನಗರದಲ್ಲಿರುವ ಮನೆ ಹಾಗೂ ಹಿರೇಹಡಗಲಿ ಮಠದಲ್ಲಿ ಹಲವು ಬಾರಿ ಭೇಟಿಯಾಗಿದ್ದರು' ಎಂದು ಸಿಸಿಬಿ ಮೂಲಗಳು ಹೇಳಿವೆ.

ದೂರುದಾರರನ್ನು ಮಾತನಾಡಿಸಿದ್ದ ಸ್ವಾಮೀಜಿ, 'ಟಿಕೆಟ್ ಆಯ್ಕೆ ಸಮಿತಿಯಲ್ಲಿ ವಿಶ್ವನಾಥ್ ಜೀ ಅವರು ಹಿರಿಯರು. ಅವರೇ ನನಗೆ ಕರ್ನಾಟಕದ ಜವಾಬ್ದಾರಿ ಕೊಡಿಸಿದ್ದಾರೆ. ಪ್ರಧಾನ ಮಂತ್ರಿ ಮೋದಿ ಅವರ ಜೊತೆಗೂ ನಾನು ನಿಕಟ ಸಂಪರ್ಕ ಇಟ್ಟುಕೊಂಡಿದ್ದೇನೆ. ನಿಮಗೆ ಟಿಕೆಟ್ ಕೊಡಿಸುತ್ತೇನೆ. ಇದಕ್ಕಾಗಿ ₹ 1.50 ಕೋಟಿ ನೀಡಬೇಕು' ಎಂದಿದ್ದರು. ಸ್ವಾಮೀಜಿ ಹೇಳಿದ್ದ ಸುಳ್ಳನ್ನೇ ನಿಜವೆಂದು ನಂಬಿದ್ದ ದೂರುದಾರ ಹಣ ನೀಡಿದ್ದರು.'

'ವಿಶ್ವನಾಥ್ ಜೀ ತೀರಿಕೊಂಡಿರುವುದಾಗಿ ಚೈತ್ರಾ ಹಾಗೂ ಇತರರು, ನಾಟಕವಾಡಿದ್ದರು. ಅವರೆಲ್ಲರೂ ಸೇರಿ ತಮ್ಮನ್ನು ವಂಚಿಸುತ್ತಿರುವುದು ಗೋವಿಂದ ಬಾಬು ಅವರಿಗೆ ಗೊತ್ತಾಗಿತ್ತು. ಅವಾಗಲೇ, ತಮ್ಮ ಹಣ ವಾಪಸು ಪಡೆಯಲು ಪ್ರಯತ್ನಿಸಿದ್ದರು. ಸ್ವಾಮೀಜಿಯನ್ನು ಪುನಃ ಭೇಟಿಯಾಗಿದ್ದರು.'

'ವಿಶ್ವನಾಥ್ ಜೀ ಯಾರು ಎಂಬುದು ನನಗೆ ಗೊತ್ತಿಲ್ಲ. ನಾನು ಪಡೆದಿರುವ ₹ 1.50 ಕೋಟಿ ಹಣವನ್ನು ಒಂದು ತಿಂಗಳೊಳಗೆ ವಾಪಸು ನೀಡುತ್ತೇನೆ. ಈ ವಿಚಾರದಲ್ಲಿ ನನ್ನನ್ನು ಬಿಟ್ಟು ಬಿಡಿ' ಎಂದು ಸ್ವಾಮೀಜಿ ಕೇಳಿಕೊಂಡಿದ್ದರು. ಇದಾದ ನಂತರ ಸ್ವಾಮೀಜಿ ಸಹ ನಾಪತ್ತೆಯಾಗಿದ್ದರು. ಇದೀಗ ಸ್ವಾಮೀಜಿಯನ್ನು ಬಂಧಿಸಲಾಗಿದೆ. ಪ್ರಧಾನಿ ಹೆಸರು ಬಳಸಿರುವ ಬಗ್ಗೆ ತಪ್ಪೊಪ್ಪಿಕೊಂಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಬಜರಂಗದಳಕ್ಕೂ ಚೈತ್ರಾಗೂ ಸಂಬಂಧವಿಲ್ಲ'

ಮಂಗಳೂರು: 'ಬಿಜೆಪಿ ಟಿಕೆಟ್ ಕೊಡಿಸುವ ನೆಪದಲ್ಲಿ ಉದ್ಯಮಿ ಗೋವಿಂದ ಬಾಬು ಪೂಜಾರಿ ಅವರಿಗೆ ವಂಚಿಸಿದ ಪ್ರಕರಣದ ಆರೋಪಿ ಚೈತ್ರಾ ಕುಂದಾಪುರಗೂ ಬಜರಂಗ ದಳಕ್ಕೂ ಸಂಬಂಧವಿಲ್ಲ. ಆಕೆ ನಮ್ಮ ಸಂಘಟನೆಯ ಸದಸ್ಯೆ ಅಲ್ಲ' ಎಂದು ವಿಎಚ್‌ಪಿ ಪ್ರಾಂತ ಸಹಕಾರ್ಯದರ್ಶಿ ಶರಣ್ ಪಂಪ್‌ವೆಲ್ ತಿಳಿಸಿದರು.

'ಉತ್ತಮ ಭಾಷಣ ಮಾಡುತ್ತಿದ್ದರು. ಆ ಕಾರಣಕ್ಕೆ ಬಜರಂಗ ದಳದ ಕಾರ್ಯಕ್ರಮಗಳಿಗೆ ಆಹ್ವಾನಿಸಿದ್ದು ನಿಜ. ಅವರು ತಪ್ಪು ಮಾಡಿದ್ದರೆ ಅದಕ್ಕೆ ಶಿಕ್ಷೆ ಆಗಲಿ. ಈ ಪ್ರಕರಣದಲ್ಲಿ ಯಾರೇ ತಪ್ಪು ಮಾಡಿದ್ದರೂ ಅವರನ್ನು ಶಿಕ್ಷೆಗೆ ಒಳಪಡಿಸಬೇಕು' ಎಂದು ಇಲ್ಲಿ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

'ಈ ವಂಚನೆ ಪ್ರಕರಣದ ಬಗ್ಗೆ ಗುರುಪುರ ವಜ್ರದೇಹಿ ಮಠದ ರಾಜಶೇಖರಾನಂದ ಸ್ವಾಮೀಜಿ ಎರಡು ತಿಂಗಳ ಹಿಂದೆ ನನ್ನ ಗಮನಕ್ಕೆ ತಂದಿದ್ದು ನಿಜ. ನೀವು ತಪ್ಪು ಮಾಡಿಲ್ಲವಾದರೆ ತಲೆಕೆಡಿಸಿಕೊಳ್ಳಬೇಡಿ ಎಂದು ಧೈರ್ಯ ಹೇಳಿದ್ದೆ' ಎಂದರು.

ದಿನವಿಡೀ ಹಾಲಸ್ವಾಮಿ ವಿಚಾರಣೆ

ಹರಪನಹಳ್ಳಿ/ಹೂವಿನಹಡಗಲಿ (ವಿಜಯನಗರ ಜಿಲ್ಲೆ): ಬಿಜೆಪಿ ಟಿಕೆಟ್ ವಂಚನೆ ಪ್ರಕರಣದಲ್ಲಿ ಸಿಸಿಬಿ ಪೊಲೀಸರು ಬಂಧಿಸಿರುವ ಹಿರೇಹಡಗಲಿ ಹಾಲಸ್ವಾಮಿ ಮಠದ ಅಭಿನವ ಹಾಲವೀರಪ್ಪ ಸ್ವಾಮೀಜಿ ಅವರನ್ನು ಹರಪನಹಳ್ಳಿ ಸರ್ಕಾರಿ ಪ್ರವಾಸಿ ಮಂದಿರದ ಗಣ್ಯರ ಅತಿಥಿಗೃಹದಲ್ಲಿ ಗುರುವಾರ ಇಡೀ ದಿನ ವಿಚಾರಣೆಗೆ ಒಳಪಡಿಸಲಾಯಿತು.

ಬುಧವಾರ ರಾತ್ರಿ ಹಿರೇಹಡಗಲಿ ಮಠಕ್ಕೆ ಕರೆದೊಯ್ದು ಮಹಜರು ನಡೆಸಿದ ಬಳಿಕ ಮಧ್ಯರಾತ್ರಿ 12.30ಕ್ಕೆ ಹರಪನಹಳ್ಳಿಯ ಪ್ರವಾಸಿ ಮಂದಿರ ಮತ್ತು ಗಣ್ಯರ ಅತಿಥಿಗೃಹದ ತಲಾ ಎರಡು ಕೊಠಡಿಗಳನ್ನು ಸಿಸಿಬಿ ತಂಡ ಪಡೆದಿತ್ತು.

ತಡರಾತ್ರಿ ಊಟ ಮಾಡಿ, ನಸುಕಿನ 3.30ರವರೆಗೆ ಸ್ವಾಮೀಜಿಯ ವಿಚಾರಣೆ ನಡೆಯಿತು. ಕೆಲ ಹೊತ್ತು ವಿಶ್ರಾಂತಿ ಬಳಿಕ ಬೆಳಿಗ್ಗೆ 9ರಿಂದ ವಿಚಾರಣೆ ಮುಂದುವರೆಯಿತು. ಸಂಜೆ 4.30ಕ್ಕೆ ಪುನಃ ಹಿರೇಹಡಗಲಿಯತ್ತ ವಾಹನಗಳು ತೆರಳಿದಾಗ, ಹಾಲವೀರಪ್ಪ ಸ್ವಾಮೀಜಿ ಮುಖವನ್ನು ಶಾಲಿನಿಂದ ಮುಚ್ಚಿಕೊಂಡಿದ್ದರು.

'ಸಂಜೆಯವರೆಗೆ ಅತಿಥಿಗೃಹದಲ್ಲಿ ಸಿಬ್ಬಂದಿಗೆ ಒಳ ಪ್ರವೇಶಿಸಲು ಅವಕಾಶ ಇರಲಿಲ್ಲ. ನೀರು, ಚಹಾ, ಉಪಾಹಾರ, ಊಟದ ಪೊಟ್ಟಣಗಳನ್ನು ಕೊಠಡಿ ಹೊರಗಿನಿಂದಲೇ ಪಡೆಯುತ್ತಿದ್ದರು' ಎಂದು ಮೂಲಗಳು ತಿಳಿಸಿವೆ.

ವಹಿವಾಟು ಮಾಹಿತಿ ಸಂಗ್ರಹಣೆ: ಅಭಿನವ ಹಾಲವೀರಪ್ಪ ಸ್ವಾಮೀಜಿ ವಿವಿಧ ಬ್ಯಾಂಕ್‌ಗಳಲ್ಲಿ ನಡೆಸಿದ ಹಣಕಾಸು ವಹಿವಾಟುಗಳ ಮಾಹಿತಿಯನ್ನು ಸಿಸಿಬಿ ಪೊಲೀಸರು ಗುರುವಾರ ಸಂಗ್ರಹಿಸಿದರು.

ಹಿರೇಹಡಗಲಿಯ ಕರ್ನಾಟಕ ಗ್ರಾಮೀಣ ಬ್ಯಾಂಕ್ (ಕೆಜಿಬಿ) ಮತ್ತು ಬಿಡಿಸಿಸಿ ಬ್ಯಾಂಕ್‌ಗೆ ಸಿಸಿಬಿ ಪೊಲೀಸರು ಭೇಟಿ ನೀಡಿ ಸ್ವಾಮೀಜಿ ಹೊಂದಿರುವ ಖಾತೆಗಳ ಸ್ಟೇಟ್‌ಮೆಂಟ್ ಪಡೆದರು. ಕೆಜಿಬಿ ಬ್ಯಾಂಕ್‌ನಲ್ಲಿ ಸ್ವಾಮೀಜಿಗೆ ಸೇರಿದ ಲಾಕರ್ ತೆಗೆಸಿ ಪರಿಶೀಲಿದರು. ಹೂವಿನಹಡಗಲಿ ಐಡಿಎಫ್‌ಸಿ ಬ್ಯಾಂಕ್‌ನಲ್ಲಿನ ಸ್ವಾಮೀಜಿ ಅವರ ಖಾತೆಯ ಹಣಕಾಸು ವಹಿವಾಟಿನ ದಾಖಲೆ ಪಡೆದರು.

11 ತಾಸುಗಳವರೆಗೆ ನಡೆದ ಚರ್ಚೆ: ಪಕ್ಷಭೇದ ಮರೆತು ಸದಸ್ಯರ ಬೆಂಬಲ • ತಕ್ಷಣ ಜಾರಿಗೆ ವಿಪಕ್ಷಗಳ ಒತ್ತಾಯ

ಮಹಿಳಾ ಮಸೂದೆಗೆ ರಾಜ್ಯಸಭೆ ಅಸ್ತು

ನವದೆಹಲಿ (ಪಿಟಿಐ): ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಸ್ಥಾನಗಳನ್ನು ಒದಗಿಸುವ ಮಹಿಳಾ ಮೀಸಲು ಮಸೂದೆ ಗುರುವಾರ ರಾಜ್ಯಸಭೆಯಲ್ಲಿ ಸರ್ವಾನುಮತದಿಂದ ಅಂಗೀಕಾರವಾಗಿದೆ. ಇದಕ್ಕೂ ಮೊದಲು 11 ತಾಸುಗಳ ಚರ್ಚೆ ನಡೆಯಿತು.

ಬುಧವಾರವಷ್ಟೇ ಈ ಮಸೂದೆ ಲೋಕಸಭೆಯಲ್ಲಿ ಅಂಗೀಕಾರವಾಗಿತ್ತು. ಮಸೂದೆ ಕುರಿತು ರಾಜ್ಯಸಭೆಯಲ್ಲಿ ನಡೆದ ಚರ್ಚೆ ವೇಳೆ ಹಾಜರಿದ್ದ ಎಲ್ಲ 214 ಸದಸ್ಯರು ಪಕ್ಷಭೇದ ಮರೆತು ಬೆಂಬಲಿಸಿದರು.

'ತಕ್ಷಣ ಜಾರಿಗೊಳಿಸಿ': ಮಹಿಳಾ ಮೀಸಲಾತಿ ತಕ್ಷಣ ಜಾರಿಗೆ ತರುವುದು, ಮೀಸಲಾಯಿತಿಯೊಳಗೆ ಇತರ ಹಿಂದುಳಿದ ವರ್ಗಗಳ (ಒಬಿಸಿ) ಮಹಿಳೆಯರಿಗೆ ಒಳ ಮೀಸಲಾತಿ ಕಲ್ಪಿಸುವುದು, ಹೊಸ ಸಂಸತ್ ಉದ್ಘಾಟನೆ ವೇಳೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಗೈರು ಹಾಗೂ ಮಹಿಳಾ ಸಬಲೀಕರಣದಲ್ಲಿ ನರೇಂದ್ರ ಮೋದಿ ಸರ್ಕಾರದ ಕಳಪೆ ಸಾಧನೆ- ಇವು ಮಸೂದೆಯ ಮೇಲಿನ ಚರ್ಚೆ ಸಂದರ್ಭದಲ್ಲಿ ಪ್ರತಿಪಕ್ಷ ಸದಸ್ಯರು ಪ್ರಮುಖವಾಗಿ ಪ್ರಸ್ತಾಪಿಸಿದ ಅಂಶಗಳು.

ಕುಸ್ತಿಪಟುಗಳ ಪ್ರತಿಭಟನೆ ಕುರಿತು ಆಡಳಿತಾರೂಢ ಬಿಜೆಪಿ ಸರ್ಕಾರದ ಕ್ರಮ ಮತ್ತು ಮಣಿಪುರದಲ್ಲಿ ನಡೆದ ಜನಾಂಗೀಯ ಹಿಂಸಾಚಾರದ ಸಂದರ್ಭದಲ್ಲಿ ಮಹಿಳೆಯರನ್ನು ನಗ್ನವಾಗಿ ಮೆರವಣಿಗೆ ಮಾಡಿದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರ ಮೌನ ಕುರಿತು ಸದಸ್ಯರು ಪ್ರಶ್ನಿಸಿದರು.

ಚರ್ಚೆ ಆರಂಭಿಸಿದ ಕಾಂಗ್ರೆಸ್‌ನ ರಂಜಿತ್ ರಂಜನ್, 2024ರ ಲೋಕಸಭಾ ಚುನಾವಣೆಗೂ ಮುನ್ನ ಮಹಿಳಾ ಮೀಸಲು ಮಸೂದೆ ಅಂಗೀಕರಿಸುವ ಮೂಲಕ ಅದರ ಲಾಭ ಪಡೆಯಲು ಬಿಜೆಪಿ ಸರ್ಕಾರ ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದರು.

ಹೊಸ ಸಂಸತ್ ಕಟ್ಟಡದ ಉದ್ಘಾಟನೆ ಸಂದರ್ಭದಲ್ಲಿ ಮುರ್ಮು ಅವರ ಗೈರು ಹಾಜರಿ ಬಗ್ಗೆ ರಂಜನ್ ಮತ್ತು ಕೆ.ಸಿ.ವೇಣುಗೋಪಾಲ್ ಸೇರಿ ಕೆಲವು ಸದಸ್ಯರು ಪ್ರಸ್ತಾಪಿಸಿದರು.

ರಾಜಕೀಯ ಲೆಕ್ಕಾಚಾರಗಳು ಈ ಮಸೂದೆ ಮಂಡಿಸಲು ಕಾರಣವಾಗಿದೆ ಮತ್ತು ಅದಕ್ಕಾಗಿಯೇ ಜನಗಣತಿ ಮತ್ತು ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಯನ್ನು ವಿಳಂಬ ಮಾಡಲಾಗುತ್ತಿದೆ. ನಿಜವಾಗಿಯೂ ಮಹಿಳಾ ಸಬಲೀಕರಣದ ಬಗ್ಗೆ ಕಾಳಜಿ ಇದ್ದರೆ, 2024 ರಲ್ಲಿ ಮಸೂದೆ ಜಾರಿಗೆ ತರುವಂತೆ ವೇಣುಗೋಪಾಲ್ ಒತ್ತಾಯಿಸಿದರು.

'ಹೊಸ ಜನಗಣತಿ ಮತ್ತು ಕ್ಷೇತ್ರಗಳ ಮರುವಿಂಗಡಣೆ ಬಳಿಕವೇ ಮೀಸಲಾತಿ ಪರಿಚಯಿಸುವುದಾದರೆ ವಿಶೇಷ ಅಧಿವೇಶನ ಕರೆಯುವ ಉದ್ದೇಶವೇನು? ಕಾಂಗ್ರೆಸ್‌ನ ನಾಲ್ವರು ಮುಖ್ಯಮಂತ್ರಿಗಳಲ್ಲಿ ಮೂವರು ಒಬಿಸಿ ಸಮುದಾಯಕ್ಕೆ ಸೇರಿದವರು ಎಂದು ಹೆಮ್ಮೆಯಿಂದ ಹೇಳುತ್ತೇವೆ' ಎಂದರು.

2029ರ ವೇಳೆಗೆ ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ತರುವ ಪ್ರಕ್ರಿಯೆ ಪೂರ್ಣಗೊಳಿಸುವ ಬಗ್ಗೆ ಪ್ರಧಾನಿ ಮತ್ತು ಗೃಹ ಸಚಿವರು ಸದನಕ್ಕೆ ಭರವಸೆ ನೀಡಬೇಕು ಎಂದು ಕಾಂಗ್ರೆಸ್‌ನ ಕಪಿಲ್ ಸಿಬಲ್ ಹೇಳಿದರು.

ಯಾರು ಅಧಿಕಾರಕ್ಕೆ ಬರುತ್ತಾರೆಂದು ತಿಳಿದಿಲ್ಲ. ಪ್ರಕ್ರಿಯೆ ಪೂರ್ಣಗೊಳಿಸದಿದ್ದರೆ ಪ್ರಧಾನಿ ಮತ್ತು ಗೃಹ ಸಚಿವರು ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಹೇಳಿಕೆ ನೀಡಬೇಕು ಎಂದರು.

ಚಿತ್ರನಟಿಯರಾದ ತಮನ್ನಾ ಭಾಟಿಯಾ, ದಿವ್ಯಾ ದತ್ತಾ, ಖುಷ್ಬು ಸುಂದರ್ ಮತ್ತಿತರರು ನೂತನ ಸಂಸತ್ ಭವನಕ್ಕೆ ಗುರುವಾರ ಭೇಟಿ ನೀಡಿದ್ದರು —ಪಿಟಿಐ ಚಿತ್ರ

'ಅನ್ಯಾಯ ವಿರುದ್ಧ ಹೇಗೆ ಪ್ರತಿಭಟಿಸಬೇಕು'

ನವದೆಹಲಿ: ಇತರ ಹಿಂದುಳಿದ ವರ್ಗಗಳ (ಒಬಿಸಿ) ಮತ್ತು ಮುಸ್ಲಿಂ ಮಹಿಳೆಯರಿಗೆ ಅನ್ಯಾಯ ಆಗುತ್ತಿರುವಾಗ ಮಸೂದೆಗೆ ವಿರುದ್ಧವಾಗಿ ಮತ ಚಲಾಯಿಸದೇ ಬೇರೆ ಯಾವ ರೀತಿಯಲ್ಲಿ ಪ್ರತಿಭಟನೆ ದಾಖಲಿಸಬೇಕಿತ್ತು?. ಹೀಗೆಂದು ಎಐಎಂಐಎಂ ಪಕ್ಷದ ನಾಯಕ, ಹೈದರಾಬಾದ್ ಸಂಸದ ಅಸಾದುದ್ದೀನ್ ಓವೈಸಿ ಅವರು ಪ್ರಶ್ನಿಸಿದ್ದಾರೆ.

ಮಹಿಳಾ ಮೀಸಲಾತಿ ಮಸೂದೆ ವಿರುದ್ಧವಾಗಿ ಲೋಕಸಭೆಯಲ್ಲಿ ಮತ ಚಲಾಯಿಸಿದ ಏಕೈಕ ಪಕ್ಷ ಎಐಎಂಐಎಂ. ಈ ಮಸೂದೆಯನ್ನು ವಿರೋಧಿಸಿದ್ದಕ್ಕಾಗಿ ಇತಿಹಾಸ ನಿಮ್ಮ ಬಗ್ಗೆ ಹೇಗೆ ಅಭಿಪ್ರಾಯ ತಳೆಯುತ್ತದೆ ಎಂದು 'ಪ್ರಜಾವಾಣಿ' ಕೇಳಿದ ಪ್ರಶ್ನೆಗೆ ಓವೈಸಿ ಅವರು ಮೇಲಿನ ರೀತಿಯಲ್ಲಿ ಸಮರ್ಥನೆ ನೀಡಿದ್ದಾರೆ.

ಲೋಕಸಭೆಯಲ್ಲಿ ಮುಸ್ಲಿಂ ಮಹಿಳೆಯರ ಪ್ರಾತಿನಿಧ್ಯದ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ರಾಷ್ಟ್ರೀಯ ಮತ್ತು ಪ್ರಾದೇಶಿಕ ಪಕ್ಷಗಳು ಮುಸ್ಲಿಂ ಸಮುದಾಯದ ಅಭ್ಯರ್ಥಿಗಳಿಗೆ ಟಿಕೆಟ್ ನೀಡುವುದಿಲ್ಲ. ಈವರೆಗೆ ಸಂಸದರಾಗಿರುವ ಮುಸ್ಲಿಂ ಮಹಿಳೆಯರು ರಾಜಕೀಯ ಹಿನ್ನೆಲೆ ಹೊಂದಿರುವ ಕುಟುಂಬಗಳಿಂದ ಬಂದಿರುವವರು. ಮಹಿಳೆಯರ ಪ್ರಾತಿನಿಧ್ಯ ಹೆಚ್ಚಿಸುವ ಸಲುವಾಗಿ ಮಸೂದೆ ಮಂಡಿಸಿದವರು, ಅತ್ಯಂತ ಕಡಿಮೆ ಪ್ರಾತಿನಿಧ್ಯ ಹೊಂದಿರುವ ಸಮುದಾಯವನ್ನು ಹೇಗೆ ಕಡೆಗಣಿಸಲು ಸಾಧ್ಯ ಎಂದರು.

2014 ಮತ್ತು 2019ರಲ್ಲಿ ಪ್ರಣಾಳಿಕೆಗಳಲ್ಲಿ ಬಿಜೆಪಿ ಮಹಿಳಾ ಮೀಸಲಾತಿ ಬಗ್ಗೆ ಭರವಸೆ ನೀಡಿದ್ದರೂ ಈ ಹಿಂದೆಯೇ ಏಕೆ ಮಸೂದೆಯನ್ನು ಮಂಡಿಸಲಿಲ್ಲ.
ಎಳಮರಂ ಕರೀಂ, ಸಿಪಿಎಂ ನಾಯಕ

ಈ ಮಸೂದೆ ಮಂಡಿಸುವ ಮೂಲಕ ಹೊಸ ಸಂಸತ್ ಕಟ್ಟಡಕ್ಕೆ ಉತ್ತಮ ಆರಂಭ ನೀಡಲು ವಿಶೇಷ ಅಧಿವೇಶನ ಕರೆಯಲಾಗಿದೆ.
ನಿರ್ಮಲಾ ಸೀತಾರಾಮನ್, ಹಣಕಾಸು ಸಚಿವೆ

'ಭಾರತದ ಸಂಸದೀಯ ಇತಿಹಾಸದಲ್ಲಿ ಸುವರ್ಣ ಗಳಿಗೆ'

ನವದೆಹಲಿ (ಪಿಟಿಐ): ಮಹಿಳಾ ಮೀಸಲಾತಿ ಮಸೂದೆಯು ಲೋಕಸಭೆಯಲ್ಲಿ ಬಹುತೇಕ ಅವಿರೋಧವಾಗಿ ಅಂಗೀಕಾರವಾದ ಗಳಿಗೆಯನ್ನು 'ಭಾರತದ ಸಂಸದೀಯ ಇತಿಹಾಸದಲ್ಲಿ ಸುವರ್ಣ ಗಳಿಗೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಬಣ್ಣಿಸಿದ್ದಾರೆ. ಜೊತೆಗೆ, ಈ ಸಾಧನೆಯ ಹೆಗ್ಗಳಿಕೆ ಎಲ್ಲಾ ರಾಜಕೀಯ ಪಕ್ಷಗಳ ನಾಯಕರು ಮತ್ತು ಸಂಸತ್ ಸದಸ್ಯರಿಗೆ ಸೇರಿದ್ದು ಎಂದಿದ್ದಾರೆ.

ಗುರುವಾರದ ಲೋಕಸಭೆ ಕಲಾಪವು ಆರಂಭವಾಗುತ್ತಿದ್ದಂತೆ ಎದ್ದುನಿಂತು ಮಸೂದೆ ಅಂಗೀಕಾರದ ಕುರಿತು ಮಾತನಾಡಿದ ಮೋದಿ ಅವರು, 'ನಾರಿ ಶಕ್ತಿ ವಂದನೆ ಅಧಿನಿಯಮ' ಅಂಗೀಕಾರದಂಥ ಪವಿತ್ರ ಕಾರ್ಯ ಸಾಧಿಸಲು ಸಹಕಾರ, ಕೊಡುಗೆ ನೀಡಿದ ಮತ್ತು ಅರ್ಥಪೂರ್ಣ ಚರ್ಚೆ ನಡೆಸಿದ ಎಲ್ಲಾ ಸದಸ್ಯರಿಗೆ ಸದನದ ನಾಯಕನಾಗಿ ಹೃತ್ಪೂರ್ವಕ ಧನ್ಯವಾದ ಹೇಳುತ್ತೇನೆ' ಎಂದರು.

ಲೋಕಸಭೆಯಲ್ಲಿ ಬುಧವಾರ ನಡೆದ ಚರ್ಚೆ ಮತ್ತು ರಾಜ್ಯಸಭೆಯಲ್ಲಿ ಮುಂದೆ ನಡೆಯಲಿರುವ ಚರ್ಚೆಯು 'ಮಾತೃಶಕ್ತಿ' ಕುರಿತ ಮನೋಭಾವವನ್ನು ಬದಲಿಸಲಿದೆ. ಅದರಿಂದ ಹೊಮ್ಮುವ ಆತ್ಮವಿಶ್ವಾಸವು ದೇಶ ಹೊಸ ಎತ್ತರಕ್ಕೆ ಏರಲು ಬಲ ತುಂಬಲಿದೆ ಎಂದರು.

ಸಂಸತ್ತಿನ ವಿಶೇಷ ಅಧಿವೇಶನದಲ್ಲಿ ಗುರುವಾರ ಪ್ರಧಾನಿ ನರೇಂದ್ರ ಮೋದಿ ಅವರು ಮಾತನಾಡಿದರು —ಪಿಟಿಐ ಚಿತ್ರ

'ಒಬಿಸಿ ಪ್ರಧಾನಿ ನೀಡಿದ್ದು ಬಿಜೆಪಿ'

ನವದೆಹಲಿ (ಪಿಟಿಐ): 'ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಸೇರಿದ ಪ್ರಥಮ ಪ್ರಧಾನಿಯನ್ನು ದೇಶಕ್ಕೆ ನೀಡಿದ್ದು ಬಿಜೆಪಿ ನೇತೃತ್ವದ ಎನ್‌ಡಿಎ' ಎಂದು ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ. ನಡ್ಡಾ ಅವರು ಸಂವಿಧಾನ (128ನೇ ತಿದ್ದುಪಡಿ) ಮಸೂದೆ ಕುರಿತು ರಾಜ್ಯಸಭೆಯಲ್ಲಿ ಗುರವಾರ ಮಾತನಾಡುವ ವೇಳೆ ಹೇಳಿದ್ದಾರೆ.

ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೀಸಲಿಡುವ ಶೇ 33 ಸ್ಥಾನಗಳಲ್ಲಿ ಒಬಿಸಿ ಮಹಿಳೆಯರಿಗೆ ಒಳಮೀಸಲಾತಿ ಕಲ್ಪಿಸಿ ಎಂದು ಕಾಂಗ್ರೆಸ್ ಇರಿಸಿರುವ ಬೇಡಿಕೆಗೆ ಆಕ್ಷೇಪ ವ್ಯಕ್ತಪಡಿಸಿ ಹೀಗೆ ಹೇಳಿದರು. ಬಿಜೆಪಿಯ 303 ಲೋಕಸಭಾ ಸಂಸದರಲ್ಲಿ 85 ಸಂಸದರು ಒಬಿಸಿಗೆ ಸೇರಿದವರು ಎಂದೂ ತಿಳಿಸಿದರು.

ಕೇಂದ್ರ ಸರ್ಕಾರದಲ್ಲಿರುವ 90 ಕಾರ್ಯದರ್ಶಿಗಳಲ್ಲಿ ಕೇವಲ ಮೂರು ಮಂದಿ ಒಬಿಸಿಗೆ ಸೇರಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಬುಧವಾರ ಹೇಳಿಕೆ ನೀಡಿದ್ದರು. ಇದಕ್ಕೆ ತಿರುಗೇಟು ನೀಡಿದ ನಡ್ಡಾ, ಸೇವೆಗಳಲ್ಲಿ ಒಬಿಸಿಗೆ ಮೀಸಲಾತಿ ನೀಡಿದ್ದು ಸುಪ್ರೀಂ ಕೋರ್ಟ್ 1992ರಲ್ಲಿ ಆದೇಶ ನೀಡಿದ ಬಳಿಕವಷ್ಟೇ. 2004- 2014ರ ವರೆಗಿನ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಅವಧಿಯಲ್ಲಿ ಒಬಿಸಿಗೆ ಸೇರಿದ ಎಷ್ಟು ಮಂದಿ ಕಾರ್ಯದರ್ಶಿಗಳಿದ್ದರು ಎಂದು ಪ್ರಶ್ನಿಸಿದರು.

ರಾಜ್ಯಸಭೆಯ ಗುರುವಾರದ ಕಲಾಪದಲ್ಲಿ ಸಂಸದೆ ಪಿ.ಟಿ. ಉಷಾ ಹಾಗೂ ಸಚಿವೆ ಸ್ಮೃತಿ ಇರಾನಿ ಅವರು ಸಮಾಲೋಚನೆ ನಡೆಸಿದರು

ಚಂದ್ರಯಾನ–3 ಯಶಸ್ಸಿನ ಲಾಭಕ್ಕೆ ಪೈಪೋಟಿ

ನವದೆಹಲಿ (ಪಿಟಿಐ): ಚಂದ್ರಯಾನ -3 ರ ಯಶಸ್ಸಿನ ಬಗ್ಗೆ ಲೋಕಸಭೆಯಲ್ಲಿ ಗುರುವಾರ ನಡೆದ ಚರ್ಚೆಯ ಸಂದರ್ಭದಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ನಡುವೆ ತೀವ್ರ ವಾಗ್ವಾದ ನಡೆಯಿತು.

ಯೋಜನೆಯ ಯಶಸ್ಸು ಒಬ್ಬ ವ್ಯಕ್ತಿಯ ಪ್ರಯತ್ನಗಳ ಫಲಿತಾಂಶವಲ್ಲ ಎಂದು 'ಇಂಡಿಯಾ' ಸದಸ್ಯರು ಹೇಳಿದರೆ, 'ನೆಹರೂ ಭಜನೆ'ಯಲ್ಲಿ ತೊಡಗಿದ್ದಾರೆ ಎಂದು ಬಿಜೆಪಿ ತಿರುಗೇಟು ನೀಡಿತು.

ಇಡೀ ದಿನ ನಡೆದ ಚರ್ಚೆಯಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ನಡುವೆ ಬಿರುಸಿನ ವಾಗ್ವಾದ ನಡೆಯಿತು. ವೈಜ್ಞಾನಿಕ ಮನೋಭಾವವನ್ನು ಉತ್ತೇಜಿಸಲು ಹಾಗೂ ಧರ್ಮ ಮತ್ತು ವಿಜ್ಞಾನವನ್ನು ಪ್ರತ್ಯೇಕವಾಗಿ ಇರಿಸುವಂತೆ ವಿರೋಧ ಪಕ್ಷದ ಸದಸ್ಯರು ಒತ್ತಿ ಹೇಳಿದರು.

ಬಾಹ್ಯಾಕಾಶ ಕ್ಷೇತ್ರದಲ್ಲಿನ ಸಾಧನೆಗಳ ಬಗ್ಗೆ ಮಾತನಾಡಿದ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಭಾರತವು ಈವರೆಗೆ ಉಡಾವಣೆ ಮಾಡಿದ 424 ವಿದೇಶಿ ಉಪಗ್ರಹಗಳಲ್ಲಿ 389 ಅನ್ನು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಕಳೆದ ಒಂಬತ್ತು ವರ್ಷಗಳಲ್ಲಿ ಮಾಡಲಾಗಿದೆ. ವಿದೇಶಿ ಉಪಗ್ರಹಗಳ ಯಶಸ್ವಿ ಉಡಾವಣೆಯೊಂದಿಗೆ, ಭಾರತದ ಬಾಹ್ಯಾಕಾಶ ಕ್ಷೇತ್ರವು ವೇಗವಾಗಿ ವಿಶ್ವದಲ್ಲಿ ಪ್ರಮುಖ ಸ್ಥಾನವನ್ನು ಪಡೆಯುತ್ತಿದೆ ಎಂದು ಹೇಳಿದರು.

'ಸಂಸತ್ತಿನ ಈ ವಿಶೇಷ ಅಧಿವೇಶನವು 'ನಾರಿ ಶಕ್ತಿ ವಂದನ್ ಅಧಿಯಮ್'ಗೆ ಸಮರ್ಪಿತವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಈ ಮಸೂದೆಯನ್ನು ಇಸ್ರೊದ ಮಹಿಳಾ ವಿಜ್ಞಾನಿಗಳಿಗೆ ಮತ್ತು ದೇಶದ ಮಹಿಳಾ ವೈಜ್ಞಾನಿಕ ಸಮುದಾಯಕ್ಕೆ ರಾಷ್ಟ್ರವು ನೀಡಿದ ಉಡುಗೊರೆ ಎಂದು ಪರಿಗಣಿಸುತ್ತೇನೆ. ವಿಜ್ಞಾನವು ಎಷ್ಟೇ ಪ್ರಗತಿ ಸಾಧಿಸಿದರೂ ಪರವಾಗಿಲ್ಲ, ಸಂಸ್ಕೃತಿ ಮತ್ತು ಮೌಲ್ಯಗಳಿಲ್ಲದೆ ಅದು ಅಪೂರ್ಣವಾಗಿ ಉಳಿಯುತ್ತದೆ' ಎಂದರು.

ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ, ವಿಜ್ಞಾನವನ್ನು ಮೂಢನಂಬಿಕೆಯೊಂದಿಗೆ ಗೊಂದಲಗೊಳಿಸಬಾರದು ಎಂದರು.

'ವಿಕ್ರಮ್, ಪ್ರಜ್ಞಾನ್ ಎಚ್ಚರಿಸಲು ಯತ್ನ'

ನವದೆಹಲಿ (ಪಿಟಿಐ): ಚಂದ್ರನ ಅಂಗಳಕ್ಕೆ ಕಾಲಿಟ್ಟಿರುವ ಚಂದ್ರಯಾನ–3 ಯೋಜನೆಯ ಲ್ಯಾಂಡರ್ 'ವಿಕ್ರಮ್' ಮತ್ತು ರೋವರ್ 'ಪ್ರಜ್ಞಾನ್' 14 ದಿನಗಳಿಂದ ನಿದ್ರೆಗೆ ಜಾರಿದ್ದು, ಅವನ್ನು ಎಬ್ಬಿಸಲು ಭಾರತೀಯ ಬಾಹ್ಯಾಕಾಶ ಸಂಶೋಧನಾ ಕೇಂದ್ರ (ಇಸ್ರೊ) ವಿಜ್ಞಾನಿಗಳು ಎಲ್ಲಾ ರೀತಿಯ ಪ್ರಯತ್ನವನ್ನು ಮಾಡುತ್ತಿದ್ದಾರೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಅವರು ಲೋಕಸಭೆಗೆ ಗುರುವಾರ ತಿಳಿಸಿದರು.

'ಗುರುವಾರ ರಾತ್ರಿ ನಾವೆಲ್ಲ ಭೂಮಿ ಮೇಲೆ ಮಲಗಿರುವ ವೇಳೆ ವಿಕ್ರಮ್ ಮತ್ತು ಪ್ರಜ್ಞಾನ್ ಚಂದ್ರನ ಮೇಲೆ ಏಳಬಹುದು' ಎಂದು ಲೋಕಸಭೆಯಲ್ಲಿ ಚಂದ್ರಯಾನ–3 ಯೋಜನೆ ಕುರಿತು ಚರ್ಚೆ ನಡೆದ ವೇಳೆ ಹೇಳಿದರು.

ಚಂದ್ರನ ಮೇಲೆ ಉಷ್ಣಾಂಶ ಕಡಿಮೆ ಆಗಿರುವುದರಿಂದ ಲ್ಯಾಂಡರ್ ಮತ್ತು ರೋವರ್‌ಗಳನ್ನು ನಿದ್ದೆಗೆ ದೂಡಲಾಗಿದೆ. ಚಂದ್ರನ ದಕ್ಷಿಣ ಧ್ರುವದ ಬಳಿ ಸೂರ್ಯೋದಯ ಆಗುವುದನ್ನು ಮತ್ತು ಆ ಮೂಲಕ ಉಷ್ಣಾಂಶ ಹೆಚ್ಚುವುದನ್ನು ವಿಜ್ಞಾನಿಗಳು ಕಾಯುತ್ತಿದ್ದಾರೆ. ಉಷ್ಣಾಂಶ ಹೆಚ್ಚಾದರೆ ಅವುಗಳಿಗೆ ಎಚ್ಚರಿಕೆ ಕರೆ ನೀಡಲಿದ್ದಾರೆ ಎಂದು ಅವರು ಹೇಳಿದರು.

ಚರ್ಚೆ ವೇಳೆ ಕೇಳಿ ಬಂದಿದ್ದು....

ಚಂದ್ರಯಾನ -3 ರ ಯಶಸ್ಸು ದೃಢವಾದ ವೈಜ್ಞಾನಿಕ ಪರಿಸರ ವ್ಯವಸ್ಥೆಗೆ ಸಾಕ್ಷಿಯಾಗಿದೆ. ಕಳೆದ 9 ವರ್ಷಗಳಲ್ಲಿ 424 ವಿದೇಶಿ ಉಪಗ್ರಹಗಳಲ್ಲಿ 389 ಅನ್ನು ಭಾರತ ಉಡಾವಣೆ ಮಾಡಿದೆ.
ರಾಜನಾಥ್ ಸಿಂಗ್, ಕೇಂದ್ರ ರಕ್ಷಣಾ ಸಚಿವ

ಕಳೆದ ಆರು ದಶಕಗಳಲ್ಲಿ ಎಲ್ಲಾ ಸರ್ಕಾರಗಳು ಮಾಡಿದ ಪ್ರಯತ್ನಗಳಿಂದ ಚಂದ್ರಯಾನ-3 ಯಶಸ್ಸು ಆಗಿದೆ. ಆದರೆ ಇಂದು ಕೆಲವರು ಎಲ್ಲಾ ಬಾಹ್ಯಾಕಾಶ ಪ್ರಯತ್ನಗಳು 2014ರಲ್ಲಿ ಮಾತ್ರ ಆರಂಭವಾದಂತೆ ಮಾತನಾಡುತ್ತಾರೆ.
ಶಶಿ ತರೂರ್, ಕಾಂಗ್ರೆಸ್ ಸಂಸದ

ರಾಷ್ಟ್ರಪತಿ ಭವನದಲ್ಲಿ ಇಸ್ರೊ ವಿಜ್ಞಾನಿಗಳನ್ನು ಎಲ್ಲಾ ಲೋಕಸಭಾ ಸದಸ್ಯರೊಂದಿಗೆ ಗೌರವಿಸುವ ಸನ್ಮಾನ ಸಮಾರಂಭ ಆಯೋಜಿಸಬೇಕು.
ಅಧೀರ್ ರಂಜನ್ ಚೌಧರಿ, ಕಾಂಗ್ರೆಸ್ ನಾಯಕ

ನಾವು ಚಂದ್ರನ ಮೇಲೆ ಇಳಿದಿದ್ದರೂ ದೇಶದಲ್ಲಿ ಇಂದಿಗೂ ಕೂಡ ಮಲಹೊರುವ ಪದ್ಧತಿ ಇದೆ ಎಂಬುದು ದುರದೃಷ್ಟಕರ.
ಕಾರ್ತಿ ಚಿದಂಬರಂ, ಕಾಂಗ್ರೆಸ್ ಸದಸ್ಯ

'ಮೋಸದ ಆರೋಪ: ವಿವಾಹ ರದ್ದು ಅಸಾಧ್ಯ'

ನವದೆಹಲಿ(ಪಿಟಿಐ): ಕುಟುಂಬ ಮತ್ತು ಸಂಪತ್ತಿನ ಕುರಿತು ಮೋಸದ ಮಾತುಗಳನ್ನಾಡಿ ಮದುವೆ ಮಾಡಿಸಿದ್ದಾರೆ ಎಂಬ ಆರೋಪದ ಮೇಲೆ ವಿವಾಹವನ್ನು ರದ್ದುಗೊಳಿಸಲು ಆಗದು ಎಂದು ದೆಹಲಿ ಹೈಕೋರ್ಟ್ ಹೇಳಿದೆ.

'ಸೌಂದರ್ಯವರ್ಧಕ ಉದ್ಯಮದಲ್ಲಿ ತೊಡಗಿಸಿಕೊಂಡಿರುವುದಾಗಿ ನಂಬಿಸಿ ಪತ್ನಿ ನನ್ನನ್ನು ವಂಚಿಸಿದ್ದಾಳೆ. ಆಕೆಯ ಆಸ್ತಿಯಲ್ಲಿ ಒಟ್ಟಾಗಿ ಉದ್ಯಮ ಸ್ಥಾಪಿಸಬಹುದೆಂದು ಸುಳ್ಳು ಆಶ್ವಾಸನೆ ನೀಡಿ ನನಗೆ ಮೋಸ ಮಾಡಿದ್ದಾಳೆ. ಅವಳು ಈಗ ತಲೆಮರೆಸಿಕೊಂಡಿದ್ದಾಳೆ. ಹೀಗಾಗಿ ಹಿಂದೂ ವಿವಾಹ ಕಾಯಿದೆ (ಎಚ್‌ಎಂಎ) ಅಡಿಯಲ್ಲಿ ವಿವಾಹವನ್ನು ರದ್ದುಗೊಳಿಸಬೇಕು' ಎಂದು ಕೋರಿ ವ್ಯಕ್ತಿಯೊಬ್ಬರು ದೆಹಲಿ ಹೈಕೋರ್ಟ್ ಮೊರೆ ಹೋಗಿದ್ದರು.

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸುರೇಶ್ ಕುಮಾರ್ ಕೈಟ್ ನೇತೃತ್ವದ ಪೀಠ 'ಮದುವೆಗೆ ಆಧಾರವಾಗಿರುವ ವಸ್ತು ವಿಷಯಗಳನ್ನು ಉದ್ದೇಶಪೂರ್ವಕವಾಗಿ ಮರೆಮಾಚಿದ್ದರೆ ಮಾತ್ರ ವಿವಾಹ ರದ್ದತಿಗೆ ಅವಕಾಶವಿರುತ್ತದೆ. ಆದರೆ, ಈ ಪ್ರಕರಣದಲ್ಲಿ ಮಾಡಲಾಗಿರುವ ಆರೋಪಗಳು ಮದುವೆ ಸಮಾರಂಭಕ್ಕೆ ಸಂಬಂಧಿಸಿಲ್ಲ ಅಥವಾ ವೈವಾಹಿಕ ಜೀವನಕ್ಕೂ ಸಂಬಂಧಿಸಿಲ್ಲ' ಎಂದು ಹೇಳಿತು. ಜತೆಗೆ ಮದುವೆಯನ್ನು ರದ್ದುಗೊಳಿಸಲು ನಿರಾಕರಿಸಿತು.

'ಅಪೀಲುದಾರರ (ಪತಿ) ಪ್ರಕಾರ ಅವರಿಬ್ಬರೂ ಪರಿಚಯಸ್ಥರಾಗಿದ್ದು ಪ್ರೇಮವಿವಾಹ ಮಾಡಿಕೊಂಡಿದ್ದಾರೆ. ಈ ವಿಷಯ ಇಲ್ಲಿ ಗಮನಾರ್ಹ ಸಂಗತಿ. ಪ್ರತಿವಾದಿಯು (ಪತ್ನಿ) ಉದ್ದಿಮೆಯನ್ನು ಸ್ಥಾಪಿಸಲು ಸಾಕಷ್ಟು ಸಂಪನ್ಮೂಲ ಹೊಂದಿದ್ದರು ಎಂಬುದನ್ನು ಸಾಬೀತು ಮಾಡಲು ಇಲ್ಲಿ ಸಾಕ್ಷ್ಯಗಳಿಲ್ಲ. ಹೀಗಾಗಿ ಇದು ವಂಚನೆ ಎನಿಸಿಕೊಳ್ಳದು. ಮದುವೆಗೆ ಸಂಬಂಧಿಸಿದ ಸಂಗತಿಗಳನ್ನು ಮುಚ್ಚಿಟ್ಟಿದ್ದಾರೆ ಎಂದು ಹೇಳಲೂ ಆಗದು' ಎಂದು ನ್ಯಾಯಮೂರ್ತಿ ನೀನಾ ಬನ್ಸಾಲ್ ಕೃಷ್ಣ ಅವರನ್ನೊಳಗೊಂಡ ಪೀಠವು ತನ್ನ ಆದೇಶದಲ್ಲಿ ಉಲ್ಲೇಖಿಸಿದೆ.

'ಕುಟುಂಬ ಅಥವಾ ಸಂಪತ್ತು, ಜಾತಿ–ಧರ್ಮ, ವಯಸ್ಸು ಅಥವಾ ಪಾತ್ರಕ್ಕೆ ಸಂಬಂಧಿಸಿದ ಮೋಸದ ಹೇಳಿಕೆಗಳಿಂದ ಮದುವೆಗೆ ಪ್ರೇರೇಪಿಸಲಾಗಿದೆ ಎಂಬ ಕಾರಣ ನೀಡಿ ಅರ್ಜಿದಾರನು ಇಲ್ಲಿ ಮದುವೆಯನ್ನು ಮುರಿದುಕೊಳ್ಳಲು ಆಗದು' ಎಂದು ನ್ಯಾಯಾಲಯ ತಿಳಿಸಿತು.

2019ರಲ್ಲಿ ನಡೆದಿದ್ದ ತನ್ನ ವಿವಾಹವನ್ನು ರದ್ದು ಮಾಡುವಂತೆ ಕೋರಿದ್ದ ವ್ಯಕ್ತಿಯೊಬ್ಬರ ಅರ್ಜಿಯನ್ನು ಕೌಟುಂಬಿಕ ನ್ಯಾಯಾಲಯವೊಂದು ತಳ್ಳಿ ಹಾಕಿತ್ತು. ಇದನ್ನು ಪ್ರಶ್ನಿಸಿ ವ್ಯಕ್ತಿ ದೆಹಲಿ ಹೈಕೋರ್ಟ್ ಮೊರೆ ಹೋಗಿದ್ದರು.

ಎಲ್ಗಾರ್ ಪರಿಷತ್: ರಾವುತ್‌ಗೆ ಜಾಮೀನು

ಮುಂಬೈ (ಪಿಟಿಐ): ಎಲ್ಗಾರ್ ಪರಿಷತ್–ಮಾವೋವಾದಿ ಸಂಪರ್ಕ ಪ್ರಕರಣದ ಆರೋಪಿ, ಹೋರಾಟಗಾರ ಮಹೇಶ್ ರಾವುತ್‌ಗೆ (33) ಬಾಂಬೆ ಹೈಕೋರ್ಟ್ ಗುರುವಾರ ಜಾಮೀನು ಮಂಜೂರು ಮಾಡಿದೆ.

ನ್ಯಾಯಮೂರ್ತಿಗಳಾದ ಎ.ಎಸ್. ಗಡ್ಕರಿ ಮತ್ತು ಶರ್ಮಿಳಾ ದೇಶ್‌ಮುಖ್ ಅವರಿದ್ದ ವಿಭಾಗೀಯ ಪೀಠವು, ಜಾಮೀನು ಕೋರಿ ರಾವುತ್ ಸಲ್ಲಿಸಿದ್ದ ಮನವಿಯನ್ನು ಅಂಗೀಕರಿಸಿತು.

ಪೀಠವು ತನ್ನ ಆದೇಶ ಪ್ರಕಟಿಸಿದಾಗ, ಎನ್‌ಐಎ ಪರ ಹಾಜರಿದ್ದ ಪಬ್ಲಿಕ್ ಪ್ರಾಸಿಕ್ಯೂಟರ್ ಸಂದೇಶ್ ಪಾಟೀಲ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು, ಎರಡು ವಾರಗಳ ಕಾಲ ಆದೇಶಕ್ಕೆ ತಡೆ ನೀಡುವಂತೆ ಪೀಠವನ್ನು ಕೋರಿದರು. ನಂತರ ಪೀಠವು, ಆದೇಶಕ್ಕೆ ಒಂದು ವಾರ ತಡೆ ನೀಡಿತು.

ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ತನ್ನ ವಿರುದ್ಧ ಮಾಡಿರುವ ಆರೋಪಗಳಿಗೆ ಯಾವುದೇ ಸಾಕ್ಷ್ಯಾಧಾರಗಳಿಲ್ಲ. ತನ್ನ ಕಸ್ಟಡಿಯು ಅನಗತ್ಯ ಮತ್ತು ಇದು ಸಂವಿಧಾನದ 14 ಮತ್ತು 21ನೇ ವಿಧಿಗೆ ವಿರುದ್ಧವಾಗಿದೆ ಎಂದು ಮಹೇಶ್ ತಮ್ಮ ಮನವಿಯಲ್ಲಿ ವಾದಿಸಿದ್ದರು. ರಾವುತ್ ಅವರನ್ನು 2018ರ ಜೂನ್‌ನಲ್ಲಿ ಬಂಧಿಸಿದ್ದು, ಸದ್ಯ ಅವರನ್ನು ನ್ಯಾಯಾಂಗ ಬಂಧನದಲ್ಲಿ ಇರಿಸಲಾಗಿದೆ. ವಿಶೇಷ ಎನ್‌ಐಎ ನ್ಯಾಯಾಲಯವು ಜಾಮೀನು ನಿರಾಕರಿಸಿದ ಆದೇಶವನ್ನು ಪ್ರಶ್ನಿಸಿ ಮಹೇಶ್ ರಾವುತ್, 2022ರಲ್ಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಜಾಮೀನು ಅರ್ಜಿ ವಿಚಾರಣೆ ಮುಂದಕ್ಕೆ

ನವದೆಹಲಿ (ಪಿಟಿಐ): ಎಲ್ಗಾರ್ ಪರಿಷತ್–ಮಾವೋವಾದಿ ಸಂಪರ್ಕ ಪ್ರಕರಣದಲ್ಲಿ ತಮಗೆ ಜಾಮೀನು ನೀಡಲು ನಿರಾಕರಿಸಿದ ಬಾಂಬೆ ಹೈಕೋರ್ಟ್‌ನ ಆದೇಶ ಪ್ರಶ್ನಿಸಿ ಕಬೀರ್ ಕಲಾ ಮಂಚ್‌ನ (ಕೆಎಂಎಂ) ಸದಸ್ಯೆ ಜ್ಯೋತಿ ಜಗತಾಪ್ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್, ಗುರುವಾರ ಮುಂದೂಡಿದೆ.

ನ್ಯಾಯಮೂರ್ತಿಗಳಾದ ಅನಿರುದ್ಧ ಬೋಸ್ ಮತ್ತು ಬೇಲಾ ಎಂ. ತ್ರಿವೇದಿ ಅವರಿದ್ದ ವಿಭಾಗೀಯ ನ್ಯಾಯಪೀಠವು, ಈ ಅರ್ಜಿಯ ವಿಚಾರಣೆ ನಡೆಸಿತು.

ಫಿರ್ಯಾದಿ ಪರ ನ್ಯಾಯಾಲಯಕ್ಕೆ ಹಾಜರಾದ ವಕೀಲೆ ಅಪರ್ಣಾ ಭಟ್, 'ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಸಲ್ಲಿಸಿರುವ ಪ್ರಮಾಣ ಪತ್ರಕ್ಕೆ ಸಂಬಂಧಿಸಿ ಪ್ರತಿವಾದ ಮಂಡಿಸಲು ಸಮಯಾವಕಾಶ ನೀಡಬೇಕು' ಎಂದು ಕೋರಿದರು. ಇದನ್ನು ಪುರಸ್ಕರಿಸಿದ ನ್ಯಾಯಪೀಠವು, ಮೂರು ವಾರ ಕಾಲಾವಕಾಶ ನೀಡಿತು.

2017ರ ಡಿಸೆಂಬರ್ 31ರಂದು ಪುಣೆಯಲ್ಲಿ ಎಲ್ಗಾರ್ ಪರಿಷತ್ ಸಭೆ ಆಯೋಜಿಸಲಾಗಿತ್ತು. ಇದರಲ್ಲಿ ಪಾಲ್ಗೊಂಡಿದ್ದ ಜ್ಯೋತಿ ಅವರು ಕೆಎಂಎಂನ ಇತರ ಸದಸ್ಯರ ಜೊತೆ ಗೂಡಿ ಪ್ರಚೋದನಕಾರಿ ಘೋಷಣೆ ಕೂಗಿದ್ದರು ಎಂಬ ಆರೋಪ ಹೊತ್ತಿದ್ದಾರೆ. ಸಭೆಯಲ್ಲಿ ಮಾಡಿದ್ದ ಪ್ರಚೋದನಕಾರಿ ಭಾಷಣದಿಂದಾಗಿ ಮಾರನೇ ದಿನ ಭೀಮಾ–ಕೋರೆಗಾಂವ್ ಯುದ್ಧ ಸ್ಮಾರಕದ ಬಳಿ ಹಿಂಸಾತ್ಮಕ ಕೃತ್ಯಗಳು ನಡೆದಿದ್ದವು.

ಮಣಿಪುರದ ಇಂಫಾಲ್‌ನಲ್ಲಿ ಗುರುವಾರ ಮೈತೇಯಿ ಮಹಿಳೆಯರು ಪೊಲೀಸ್ ಠಾಣೆಗೆ ನುಗ್ಗಲು ಯತ್ನಿಸಿದರು

ಇಂಫಾಲ್: ಮತ್ತೆ ಕರ್ಫ್ಯೂ ಜಾರಿ

ಗುವಾಹಟಿ: ಮೈತೇಯಿ ಸಮುದಾಯಕ್ಕೆ ಸೇರಿದ ಐವರು ಯುವಕರನ್ನು ಬಿಡುಗಡೆಗೊಳಿಸಬೇಕು ಎಂದು ಆಗ್ರಹಿಸಿ ಗುರುವಾರ ಮಣಿಪುರದ ಇಂಫಾಲ್ ಕಣಿವೆಯಲ್ಲಿ 'ಮೀರಾ ಪೈಬಿ' ಸಂಘಟನೆಯ ನೇತೃತ್ವದಡಿ ಮೈತೇಯಿ ಮಹಿಳೆಯರು ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಲು ಯತ್ನಿಸಿದರು.

ಯಾವುದೇ ಷರತ್ತು ವಿಧಿಸದೆ ಯುವಕರನ್ನು ಬಿಡುಗಡೆಗೊಳಿಸಬೇಕು ಎಂದು ಆಗ್ರಹಿಸಿದ ಮಹಿಳೆಯರು, ಹಲವೆಡೆ ರಸ್ತೆ ಸಂಚಾರವನ್ನು ಬಂದ್ ಮಾಡಿದರು. ಇದನ್ನು ತಡೆಯಲು ಮುಂದಾದ ಭದ್ರತಾ ಸಿಬ್ಬಂದಿ ಜೊತೆಗೆ ಸಂಘರ್ಷಕ್ಕೆ ಇಳಿದರು. ಬಳಿಕ ಪೊಲೀಸರು ಟಿಯರ್ ಗ್ಯಾಸ್ ಶೆಲ್‌ಗಳನ್ನು ಸಿಡಿಸಿ ಪ್ರತಿಭಟನಕಾರರ ಗುಂಪನ್ನು ಚದುರಿಸಿದರು.

ಇಂಫಾಲ್ ಪೂರ್ವ ಮತ್ತು ಇಂಫಾಲ್ ಪಶ್ಚಿಮ ಜಿಲ್ಲೆಯಲ್ಲಿ ಪೊಲೀಸ್ ಬಿಗಿಭದ್ರತೆಯನ್ನು ಹೆಚ್ಚಿಸಲಾಗಿದ್ದು, ಮುಂಜಾಗ್ರತೆಯಾಗಿ ಈ ಎರಡೂ ಜಿಲ್ಲೆಗಳಲ್ಲಿ ಮತ್ತೆ ಕರ್ಫ್ಯೂ ವಿಧಿಸಲಾಗಿದೆ.

ಸೆಪ್ಟೆಂಬರ್ 16ರಂದು ಪೊಲೀಸರ ಸೋಗಿನಲ್ಲಿ ಈ ಯುವಕರು ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಸಾಗಿಸುತ್ತಿದ್ದ ವೇಳೆ ಬಂಧಿಸಲಾಗಿದೆ. ಕಾನೂನುಬಾಹಿರ (ಚಟುವಟಿಕೆಗಳ ತಡೆಗಟ್ಟುವಿಕೆ) ಕಾಯ್ದೆ ಹಾಗೂ ಭಾರತೀಯ ದಂಡ ಸಂಹಿತೆಯಡಿ ಪ್ರಕರಣ ದಾಖಲಿಸಲಾಗಿದೆ.

ಅನಿರ್ದಿಷ್ಟಾವಧಿಗೆ ಮುಂದೂಡಿಕೆ

ನವದೆಹಲಿ (ಪಿಟಿಐ): ಸಂಸತ್ತಿನ ಉಭಯ ಸದನಗಳನ್ನು ಗುರುವಾರ ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು. ನಿಗದಿತ ವೇಳಾಪಟ್ಟಿಯ ಪ್ರಕಾರ, ಶುಕ್ರವಾರದಂದು ಈ ಅಧಿವೇಶನವು ಅಂತ್ಯಗೊಳ್ಳಬೇಕಿತ್ತು.

ಮಹಿಳಾ ಮೀಸಲಾತಿ ಮಸೂದೆಗೆ ರಾಜ್ಯಸಭೆಯಲ್ಲಿ ಅಂಗೀಕಾರ ದೊರೆತ ಬಳಿಕ ಅಧಿವೇಶನವನ್ನು ಮುಂದೂಡಲಾಯಿತು. ಈ ಮಸೂದೆಗೆ ಲೋಕಸಭೆಯಲ್ಲಿ ಬುಧವಾರ ಅಂಗೀಕಾರ ದೊರೆತಿತ್ತು.

ಅಲ್ಲದೆ ಚಂದ್ರಯಾನ–3 ಯಶಸ್ಸು, ಸಂಸತ್ತಿನ 75 ವರ್ಷದ ಸಾಧನೆ ಕುರಿತು ಚರ್ಚಿಸಲಾಯಿತು. ಸೆ.18ರಂದು ಅಧಿವೇಶನ ಆರಂಭವಾಗಿತ್ತು. ಸಂಸತ್‌ನ ನೂತನ ಭವನಕ್ಕೆ ಕಲಾಪವು ಸ್ಥಳಾಂತರಗೊಂಡಿದ್ದು ಈ ಅಧಿವೇಶನದ ಮತ್ತೊಂದು ವಿಶೇಷ.

ಸಂಕ್ಷಿಪ್ತ ಸುದ್ದಿ

ಕಲಾಪಕ್ಕೆ ಅಡ್ಡಿ: ಶಾಸಕರ ಅಮಾನತು

ಅಮರಾವತಿ (ಪಿಟಿಐ): ಆಂಧ್ರಪ್ರದೇಶ ವಿಧಾನಸಭೆಯಲ್ಲಿ ಕಲಾಪಕ್ಕೆ ಅಡ್ಡಿಪಡಿಸಿದ್ದಕ್ಕಾಗಿ ಸ್ಪೀಕರ್ ತಮ್ಮಿನೇನಿ ಸೀತಾರಾಂ ಅವರು, ಗುರುವಾರ ಟಿಡಿಪಿಯ ಇಬ್ಬರು, ವೈಎಸ್‌ಆರ್ ಕಾಂಗ್ರೆಸ್‌ನ ಒಬ್ಬ ಸದಸ್ಯ ಸೇರಿ ಮೂವರನ್ನು ಈ ಅಧಿವೇಶನದ ಉಳಿದ ಅವಧಿಯವರೆಗೆ ಅಮಾನತು ಮಾಡಿದ್ದಾರೆ.

ಅಲ್ಲದೆ, ಅನುಚಿತ ವರ್ತನೆಗಾಗಿ ಟಿಡಿಪಿಯ ಇತರ ಸದಸ್ಯರನ್ನು ದಿನದ ಮಟ್ಟಿಗೆ ಅಮಾನತು ಮಾಡಿದರು.

ಕಲಾಪದ ವೇಳೆ ಮೀಸೆ ತಿರುವಿ, ತೊಡೆ ತಟ್ಟಿದ ಹಿಂದೂಪುರ ಶಾಸಕ ಹಾಗೂ ನಟ ಬಾಲಕೃಷ್ಣ ಅವರಿಗೆ ಮುಂದಿನ ದಿನಗಳಲ್ಲಿ ಇಂಥ ಅನುಚಿತ ವರ್ತನೆ ತೋರದಂತೆ ಎಚ್ಚರಿಕೆ ನೀಡಿದರು.

ಗುರುವಾರ ಕಲಾಪ ಆರಂಭವಾಗುತ್ತಿದ್ದಂತೆಯೇ ಟಿಡಿಪಿ ಶಾಸಕರು, ಭಿತ್ತಿಪತ್ರಗಳನ್ನು ಪ್ರದರ್ಶಿಸುತ್ತಾ ಮಾಜಿ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದರು.

ಈ ವೇಳೆ ಸ್ಪೀಕರ್ ಪೀಠದತ್ತ ನುಗ್ಗಿ ಅವರ ಆಸನವನ್ನು ಸುತ್ತುವರಿದರು. ಈ ವೇಳೆ ಸ್ಪೀಕರ್ ಅವರು, ಪ್ರತಿಪಕ್ಷಗಳ ಸದಸ್ಯರು ತಮ್ಮ ಆಸನಗಳಲ್ಲಿ ಕುಳಿತು, ಪ್ರಶ್ನೋತ್ತರ ಕಲಾಪ ನಡೆಸಲು ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು. ಆದರೆ, ಪ್ರತಿಪಕ್ಷಗಳ ಸದಸ್ಯರು ಪ್ರತಿಭಟನೆಯನ್ನು ಮುಂದುವರಿಸಿದರು.

ಟಿಡಿಪಿ ಸದಸ್ಯರ ಅಮಾನತು ಗೊತ್ತುವಳಿ ಮಂಡಿಸಿದ ಸಂಸದೀಯ ವ್ಯವಹಾರಗಳ ಸಚಿವ ಬಿ.ರಾಜೇಂದ್ರನಾಥ್ ರೆಡ್ಡಿ ಅವರು, ಟಿಡಿಪಿ ಶಾಸಕರು ಪ್ರಸ್ತಾಪಿಸುವ ಯಾವುದೇ ವಿಚಾರದ ಬಗ್ಗೆ ಚರ್ಚಿಸಲು ಸರ್ಕಾರ ಸಿದ್ಧವಿದೆ. ಸ್ಪೀಕರ್ ಪೀಠದತ್ತ ನುಗ್ಗಿ, ಅವರ ಮೇಜಿನ ಮೇಲಿನ ಗಾಜು ಒಡೆಯುವುದು ಅಪರಾಧ ಎಂದರು. ಈ ಮಧ್ಯೆ ಪರಸ್ಪರ ಆರೋಪ–ಪ್ರತ್ಯಾರೋಪ ಮುಂದುವರಿದ ಕಾರಣ ಸದನವನ್ನು ಮುಂದೂಡಲಾಯಿತು.

ಹಮಾಲಿಗಳ ಜತೆ ರಾಹುಲ್ ಸಂವಾದ

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಗುರುವಾರ ಇಲ್ಲಿನ ಆನಂದ ವಿಹಾರ ರೈಲು ನಿಲ್ದಾಣದಲ್ಲಿ ಹಮಾಲರ ಜತೆಗೆ ಸಂವಾದ ನಡೆಸಿ, ಅವರ ಸಮಸ್ಯೆಗಳನ್ನು ತಿಳಿದುಕೊಳ್ಳುವ ಪ್ರಯತ್ನ ನಡೆಸಿದರು.

ಹಮಾಲರ ಹೆಗ್ಗುರುತಿನ ಕೆಂಪು ಬಣ್ಣದ ಅಂಗಿ ಧರಿಸಿ, ಸಾಮಾನು ಸರಂಜಾಮುಗಳನ್ನು ತಲೆಯ ಮೇಲೆ ಹೊತ್ತುಕೊಂಡು ರಾಹುಲ್ ಗಾಂಧಿಯವರೂ ಹಮಾಲರ ಜತೆಗೆ ಸಾಮಾನ್ಯ ಕಾರ್ಮಿಕನಂತೆ ಬೆರೆತು ಗಮನ ಸೆಳೆದರು. ನಂತರ ಹಮಾಲಿಗಳ ಜತೆ ಕುಳಿತುಕೊಂಡು, ಅವರ ಸಮಸ್ಯೆಗಳನ್ನು ಆಲಿಸಿ, ಅರ್ಥಮಾಡಿಕೊಳ್ಳಲುವ ಪ್ರಯತ್ನ ಮಾಡಿದರು.

ಹಮಾಲರೊಂದಿಗೆ ರಾಹುಲ್ ಗಾಂಧಿ ಅವರು ಸಂವಾದ ನಡೆಸುತ್ತಿರುವ ಚಿತ್ರವನ್ನು ಕಾಂಗ್ರೆಸ್, ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿನ ತನ್ನ ಖಾತೆಯಲ್ಲಿ ಹಂಚಿಕೊಂಡಿದೆ.

'ಇತ್ತೀಚೆಗೆ, ರೈಲ್ವೆ ನಿಲ್ದಾಣದ ಹಮಾಲಿಗಳು ರಾಹುಲ್ ಗಾಂಧಿಯವರನ್ನು ಭೇಟಿಯಾಗಬೇಕೆಂಬ ಇಚ್ಛೆ ವ್ಯಕ್ತಪಡಿಸಿದ್ದ ವಿಡಿಯೊವೊಂದು ವ್ಯಾಪಕವಾಗಿ ಹರಿದಾಡಿತ್ತು. ಈ ದಿನ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ, ಅವರ ಮಾತುಗಳನ್ನು ಆಲಿಸಿದರು. ಭಾರತ್ ಜೋಡೊ ಯಾತ್ರೆ ಮುಂದುವರಿಯುತ್ತದೆ' ಎಂದು ಪಕ್ಷವು ಹೇಳಿದೆ.

'ಚೀನಾ ಗಡಿ ಬಿಕ್ಕಟ್ಟು: ಚರ್ಚೆಗೆ ಸಿದ್ಧ'

ನವದೆಹಲಿ (ಪಿಟಿಐ): ಭಾರತ ಮತ್ತು ಚೀನಾ ನಡುವಿನ ಗಡಿ ಬಿಕ್ಕಟ್ಟಿನ ಕುರಿತು ಲೋಕಸಭೆಯಲ್ಲಿ ಚರ್ಚಿಸಲು ಸಿದ್ಧವಿರುವುದಾಗಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಗುರುವಾರ ಹೇಳಿದ್ದಾರೆ.

ಲೋಕಸಭೆಯಲ್ಲಿ ಚಂದ್ರಯಾನ-3 ಯಶಸ್ಸು ಮತ್ತು ಬಾಹ್ಯಾಕಾಶ ಕ್ಷೇತ್ರದಲ್ಲಿನ ಇತರ ಸಾಧನೆಗಳ ಕುರಿತು ಚರ್ಚೆ ಆರಂಭಿಸಿದ ಸಿಂಗ್, ದೇಶದ ಗಡಿ ಭದ್ರತೆ ಮತ್ತು ರಾಷ್ಟ್ರದ ಗಡಿಯನ್ನು ರಕ್ಷಿಸುವಲ್ಲಿ ವಿಜ್ಞಾನದ ಪಾತ್ರವನ್ನು ಉಲ್ಲೇಖಿಸಿದರು.

ಈ ವೇಳೆ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರು ಚೀನಾದೊಂದಿಗಿನ ಗಡಿ ಬಿಕ್ಕಟ್ಟನ್ನು ಉಲ್ಲೇಖಿಸಿ, ಚರ್ಚೆ ನಡೆಸಲು ಧೈರ್ಯವಿದೆಯೇ? ಎಂದು ಸವಾಲು ಹಾಕಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿಂಗ್, 'ಪೂರಿ ಹಿಮ್ಮತ್ ಹೇ (ನನಗೆ ಸಂಪೂರ್ಣ ಧೈರ್ಯವಿದೆ). ನಾನು ಚರ್ಚೆಗೆ ಸಿದ್ಧ. ಚರ್ಚಿಸುವ ವಿಶ್ವಾಸವೂ ಇದೆ' ಎಂದು ಹೇಳಿದರು.

2020ರ ಜೂನ್‌ನಲ್ಲಿ ಗಾಲ್ವಾನ್ ಕಣಿವೆಯಲ್ಲಿ ಉಭಯ ದೇಶಗಳ ಸೈನಿಕರ ನಡುವೆ ನಡೆದ ಮಾರಕ ಘರ್ಷಣೆಯ ನಂತರ ಭಾರತ ಮತ್ತು ಚೀನಾ ನಡುವಿನ ಸಂಬಂಧಗಳು ಹದಗೆಟ್ಟಿವೆ. ಹಲವು ಸುತ್ತಿನ ರಾಜತಾಂತ್ರಿಕ ಮತ್ತು ಸೇನೆಯ ಮುಖ್ಯಸ್ಥರ ನಡುವಿನ ಮಾತುಕತೆ ನಂತರ ಭಾರತ ಮತ್ತು ಚೀನಾ ಹಲವು ಪ್ರದೇಶಗಳಿಂದ ಸೇನೆಯನ್ನು ಹಿಂತೆಗೆದುಕೊಂಡಿವೆ. ಆದಾಗ್ಯೂ ಪೂರ್ವ ಲಡಾಖ್‌ನಲ್ಲಿ ಕೆಲವು ನಿರ್ದಿಷ್ಟ ಕೇಂದ್ರಗಳಲ್ಲಿ ಕಳೆದ ಮೂರು ವರ್ಷಗಳಿಂದ ಉಭಯ ರಾಷ್ಟ್ರಗಳ ಸೈನಿಕರ ನಡುವೆ ಸಂಘರ್ಷ ನಡೆಯುತ್ತಲೇ ಇದೆ. ಉಭಯತ್ರರ ನಡುವಿನ ಸಂಬಂಧ ಸಹಜ ಸ್ಥಿತಿಗೆ ಮರಳಲು ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ) ಉದ್ದಕ್ಕೂ ಶಾಂತಿ ನೆಲೆಸುವುದು ಪ್ರಮುಖವಾಗಿದೆ ಎಂದು ಭಾರತವು ನಿರಂತರವಾಗಿ ಪ್ರತಿಪಾದಿಸುತ್ತಲೇ ಇದೆ.

ವಿದೇಶದಲ್ಲಿ ವೈದ್ಯಕೀಯ ವೃತ್ತಿ ಅಭ್ಯಾಸಕ್ಕೆ ಹಾದಿ ಸುಗಮ

ಎನ್‌ಎಂಸಿಗೆ ಜಾಗತಿಕ ಮನ್ನಣೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ವೈದ್ಯಕೀಯ ಆಯೋಗಕ್ಕೆ (ಎನ್‌ಎಂಸಿ) ಜಾಗತಿಕವಾಗಿ ವೈದ್ಯಕೀಯ ಶಿಕ್ಷಣದ ಗುಣಮಟ್ಟ ವೃದ್ಧಿಗೆ ಮೀಸಲಾಗಿರುವ ವೈದ್ಯಕೀಯ ಶಿಕ್ಷಣಕ್ಕಾಗಿ ವಿಶ್ವ ಒಕ್ಕೂಟದ (ಡಬ್ಲ್ಯುಎಫ್‌ಎಂಇ) ಅಧಿಕೃತ ಮಾನ್ಯತೆ ಸಿಕ್ಕಿದೆ.

ಅಮೆರಿಕ, ಕೆನಡಾ, ಆಸ್ಟ್ರೇಲಿಯಾ ಹಾಗೂ ನ್ಯೂಜಿಲೆಂಡ್‌ನಲ್ಲಿ ವೈದ್ಯಕೀಯ ವೃತ್ತಿ ಅಭ್ಯಾಸ ಅಥವಾ ಸ್ನಾತಕೋತ್ತರ ಅಧ್ಯಯನದ ಗುರಿ ಹೊಂದಿರುವ ಭಾರತೀಯ ವೈದ್ಯಕೀಯ ಪದವೀಧರರ ಹಾದಿಯನ್ನು ಈ ಮನ್ನಣೆಯು ಸುಗಮಗೊಳಿಸಿದೆ.

ಎನ್‌ಎಂಸಿ ವ್ಯಾಪ್ತಿಗೆ ದೇಶದಾದ್ಯಂತ ಒಟ್ಟು 708 ವೈದ್ಯಕೀಯ ಕಾಲೇಜುಗಳು ಒಳಪಡುತ್ತವೆ. ಹಾಲಿ ಕಾಲೇಜುಗಳು ಸೇರಿದಂತೆ ಮುಂದಿನ ಹತ್ತು ವರ್ಷಗಳ ಅವಧಿಯಲ್ಲಿ ಹೊಸದಾಗಿ ಸ್ಥಾಪನೆಯಾಗುವ ಕಾಲೇಜುಗಳಿಗೂ ಸ್ವಯಂಪ್ರೇರಿತವಾಗಿ ಡಬ್ಲ್ಯುಎಫ್‌ಎಂಇ ಅಧಿಕೃತ ಮನ್ನಣೆ ಸಿಗಲಿದೆ ಎಂದು ಆರೋಗ್ಯ ಸಚಿವಾಲಯ ಹೇಳಿದೆ.

'ಭಾರತೀಯ ವೈದ್ಯಕೀಯ ಪದವೀಧರರು ವಿಶ್ವದಾದ್ಯಂತ ತಮ್ಮ ವೃತ್ತಿ ಮುಂದುವರಿಸಲು ಇದು ಅವಕಾಶ ಕಲ್ಪಿಸಲಿದೆ. ಅಲ್ಲದೇ, ಭಾರತದತ್ತ ವಿದೇಶಿ ಪದವೀಧರರು ಆಕರ್ಷಿತರಾಗಲೂ ನೆರವಾಗುತ್ತದೆ' ಎಂದು ಎನ್‌ಎಂಸಿಯ ನೀತಿನಿಯಮಗಳು ಮತ್ತು ವೈದ್ಯಕೀಯ ನೋಂದಣಿ ಮಂಡಳಿಯ ಸದಸ್ಯ ಡಾ.ಯೋಗೇಂದ್ರ ಮಲಿಕ್ ಹೇಳಿದ್ದಾರೆ.

ಎನ್‌ಎಂಸಿಗೆ ಈ ಮನ್ನಣೆ ಕುರಿತು ಅಧಿಕೃತ ಪ್ರಶಸ್ತಿ ಪತ್ರ ಹಾಗೂ ಮಾನ್ಯತಾ ಪ್ರಮಾಣ ಪತ್ರ ಲಭಿಸಲಿದೆ.

'ದೇಶದಲ್ಲಿ ವೈದ್ಯಕೀಯ ಶಿಕ್ಷಣದ ಗುಣಮಟ್ಟ ಮತ್ತು ಮಾನದಂಡಗಳನ್ನು ಉತ್ತಮಪಡಿಸಲು ಡಬ್ಲ್ಯುಎಫ್‌ಎಂಇ ಮನ್ನಣೆಯು ಸಹಕಾರಿಯಾಗಲಿದೆ. ವಿದೇಶಗಳಲ್ಲಿ ಸ್ನಾತಕೋತ್ತರ ಪದವಿಯ ತರಬೇತಿ ಹಾಗೂ ವೃತ್ತಿ ಅಭ್ಯಾಸಕ್ಕೆ ಒಕ್ಕೂಟದ ಮಾನ್ಯತೆ ಅತ್ಯಗತ್ಯ. ಈಗ ಆ ಕೊರತೆ ನೀಗಿದೆ. ಜಾಗತಿಕ ಮಟ್ಟದಲ್ಲಿ ಪದವೀಧರರು ಉತ್ತಮ ವೃತ್ತಿಪರತೆ ಬೆಳೆಸಿಕೊಳ್ಳಲೂ ನೆರವಾಗಲಿದೆ' ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.

ದೇಶದ ವೈದ್ಯಕೀಯ ಕಾಲೇಜುಗಳು ಮತ್ತು ವೃತ್ತಿಪರರಿಗೆ ಜಾಗತಿಕ ಮನ್ನಣೆ ಮತ್ತು ಪ್ರಸಿದ್ಧಿ ಪಡೆಯಲು ವೇದಿಕೆ ಕಲ್ಪಿಸಿದೆ. ಜೊತೆಗೆ, ಶೈಕ್ಷಣಿಕ ಸಹಯೋಗ ಮತ್ತು ವಿನಿಮಯಕ್ಕೂ ಅನುಕೂಲವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇದರಿಂದ ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆ ಹಾಗೂ ಹೊಸ ಅನ್ವೇಷಣೆಗಳಿಗೆ ಉತ್ತೇಜನ ನೀಡಲು ಅನುಕೂಲವಾಗಲಿದೆ. ವೈದ್ಯಕೀಯ ಶಿಕ್ಷಣ ತಜ್ಞರು ಹಾಗೂ ಸಂಸ್ಥೆಗಳ ಗುಣಮಟ್ಟಕ್ಕೆ ಪ್ರೋತ್ಸಾಹ ನೀಡಲು ಸಹಕಾರಿಯಾಗಲಿದೆ ಎಂದು ಹೇಳಿದ್ದಾರೆ.



ಸುಭಾಷಿತ

ನಾಳೆ ಏನೆಂಬ ಪ್ರಶ್ನೆಗಿಂತಲೂ 'ಇಂದು ಹೇಗೆ?' ಎನ್ನುವ ಪ್ರಶ್ನೆ ನಮಗೆ ಮಹತ್ತರವಾಗಿ ಕಾಣಬೇಕು.

-ಶಿವರಾಮ ಕಾರಂತ

ಮಹಿಳಾ ಮೀಸಲಾತಿ: ತಕ್ಷಣದ ಅನುಷ್ಠಾನ ಏಕೆ ಸಾಧ್ಯವಿಲ್ಲ?

ಮಹಿಳಾ ಮೀಸಲಾತಿ ಮಸೂದೆಗೆ ಸಂಸತ್ತಿನ ಉಭಯ ಸದನಗಳು ಅಂಗೀಕಾರದ ಮುದ್ರೆಯನ್ನು ಒತ್ತಿರುವುದರಿಂದ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳಾ ಪ್ರಾತಿನಿಧ್ಯ ಹೆಚ್ಚಳದ ಹಾದಿ ಸುಗಮವಾಗಿದೆ. ಆದರೆ, ಗುರಿ ತಲುಪಲು ಇನ್ನೂ ಬಹುದೂರ ಕ್ರಮಿಸಬೇಕಾಗಿದೆ ಎಂಬ ಸಂಗತಿಯನ್ನು ನಾವು ಮರೆಯುವಂತಿಲ್ಲ. ಈ ಮಸೂದೆಯು ಇದಕ್ಕಿಂತ ಮೊದಲು ಹಲವು ಸ್ವರೂಪಗಳಲ್ಲಿ ಹಾಗೂ ಹಲವು ಬಾರಿ ಸಂಸತ್ತಿನಲ್ಲಿ ಮಂಡನೆಯಾಗಿತ್ತು ಮತ್ತು ರಾಜಕೀಯ ಪಕ್ಷಗಳು ಬದ್ಧತೆ ಪ್ರದರ್ಶಿಸದ ಕಾರಣ ಅಂಗೀಕಾರ ಪಡೆಯುವಲ್ಲಿ ಯಶಸ್ವಿಯಾಗಿರಲಿಲ್ಲ. ಮಹಿಳಾ ಮೀಸಲಾತಿ ಸಂಬಂಧ 2014 ಮತ್ತು 2019ರ ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ನೀಡಿದ್ದ ಬಿಜೆಪಿ, ಇಷ್ಟೊಂದು ವಿಳಂಬವಾಗಿ ಈಗ ತನ್ನ ಭರವಸೆಯನ್ನು ಈಡೇರಿಸಲು ಹೊರಟಿದೆ. ವಿವಿಧ ಪಕ್ಷಗಳು ನೀಡಿರುವ ಪ್ರತಿಕ್ರಿಯೆಯನ್ನು ಗಮನಿಸಿದರೆ ಈ ಮಸೂದೆಗೆ ವ್ಯಾಪಕ ಬೆಂಬಲ ಇರುವುದು ಸುಸ್ಪಷ್ಟ. ವಾಸ್ತವವಾಗಿ, ಕಾಂಗ್ರೆಸ್ ಸೇರಿದಂತೆ ಬಹುತೇಕ ಎಲ್ಲ ಪಕ್ಷಗಳೂ ಈ ಮಸೂದೆಗೆ ತಾವೇ ಕಾರಣ ಎಂದು ಹೇಳಿಕೊಳ್ಳುತ್ತಿವೆ. 2010ರಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಸ್ತಿತ್ವದಲ್ಲಿದ್ದಾಗ ಈ ಮಸೂದೆಯನ್ನು ರಾಜ್ಯಸಭೆಯಲ್ಲಿ ಮಂಡಿಸಿ, ಆ ಸದನದ ಒಪ್ಪಿಗೆಯನ್ನು ಪಡೆಯಲಾಗಿತ್ತು. ತಮ್ಮ ಪಕ್ಷದ ನಾಯಕರೇ ಈ ಮಸೂದೆ ಪರವಾಗಿ ಮೊದಲ ಬಾರಿಗೆ ಧ್ವನಿ ಎತ್ತಿ, ಈ ಬೇಡಿಕೆಗೆ ಒಂದು ಆಂದೋಲನದ ರೂಪ ನೀಡಿದ್ದು ಎಂದು ಎಲ್ಲ ಪಕ್ಷಗಳೂ ವಾದಿಸುತ್ತಿವೆ. ಇದಲ್ಲದೆ, ಲೋಕಸಭೆಯಲ್ಲಿ ಮೊನ್ನೆ ನಡೆದ ಚರ್ಚೆಯ ಕಾಲಕ್ಕೆ ಮಹಿಳಾ ಮೀಸಲಾತಿಯಲ್ಲಿ ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಒಳಮೀಸಲಾತಿ ಕಲ್ಪಿಸಬೇಕು ಎಂಬ ಆಗ್ರಹ ಜೋರಾಗಿ ಕೇಳಿಬಂದಿದೆ. ಕಾಂಗ್ರೆಸ್ ನಾಯಕರಂತೂ ಮುಂಚೂಣಿಯಲ್ಲಿ ನಿಂತು ಈ ಬೇಡಿಕೆಯನ್ನು ಪ್ರಬಲವಾಗಿ ಮಂಡಿಸಿದ್ದಾರೆ.

ಮಹಿಳಾ ಮೀಸಲಾತಿಗೆ ಎಲ್ಲ ಪಕ್ಷಗಳೂ ಬದ್ಧವಾಗಿದ್ದರೆ, ತಕ್ಷಣದಿಂದಲೇ ಅದು ಅನುಷ್ಠಾನಗೊಳ್ಳುವಂತೆ ನೋಡಿಕೊಳ್ಳಬೇಕು

ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳ ಒಟ್ಟು ಸ್ಥಾನಗಳಲ್ಲಿ ಶೇ 33ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲು (ಎಸ್‌ಸಿ ಮತ್ತು ಎಸ್‌ಟಿ ಮೀಸಲು ಕ್ಷೇತ್ರಗಳಲ್ಲಿ ಮೂರನೇ ಒಂದು ಭಾಗದಷ್ಟು ಸ್ಥಾನಗಳಲ್ಲಿಯೂ ಮಹಿಳಾ ಮೀಸಲಾತಿ ಸೌಲಭ್ಯ ಒದಗಿಸುವುದೂ ಸೇರಿದಂತೆ) ಈ ಮಸೂದೆ ಅವಕಾಶ ಕಲ್ಪಿಸುತ್ತದೆ. ಈ ಮೀಸಲಾತಿ ಸೌಲಭ್ಯವು ಹದಿನೈದು ವರ್ಷಗಳವರೆಗೆ ಕಡ್ಡಾಯವಾಗಿ ಅನುಷ್ಠಾನದಲ್ಲಿರಲಿದೆ. ಮುಂದೆ ಬೇಕಾದರೆ ಸಂಸತ್ತು ಅದರ ಕಾಲಾವಧಿಯನ್ನು ವಿಸ್ತರಿಸಬಹುದು ಎಂದೂ ಮಸೂದೆ ಹೇಳುತ್ತದೆ. ಪ್ರತಿಸಲ ಕ್ಷೇತ್ರ ಪುನರ್‌ವಿಂಗಡಣೆ ಪ್ರಕ್ರಿಯೆ ಮುಗಿದ ಬಳಿಕ ರೋಸ್ಟರ್ ಪದ್ಧತಿಗೆ ಅನುಗುಣವಾಗಿ ಮೀಸಲು ಕ್ಷೇತ್ರಗಳನ್ನು ಮರುನಿಗದಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ, ಮಸೂದೆಯು ಅಂಗೀಕಾರಗೊಂಡ ನಂತರ ನಡೆಯುವ ಮೊದಲ ಜನಗಣತಿಯ ಆಧಾರದಲ್ಲಿ, ಕ್ಷೇತ್ರ ಪುನರ್‌ವಿಂಗಡಣೆ ಪ್ರಕ್ರಿಯೆಯನ್ನು ನಡೆಸಿದ ಬಳಿಕವಷ್ಟೇ ಈ ಮೀಸಲು ಸೌಲಭ್ಯ ಅನುಷ್ಠಾನಕ್ಕೆ ಬರಲಿದೆ.

ಮಹಿಳಾ ಮೀಸಲಾತಿ ಮಸೂದೆಯು ಸ್ವಾಗತಾರ್ಹ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ಇದೇ ಸಂದರ್ಭದಲ್ಲಿ ಮಸೂದೆ ಕುರಿತು ಹಲವು ಪ್ರಶ್ನೆಗಳೂ ಕಾಡುತ್ತಿವೆ. ಈ ಮಸೂದೆಯ ವಿಷಯವಾಗಿ ಸರ್ಕಾರ ಇಷ್ಟೊಂದು ಸುದೀರ್ಘ ಅವಧಿಯವರೆಗೆ ಏನೂ ಮಾಡದೆ ಸುಮ್ಮನಿದ್ದು, ಈಗ ಏಕಾಏಕಿ ಮಂಡಿಸಿದ್ದು ಏಕೆ? ಲೋಕಸಭೆ ಚುನಾವಣೆ ಇನ್ನೇನು ಹತ್ತಿರದಲ್ಲಿರುವಾಗ ವಿಶೇಷ ಅಧಿವೇಶನ ಕರೆದು ಮಸೂದೆ ಮಂಡಿಸಲು ಕಾರಣವೇನು? ಚುನಾವಣಾ ಲಾಭದ ಲೆಕ್ಕಾಚಾರವೇ ಈ ನಡೆಗೆ ಕಾರಣ ಎನ್ನುವುದು ಎದ್ದುಕಾಣುವ ಅಂಶವಾದರೂ ಇದರಿಂದ ಮಸೂದೆಯ ಮಹತ್ವವೇನೂ ಕಡಿಮೆ ಆಗುವುದಿಲ್ಲ. ಮೀಸಲಾತಿ ಅನುಷ್ಠಾನಕ್ಕೆ ಇರುವ ಅಡೆತಡೆಗಳ ಕುರಿತ ಪ್ರಶ್ನೆ ಪ್ರಮುಖವಾದುದು. ಸದ್ಯದ ಸನ್ನಿವೇಶದಲ್ಲಿ ಈ ಮಸೂದೆಯು ಮಹಿಳೆಯರಿಗೆ ಮೀಸಲಾತಿ ಸೌಲಭ್ಯ ಕಲ್ಪಿಸಲು ತಾತ್ವಿಕವಾಗಿ ಒಪ್ಪಿಗೆ ನೀಡುತ್ತದೆ ಅಷ್ಟೆ. ತಕ್ಷಣದಲ್ಲಿ ಅದು ಜಾರಿಯಾಗುವುದಿಲ್ಲ. ಮುಂದಿನ ಜನಗಣತಿ ಯಾವಾಗ ಎನ್ನುವುದು ಇನ್ನೂ ನಿಶ್ಚಿತವಿಲ್ಲ. ಅಲ್ಲದೆ, ಕ್ಷೇತ್ರ ಪುನರ್‌ವಿಂಗಡಣೆ ಪ್ರಕ್ರಿಯೆ ವಿವಾದವಿಲ್ಲದೆ ಸುಸೂತ್ರವಾಗಿ ನಡೆದೀತು ಎಂಬ ನಿರೀಕ್ಷೆಯೂ ಇಲ್ಲ. ಹೀಗಾಗಿ ಮುಂದಿನ ಕೆಲವು ವರ್ಷಗಳವರೆಗೆ ಮೀಸಲಾತಿ ಸೌಲಭ್ಯ ದಕ್ಕುವುದಿಲ್ಲ. ಆ ವೇಳೆಗೆ, ಸದ್ಯದ ಶಾಸನ ರಚನೆ ಪ್ರಕ್ರಿಯೆಗಳಲ್ಲಿಯೂ ಹಲವು ಮಾರ್ಪಾಡುಗಳು ಆಗಿರಲಿಕ್ಕೂ ಸಾಕು. ಹೀಗಾಗಿ ಮಹಿಳಾ ಮೀಸಲಾತಿ ತಕ್ಷಣದಿಂದಲೇ ಜಾರಿಗೆ ಬರುವಂತೆ ಮಾಡುವ ದಿಸೆಯಲ್ಲಿ ಸರ್ಕಾರ ಮತ್ತು ಶಾಸನ ರಚನಾ ಪ್ರಕ್ರಿಯೆಯಲ್ಲಿ ಭಾಗಿಯಾಗಿರುವ ರಾಜಕೀಯ ಪಕ್ಷಗಳು ತಮ್ಮ ಬದ್ಧತೆಯನ್ನು ಪ್ರದರ್ಶಿಸಬೇಕಿದೆ.

ಉಚಿತ ಔಷಧಿ ಜೀವ ಉಳಿಸುತ್ತದೆ, ಜೀವನದ ಗುಣಮಟ್ಟ ಸುಧಾರಿಸುತ್ತದೆ

ಲಭ್ಯವಾದೀತೇ ಉಚಿತ ಔಷಧಿ?

ವಿಶ್ಲೇಷಣೆ

ಡಾ. ಗೋಪಾಲ ದಾಬಡೆ

'ನೀವು ಚಿಕಿತ್ಸೆ ಪಡೆಯಲು ಯಾವುದೇ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿದರೆ, ಹೊರಗಿನಿಂದ ಔಷಧಿಗಳನ್ನು ಖರೀದಿಸಬೇಕಾದ ಅಗತ್ಯವಿಲ್ಲ. ನಮ್ಮ ಆಸ್ಪತ್ರೆಯ ಆವರಣದಲ್ಲಿ ಔಷಧಿಗಳನ್ನು ಮಾರಾಟ ಮಾಡುವ ಫಾರ್ಮಸಿಗಳೂ ಇರಬಾರದು. ಸರ್ಕಾರಿ ಆಸ್ಪತ್ರೆಗೆ ಬರುವ ಯಾವುದೇ ರೋಗಿಗೆ ಎಲ್ಲಾ ಬಗೆಯ ಔಷಧಿಗಳೂ ಉಚಿತವಾಗಿ ಲಭ್ಯವಾಗುವಂತಹ ಸೇವೆಯನ್ನು ನಾವು ಒದಗಿಸಬೇಕು' ಎಂದು ರಾಜ್ಯ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಇತ್ತೀಚೆಗೆ ಹೇಳಿದ್ದಾರೆ.

ಆರೋಗ್ಯ ಸಚಿವರ ಈ ಹೇಳಿಕೆಯು ದೂರಗಾಮಿ ಪರಿಣಾಮಗಳನ್ನು ಬೀರುತ್ತದೆ. ಔಷಧಿಗಳು ಉಚಿತವಾಗಿ ಲಭ್ಯವಾಗುವಂತೆ ಮಾಡುವುದರಿಂದ ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳ ಸಂಖ್ಯೆ ಹೆಚ್ಚಾಗುತ್ತದೆ ಮತ್ತು ಬಡವರು ಚಿಕಿತ್ಸೆಗಾಗಿ ಸ್ವತಃ ಮಾಡಬೇಕಾದ ಖರ್ಚನ್ನು ಅದು ತಪ್ಪಿಸುತ್ತದೆ. ಚಿಕಿತ್ಸೆಗೆ ವೆಚ್ಚವಾಗುವ ಒಟ್ಟು ಹಣದಲ್ಲಿ ಶೇಕಡ 60- 70ರಷ್ಟು ಮೊತ್ತ ಬರೀ ಔಷಧಿಗಳಿಗಾಗಿಯೇ ಖರ್ಚಾಗುತ್ತಿದೆ. ಅದರೊಟ್ಟಿಗೆ ಇತರ ಖರ್ಚುಗಳೂ ಸೇರಿ ಆರೋಗ್ಯಕ್ಕೆ ಸಂಬಂಧಿಸಿದಂತೆ ಮಾಡಬೇಕಾದ ವೆಚ್ಚವು ಪ್ರತಿವರ್ಷ 5.5 ಕೋಟಿ ಜನರನ್ನು ಬಡತನದ ತೆಕ್ಕೆಗೆ ದೂಡುತ್ತಿದೆ. ಕುಟುಂಬಗಳಿಗೆ ಎದುರಾಗುವ ಈ ಆರ್ಥಿಕ ಸಂಕಷ್ಟವನ್ನು ತಡೆಗಟ್ಟಲು ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಔಷಧಿಗಳು ಲಭ್ಯವಾಗುವಂತೆ ಮಾಡುವುದು ನಿಜಕ್ಕೂ ವಿವೇಚನೆಯಿಂದ ಕೂಡಿದ ನಿರ್ಧಾರವಾಗಿದೆ.

ಆರೋಗ್ಯ ಹಕ್ಕುಗಳಿಗೆ ಸಂಬಂಧಿಸಿದಂತೆ ರಾಜ್ಯ ಮಟ್ಟದಲ್ಲಿ ಕೆಲಸ ಮಾಡುತ್ತಿರುವ 'ಸಾರ್ವತ್ರಿಕ ಆರೋಗ್ಯ ಆಂದೋಲನ- ಕರ್ನಾಟಕ'ವು 600 ಹೊರ ರೋಗಿಗಳನ್ನು ಒಳಗೊಂಡ ಸಮೀಕ್ಷೆಯೊಂದನ್ನು ನಡೆಸಿದೆ. ಒಬ್ಬ ರೋಗಿಯು ಆಸ್ಪತ್ರೆಯ ಪ್ರತಿ ಭೇಟಿಗೆ ಸರಾಸರಿ ₹ 700 ಖರ್ಚು ಮಾಡುತ್ತಿರುವುದು ತಿಳಿದುಬಂದಿದೆ. ರಾಜ್ಯ ಸರ್ಕಾರವು ಮಹಿಳೆಯರಿಗೆ ಉಚಿತ ಬಸ್ ಸೇವೆ ಒದಗಿಸಿರುವುದು ನಿಜಕ್ಕೂ ಸ್ವಾಗತಾರ್ಹ ನಿರ್ಧಾರ. ಆದರೆ, ಅದಕ್ಕಿಂತ ಹೆಚ್ಚು ಮುಖ್ಯವಾದುದು ಔಷಧಿಗಳು ಉಚಿತವಾಗಿ ಲಭ್ಯವಾಗುವಂತೆ ಮಾಡುವುದು. ಔಷಧಿಗಳು ಜೀವ ಉಳಿಸುತ್ತವೆ, ಜೀವನದ ಗುಣಮಟ್ಟವನ್ನು ಸುಧಾರಿಸುತ್ತವೆ.

ಈ ದಿಸೆಯಲ್ಲಿ, ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಔಷಧಿಗಳು ಲಭ್ಯವಾಗುವಂತೆ ಮಾಡಲು ರಾಜ್ಯ ಸರ್ಕಾರ ರೂಪಿಸಬೇಕಾದ ನೀತಿ ಯಾವುದು? ಎಲ್ಲಕ್ಕಿಂತ ಮುಖ್ಯವಾಗಿ, ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮವನ್ನು (ಕೆಎಸ್‌ಎಂಎಸ್‌ಸಿಎಲ್) ಪುನಶ್ಚೇತನಗೊಳಿಸಿ ಅದನ್ನು ಸುವ್ಯವಸ್ಥಿತಗೊಳಿಸಬೇಕಾದ ತುರ್ತು ಅವಶ್ಯಕತೆಯಿದೆ. ಇದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಡಿಯಲ್ಲಿ ನೋಂದಾಯಿತವಾದ ಸಂಸ್ಥೆ. ಔಷಧಿಗಳು ಮತ್ತು ವೈದ್ಯಕೀಯ ಸಲಕರಣೆಗಳನ್ನು ಖರೀದಿಸಿ, ರಾಜ್ಯದ ಎಲ್ಲ ಜಿಲ್ಲೆಗಳ ಗೋದಾಮುಗಳಿಗೆ ರವಾನಿಸುವುದು ಇದರ ಆದ್ಯ ಕೆಲಸ. ಇದು 2002ರಲ್ಲಿ ಆರಂಭವಾಯಿತು. ಆಗ ಇದನ್ನು 'ಕರ್ನಾಟಕ ಸ್ಟೇಟ್ ಡ್ರಗ್ಸ್ ಲಾಜಿಸ್ಟಿಕ್ಸ್ ಆ್ಯಂಡ್ ವೇರ್‌ಹೌಸಿಂಗ್ ಸೊಸೈಟಿ (ಕೆಎಸ್‌ಡಿಎಲ್&ಡಬ್ಲ್ಯುಎಸ್) ಎಂದು ಕರೆಯಲಾಗುತ್ತಿತ್ತು. ಈಗ ಅದರ ಹೆಸರು ಕೆಎಸ್‌ಎಂಎಸ್‌ಸಿಎಲ್ ಎಂದು ಬದಲಾಗಿದೆ. ಅಂದರೆ, ತನ್ನ ಆಸ್ಪತ್ರೆಗಳಲ್ಲಿ ಔಷಧಿಗಳನ್ನು 'ಉಚಿತ'ವಾಗಿ ನೀಡುವ ರಾಜ್ಯದ ನೀತಿಯು ಸುಮಾರು ಎರಡು ದಶಕಗಳಷ್ಟು ಹಳೆಯದೇ ಸರಿ.

ಈ ಸೊಸೈಟಿಯ ಮೂಲಕ ಔಷಧಿಗಳನ್ನು ಉಚಿತವಾಗಿ ನೀಡುವಲ್ಲಿ ರಾಜ್ಯ ವಿಫಲವಾಗಿದೆ. ಸರ್ಕಾರಿ ಆಸ್ಪತ್ರೆಗಳ ಬಳಿ ಅಣಬೆಯಂತೆ ಹುಟ್ಟಿಕೊಂಡಿರುವ ಖಾಸಗಿ ಔಷಧಾಲಯಗಳ ಸಂಖ್ಯೆಯೇ ಇದಕ್ಕೆ ನಿದರ್ಶನ. ಅಷ್ಟುಸಾಲದು ಎಂಬಂತೆ, ಆಸ್ಪತ್ರೆಯ ಆವರಣದಲ್ಲಿರುವ ಜೆನರಿಕ್ ಮಳಿಗೆಗಳ ಮೂಲಕ ಔಷಧಿಗಳನ್ನು ಮಾರಾಟ ಮಾಡಲಾಗುತ್ತದೆ! ಇದು ತನ್ನದೇ ನೀತಿಗೆ ತಾನೇ ವಿರುದ್ಧವಾಗಿ ನಡೆದುಕೊಳ್ಳುವುದು! 'ಉಚಿತವಾಗಿ ಔಷಧಿಗಳನ್ನು ಪೂರೈಸುತ್ತೇವೆ' ಎಂದು ಭರವಸೆ ನೀಡುತ್ತ ಜೊತೆಜೊತೆಗೆ ಅವುಗಳನ್ನು ಮಾರಾಟ ಮಾಡುವುದು!

ಉಚಿತವಾಗಿ ಔಷಧಿ ನೀಡುವುದಕ್ಕೆ ಅಧಿಕಾರಿಗಳ ಭ್ರಷ್ಟಾಚಾರವೇ ಅಡ್ಡಿಯಾಗಿದೆ. ಉದಾಹರಣೆಗೆ, ಲೋಕಾಯುಕ್ತ ನ್ಯಾಯಮೂರ್ತಿಯಾಗಿದ್ದ ಸಂತೋಷ ಹೆಗ್ಡೆ ಅವರು ರಾಜ್ಯದ ಸರ್ಕಾರಿ ಆಸ್ಪತ್ರೆಗಳಿಗೆ ಔಷಧ ಪೂರೈಕೆ ವಹಿವಾಟಿನಲ್ಲಿ ₹ 100 ಕೋಟಿ ಮೊತ್ತದ ಹಗರಣವನ್ನು 2011ರ ಮಾರ್ಚ್‌ನಲ್ಲಿ ಬಯಲಿಗೆ ಎಳೆದಿದ್ದರು. 2021ರಲ್ಲಿ, ಕೆಎಸ್‌ಎಂಎಸ್‌ಸಿಎಲ್ ₹ 3,000 ಕೋಟಿ ಮೊತ್ತದ ಉಪಕರಣಗಳ ಭಾರಿ ಅಕ್ರಮ ಖರೀದಿಯಲ್ಲಿ ತೊಡಗಿದ್ದು ಸರ್ಕಾರವು ಮಾರುಕಟ್ಟೆ ಬೆಲೆಗಿಂತ 2-3 ಪಟ್ಟು ಹೆಚ್ಚು ಹಣ ಪಾವತಿಸಿದೆ ಎಂಬ ಆರೋಪ ಕೇಳಿಬಂದಿತ್ತು. ಭ್ರಷ್ಟಾಚಾರ, ಆರ್ಥಿಕವಾಗಿ ದುರ್ಬಲರಾದವರ ಬಗ್ಗೆ ರಾಜಕೀಯ ಪಕ್ಷಗಳಲ್ಲಿ ಕಾಳಜಿ ಇಲ್ಲದಿರುವುದು ಮತ್ತು ನಾಯಕತ್ವದ ಕೊರತೆಯು ಕೆಎಸ್‌ಎಂಎಸ್‌ಸಿಎಲ್ ಅದಕ್ಷತೆಗೆ ಕಾರಣವಾಗಿದೆ.

ಔಷಧಿಗಳನ್ನು ಉಚಿತವಾಗಿ ನೀಡುವ ಪರಿಕಲ್ಪನೆಯು ನೆರೆಯ ರಾಜ್ಯವಾದ ತಮಿಳುನಾಡಿನಲ್ಲಿ ಮೂರ್ತರೂಪಕ್ಕೆ ಬಂದಿತು. ಅಲ್ಲಿನ ಸರ್ಕಾರವು ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ 1993ರಲ್ಲಿ ತಮಿಳುನಾಡು ವೈದ್ಯಕೀಯ ಸೇವಾ ಕೇಂದ್ರವನ್ನು ಸ್ಥಾಪಿಸಿತು. ಅಂದಿನಿಂದ ಇಂದಿನವರೆಗಿನ ಈ ಮೂವತ್ತು ವರ್ಷಗಳ ಅವಧಿಯಲ್ಲಿ ತಮಿಳುನಾಡು ಸರ್ಕಾರ ತನ್ನ ಜನರಿಗೆ ಯಶಸ್ವಿಯಾಗಿ ಉಚಿತ ಔಷಧಿಗಳನ್ನು ಕೊಡುತ್ತಿದೆ. ಈ ಕಾರಣದಿಂದ, ಚಿಕಿತ್ಸೆ ಪಡೆಯಲು ಸರ್ಕಾರಿ ಆಸ್ಪತ್ರೆಗೆ ಬರುವವರ ರಾಷ್ಟ್ರೀಯ ಸರಾಸರಿ ಪ್ರಮಾಣ ಶೇ 18ಕ್ಕೆ ಹೋಲಿಸಿದರೆ, ತಮಿಳುನಾಡಿನಲ್ಲಿ ಈ ಪ್ರಮಾಣ ಸುಮಾರು ಶೇ 40ರಷ್ಟಿದೆ. ಕರ್ನಾಟಕದಲ್ಲಿ ಇರುವಂತೆ ತಮಿಳುನಾಡಿನ ಸರ್ಕಾರಿ ಆಸ್ಪತ್ರೆಗಳ ಹೊರಭಾಗದಲ್ಲಿ ಯಾವುದೇ ಖಾಸಗಿ ಔಷಧಾಲಯಗಳಿಲ್ಲ ಎಂಬುದು ಗಮನಾರ್ಹ.

ತಮಿಳುನಾಡಿನಲ್ಲಿ ಭ್ರಷ್ಟಾಚಾರ ಇಲ್ಲವೆಂದೇನಿಲ್ಲ. ಆದರೂ ಅದರ ನಡುವೆಯೂ ಅವರು ಇದನ್ನು ಹೇಗೆ ಸಾಧಿಸಿರಬಹುದು ಎಂದು ಆಶ್ಚರ್ಯವಾಗುತ್ತದೆ. ರಾಜಕಾರಣಿಗಳು ಅಥವಾ ರಾಜಕೀಯ ಪಕ್ಷಗಳ ಹಸ್ತಕ್ಷೇಪ ಇಲ್ಲದೆ ಸ್ವಾಯತ್ತ ತಮಿಳುನಾಡು ವೈದ್ಯಕೀಯ ಸೇವಾ ನಿಗಮವನ್ನು (ಟಿಎನ್‌ಎಂಎಸ್‌ಸಿ) ಸ್ಥಾಪಿಸುವ ಮೂಲಕ ಆ ರಾಜ್ಯವು ಯಶಸ್ಸಿಗೆ ಮುಂದಡಿ ಇಟ್ಟಿತು. ನಿಗಮದ ಆಡಳಿತದ ಹೊಣೆಯನ್ನು ಅನುಭವಿ ಐಎಎಸ್ ಅಧಿಕಾರಿಗೆ ವಹಿಸಲಾಯಿತು. ಇದು, ಔಷಧಿಗಳ ಸಂಗ್ರಹದಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳುವುದರ ಜೊತೆಗೆ ಭಾರಿ ಬದಲಾವಣೆಗಳನ್ನು ತರುವುದಕ್ಕೆ ನೆರವಾಯಿತು. ಔಷಧ ಪೂರೈಕೆ ಸರಪಳಿಯನ್ನು ಸಮರ್ಥವಾಗಿ ನಿರ್ವಹಿಸಲಾಯಿತು. ಇದರ ಪರಿಣಾಮವಾಗಿ, ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆ ಉಂಟಾಗಲಿಲ್ಲ. ಗುಣಮಟ್ಟದ ಔಷಧಿಗಳನ್ನು ಪೂರೈಸಲು ವಿಫಲವಾದ ಔಷಧ ಕಂಪನಿಗಳಿಗೆ ನೋಟಿಸ್ ನೀಡಲಾಯಿತು ಮತ್ತು ಅವುಗಳ ಹೆಸರುಗಳನ್ನು ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಯಿತು.

ನಿಗಮವು ಇಡೀ ರಾಜ್ಯಕ್ಕೆ ಬೃಹತ್ ಪ್ರಮಾಣದಲ್ಲಿ ಔಷಧಿಗಳನ್ನು ಖರೀದಿಸುತ್ತದೆ. ಇದನ್ನು ವಿಶ್ವ ಆರೋಗ್ಯ ಸಂಸ್ಥೆಯು 'ಪೂಲ್ಡ್ ಪ್ರೊಕ್ಯೂರ್‌ಮೆಂಟ್' ಎಂದು ಕರೆಯುತ್ತದೆ. ಇಲ್ಲಿ ಔಷಧಿಗಾಗಿ ಮಾಡುವ ವೆಚ್ಚ ತುಂಬಾ ಕಡಿಮೆ. ಉದಾಹರಣೆಗೆ, ಪ್ಯಾರಸಿಟಮಾಲ್ ಮಾತ್ರೆಯ ಬೆಲೆ ಬರೀ 36 ಪೈಸೆ. ಆದರೆ ಹೊರಗೆ ಖರೀದಿಸಿದಾಗ ಅದರ ಬೆಲೆ ಸುಮಾರು ₹ 2. ಅಂತೆಯೇ, ಗ್ರಿಸಿಯೋಫುಲ್ವಿನ್ 125 ಮಿಲಿ ಗ್ರಾಂ ಮಾತ್ರೆಯ ಬೆಲೆ ನಿಗಮದ ಮೂಲಕ ಖರೀದಿಸಿದಾಗ ₹ 1.48 ಆದರೆ, ಹೊರಗೆ ಖರೀದಿಸಿದರೆ ಅದರ ಬೆಲೆ ಸುಮಾರು ₹ 5. ಇದರಿಂದ ಬೆಲೆಯಲ್ಲಿ ಭಾರಿ ವ್ಯತ್ಯಾಸ ಇರುವುದನ್ನು ಕಾಣಬಹುದು. ಔಷಧಿಯನ್ನು ದೊಡ್ಡ ಪ್ರಮಾಣದಲ್ಲಿ ಖರೀದಿಸಿದಾಗ ಅದರ ಬೆಲೆ ಇಳಿಯುತ್ತದೆ. ಅದರಿಂದ ಜನರಿಗೆ ಉಚಿತವಾಗಿ ಕೊಡಲು ಸಾಧ್ಯವಾಗುತ್ತದೆ.

ಕೇರಳ ಮತ್ತು ರಾಜಸ್ಥಾನದಂತಹ ಕೆಲವು ರಾಜ್ಯಗಳು ತಮಿಳುನಾಡು ಮಾದರಿಯನ್ನು ಅನುಸರಿಸಿವೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಔಷಧಿ ನೀಡುವ ಮೂಲಕ ಆರೋಗ್ಯ ಸೇವೆಗಳನ್ನು ಜನರಿಗೆ ತಲುಪಿಸುವಲ್ಲಿ ಯಶಸ್ಸು ಸಾಧಿಸಿವೆ. ಇದರಿಂದ, ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳು ಉಚಿತವಾಗಿ ಲಭ್ಯವಾಗುವಂತೆ ಮಾಡಲು ಸಾಧ್ಯ ಎಂಬುದು ಸ್ಪಷ್ಟವಾಗುತ್ತದೆ. ಆದರೆ, ಇದನ್ನು ಸಾಧಿಸಲು ಕರ್ನಾಟಕಕ್ಕೆ ನಿರ್ದಿಷ್ಟ ದೃಷ್ಟಿಕೋನದೊಂದಿಗೆ ಬದ್ಧ ನಾಯಕತ್ವದ ಅಗತ್ಯವೂ ಇದೆ.

ಆರೋಗ್ಯ ಸಚಿವರು ಜನರಿಗೆ ಉಚಿತವಾಗಿ ಔಷಧಿಗಳನ್ನು ಕೊಡಬಯಸಿದರೆ, ಪಟ್ಟಭದ್ರ ಹಿತಾಸಕ್ತಿಗಳನ್ನು ಅವರು ಮೊದಲು ನಿವಾರಿಸಬೇಕು. ಆಳವಾಗಿ ಬೇರೂರಿ ದೊಡ್ಡ ಮಟ್ಟದಲ್ಲಿ ಅಡೆತಡೆಗಳನ್ನು ಸೃಷ್ಟಿಸುವ ಭ್ರಷ್ಟಾಚಾರಿಗಳನ್ನು ಮಟ್ಟ ಹಾಕಬೇಕು. ಅವರು ಈ ಕಾರ್ಯದಲ್ಲಿ ಯಶಸ್ವಿಯಾಗುವರೇ?

ಲೇಖಕ: ಅಧ್ಯಕ್ಷ, ಡ್ರಗ್ ಆ್ಯಕ್ಷನ್ ಫೋರಂ, ಕರ್ನಾಟಕ

ಚುರುಮುರಿ

ಮಹಿಳಾ ಶಕ್ತಿ!

• ಬಿ.ಎನ್.ಮಲ್ಲೇಶ್

'ರೀ... ನಂಗೆ ಅರ್ಜೆಂಟ್ ಒಂದು ಡಜನ್ ಖಾದಿ ಸೀರೆ ಬೇಕು' ಹೆಂಡ್ತಿ ಪಮ್ಮಿ ಬೇಡಿಕೆ ಇಟ್ಟಾಗ ಕಕ್ಕಾಬಿಕ್ಕಿಯಾದ ತೆಪರೇಸಿ, 'ಒಂದ್ ಡಜನ್ನಾ? ಯಾಕೆ?' ಎಂದ.

'ಅವನ್ನೆಲ್ಲ ಈಗ್ಲೇ ಒಗೆದು, ಗಂಜಿ ಹಾಕಿ, ಇಸ್ತ್ರಿ ಮಾಡಿ ಇಟ್ಕಾಬೇಕು'.

'ಅದೇ ಯಾಕೆ ಅಂದೆ'.

'ಎಂ.ಪಿ. ಎಲೆಕ್ಷನ್‌ಗೆ ರೆಡಿಯಾಗಬೇಕು ಕಣ್ರೀ, ಮಹಿಳಾ ಮೀಸಲಾತಿ ಬರ್ತಿದೆಯಲ್ಲ, ನಾನೂ ಟಿಕೆಟ್ ಕೇಳ್ತಿದೀನಿ'.

'ಹೌದಾ? ನಿಂಗ್ಯಾರು ಟಿಕೆಟ್ ಕೊಡ್ತಾರೆ? ಯಾರಾದ್ರು ಸ್ವಾಮಿ ಗೀಮಿ ಬುಕ್ ಮಾಡ್ಕಂಡಿದೀಯ ಹೆಂಗೆ?' ತೆಪರೇಸಿ ನಕ್ಕ.

'ಹಂಗೋ ತಗೋತೀನಿ, ನನ್ ಹತ್ರ ಮಹಿಳಾ ಫೈರ್ ಬ್ರ್ಯಾಂಡ್‌ಗಳಿದಾವೆ, ಟಿಕೆಟ್ ತರ್ತೀನಿ, ಡೆಲ್ಲಿಗೆ ಹೋಗ್ತೀನಿ'.

'ನೀ ಡೆಲ್ಲಿಗೆ ಹೋದ್ರೆ ಇಲ್ಲಿ ನನ್ ಊಟದ ಗತಿ?'

'ನಿಮ್ಗೆ ಮಂಜಮ್ಮನ ಹೋಟ್ಲು ಐತಲ್ಲ'.

'ಹೋಟ್ಲು ಊಟ ದಿನಾ ತಿನ್ನೋಕಾಗುತ್ತಾ?'

'ಇಲ್ಲಾಂದ್ರೆ ಮನೇಲಿ ಅಡುಗೆ ಮಾಡ್ಕಳಿ, ಇಷ್ಟು ದಿನ ನಾವು ಮಾಡಿಲ್ವಾ?'

'ಇದೊಳ್ಳೆ ಕತೆಯಾತಪ, ಈ ಮಹಿಳಾ ಮೀಸಲಾತಿ ಯಾಕಾದ್ರು ಬರುತ್ತೋ' ತೆಪರೇಸಿ ಗೊಣಗಿದ.

ಅಷ್ಟರಲ್ಲಿ ಅಲ್ಲಿಗೆ ಬಂದ ಗುಡ್ಡೆ 'ಏನೋ ದೋಸ್ತಾ... ಏನೋ ಗೊಣಗ್ತಿದ್ದೆ?' ಅಂದ.

'ನೋಡು ಗುಡ್ಡೆ, ಇವರಿಗೆ ಮಹಿಳಾ ಮೀಸಲಾತಿ ಕುತ್ತಿಗೆಗೆ ಬಂದೇತಿ. ನಾವು ಎಂ.ಪಿ, ಎಮ್ಮೆಲ್ಲೆ ಆಗೋದು ಬ್ಯಾಡ್ವಾ? ಬರೀ ಇವರ ಚಾಕರಿ ಮಾಡ್ಕಂಡು ಬಿದ್ದಿರ್ಬೇಕಾ?' ಪಮ್ಮಿ ಆಕ್ಷೇಪಿಸಿದಳು.

'ಲೇ ತೆಪರ, ಈಗ್ಲೇ ಯಾಕೆ ತಲೆ ಕೆಡಿಸ್ಕಂತೀಯಲೆ. ಮೀಸಲಾತಿ ಬಂದು, ಟಿಕೆಟ್ ಸಿಕ್ಕು ಪಮ್ಮಕ್ಕ ಆಗ್ಲೇ ಎಂ.ಪಿ. ಆಗಿಬಿಟ್ಲಾ? ಅಕಸ್ಮಾತ್ ಎಂ.ಪಿ. ಆದ್ರು ಅಂತಿಟ್ಕಾ, ನೀ ಪಮ್ಮಕ್ಕನ ಪಿ.ಎ. ಆಗಿಬಿಡು. ನಿನ್ನ ಊಟ, ಮನಿ ಸಮಸ್ಯಿ ಎಲ್ಲ ಒಟ್ಟಿಗೇ ಬಗೆಹರೀತಾವು... ಹೆಂಗೆ?' ಎಂದ ನಗುತ್ತ. ಗುಡ್ಡೆ ಜೊತೆಗೆ ಪಮ್ಮಿಗೂ ನಗು ತಡೆಯಲಾಗಲಿಲ್ಲ.

ದಿನದ ಟ್ವೀಟ್

ಶುಭಾರಂಭ

ಮಹಿಳಾ ಮೀಸಲಾತಿ ಮಸೂದೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಬಹುಕಾಲದಿಂದ ಅದು ನನೆಗುದಿಗೆ ಬಿದ್ದಿತ್ತು. ಕೆಲವರ ಅಭಿಪ್ರಾಯದಂತೆ ಅದು ಪರಿಪೂರ್ಣ ಅಲ್ಲದೇ ಇರಬಹುದು. ಆದರೆ, ಸುಧಾರಣೆಯ ದಿಸೆಯಲ್ಲಿ ಹಲವು ಕಾನೂನುಗಳಿಗೆ ಕಾಲಕ್ಕೆ ತಕ್ಕಂತೆ ತಿದ್ದುಪಡಿ ತರಲಾಗಿದೆ ಮತ್ತು ಅವುಗಳಲ್ಲಿ ಸುಧಾರಣೆಯನ್ನೂ ತರಲಾಗಿದೆ. ಈಗ ಈ ಮೀಸಲಾತಿ ಪ್ರಕ್ರಿಯೆಗೆ ಕನಿಷ್ಠಪಕ್ಷ ಚಾಲನೆಯನ್ನಾದರೂ ನೀಡೋಣ.

ಜಾವೇದ್ ಅಖ್ತರ್, ಗೀತ ರಚನೆಕಾರ

ಕಿಡಿನುಡಿ

ಕಾವೇರಿ ವಿಷಯದಲ್ಲಿ ನೂರು ವರ್ಷಗಳಿಂದಲೂ ಕರ್ನಾಟಕಕ್ಕೆ ಅನ್ಯಾಯ ಆಗುತ್ತಲೇ ಬಂದಿದೆ. ಯಾರೇ ಅಧಿಕಾರದಲ್ಲಿ ಇರಲಿ, ದೆಹಲಿಯಲ್ಲಿ ತಮಿಳುನಾಡಿಗೆ ಇರುವ ರಾಜಕೀಯ ಬಲದ 10% ಕೂಡ ಕರ್ನಾಟಕಕ್ಕೆ ಇಲ್ಲ ಅನ್ನುವುದೇ ಸತ್ಯ. ತಮಿಳರ ಕೇಂದ್ರಿತ ರಾಜಕಾರಣದ ಫಲ ತಮಿಳರಿಗೆ ಇನ್ನೂ ಹಲವು ಕಾಲ ದೊರೆಯಲಿದೆ. ಕರ್ನಾಟಕಕ್ಕೆ ಅಂತಹ ಅನುಕೂಲ ಸದ್ಯಕ್ಕಂತೂ ಇಲ್ಲ.

ವಸಂತ ಶೆಟ್ಟಿ, ಬರಹಗಾರ

25 ವರ್ಷಗಳ ಹಿಂದೆ

ಮಂಗಳವಾರ, 22-9-1998

• ವನಾಂಚಲಕ್ಕೆ ಬಿಹಾರ ಸದನದ ತಿರಸ್ಕಾರ

ಪಟ್ನಾ, ಸೆ. 21 (ಯುಎನ್‌ಐ)- ಪರ ಹಾಗೂ ವಿರುದ್ಧದ ಅಭಿಪ್ರಾಯದಿಂದಾಗಿ ವಿವಾದ ಸೃಷ್ಟಿಸಿದ್ದ ಪ್ರತ್ಯೇಕ ವನಾಂಚಲ ಗುಡ್ಡಗಾಡು ರಾಜ್ಯ ರಚನೆ ಮಸೂದೆಯನ್ನು ಬಿಹಾರ ವಿಧಾನಸಭೆ ಇಂದು ರಾತ್ರಿ 181-107 ಮತಗಳಿಂದ ತಿರಸ್ಕರಿಸಿತು.

18 ಜಿಲ್ಲೆಗಳನ್ನು ಒಳಗೊಂಡ ಪ್ರತ್ಯೇಕ ಜಾರ್ಖಂಡ್ ರಾಜ್ಯ ರಚನೆಗೆ ಸಂಬಂಧಿಸಿದಂತೆ ಕಳೆದ ವರ್ಷ ಅಂಗೀಕರಿಸಿದ್ದ ನಿರ್ಣಯವನ್ನು ಹಿಂತೆಗೆದುಕೊಳ್ಳಲು ಸದನವು ರಾಬ್ಡಿ ದೇವಿ ನೇತೃತ್ವದ ಸರ್ಕಾರಕ್ಕೆ ಅನುಮತಿ ನೀಡಿತು.

ಆರ್‌ಜೆಡಿಯ 146, ಒಂಬತ್ತು ಮಂದಿ ಪಕ್ಷೇತರರು, ಕಾಂಗ್ರೆಸ್‌ನ 15 ಮಂದಿ ಹಾಗೂ ಸಿಪಿಐನಿಂದ ಉಚ್ಚಾಟಿತರಾದ ಆರು ಶಾಸಕರು ಮಸೂದೆ ವಿರುದ್ಧ ಮತ ಚಲಾಯಿಸಿದರು.

• ಗಂಗೂಬಾಯಿ ಹಾನಗಲ್‌ರಿಂದ ದಸರಾ ಉದ್ಘಾಟನೆ

ಮೈಸೂರು, ಸೆ. 21- ಚಾಮುಂಡಿ ದೇವಿಗೆ ಪೂಜೆಯ ನಂತರ, ಪ್ರಸಿದ್ಧ ಹಿಂದೂಸ್ತಾನಿ ಗಾಯಕಿ ಗಂಗೂಬಾಯಿ ಹಾನಗಲ್ ಅವರು ದಸರಾ ಉತ್ಸವವನ್ನು ಇಂದು ಬೆಳಿಗ್ಗೆ ಚಾಮುಂಡಿ ಬೆಟ್ಟದಲ್ಲಿ ಗಾಯನದ ಮೂಲಕ ವಿಶಿಷ್ಟವಾಗಿ ಉದ್ಘಾಟಿಸಿದರು.

ಬೆಟ್ಟದ ಮೇಲೆ ಹಠಾತ್ತನೆ ಆವರಿಸಿದ ಮಂಜಿನ ತೆರೆಗಳ ನಡುವೆ ದೀಪ ಬೆಳಗಿಸಿ ದಸರಾ ಉದ್ಘಾಟಿಸಿದ ಅವರು, ಭಾಷಣದ ಬದಲಿಗೆ ಪುತ್ರಿ ಕೃಷ್ಣಾ ಹಾನಗಲ್ ಅವರ ಜೊತೆ ಹಾಡಲು ತೊಡಗಿದ್ದು ಪ್ರೇಕ್ಷಕರ ಮೆಚ್ಚುಗೆಗೆ ಕಾರಣವಾಯಿತು.

50 ವರ್ಷಗಳ ಹಿಂದೆ

ಶನಿವಾರ, 22-9-1973

• ಆಂಧ್ರದ ಏಕತೆಗೆ 6 ಅಂಶಗಳ ಸೂತ್ರ: ಕಾಂಗ್ರೆಸ್ ಶಾಸಕರ ಒಪ್ಪಿಗೆ

ನವದೆಹಲಿ, ಸೆ. 21- ಹಿಂಸಾತ್ಮಕ ಚಳವಳಿ ಮೂಲಕ ಆಂಧ್ರಪ್ರದೇಶದ ಏಕತೆಗೆ ಬೆದರಿಕೆಯನ್ನು ಉಂಟುಮಾಡಿದ್ದ ದೀರ್ಘಕಾಲದ ಮುಲ್ಕಿ ನಿಯಮಗಳ ಬಿಕ್ಕಟ್ಟು ಇಂದು ಕೊನೆಗೊಂಡಿತು.

ಆಂಧ್ರ ಮತ್ತು ತೆಲಂಗಾಣ ವಿಭಾಗಗಳ ಕಾಂಗ್ರೆಸ್ ನಾಯಕರು ಮತ್ತು ಸಂಸತ್ ಸದಸ್ಯರು ಆರು ಅಂಶಗಳ ಸೂತ್ರವೊಂದಕ್ಕೆ ಬಹುತೇಕ ಒಮ್ಮತ ನೀಡಿ, ಸಹಿ ಹಾಕಿ ಇಂದು ಬಿಕ್ಕಟ್ಟು ಬಗೆಹರಿಸಿದರು.

• ಅಕ್ಟೋಬರ್ ಮೊದಲ ವಾರದಲ್ಲಿ ಕೃಷ್ಣಾ ಪಂಚಾಯಿತಿ ತೀರ್ಪು

ಬೆಂಗಳೂರು, ಸೆ. 21- ಕೃಷ್ಣಾ ನದಿ ನೀರಿನ ವಿವಾದದ ಸಂಬಂಧ ರಚಿಸಲಾಗಿರುವ ಪಂಚಾಯಿತಿ ಅಕ್ಟೋಬರ್ ಮೊದಲ ವಾರದಲ್ಲಿ ತನ್ನ ತೀರ್ಪನ್ನು ನೀಡುವ ನಿರೀಕ್ಷೆ ಇದೆ ಎಂದು ಭಾರಿ ನೀರಾವರಿ ರಾಜ್ಯ ಸಚಿವ ಎಚ್.ಎನ್. ನಂಜೇಗೌಡ ವಿಧಾನಸಭೆಯಲ್ಲಿ ತಿಳಿಸಿದರು.

ಗೋದಾವರಿ ನೀರಿನ ವಿವಾದದ ಸಂಬಂಧದಲ್ಲಿ ವಾದವಿನ್ನೂ ಆರಂಭವಾಗಿಲ್ಲವೆಂದೂ ಅದು ಅಕ್ಟೋಬರ್ 10ರಿಂದ ಶುರುವಾಗುವುದೆಂದೂ ಸಚಿವರು ಹೇಳಿದರು.

ಎಂ.ಎಸ್. ಕೃಷ್ಣನ್, ಎಚ್.ಟಿ. ಕೃಷ್ಣಪ್ಪ ಅವರುಗಳ ಅಲ್ಪಕಾಲಾವಧಿ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಕೃಷ್ಣಾ ಮತ್ತು ಗೋದಾವರಿ ನದಿ ನೀರಿನ ವಿವಾದದಲ್ಲಿ ರಾಜ್ಯದ ಪರ ವಾದಿಸಿದ 7 ವಕೀಲರಿಗೂ ಇಬ್ಬರು ತಾಂತ್ರಿಕ ಸಮಾಲೋಚಕರಿಗೂ 1969ರ ಮೇನಿಂದ 1973ರ ಏಪ್ರಿಲ್ ತಿಂಗಳವರೆಗೆ 14,35,892 ರೂ.ಗಳನ್ನು ನೀಡಲಾಗಿದೆ ಎಂದರು.

ಸಂಗತ

ಗ್ರಾಮೀಣ ಗ್ರಂಥಾಲಯ ಜನಸ್ನೇಹಿ ಆಗಲಿ

ಕಥೆ, ಕಾದಂಬರಿಯಂತಹ ಸಾಹಿತ್ಯ ಕೃತಿಗಳನ್ನು ಮಾತ್ರ ಗ್ರಂಥಾಲಯಗಳಲ್ಲಿ ಸಂಗ್ರಹಿಸಿ ಇಡುತ್ತೇವೆ ಎನ್ನುವುದು ವಿತಂಡವಾದವಾಗುತ್ತದೆ

• ರಾಜಕುಮಾರ ಕುಲಕರ್ಣಿ

ಗ್ರಾಮ ಪಂಚಾಯಿತಿ ಗ್ರಂಥಾಲಯ ಮೇಲ್ವಿಚಾರಕರ ತರಬೇತಿ ಶಿಬಿರದಲ್ಲಿ ಇತ್ತೀಚೆಗೆ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡಿದ್ದೆ. ಶಿಬಿರಾರ್ಥಿಗಳಲ್ಲಿ ಗ್ರಂಥಾಲಯಕ್ಕೆ ಸಂಬಂಧಿಸಿದಂತೆ ಹೊಸ ಸಂಗತಿಗಳನ್ನು ತಿಳಿದುಕೊಳ್ಳಬೇಕೆನ್ನುವ ಆಸಕ್ತಿ ಮತ್ತು ಕುತೂಹಲ ಇದ್ದುದು ಕಂಡುಬಂತು. ಉಪನ್ಯಾಸದ ಕೊನೆಗೆ ಇಪ್ಪತ್ತು ಪ್ರಶ್ನೆಗಳ ಕಿರುಪರೀಕ್ಷೆಯನ್ನು ನೀಡಲಾಯಿತು. ಪಡೆದ ಅಂಕಗಳನ್ನು ಆಧರಿಸಿ, ಅವರಿಗೆ ವೃತ್ತಿಯಲ್ಲಿ ಆಸಕ್ತಿ ಇದೆಯೋ ಇಲ್ಲವೋ ಎಂಬುದನ್ನು ಮೌಲ್ಯಮಾಪನದ ಮೂಲಕ ಗುರುತಿಸಲಾಯಿತು. ಪ್ರತಿಶತ 90ರಷ್ಟು ಶಿಬಿರಾರ್ಥಿಗಳು ವೃತ್ತಿಯಲ್ಲಿ ಆಸಕ್ತಿ ಇರುವ ಗುಂಪಿಗೆ ಸೇರ್ಪಡೆಯಾದರು.

'ನಿಮ್ಮ ಗ್ರಂಥಾಲಯ ವ್ಯಾಪ್ತಿಯಲ್ಲಿನ ಓದುಗರಿಗೆ ಅಗತ್ಯವಾದ ಪುಸ್ತಕಗಳು ನಿಮ್ಮಲ್ಲಿವೆಯೇ' ಎಂದು ಶಿಬಿರಾರ್ಥಿಗಳನ್ನು ಕೇಳಿದಾಗ, ಹೆಚ್ಚಿನವರ ಉತ್ತರ ನಕಾರಾತ್ಮಕವಾಗಿತ್ತು. ಪುಸ್ತಕ ಆಯ್ಕೆ ಸಮಿತಿಯಾಗಲೀ ಕೇಂದ್ರ ಗ್ರಂಥಾಲಯವಾಗಲೀ ಗ್ರಾಮೀಣ ಗ್ರಂಥಾಲಯಗಳಿಂದ ಬೇಡಿಕೆಯ ಪುಸ್ತಕಗಳ ಪಟ್ಟಿಯನ್ನು ಪಡೆಯುವುದಿಲ್ಲವೆಂಬ ಸಂಗತಿ ತಿಳಿದುಬಂತು. ಕೇಂದ್ರ ಗ್ರಂಥಾಲಯ ಪೂರೈಸುವ ಪುಸ್ತಕಗಳನ್ನಷ್ಟೇ ಸಂಗ್ರಹಿಸಿಡುವ ಕೆಲಸ ತಮ್ಮದೆಂದು ಕೆಲವರು ಬೇಸರ ವ್ಯಕ್ತಪಡಿಸಿದರು.

ರಾಜ್ಯದ ಗ್ರಾಮೀಣ ಭಾಗದ ಜನಜೀವನ, ಉದ್ಯೋಗ, ಕೃಷಿಯಲ್ಲಿ ವಿಭಿನ್ನತೆ ಇದೆ. ಹೀಗಾಗಿ, ಒಂದೇ ಪ್ರಕಾರದ ಪುಸ್ತಕಗಳನ್ನು ಎಲ್ಲ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ ಒದಗಿಸುವುದು ಅವೈಜ್ಞಾನಿಕ. ಐದು ಸಾವಿರಕ್ಕೂ ಹೆಚ್ಚು ಪಂಚಾಯಿತಿ ಗ್ರಂಥಾಲಯಗಳು ರಾಜ್ಯದಲ್ಲಿವೆ. ಇವನ್ನು ವಿಭಾಗವಾರು ವಿಂಗಡಿಸಿ, ಆಯಾ ಭಾಗದ ಜನರ ಆಸಕ್ತಿ, ಅಭಿರುಚಿ, ಅಗತ್ಯಗಳಿಗೆ ಅನುಸಾರವಾಗಿ ಪುಸ್ತಕಗಳು ಪೂರೈಕೆಯಾಗಬೇಕು.

ವಿಮರ್ಶಕ ನರಹಳ್ಳಿ ಬಾಲಸುಬ್ರಹ್ಮಣ್ಯ ಗ್ರಂಥಾಲಯಗಳ ದುಃಸ್ಥಿತಿ ಕುರಿತು ಹೀಗೆ ಬರೆಯುತ್ತಾರೆ, 'ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ ಬೇಕಾದ ಮೂಲ ಅಗತ್ಯಗಳಾದ ಸುಸಜ್ಜಿತ ಕಟ್ಟಡ, ಕಪಾಟುಗಳು, ಅಗತ್ಯದ ಗ್ರಂಥಗಳು, ಎಲ್ಲ ಪತ್ರಿಕೆಗಳನ್ನು ಒದಗಿಸಿಕೊಟ್ಟರೆ ನಮ್ಮ ಸಾಮಾಜಿಕ ರಚನೆಯ ಸ್ವರೂಪವೇ ಬದಲಾಗಬಹುದು. ರೈತನೊಬ್ಬನಿಗೆ ಅಗತ್ಯವಾದ ಮಾಹಿತಿ ಸಿಗುವಂತೆ ರೂಪಿಸಿದರೆ ನಮ್ಮ ಗ್ರಂಥಾಲಯಗಳು ಜನಸ್ನೇಹಿಯಾಗಬಹುದು'.

ಗ್ರಂಥಾಲಯ ಇಲಾಖೆಯು ಪುಸ್ತಕ ಆಯ್ಕೆ ಮತ್ತು ಖರೀದಿ ಪ್ರಕ್ರಿಯೆಯನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡಿದೆ. ಪುಸ್ತಕಗಳ ಆಯ್ಕೆಯಲ್ಲಿ ಗ್ರಾಮ ಪಂಚಾಯಿತಿ ಗ್ರಂಥಾಲಯ ಮೇಲ್ವಿಚಾರಕರ ಸಲಹೆ, ಸೂಚನೆಗಳನ್ನು ಪಡೆಯುತ್ತಿಲ್ಲ. ಜಿಲ್ಲಾ ಕೇಂದ್ರ ಗ್ರಂಥಾಲಯಗಳಿಗೂ ಜಿಲ್ಲೆಯ ಲೇಖಕರು, ಪ್ರಕಾಶಕರ ಇಂತಿಷ್ಟು ಪ್ರಮಾಣದ ಪುಸ್ತಕಗಳ ಖರೀದಿಯನ್ನು ಹೊರತುಪಡಿಸಿದರೆ ಹೆಚ್ಚಿನ ಅಧಿಕಾರವಿಲ್ಲ. ಅನೇಕ ಪ್ರಕಾಶಕರು ಆರೋಪಿಸುವಂತೆ, ಕೆಲವು ಪುಸ್ತಕ ಪ್ರಕಾಶಕರು ಆಯ್ಕೆ ಸಮಿತಿ ಮತ್ತು ಗ್ರಂಥಾಲಯ ಇಲಾಖೆಯ ಮೇಲೆ ಸಂಪೂರ್ಣ ಹಿಡಿತ ಹೊಂದಿದ್ದಾರೆ.

ಸಾರ್ವಜನಿಕ ಗ್ರಂಥಾಲಯಗಳಿಗೆಂದೇ ಪುಸ್ತಕಗಳನ್ನು ಪ್ರಕಟಿಸುವ ಇಂಥ ಪ್ರಕಾಶಕರು ಒಬ್ಬರೇ ಹಲವು ಹೆಸರಿನ ಪ್ರಕಾಶನ ಸಂಸ್ಥೆಗಳ ಮೂಲಕ ಪುಸ್ತಕಗಳನ್ನು ಪೂರೈಸುತ್ತಾರೆ. ಇಲ್ಲಿ ಅಧಿಕಾರಿಗಳು ಮತ್ತು ಪ್ರಕಾಶಕರ ವೈಯಕ್ತಿಕ ಹಿತಾಸಕ್ತಿ ಮುನ್ನೆಲೆಗೆ ಬಂದು, ಓದುಗರ ಬೇಡಿಕೆ ಮತ್ತು ಅಗತ್ಯ ಹಿನ್ನೆಲೆಗೆ ಸರಿಯುತ್ತವೆ.

ಇತ್ತೀಚೆಗೆ ನಿಧನರಾದ ವಿಮರ್ಶಕ ಜಿ.ಎಚ್. ನಾಯಕ ಅವರ ಕುರಿತು ಬರೆದ ಲೇಖನದಲ್ಲಿ ಎಚ್.ಎಸ್.ರಾಘವೇಂದ್ರ ರಾವ್ ಅವರು ಉಲ್ಲೇಖಿಸಿರುವ ಒಂದು ಪ್ರಕರಣ ಹೀಗಿದೆ- 'ನಾಯಕ್ ಅವರು ಗ್ರಂಥಾಲಯ ಇಲಾಖೆಯ ಪುಸ್ತಕ ಆಯ್ಕೆ ಸಮಿತಿಯ ಅಧ್ಯಕ್ಷರಾಗಿ ನೇಮಕವಾದಾಗ ಎರಡೋ ಮೂರೋ ದಿನಗಳಲ್ಲಿ ಸಾವಿರಾರು ಪುಸ್ತಕಗಳನ್ನು ಆಯ್ಕೆ ಮಾಡಬೇಕಾಗಿ ಬಂತು. ಸರಿಯಾಗಿ ಓದಿ ಮೌಲ್ಯಮಾಪನ ಮಾಡಲು ಅವಕಾಶ ಕೊಡದಿದ್ದರೆ ಈ ಕೆಲಸವೇ ಬೇಡವೆಂದು ಆ ಕ್ಷಣವೇ ರಾಜೀನಾಮೆ ಕೊಟ್ಟವರು ನಮ್ಮ ನಾಯಕರು. ಅವರ ಅಧ್ಯಕ್ಷ ಪದವಿ ಆ ಸಭೆಗೇ ಮುಗಿದುಹೋಯಿತು'. ಆದರೆ ಜಿ.ಎಚ್. ನಾಯಕ ಅವರಂತೆ ಮನಃಸಾಕ್ಷಿಗನುಗುಣವಾಗಿ ನಡೆದುಕೊಳ್ಳುವ ವ್ಯಕ್ತಿಗಳು ಈಗ ಸಿಗುವುದು ವಿರಳ.



ಗ್ರಾಮ ಪಂಚಾಯಿತಿ ಗ್ರಂಥಾಲಯಗಳ ಮೇಲ್ವಿಚಾರಕರು ಎದುರಿಸುತ್ತಿರುವ ಇನ್ನೊಂದು ಸಮಸ್ಯೆ ಎಂದರೆ, ಅವರು ಎರಡು ಪ್ರತ್ಯೇಕ ಇಲಾಖೆಗಳ ಅಧೀನದಲ್ಲಿ ಕಾರ್ಯನಿರ್ವಹಿಸಬೇಕಿದೆ. ಸಂಬಳವನ್ನು ಜಿಲ್ಲಾ ಪಂಚಾಯಿತಿ ಪಾವತಿಸಿದರೆ, ಗ್ರಂಥಾಲಯ ಇಲಾಖೆಯು ಪುಸ್ತಕಗಳನ್ನು ಪೂರೈಸುತ್ತದೆ. ಇವುಗಳ ನಡುವೆ ಹೊಂದಾಣಿಕೆಯಿದ್ದಾಗ ಮಾತ್ರ ಗ್ರಾಮ ಪಂಚಾಯಿತಿ ಗ್ರಂಥಾಲಯಗಳನ್ನು ಅಭಿವೃದ್ಧಿಪಡಿಸಲು ಸಾಧ್ಯ. ಜೊತೆಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು (ಪಿಡಿಒ) ಮತ್ತು ಮೇಲ್ವಿಚಾರಕರ ಮಧ್ಯೆ ಸಮನ್ವಯದ ಕೊರತೆ ಕೂಡ ಪ್ರಮುಖ ಸಮಸ್ಯೆಯಾಗಿದೆ. ಸಂಬಳವನ್ನು ನಿಯಮಿತವಾಗಿ ಪಾವತಿಸದೆ ವಿಳಂಬ ಮಾಡುತ್ತಿರುವುದು ಮೇಲ್ವಿಚಾರಕರಲ್ಲಿ ಕೆಲಸದ ನಿರಾಸಕ್ತಿಗೆ ಕಾರಣವಾಗಿದೆ. ಪುಸ್ತಕ ಖರೀದಿ ಪ್ರಕ್ರಿಯೆಯ ಕೇಂದ್ರೀಕೃತ ವ್ಯವಸ್ಥೆಯಿಂದಾಗಿಯೂ ಗ್ರಾಮೀಣ ಗ್ರಂಥಾಲಯಗಳ ಅಭಿವೃದ್ಧಿ ಸಾಧ್ಯವಾಗುತ್ತಿಲ್ಲ. ಒಟ್ಟಾರೆ, ಸುಧಾರಣೆ ಆಗಬೇಕಾಗಿರುವುದು ತಳಮಟ್ಟದಲ್ಲಲ್ಲ, ನೀತಿ ನಿಯಮಗಳನ್ನು ರೂಪಿಸುವ ಮತ್ತು ದೂರದಲ್ಲಿ ಕುಳಿತು ಏಕಪಕ್ಷೀಯ ನಿರ್ಧಾರ ತೆಗೆದುಕೊಳ್ಳುವ ಮೇಲ್ಮಟ್ಟದಲ್ಲಿ ಆಗಬೇಕು. ವಿಪರ್ಯಾಸವೆಂದರೆ, ನಾವು ಸದಾಕಾಲ ತಳಮಟ್ಟದ ಸುಧಾರಣೆಗಳತ್ತ ಗಮನಹರಿಸುತ್ತ ಮೇಲ್ಮಟ್ಟದ ಆಡಳಿತಶಾಹಿಯನ್ನು ಮರೆತುಬಿಡುತ್ತೇವೆ.

ವಾಚಕರ ವಾಣಿ

ಮಹಿಳೆಯರ ಬಲವರ್ಧನೆಗೆ ದಾರಿದೀಪ

ಭಾರತದಂತಹ ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರದ ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯ ಪ್ರಮಾಣ ಶೋಚನೀಯವಾಗಿದೆ. ಪ್ರಸಕ್ತ ಲೋಕಸಭೆಯಲ್ಲಿ ಮಹಿಳಾ ಸಂಸದರ ಪ್ರಮಾಣ ಅತ್ಯಂತ ಕಡಿಮೆ ಇರುವುದು ಇದಕ್ಕೆ ಕೈಗನ್ನಡಿ ಹಿಡಿಯುತ್ತದೆ. ಶಾಸನಸಭೆಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಗೆ ಹೆಚ್ಚಿನ ಅವಕಾಶ ಇರಬೇಕು. ಸಂಸತ್ತಿನ ಉಭಯ ಸದನಗಳಲ್ಲಿ ಈಗ ಅನುಮೋದನೆ ಪಡೆದಿರುವ ಮೀಸಲಾತಿಗೆ ಸಂಬಂಧಿಸಿದ ಮಸೂದೆಯು ಜಾರಿಗೆ ಬಂದರೆ ಇದು ಸಾಧ್ಯವಾಗಲಿದೆ. ಮಹಿಳೆಯರ ಸಬಲೀಕರಣಕ್ಕೆ ಇದು ದಾರಿದೀಪವಾಗಲಿದೆ.

ಅಶ್ವಿನಿ ರಾಮಚಂದ್ರ, ಮೈಸೂರು

ಪ್ರತಿ ಮನೆಯಲ್ಲಿ ಇರಲಿ ಸಂವಿಧಾನದ ಪ್ರತಿ

ಶಾಲೆಗಳಲ್ಲಿ ಸಂವಿಧಾನದ ಪೀಠಿಕೆ ಓದುವ ಅಗತ್ಯದ ಬಗ್ಗೆ, ಸಂವಿಧಾನದ ಆಶಯಗಳ ಬಗ್ಗೆ ದೇಶದಾದ್ಯಂತ ಚರ್ಚೆಗಳು ನಡೆಯುತ್ತಿವೆ. ಆದರೆ ಈ ಚರ್ಚೆ ಶ್ರೀಸಾಮಾನ್ಯನಿಗೆ ನಿಲುಕದ ವಿಷಯವಾಗಿದೆ. ಸಂವಿಧಾನ ಗಗನದ ತಾರೆಯಾಗಿದೆ. ತಿಳಿದೋ ತಿಳಿಯದೆಯೋ ಸಂವಿಧಾನದ ಕೆಲವು ಅಂಶಗಳನ್ನು ಪ್ರತಿ ಹೆಜ್ಜೆಗೂ ಶ್ರೀಸಾಮಾನ್ಯ ಅನುಸರಿಸುತ್ತಿದ್ದರೂ ಸಂವಿಧಾನವನ್ನು ಆಮೂಲಾಗ್ರವಾಗಿ ಪರಿಚಯಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ತನ್ನ ಹಕ್ಕು ಮತ್ತು ಕರ್ತವ್ಯಗಳೇನು ಎಂಬುದನ್ನು ಸಮಗ್ರವಾಗಿ ತಿಳಿದರೆ ಪ್ರಶ್ನಿಸುವ ಸ್ಥೈರ್ಯ ಬರುತ್ತದೆ.

ಸಂವಿಧಾನದ ಪ್ರತಿಯನ್ನು ಓದದೇ ಕೊನೆಯಪಕ್ಷ ಮುಟ್ಟದೇ ಕೋಟ್ಯಂತರ ಪ್ರಜೆಗಳು ತೀರಿಹೋಗಿದ್ದಾರೆ. ಇದೆಂತಹ ದುರಂತ?! ತನ್ನ ದೇಶದ ಹೃದಯ, ಮೆದುಳು ಆಗಿರುವ ಸಂವಿಧಾನದ ಬಗ್ಗೆ ಪ್ರತಿಯೊಬ್ಬ ನಾಗರಿಕನೂ ತಿಳಿಯುವಂತೆ ಮಾಡುವ ಕರ್ತವ್ಯ ನಮ್ಮ ಸರ್ಕಾರಗಳದ್ದು. ಆದ್ದರಿಂದ ಕೇಂದ್ರ ಸರ್ಕಾರವಾಗಲೀ ರಾಜ್ಯ ಸರ್ಕಾರಗಳಾಗಲೀ ಸಂವಿಧಾನದ ಪ್ರತಿಯನ್ನು ಆಯಾ ರಾಜ್ಯಭಾಷೆಗಳಲ್ಲಿ ಸರಳವಾದ ರೀತಿಯಲ್ಲಿ ಮುದ್ರಿಸಿ ಪ್ರತಿ ಮನೆಗೂ ಕಡಿಮೆ ಬೆಲೆಯಲ್ಲಿ ಅಥವಾ ಉಚಿತವಾಗಿ ಗ್ರಾಮ ಪಂಚಾಯಿತಿಗಳ ಮೂಲಕ ತಲುಪಿಸಲಿ. ಸಂವಿಧಾನದ ಕೃತಿಯು ಮನೆಗಳಲ್ಲಿ ಇತರ ಯಾವುದೇ ಕೃತಿಗಿಂತ ಶ್ರೇಷ್ಠವಾದ ಸ್ಥಾನ ಪಡೆಯುವಂತಾಗಲಿ.

ದಾಸೇಗೌಡ ಎಂ.ಆರ್., ಚಿತ್ರದುರ್ಗ

ತಿಂಡಿ ದರಪಟ್ಟಿ ಪ್ರದರ್ಶಿಸಿ

ಕೆಲವು ಹೋಟೆಲ್‌ಗಳಲ್ಲಿ ತಿಂಡಿಗಳ ಬೆಲೆಯನ್ನು ನಮೂದಿಸಿರುವ ಬೋರ್ಡ್ ಇರುತ್ತದೆ. ಇನ್ನು ಕೆಲವು ಹೋಟೆಲ್‌ಗಳಲ್ಲಿ ತಿಂಡಿಗಳ ಹೆಸರು ಅಥವಾ 'ಇಂದಿನ ಸ್ಪೆಷಲ್' ಎಂಬ ಶೀರ್ಷಿಕೆಯಡಿ ಕೆಲವು ತಿಂಡಿಗಳ ಹೆಸರುಗಳಷ್ಟೇ ಇರುತ್ತವೆ. ಆಗ ನಮಗೆ ಬೇಕಾದ ತಿಂಡಿಯ ಬೆಲೆಯನ್ನು ಕ್ಯಾಶಿಯರ್ ಬಳಿಯೇ ಕೇಳಿ ತಿಳಿದುಕೊಳ್ಳಬೇಕು. ಅದರ ಬೆಲೆಯೇನಾದರೂ ನಮ್ಮ ನಿರೀಕ್ಷೆಗಿಂತ ಹೆಚ್ಚಾಗಿದ್ದರೆ, ಇತರರ ಎದುರು ಮುಜುಗರವಾಗುತ್ತದೆ ಎಂಬ ಕಾರಣಕ್ಕೆ ಹೆಚ್ಚಿನ ಬೆಲೆ ತೆತ್ತು ಅದನ್ನು ಕೊಳ್ಳಬೇಕಾಗುತ್ತದೆ.

ಬೆಲೆ ನಮೂದಿಸಿರುವ ಬೋರ್ಡ್ ಇದ್ದರೆ, ತಿಂಡಿಗೆ ಬೆಲೆ ದುಬಾರಿ ಎನಿಸಿದಾಗ, ಬರೀ ಕಾಫಿ ಸೇವಿಸಿ ಬೇರೆಲ್ಲಿಯಾದರೂ ಕೈಗೆಟಕುವಲ್ಲಿ ಅದೇ ತಿಂಡಿ ತಿನ್ನಬಹುದು. ಹೀಗಾಗಿ, ಎಲ್ಲ ಹೋಟೆಲ್‌ಗಳಲ್ಲಿ ತಿಂಡಿಯ ಬೆಲೆ ನಮೂದು ಪಟ್ಟಿ ಅಳವಡಿಸುವುದನ್ನು ಕಡ್ಡಾಯ ಮಾಡಬೇಕು.

ರವಿಕಿರಣ್ ಶೇಖರ್, ಬೆಂಗಳೂರು

ಜನಪ್ರತಿನಿಧಿಗಳ ಕ್ಷೇತ್ರಭೇಟಿ: ಅಭಿವೃದ್ಧಿಗೆ ಪೂರಕ

ಸಂಕಟ ಬಂದಾಗ ವೆಂಕಟರಮಣ ಎಂಬ ಮಾತಿನಂತೆ, ಜನಪ್ರತಿನಿಧಿಗಳು ಸ್ಥಳಕ್ಕೆ ಭೇಟಿ ನೀಡುವ ಮುನ್ನ ಸ್ಥಳೀಯ ಅಧಿಕಾರಿಗಳು ಶಿಸ್ತಿನ ಸಿಪಾಯಿಗಳಂತೆ ಕೆಲಸ ಮಾಡುತ್ತಾರೆ. ಉದಾಹರಣೆಗೆ, ಕಲ್ಯಾಣ ಕರ್ನಾಟಕ ಅಮೃತ ಮಹೋತ್ಸವದ ಪ್ರಯುಕ್ತ ಕಲಬುರಗಿಯಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇತ್ತೀಚೆಗೆ ಪಾಲ್ಗೊಂಡಿದ್ದರು. ಮುಖ್ಯಮಂತ್ರಿ ಭೇಟಿ ಕಾರಣದಿಂದ, ಅವರು ತೆರಳುವ ಮಾರ್ಗದ ರಸ್ತೆಯ ಗುಂಡಿಗಳನ್ನು ದಿಢೀರನೆ ಮುಚ್ಚಲಾಯಿತು. ಜಿಲ್ಲಾ ಕೇಂದ್ರದ ಸ್ಥಿತಿಯೇ ಹೀಗಿರುವಾಗ, ಇನ್ನು ಹಳ್ಳಿಯ ರಸ್ತೆಗಳ ಬಗ್ಗೆ ಒಮ್ಮೆ ಯೋಚಿಸಬೇಕು. ಅದಕ್ಕಾಗಿಯೇ ಜನಪ್ರತಿನಿಧಿಗಳು ಆಗಾಗ ಕ್ಷೇತ್ರಭೇಟಿ ನಡೆಸುತ್ತಿರಬೇಕು.

ಆನಂದ ಜೇವೂರ್, ಕಲಬುರಗಿ

ಬೇಕು ತ್ವರಿತ ನ್ಯಾಯಾಲಯ

ವರುಣ ಕ್ಷೇತ್ರದ ಮಾಜಿ ಶಾಸಕ ಮತ್ತು ಮುಖ್ಯಮಂತ್ರಿಯವರ ಪುತ್ರ ಡಾ. ಯತೀಂದ್ರ ಸಿದ್ದರಾಮಯ್ಯ ಅವರು, 'ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ವರುಣ ಕ್ಷೇತ್ರದಲ್ಲಿ ಮಡಿವಾಳ ಸಮುದಾಯದವರನ್ನು ಸಂಘಟನೆ ಮಾಡುವ ಸಲುವಾಗಿ, ಸಾವಿರಾರು ಜನರನ್ನು ಸೇರಿಸಿ ಅವರೆಲ್ಲರಿಗೂ ಕುಕ್ಕರ್ ಮತ್ತು ಇಸ್ತ್ರಿಪೆಟ್ಟಿಗೆಗಳನ್ನು ನೀಡಲಾಗಿತ್ತು. ಆ ಸಮಾಜದ ರಾಜ್ಯ ಘಟಕದ ಅಧ್ಯಕ್ಷರು ನನ್ನ ತಂದೆ ಸಿದ್ದರಾಮಯ್ಯ ಅವರ ಕೈಯಿಂದಲೇ ಅವುಗಳನ್ನು ಕೊಡಿಸಿದ್ದರು' ಎಂದು ಹೇಳಿರುವುದಾಗಿ ವರದಿಯಾಗಿದೆ. ಈ ಮಾತು ಯಾವುದೇ ವಿರೋಧ ಪಕ್ಷದ ನಾಯಕರ ಬಾಯಿಂದ ಬಂದದ್ದಲ್ಲ. ಬದಲಾಗಿ, ತಮ್ಮ ಕ್ಷೇತ್ರವನ್ನು ತಂದೆಗಾಗಿ ಬಿಟ್ಟುಕೊಟ್ಟು ಚುನಾವಣಾ ಉಸ್ತುವಾರಿಯನ್ನು ಸಂಪೂರ್ಣವಾಗಿ ನಿರ್ವಹಿಸಿ, ಅವರ ಗೆಲುವಿಗಾಗಿ ಶ್ರಮಿಸಿದವರ ಬಾಯಿಂದ ಬಂದಿರುವುದು.

ಮಡಿವಾಳ ಸಮುದಾಯದಂತೆಯೇ ಕ್ಷೇತ್ರದ ಇತರ ಸಮುದಾಯಗಳಿಗೂ ಚುನಾವಣಾ ಸಂದರ್ಭದಲ್ಲಿ ಇಂತಹ ಕೊಡುಗೆಗಳನ್ನು ನೀಡಿರಬಹುದೆಂಬ ಅನುಮಾನ ಸಹಜವಾಗಿಯೇ ಮೂಡುತ್ತದೆ. ಅವರ ಹೇಳಿಕೆಗೆ ಪ್ರತಿಯಾಗಿ ಆರೋಪ, ಪ್ರತ್ಯಾರೋಪಗಳ ಕದನ ಪ್ರಾರಂಭಗೊಂಡಿದೆ. ಚುನಾವಣಾ ಆಯೋಗವೆಂಬ ಸಾಂವಿಧಾನಿಕ ಮತ್ತು ಸ್ವಾಯತ್ತ ಸಂಸ್ಥೆಯು ಮಾದರಿ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದು, ತನ್ನ ಪಾಲಿನ ಸಾಂವಿಧಾನಿಕ ಕರ್ತವ್ಯವನ್ನು ನಿರ್ವಹಿಸುವಲ್ಲಿ ವಿಫಲವಾಯಿತೇ ಎಂಬುದು ಮೂಲಭೂತ ಪ್ರಶ್ನೆ. ಆಮಿಷ ಒಡ್ಡಿದ್ದರೆ ಅದಕ್ಕೆ ಕಾರಣರಾದವರ ಮೇಲೆ ಅದು ಕ್ರಮ ಕೈಗೊಳ್ಳುವುದೇ? ಈ ಕ್ಷೇತ್ರ ಮಾತ್ರವಲ್ಲ, ಚುನಾವಣಾ ಅಕ್ರಮಗಳು ಇತರ ಕ್ಷೇತ್ರಗಳಲ್ಲಿಯೂ ನಡೆದಿರುವ ಸಾಧ್ಯತೆ ಇದ್ದೇ ಇದೆ. ಅವ್ಯಾವುವೂ ಈವರೆಗೆ ಈಚೆಗೆ ಬಂದಿಲ್ಲದಿರಬಹುದಷ್ಟೆ! ಚುನಾವಣಾ ಅಕ್ರಮ ಕುರಿತ ಪ್ರಕರಣಗಳ ಶೀಘ್ರ ಇತ್ಯರ್ಥಕ್ಕೆ ತ್ವರಿತ ನ್ಯಾಯಾಲಯಗಳ ಸ್ಥಾಪನೆ ಪರಿಹಾರವಾಗಬಲ್ಲದು. ಜೊತೆಗೆ, ಆಯೋಗ ಮತ್ತಷ್ಟು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುವ ಅಗತ್ಯವೂ ಇದೆ.

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೆನಡಾದಲ್ಲಿ ಭಾರತೀಯರು ಸುರಕ್ಷಿತರೇ...

ಭಾರತ–ಕೆನಡಾ ನಡುವಣ ರಾಜತಾಂತ್ರಿಕ ಸಂಬಂಧ ತೀರಾ ಬಿಗಡಾಯಿಸಿದೆ. ಎರಡೂ ದೇಶಗಳು ಪರಸ್ಪರರಲ್ಲಿನ ರಾಜತಾಂತ್ರಿಕ ಅಧಿಕಾರಿಗಳಿಗೆ ಹೊರಹೋಗುವಂತೆ ಹೇಳಿವೆ. ಕೆನಡಾದಲ್ಲಿನ ಖಾಲಿಸ್ತಾನ ಪ್ರತ್ಯೇಕತಾವಾದಿಗಳು, ಕೆನಡಾ ಹಿಂದೂಗಳಿಗೆ ಬೆದರಿಕೆ ಒಡ್ಡಿದ್ದಾರೆ. ಈ ಬೆದರಿಕೆ ಸಂಬಂಧ ಕೆನಡಾ ಸರ್ಕಾರ ಈವರೆಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇದು ತೀವ್ರ ಕಳವಳಕ್ಕೆ ಕಾರಣವಾಗಿವೆ. ಇವೆಲ್ಲವುಗಳ ಮಧ್ಯೆಯೇ ಈ ಸಂಘರ್ಷದಲ್ಲಿ ತಾವು ಭಾರತದ ಪರ ನಿಲ್ಲಬೇಕೇ ಅಥವಾ ಕೆನಡಾ ಪರ ನಿಲ್ಲಬೇಕೇ ಎಂಬುದು ಜಾಗತಿಕ ಮಟ್ಟದಲ್ಲಿ ತಲೆದೋರಿರುವ ಚರ್ಚೆ. ಆದರೆ ಕೆನಡಾದಲ್ಲಿ ಸುಮಾರು 17 ಲಕ್ಷದಷ್ಟಿರುವ ಭಾರತೀಯರು ಏನು ಮಾಡಬೇಕು? ಈ ಬೆಳವಣಿಗೆಗಳು ಅವರನ್ನು ಬಾಧಿಸುತ್ತವೆಯೇ ಕೆನಡಾದಲ್ಲಿ ಅವರೆಲ್ಲರೂ ಸುರಕ್ಷಿತವೇ? ಎಂಬ ಹಲವು ಪ್ರಶ್ನೆಗಳು ಎದ್ದಿವೆ

ಪ್ರಜಾವಾಣಿ ವಾರ್ತೆ

ಕೆನಡಾದಲ್ಲಿ ಇರುವ ಎಲ್ಲಾ ಹಿಂದೂಗಳು ಭಾರತಕ್ಕೆ ಓಡಿಹೋಗಬೇಕು. ನಿಮಗೆ ಇದೇ 25ರವರೆಗೆ ಸಮಯ ನೀಡುತ್ತೇವೆ. ನೀವು ಕೆನಡಾ ಬಿಟ್ಟುಹೋಗದಿದ್ದರೆ, ಮುಂದೆ ನಡೆಯುವ ಎಲ್ಲಾ ಕೃತ್ಯಗಳಿಗೂ ನೀವೇ ಹೊಣೆಗಾರರಾಗಬೇಕಾಗುತ್ತದೆ

–ಕೆನಡಾದಲ್ಲಿನ ಖಾಲಿಸ್ತಾನ ಪ್ರತ್ಯೇಕತಾವಾದಿ ನಾಯಕ ಗುರುಪತ್ವಂತ್ ಸಿಂಗ್ ಪನ್ನು ಯುಟ್ಯೂಬ್ ವಾಹಿನಿಯೊಂದಕ್ಕೆ ಬುಧವಾರ ನೀಡಿದ ಸಂದರ್ಶನದಲ್ಲಿ ಒಡ್ಡಿದ ಬೆದರಿಕೆ ಇದು

*****

ಕೆನಡಾದಲ್ಲಿ ಹಿಂದೂಗಳನ್ನು ಗುರಿಮಾಡಿಕೊಂಡು ನಡೆಸುತ್ತಿರುವ ದಾಳಿಗಳ ಬಗ್ಗೆ ನನಗೆ ಅರಿವಿದೆ. ಎಲ್ಲಾ ಸಿಖ್ಖರೂ ಖಾಲಿಸ್ತಾನದ ಪರವಾಗಿಲ್ಲ. ಕೆನಡಾ ಹಿಂದೂಗಳು–ಸಿಖ್ಖರು ಒಟ್ಟಿಗಿದ್ದಾರೆ. ಹಿಂದೂಗಳು ಗಾಬರಿಯಾಗಬೇಕಿಲ್ಲ, ಆದರೆ ಎಚ್ಚರಿಕೆಯಿಂದ ಇರಬೇಕು. ತಮ್ಮ ಮೇಲೆ ಯಾರಾದರೂ ದ್ವೇಷಕಾರಿದರೆ, ದಾಳಿಗೆ ಮುಂದಾದರೆ ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಿ

–ಕೆನಡಾದ ಆಡಳಿತಾರೂಢ ಲಿಬರಲ್ ಪಾರ್ಟಿ ಆಫ್ ಕೆನಡಾದ ಸಂಸದ ಮತ್ತು ಕನ್ನಡಿಗ ಚಂದ್ರ ಆರ್ಯ ಅವರು ತಮ್ಮ 'ಎಕ್ಸ್' ಖಾತೆಯಲ್ಲಿ ಪ್ರಕಟಿಸಿದ ವಿಡಿಯೊ ಮತ್ತು ಬರಹದ ಆಯ್ದ ಭಾಗವಿದು

*****

ಈ ಇಬ್ಬರ ವಿಡಿಯೊ ಇರುವ ಪೋಸ್ಟ್‌ಗಳು 'ಎಕ್ಸ್'ನಲ್ಲಿ ಸತತ 20 ಗಂಟೆಯಿಂದ ಟ್ರೆಂಡಿಂಗ್‌ನಲ್ಲಿವೆ. ಒಂದು ವಿಡಿಯೊದಲ್ಲಿ ಕೆನಡಾ ಹಿಂದೂಗಳಿಗೆ ಖಾಲಿಸ್ತಾನ ಪ್ರತ್ಯೇಕತಾವಾದಿಗಳು ಬೆದರಿಕೆ ಒಡ್ಡಿದ್ದಾರೆ. ಮತ್ತೊಂದರಲ್ಲಿ ಆ ಬೆದರಿಕೆಯನ್ನು ಎಷ್ಟು ಗಂಭೀರವಾಗಿ ಪರಿಗಣಿಸಬೇಕು ಎಂಬುದರ ಎಚ್ಚರಿಕೆಯನ್ನು ಭಾರತೀಯ ಮೂಲದ ಕೆನಡಾ ಸಂಸದ ನೀಡಿದ್ದಾರೆ. ಈ ಎರಡೂ ವಿಡಿಯೊಗಳು ಕೆನಡಾದಲ್ಲಿರುವ ಭಾರತೀಯರ ಸ್ಥಿತಿ ಏನು ಎಂಬುದನ್ನು ಕಟ್ಟಿಕೊಡುತ್ತವೆ.

ಕೆನಡಾ ಸರ್ಕಾರದ್ದೇ ಅಂಕಿಅಂಶಗಳ ಪ್ರಕಾರ ಅಲ್ಲಿನ ಪೌರತ್ವ ಪಡೆದಿರುವ ಭಾರತೀಯರ ಸಂಖ್ಯೆ 13 ಲಕ್ಷಕ್ಕೂ ಹೆಚ್ಚು. ಕೆನಡಾದ ಒಟ್ಟು ಜನಸಂಖ್ಯೆಯಲ್ಲಿ ಭಾರತೀಯರ ಪ್ರಮಾಣ ಶೇ 4ಕ್ಕಿಂತಲೂ ಹೆಚ್ಚು ಎಂದು ಅಲ್ಲಿನ ಸರ್ಕಾರವೇ ಹೇಳಿಕೊಂಡಿದೆ. ಇದಲ್ಲದೆ ಪ್ರತಿ ವರ್ಷ 3 ಲಕ್ಷಕ್ಕೂ ಹೆಚ್ಚು ಭಾರತೀಯ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕಾಗಿ ಕೆನಡಾಕ್ಕೆ ಹೋಗುತ್ತಾರೆ. 2022ರಲ್ಲಿ ಈ ಸಂಖ್ಯೆ ಗರಿಷ್ಠಮಟ್ಟ ಮುಟ್ಟಿದ್ದು, 3.20 ಲಕ್ಷ ಭಾರತೀಯ ವಿದ್ಯಾರ್ಥಿಗಳು ಕೆನಡಾದಲ್ಲಿ ವಿವಿಧ ಕೋರ್ಸ್‌ಗಳಿಗೆ ಸೇರಿದ್ದಾರೆ. ಈ ಎಲ್ಲಾ ಅಂಕಿ–ಅಂಶಗಳ ಪ್ರಕಾರ ಲೆಕ್ಕಹಾಕಿದರೂ ಕೆನಡಾದಲ್ಲಿ ಈಗ 16 ಲಕ್ಷಕ್ಕೂ ಹೆಚ್ಚು ಭಾರತೀಯರಿದ್ದಾರೆ. ಇವುಗಳಲ್ಲಿ ಸಿಖ್ಖರ ಸಂಖ್ಯೆ ಎಷ್ಟು, ಹಿಂದೂಗಳ ಸಂಖ್ಯೆ ಎಷ್ಟು, ಬೇರೆ ಧರ್ಮದವರ ಸಂಖ್ಯೆ ಎಷ್ಟು ಎಂಬುದರ ಮಾಹಿತಿ ಲಭ್ಯವಿಲ್ಲ. ಇರುವ ಸಿಖ್ಖರಲ್ಲಿ ಖಾಲಿಸ್ತಾನ ಪ್ರತ್ಯೇಕತಾವಾದಿಗಳ ಪರವಾಗಿ ಇರುವವರು ಎಷ್ಟು ಎಂಬುದರ ಮಾಹಿತಿಯೂ ಇಲ್ಲ. ಇದರ ಮಧ್ಯೆಯೇ ಅಲ್ಲಿರುವ ಹಿಂದೂಗಳಿಗೆ ಖಾಲಿಸ್ತಾನ ಪ್ರತ್ಯೇಕತಾವಾದಿಗಳು ಬೆದರಿಕೆ ಒಡ್ಡಿದ್ದಾರೆ.

ಜೂನ್–ಆಗಸ್ಟ್ ಮಧ್ಯೆ ಕೆನಡಾದ ಹಲವು ಪ್ರದೇಶಗಳಲ್ಲಿ ಹಿಂದೂ ದೇವಾಲಯಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿತ್ತು. ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಈ ಬಗ್ಗೆ ಕೆನಡಾ ಸರ್ಕಾರದ ಗಮನವನ್ನು ಪದೇ ಪದೇ ಸೆಳೆದಿತ್ತು. ಈ ಬಗ್ಗೆ ದಿನಗಳ ಹಿಂದೆಯೂ ಆತಂಕ ವ್ಯಕ್ತಪಡಿಸಿತ್ತು. ಭಾರತದ ಆತಂಕಕ್ಕೆ ಆಧಾರಗಳಿಲ್ಲ. ಇಂತಹ ಕಡೆ, ಹೀಗೆ ಆಗಿದೆ ಎಂಬುದನ್ನು ಸಾಕ್ಷ್ಯ ಸಮೇತ ವಿವರಿಸಿ ಎಂದು ಕೆನಡಾ ಸರ್ಕಾರವು ಭಾರತದ ಕಳವಳವನ್ನು ತಳ್ಳಿಹಾಕಿತ್ತು. ಅದಕ್ಕಿಂತಲೂ ಆತಂಕಕಾರಿ ಅಂಶವೆಂದರೆ ಬೆದರಿಕೆ ಒಡ್ಡಿದ ಗುರುಪತ್ವಂತ್ ಸಿಂಗ್ ಪನ್ನು ವಿರುದ್ಧ ಕೆನಡಾ ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇದನ್ನು ಕೆನಡಾದಲ್ಲಿನ ಹಿಂದೂಗಳು ಪ್ರಶ್ನಿಸುತ್ತಿದ್ದಾರೆ. 'ನಾವು ಇಲ್ಲಿನ ಪೌರತ್ವ ಪಡೆದಿದ್ದೇವೆ, ನಾವೂ ಇಲ್ಲಿ ತೆರಿಗೆ ಕಟ್ಟುತ್ತೇವೆ. ನಮಗೆ ಭದ್ರತೆ ಒದಗಿಸುವುದು ಸರ್ಕಾರದ ಹೊಣೆಯಲ್ಲವೇ? ನಮಗೆ ಬೆದರಿಕೆ ಒಡ್ಡಿದವರ ವಿರುದ್ಧ ಈವರೆಗೆ ಕ್ರಮವನ್ನೇಕೆ ತೆಗೆದುಕೊಂಡಿಲ್ಲ' ಎಂದು ಸಾಮಾಜಿಕ ಜಾಲತಾಣಗಳಲ್ಲಿ ಪ್ರಶ್ನಿಸಿದ್ದಾರೆ.

ಅಲ್ಲಿ ನಿರ್ಮಾಣವಾಗಿರುವ ಆತಂಕದ ವಾತಾವರಣವನ್ನು ತಿಳಿಗೊಳಿಸುವ ಉದ್ದೇಶದಿಂದಲೇ ಚಂದ್ರ ಆರ್ಯ ಅವರು ವಿಡಿಯೊ ಮಾಡಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದು, ಅಲ್ಲಿರುವ ಭಾರತೀಯರು ಗಾಬರಿಯಾಗುವ ಅಗತ್ಯವಿಲ್ಲ ಎಂದು ಅವರು ಹೇಳುತ್ತಿದ್ದಾರಾದರೂ, ಎಚ್ಚರಿಕೆಯಿಂದ ಇರಿ ಎಂಬ ಕಿವಿಮಾತನ್ನೂ ಹೇಳಿದ್ದಾರೆ. ಭಾರತ ಸರ್ಕಾರವೂ ಇಂಥದ್ದೇ ಎಚ್ಚರಿಕೆ ನೀಡಿದೆ.

ಆಧಾರ: ರಾಯಿಟರ್ಸ್, ಎಎಫ್‌ಪಿ, ಬಿಬಿಸಿ, ಪಿಟಿಐ

ಕೆನಡಾದಲ್ಲಿ ಖಾಲಿಸ್ತಾನ ಪ್ರತ್ಯೇಕತಾವಾದಿಗಳು ನಡೆಸಿದ್ದ ಸ್ತಬ್ಧಚಿತ್ರ ಮೆರವಣಿಗೆಯಲ್ಲಿ ಇಂದಿರಾ ಗಾಂಧಿ ಅವರ ರಕ್ತಸಿಕ್ತ ಪ್ರತಿಕೃತಿ

3.98 ಕೋಟಿ ಕೆನಡಾದ ಒಟ್ಟು ಜನಸಂಖ್ಯೆ

13 ಲಕ್ಷ ಕೆನಡಾದ ಪೌರತ್ವ ಪಡೆದಿರುವ ಭಾರತೀಯರ ಸಂಖ್ಯೆ

3.80 ಲಕ್ಷ ಕೆನಡಾದಲ್ಲಿರುವ ಭಾರತದ ವಿದ್ಯಾರ್ಥಿಗಳ ಸಂಖ್ಯೆ

16.80 ಲಕ್ಷ ಕೆನಡಾದಲ್ಲಿರುವ ಭಾರತೀಯರ ಒಟ್ಟು ಸಂಖ್ಯೆ

4% ಕೆನಡಾದ ಜನಸಂಖ್ಯೆಯಲ್ಲಿ ಭಾರತೀಯರ ಪ್ರಮಾಣ

ಅಮೆರಿಕ, ಬ್ರಿಟನ್‌ನ ಕಾದುನೋಡುವ ತಂತ್ರ

2007ರಲ್ಲಿ ಪಂಜಾಬ್‌ನಲ್ಲಿ ನಡೆದಿದ್ದ ಬಾಂಬ್ ಸ್ಫೋಟ ಪ್ರಕರಣದಲ್ಲಿ ಬೇಕಾಗಿದ್ದ ಹರದೀಪ್ ಸಿಂಗ್ ನಿಜ್ಜಾರ್‌ನನ್ನು ಭಾರತ ಸರ್ಕಾರವು ಉಗ್ರರ ಪಟ್ಟಿಗೆ ಸೇರಿಸಿತ್ತು. ಭಾರತದಲ್ಲಿ ಉಗ್ರರ ಸಂಘಟನೆ ಎಂದು ಪಟ್ಟಿಮಾಡಲಾಗಿರುವ ಖಾಲಿಸ್ತಾನ್ ಟೈಗರ್ ಫೋರ್ಸ್‌ನ ಅಧ್ಯಕ್ಷನಾಗಿದ್ದ ನಿಜ್ಜಾರ್, 1990ರ ದಶಕದಲ್ಲೇ ಭಾರತ ತೊರೆದು ಕೆನಡಾ ಸೇರಿದ್ದ. ಅಲ್ಲಿನ ಪೌರತ್ವವನ್ನೂ ಪಡೆದಿದ್ದ. ಖಾಲಿಸ್ತಾನ ಪ್ರತ್ಯೇಕತಾವಾದಿಗಳಿಗೆ ತರಬೇತಿ ಮತ್ತಿತರ ನೆರವು ನೀಡಿದ ಆರೋಪಗಳೂ ಆತನ ಮೇಲಿದ್ದವು. ಆತನ ಹೆಸರಿದ್ದ ಉಗ್ರರ ಪಟ್ಟಿಯನ್ನು ಭಾರತ ಈಚಿನ ವರ್ಷಗಳಲ್ಲಿ ಕೆನಡಾಕ್ಕೆ ಹಸ್ತಾಂತರಿಸಿತ್ತು. ಕೆನಡಾ ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿರಲಿಲ್ಲ. ಕೆನಡಾದ ಬ್ರಿಟಿಷ್ ಕೊಲಂಬಿಯಾದ ಸರ್‍ರೆಯಲ್ಲಿನ ಗುರುದ್ವಾರದ ಅಧ್ಯಕ್ಷನಾಗಿದ್ದ ನಿಜ್ಜಾರ್‌ನನ್ನು ಇಬ್ಬರು ಮುಸುಕುಧಾರಿಗಳು ಇದೇ ಜೂನ್‌ನಲ್ಲಿ ಗುಂಡಿಟ್ಟು ಕೊಂದರು. ಭಾರತ ಮತ್ತು ಕೆನಡಾ ಸಂಬಂಧ ಹದಗೆಡಲು ಅಲ್ಲಿಂದ ಆರಂಭವಾಯಿತು.

'ಭಾರತ ಸರ್ಕಾರದ ಏಜೆಂಟರೇ ನಮ್ಮ ನಿಜ್ಜಾರ್‌ನನ್ನು ಕೊಂದಿದ್ದಾರೆ. ಇದು ಭಾರತ ಸರ್ಕಾರದ್ದೇ ಕೃತ್ಯ' ಎಂದು ಖಾಲಿಸ್ತಾನ್ ಟೈಗರ್ ಫೋರ್ಸ್ ಮತ್ತು ಖಾಲಿಸ್ತಾನ ಪ್ರತ್ಯೇಕತಾವಾದಿಗಳು ಆರೋಪಿಸುತ್ತಿದ್ದರು. ಜತೆಗೆ ಇದಕ್ಕಾಗಿ ಕೆನಡಾದುದ್ದಕ್ಕೂ ಪ್ರತಿಭಟನೆಗಳನ್ನು ನಡೆಸಿದ್ದರು. ಭಾರತದ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿ ಅವರನ್ನು ಸಿಖ್ಖರು ಗುಂಡಿಟ್ಟು ಕೊಲ್ಲುವ ಸ್ತಬ್ಧಚಿತ್ರದ ಮೆರವಣಿಗೆಯೂ ನಡೆಯಿತು. ಇದರ ವಿರುದ್ಧ ಭಾರತ ಪ್ರತಿಭಟನೆಯನ್ನೂ ದಾಖಲಿಸಿತ್ತು. ಆದರೆ ಸಂಬಂಧ ತೀರಾ ಬಿಗಡಾಯಿಸಿದ್ದು, ಕೆನಡಾ ಸರ್ಕಾರವೂ ಇಂಥದ್ದೇ ಆರೋಪವನ್ನು ಮಾಡಿದಾಗ.

ಹರದೀಪ್ ಸಿಂಗ್ ನಿಜ್ಜಾರ್ ಹತ್ಯೆ ಖಂಡಿಸಿ ಬ್ರಿಟಿಷ್ ಕೊಲಂಬಿಯಾದ ಸರ್‍ರೆಯಲ್ಲಿ ಸೆಪ್ಟೆಂಬರ್ 19ರಂದು ನಡೆದಿದ್ದ ಪ್ರತಿಭಟನೆ ವೇಳೆ ಗುರುದ್ವಾರದ ಗೇಟಿಗೆ ಹಾಕಲಾಗಿದ್ದ ಪೋಸ್ಟರ್ —ಎಎಫ್‌ಪಿ ಚಿತ್ರ

ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ, 'ಹರದೀಪ್ ಸಿಂಗ್ ನಿಜ್ಜಾರ್‌ನ ಹತ್ಯೆಯಲ್ಲಿ ಭಾರತೀಯ ಏಜೆಂಟರ ಕೈವಾಡವಿದೆ ಎಂಬುದಕ್ಕೆ ಸಾಕ್ಷ್ಯಗಳಿವೆ' ಎಂದು ಆರೋಪಿಸಿದರು. ಕೆನಡಾ ವಿದೇಶಾಂಗ ಸಚಿವಾಲಯವು, 'ಬೇರೆ ಯಾವುದೋ ಒಂದು ದೇಶವು ಕೆನಡಾದ ನೆಲದಲ್ಲಿ, ಕೆನಡಾದ ಪ್ರಜೆಯನ್ನು ಹತ್ಯೆ ಮಾಡುವುದನ್ನು ನಾವು ಸಹಿಸಿಕೊಳ್ಳುವುದಿಲ್ಲ' ಎಂದು ಘೋಷಿಸಿತು. ಈ ಆರೋಪವನ್ನು ಭಾರತ ಸರ್ಕಾರವು ನಿರಾಕರಿಸಿತಾದರೂ, ಅಷ್ಟರಲ್ಲಿ ಬೇರೆ ದೇಶಗಳೂ ಈ ವಿಚಾರದಲ್ಲಿ ಮಧ್ಯಪ್ರವೇಶಿಸಿ ಆಗಿತ್ತು.

ಕೆನಡಾ ಜತೆಗೆ ಉತ್ತಮ ಬಾಂಧವ್ಯ ಹೊಂದಿರುವ ಅಮೆರಿಕ, ಬ್ರಿಟನ್ ಮತ್ತು ಆಸ್ಟ್ರೇಲಿಯ ಈ ಆರೋಪ ಮತ್ತು ಆರೋಪ ನಿರಾಕರಣೆಯ ಸಂಬಂಧ ಪ್ರತಿಕ್ರಿಯೆ ನೀಡಿದವು. 'ಇಂತಹ ಆರೋಪ ಮಾಡುವಾಗ ಎಚ್ಚರಿಕೆಯಿಂದ ಇರಬೇಕು' ಎಂದು ಅಮೆರಿಕ ಹೇಳಿತು. ಬ್ರಿಟನ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, 'ಈ ವಿಚಾರದಲ್ಲಿ ಈಗಲೇ ಏನೂ ಹೇಳಲು ಸಾಧ್ಯವಿಲ್ಲ. ಕೆನಡಾ ತನ್ನ ತನಿಖೆಯನ್ನು ಮೊದಲು ಮುಗಿಸಲಿ. ತನಿಖೆಯಿಂದ ಏನು ಹೊರಬೀಳುತ್ತದೆ ಎಂಬುದನ್ನು ಮೊದಲು ನೋಡೋಣ' ಎಂದು ಹೇಳಿಕೆ ನೀಡಿತು. ಆಸ್ಟ್ರೇಲಿಯ ಸಹ ಇಂಥದ್ದೇ ಪ್ರತಿಕ್ರಿಯೆ ನೀಡಿದೆ. ಮೂರೂ ದೇಶಗಳು ಕೆನಡಾ ಅಥವಾ ಭಾರತ ಯಾವುದೋ ಒಂದು ದೇಶದ ಪರವಾಗಿ ವಕಾಲತ್ತು ವಹಿಸಿಲ್ಲ. ತನಿಖೆ ಮುಗಿಯಲಿ ಎಂದೇ ಹೇಳಿವೆ. ಆದರೆ ಈ ಎಲ್ಲಾ ಬೆಳವಣಿಗೆಗಳು ಒಳ್ಳೆಯದಲ್ಲ ಎಂದು ಕಳವಳ ವ್ಯಕ್ತಪಡಿಸಿವೆ; ಕೆನಡಾ–ಭಾರತ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕು ಎಂದು ಒತ್ತಾಯಿಸಿವೆ.

ಸಿನಿ ಬಿಟ್ಸ್

ಶೂಟಿಂಗ್ ಮುಗಿಸಿದ 'ಮಾದೇವ'

ಮರಿ ಟೈಗರ್ ವಿನೋದ್ ಪ್ರಭಾಕರ್ ಹಾಗೂ ಸೋನಲ್ ಮೊಂತೆರೋ ನಟನೆಯ 'ಮಾದೇವ' ಸಿನಿಮಾದ ಶೂಟಿಂಗ್ ಪೂರ್ಣಗೊಂಡಿದೆ.

'ರಾಬರ್ಟ್' ಸಿನಿಮಾದಲ್ಲಿ ರಾಘವ್ ಮತ್ತು ತನು ಪಾತ್ರಗಳ ಮೂಲಕ ಪ್ರೇಕ್ಷಕರಿಗೆ ಇಷ್ಟವಾಗಿದ್ದ ವಿನೋದ್ ಮತ್ತು ಸೋನಲ್ ಜೋಡಿ ಈ ಸಿನಿಮಾ ಮೂಲಕ ಮತ್ತೊಮ್ಮೆ ತೆರೆ ಮೇಲೆ ಬರಲಿದೆ. 'ಖಾಕಿ' ಚಿತ್ರದ ಮೂಲಕ ನಿರ್ದೇಶನ ಕ್ಷೇತ್ರಕ್ಕೆ ಇಳಿದಿದ್ದ ನವೀನ್ ರೆಡ್ಡಿ ಆ್ಯಕ್ಷನ್ ಕಟ್ ಹೇಳಿರುವ 'ಮಾದೇವ' ಇದೀಗ ಪೋಸ್ಟ್ ಪ್ರೊಡಕ್ಷನ್ ಕೆಲಸಕ್ಕೆ ಇಳಿದಿದೆ. ಇತ್ತೀಚೆಗೆ ಚಿತ್ರತಂಡ ಚಿತ್ರೀಕರಣ ಮುಗಿಸಿ ಕುಂಬಳಕಾಯಿ ಒಡೆದಿದೆ. ಕನಕಪುರ, ಚನ್ನಪಟ್ಟಣ, ಶಿವಮೊಗ್ಗ, ರಾಮೋಜಿ ಫಿಲಂ ಸಿಟಿ ಹೀಗೆ ಹಲವು ಪ್ರದೇಶಗಳಲ್ಲಿ ಚಿತ್ರದ ಚಿತ್ರೀಕರಣ ನಡೆಸಲಾಗಿದೆ.

ನೈಜ ಘಟನೆಗಳಿಂದ ಸ್ಫೂರ್ತಿ ಪಡೆದ ಈ ಸಿನಿಮಾದ ಕಥೆಯು 1965, 1980 ಮತ್ತು 1999ರ ಕಾಲಘಟ್ಟದಲ್ಲಿ ನಡೆಯಲಿದೆ. ಹಿಂದೆಂದೂ ಕಂಡಿರದಂತಹ ಲುಕ್‌ನಲ್ಲಿ ವಿನೋದ್ ಪ್ರಭಾಕರ್ ಕಾಣಿಸಿಕೊಳ್ಳಲಿದ್ದಾರೆ ಎಂದಿದೆ ಚಿತ್ರತಂಡ. ಖಳನಾಯಕನಾಗಿ ಶ್ರೀನಗರ ಕಿಟ್ಟಿ ನಟಿಸಿದ್ದು, ಶ್ರುತಿ ಮತ್ತು ಅಚ್ಯುತ್ ಕುಮಾರ್, ಕಾಕ್ರೋಚ್ ಸುಧಿ ಪ್ರಮುಖ ಪಾತ್ರಗಳಲ್ಲಿದ್ದಾರೆ. ರಾಧಾಕೃಷ್ಣ ಬ್ಯಾನರ್‌ನಡಿ ಆರ್. ಆರ್. ಕೇಶವ ದೇವಸಂದ್ರ ಚಿತ್ರಕ್ಕೆ ಹಣ ಹೂಡಿದ್ದಾರೆ.



ಸೋನಲ್ ಮೊಂತೆರೋ

ಬರುತ್ತಿದೆ ಅರಸಯ್ಯನ ಪ್ರೇಮಪ್ರಸಂಗ

'ಫ್ರೆಂಚ್ ಬಿರಿಯಾನಿ', 'ಗುರು ಶಿಷ್ಯರು' ಚಿತ್ರದ ಮೂಲಕ ಗುರುತಿಸಿಕೊಂಡಿರುವ ಮಹಾಂತೇಶ್ ಹಿರೇಮಠ್ ಪ್ರಮುಖ ಪಾತ್ರದಲ್ಲಿ ನಟಿಸಿರುವ 'ಅರಸಯ್ಯನ ಪ್ರೇಮಪ್ರಸಂಗ' ಚಿತ್ರ ಬಿಡುಗಡೆಗೆ ಸಜ್ಜಾಗುತ್ತಿದೆ. ಇತ್ತೀಚೆಗೆ ಚಿತ್ರದ 'ಅಯ್ಯಯ್ಯೋ ರಾಮ' ಹಾಡು ಬಿಡುಗಡೆಯಾಯಿತು.

ಕೃಷ್ಣ ರಿತ್ತಿ ಅವರು ಈ ಹಾಡನ್ನು ಬರೆದಿದ್ದು, ಪ್ರವೀಣ್ - ಪ್ರದೀಪ್ ಸಂಗೀತ ನೀಡಿದ್ದಾರೆ. ಶಂಕರ್ ಭಾರತಿಪುರ ಹಾಡಿದ್ದಾರೆ. ಗ್ರಾಮೀಣ ಸೊಗಡಿನ ಈ ಹಾಡು ಎ2 ಮ್ಯೂಸಿಕ್ ಮೂಲಕ ಬಿಡುಗಡೆಯಾಗಿದೆ. ಜೆ.ವಿ.ಆರ್ ದೀಪು ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದು, ಕಾಮಿಡಿ ಡ್ರಾಮ ಜಾನರ್‌ನಲ್ಲಿದೆ. 'ನಾನು ನಾಯಕ ಎಂದು ಯಾವತ್ತೂ ಕರೆಸಿಕೊಳ್ಳಲು ಇಷ್ಟಪಡುವುದಿಲ್ಲ. ಪೋಷಕ ನಟನಾಗಿರುವುದಕ್ಕೆ ಇಷ್ಟ ಪಡುತ್ತೇನೆ. ನಿರ್ದೇಶಕರು ನೀನೇ ಈ ಚಿತ್ರದ ನಾಯಕ ಎಂದಾಗ ಆಶ್ಚರ್ಯವಾಯಿತು. ದೀಪು ಹಳ್ಳಿಸೊಗಡಿನ ಅದ್ಭುತ ಕಥೆ ಆಯ್ಕೆ ಮಾಡಿಕೊಂಡು, ಅಷ್ಟೇ ಚೆನ್ನಾಗಿ ಚಿತ್ರ ಮಾಡಿದ್ದಾರೆ' ಎನ್ನುತ್ತಾರೆ ಮಹಾಂತೇಶ್ ಹಿರೇಮಠ್.

ರಶ್ಮಿತಾ ಗೌಡ, ವಿಜಯ್ ಚೆಂಡೂರ್, ರಘು ರಮಣಕೊಪ್ಪ, ಪಿ.ಡಿ. ಸತೀಶ್ ಸೇರಿದಂತೆ ಅನೇಕ ಕಲಾವಿದರು ಚಿತ್ರದಲ್ಲಿದ್ದಾರೆ.

ಮಹಾಂತೇಶ್ ಹಾಗೂ ರಶ್ಮಿತಾ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ 'ಮುಂದಿನ ಲೋಕಸಭಾ ಚುನಾವಣೆಯಲ್ಲಿ ಮತಹಾಕದಿದ್ದರೆ ನಿಮ್ಮ ಬ್ಯಾಂಕ್ ಖಾತೆಯಿಂದ ಹಣ ಕಡಿತವಾಗುತ್ತದೆ. ಈ ಬಗ್ಗೆ ಸರ್ಕಾರವು ಎಚ್ಚರಿಕೆ ನೀಡಿದೆ. ನಿಮ್ಮಲ್ಲಿ ಬ್ಯಾಂಕ್ ಖಾತೆ ಇಲ್ಲದಿದ್ದರೆ, ನೀವು ನಿಮ್ಮ ಮೊಬೈಲ್‌ಗೆ ರೀಚಾರ್ಜ್ ಮಾಡಿದಾಗ ಆ ಹಣ ಕಡಿತವಾಗುತ್ತದೆ. ಬ್ಯಾಂಕ್ ಖಾತೆ, ಮತದಾರರ ಗುರುತಿನ ಚೀಟಿ, ಮೊಬೈಲ್ ಸಂಖ್ಯೆ ಎಲ್ಲವನ್ನೂ ಪರಸ್ಪರ ಜೋಡಿಸಿರುವುದರಿಂದ ಇದು ಸಾಧ್ಯವಾಗುತ್ತದೆ. ಹೀಗಾಗಿ ಎಲ್ಲರೂ ತಪ್ಪದೇ ಮತದಾನ ಮಾಡಿ' ಎಂಬ ವಿವರ ಇರುವ ಸಂದೇಶ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಕೆಲವು ಸುದ್ದಿತಾಣಗಳು ಈ ಸಂಬಂಧ ಪ್ರಕಟಿಸಿರುವ ಸುದ್ದಿಗಳ ಸ್ಕ್ರೀನ್‌ಶಾಟ್ ಸಹ ಹರಿದಾಡುತ್ತಿದೆ. ಆದರೆ ಇದು ಸುಳ್ಳು ಸುದ್ದಿ.

dailyhunt

ಈ ಸೆಟ್ಟಿಂಗ್ ಚೇಂಜ್ ಮಾಡಿ

ಮುಂದಿನ ಲೋಕಸಭೆ ಚುನಾವಣೆಯಲ್ಲಿ ಮತ ಹಾಕದಿದ್ರೆ ಖಾತೆಯಿಂದ ಹಣ ಕಡಿತ - ವೈರಲ್ ಆಯ್ತು ಶಾಕಿಂಗ್ ಸುದ್ದಿ..!!

✓ 2019ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲೂ ಇಂಥದ್ದೇ ಸುಳ್ಳು ಸುದ್ದಿಯು ಹಂಚಿಕೆಯಾಗಿತ್ತು. ಆಗಲೇ ಪಿಐಬಿ ಈ ಬಗ್ಗೆ ಫ್ಯಾಕ್ಟ್‌ಚೆಕ್ ಪ್ರಕಟಿಸಿತ್ತು. ಮತಹಾಕದಿದ್ದರೆ ಬ್ಯಾಂಕ್ ಖಾತೆಯಿಂದ ಹಣ ಕಡಿತ ಮಾಡುವ ಮತ್ತು ಮೊಬೈಲ್ ರೀಚಾರ್ಜ್‌ನ ಹಣ ಕಡಿತ ಮಾಡುವ ಸಂಬಂಧ ಸರ್ಕಾರವು ಯಾವುದೇ ಆದೇಶ ಹೊರಡಿಸಿಲ್ಲ. ಈ ಸಂಬಂದ ಹರಿದಾಡುತ್ತಿರುವ ಸುದ್ದಿ ಸುಳ್ಳು ಎಂದು ಪಿಐಬಿ ವಿವರಿಸಿತ್ತು. ಈಗ 2024ರ ಲೋಕಸಭಾ ಚುನಾವಣೆ ಹೊಸ್ತಿಲಲ್ಲಿ ಮತ್ತೆ ಅಂಥದ್ದೇ ಸುಳ್ಳು ಸುದ್ದಿ ಹರಿದಾಡುತ್ತಿದೆ. ಇದು ಸುಳ್ಳು ಸುದ್ದಿ ಎಂದು ಪಿಐಬಿ ಮತ್ತೆ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ನಿಗೂಢ ಬೀಗ ತೆಗೆಯುವುದು ಹೇಗೆ?

ನುಡಿ ಬೆಳಗು



ಪ್ರೊ.ಎಂ. ಕೃಷ್ಣೇಗೌಡ

ಒಬ್ಬ ರಾಜನ ಮಂತ್ರಿ ಸತ್ತುಹೋದ. ಹೊಸ ಮಂತ್ರಿಯನ್ನು ಆರಿಸಬೇಕಿತ್ತು. ಅವನ ಅರ್ಹತೆಯನ್ನು ಪರೀಕ್ಷಿಸುವುದು ಹೇಗೆ? ರಾಜ ಒಂದು ಪರೀಕ್ಷೆ ಇಟ್ಟ. ಒಂದು ಕೊಠಡಿಗೆ ಬೀಗ ಹಾಕಿದ. ಆ ಬೀಗವನ್ನು ಯಾರು ತೆಗೆಯುತ್ತಾರೋ ಅವನೇ ಹೊಸ ಮಂತ್ರಿ. ಆ ಬೀಗ ತೆಗೆಯುವುದಕ್ಕೆ ಬೀಗದ ಕೈ ಬೇಕಾಗಿಲ್ಲ. ಆ ಬಾಗಿಲ ಮೇಲೊಂದು ಸಮಸ್ಯೆ ಬರೆದಿದೆ. ಆ ಸಮಸ್ಯೆಯನ್ನು ಬಿಡಿಸಿದವರಿಗೆ ಮಾತ್ರ ಬೀಗ ತೆಗೆಯುವ ತಂತ್ರ ತಿಳಿಯುತ್ತದೆ. ಆ ಸಮಸ್ಯೆಯೋ ತೀರಾ ವಿಕಾರವಿಚಿತ್ರ!

(109 + ಬುಧವಾರ + ನಾಲ್ಕು ಕುದುರೆ × ಎರಡು ತಿಂಗಳು + ಒಂದು ಯುಗಾದಿ = ಸೊನ್ನೆ)

ಯಾವಯಾವುದೋ ದೇಶಗಳಿಂದ ಯಾರು ಯಾರೋ ಬಂದರು. ಬಹಳ ಓದಿದ್ದವರು, ಬುದ್ಧಿವಂತರು, ವಿಚಾರವಂತರು, ಗಣಿತಜ್ಞರು, ತತ್ತ್ವಜ್ಞಾನಿಗಳು... ಹೀಗೆ ಬಂದವರಲ್ಲಿ ಯಾರಿಗೂ ಈ ಸಮಸ್ಯೆಯ ತಲೆಬುಡ ತಿಳಿಯಲಿಲ್ಲ. ರಾತ್ರಿಯೆಲ್ಲಾ ನಿದ್ದೆಗೆಟ್ಟು ಕೂಡಿ ಕಳೆದು ಗುಣಿಸಿ ಭಾಗಿಸಿದರು. ಸಮಸ್ಯೆ ಬಗೆಹರಿಯಲಿಲ್ಲ. ತಲೆ ಕೆರೆದುಕೊಂಡರು. ಏನು ಬಂತು? ಉಗುರಕಣ್ಣಲ್ಲೊಂದಿಷ್ಟು ಮಣ್ಣು ಅಷ್ಟೆ!!

ಅವತ್ತೊಂದು ಮಂಗಳವಾರ. ಎಲ್ಲಿಂದಲೋ ಒಬ್ಬ ಬಂದ. ನಾನು ಆ ಸಮಸ್ಯೆಯನ್ನು ಮತ್ತು ಬೀಗವನ್ನು ನೋಡಬೇಕು ಎಂದು ಕೇಳಿದ. ರಾಜನ ಪರಿವಾರದವರು ಅವನನ್ನು ಕೊಠಡಿಯ ಬಳಿಗೆ ಕರೆದುಕೊಂಡು ಹೋಗಿ ಸಮಸ್ಯೆಯನ್ನು ತೋರಿಸಿದರು. ಅವನು ತುಂಬಾ ಹೊತ್ತು ಅಲ್ಲೇ ನಿಂತು ಪರೀಕ್ಷೆ ಮಾಡಿದ. ನಾಳೆ ನಾನು ರಾಜನ ಸಮ್ಮುಖದಲ್ಲಿ ಸಮಸ್ಯೆಯನ್ನು ಬಿಡಿಸಿ ಬೀಗ ತೆರೆಯುತ್ತೇನೆ ಅಂದ.

ಗೊತ್ತಾದ ಸಮಯಕ್ಕೆ ರಾಜ ಪರಿವಾರ ಸಮೇತ ಅಲ್ಲಿಗೆ ಬಂದ. ಅವನಿದ್ದನಲ್ಲ, ಅವನೂ ಬಂದ. ರಾಜನಿಗೆ ಉಚಿತ ಮರ್ಯಾದೆಗಳನ್ನು ಸಲ್ಲಿಸಿ, ತಮ್ಮ ಅಪ್ಪಣೆಯಾದರೆ ಬೀಗವನ್ನು ತೆರೆಯುತ್ತೇನೆ ಅಂದ. ರಾಜ ಆಗಲಿ ಅಂದ. ರಾಜನ ಪುರಜನ ಪರಿವಾರವೆಲ್ಲಾ ಕುತೂಹಲದಿಂದ ಕಾಯುತ್ತಿತ್ತು. ಅವನು ನಿಧಾನವಾಗಿ ಬೀಗದ ಹತ್ತಿರ ಹೋದ.... ಏನಾಗುತ್ತದೆ? ಏನಾಗುತ್ತದೆ? ಸುತ್ತಲೂ ಅವೇ ಕುತೂಹಲದ ಕಣ್ಣುಗಳು...

ಅವನು ಬೀಗವನ್ನು ಎರಡೂ ಕೈಯಲ್ಲಿ ಹಿಡಿದು ಎಳೆದ...

ಫಳ್ಳನೆ ಕಳಚಿಕೊಂಡಿತು ಬೀಗ.

ಅರೆ, ಏನಾಯಿತು? ಹೇಗಾಯಿತು?

ರಾಜನೇ ಹೇಳಿದ- ನಿಜವಾಗಿ ಬೀಗವನ್ನು ಹಾಕಿಯೇ ಇರಲಿಲ್ಲ. ಸುಮ್ಮನೆ ಸಿಕ್ಕಿಸಿತ್ತು ಅಷ್ಟೆ. ಅಲ್ಲಿದ್ದ ಆ ವಿಕಾರ ವಿಚಿತ್ರ ಸಮಸ್ಯೆ ದಾರಿ ತಪ್ಪಿಸುವ ತಂತ್ರವಷ್ಟೆ.

ತುಂಬಾ ಬುದ್ಧಿವಂತರಿಗೆ ಸರಳ ಮಾರ್ಗಗಳು ತೋಚುವುದಿಲ್ಲ. ಎಷ್ಟೋ ಸಮಸ್ಯೆಗಳು ಸರಳವಾಗಿ ಬಗೆಹರಿಯುತ್ತವೆಯಾದರೂ 'ಬುದ್ಧಿವಂತ'ರಿಗೆ, ಆ ಸರಳ ಮಾರ್ಗ ಹೊಳೆಯುವುದೇ ಇಲ್ಲ. ಸಮಸ್ಯೆ ಇಲ್ಲದಲ್ಲಿಯೂ ಸಮಸ್ಯೆಯನ್ನು ಹುಡುಕುವುದು ಬುದ್ಧಿವಂತರ ಚಾಳಿ. ತನ್ನ ಮಂತ್ರಿ ಕೇವಲ ಬುದ್ಧಿವಂತನೋ, ತಂತ್ರಗಾರನೋ ಆಗಿದ್ದರೆ ಸಾಲದು. ಸಂದರ್ಭವನ್ನು ಸರಳವಾಗಿಯೂ ಗ್ರಹಿಸಬಲ್ಲವನಾಗಿರಬೇಕು ಎಂಬುದು ರಾಜನ ಅಪೇಕ್ಷೆಯಾಗಿತ್ತು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಸೆಪ್ಟೆಂಬರ್ 22, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ಸಪ್ತಮಿ ಗಂ. 13-36 ನಕ್ಷತ್ರ: ಜ್ಯೇಷ್ಠ ಗಂ. 15-35 ಯೋಗ: ಆಯುಷ್ಮಾನ್, ಗಂ. 23-5 ಕರಣ: ವಣಿಜ ಗಂ. 13-36, ಕನ್ಯಾ ಮಾಸದ 05 ನೇ ದಿನ, ಮಳೆನಕ್ಷತ್ರ: ಉತ್ತರ ಫಲ್ಗುಣಿ 3. ರಾಹುಕಾಲ : ಬೆಳಿಗ್ಗೆ 10-30 – 12-00, ಸೂರ್ಯೋದಯ : 06-23 ಸೂರ್ಯಾಸ್ತ : 06-24, ಮುಸ್ಲಿಂ ದಿನಾಂಕ : 06 ರಬಿಉಲ್ಲಾವಲ್

ದಿನ ವಿಶೇಷ: ಮಹಾಲಕ್ಷ್ಮಿ ವ್ರತಾರಂಭ

ಅದೃಷ್ಟ ಸಂಖ್ಯೆ: 4, 8

ಮೇಷ: ಯಾವುದೇ ವಾದ ವಿವಾದ ನಡೆದರೂ ನಿಮ್ಮ ಕಾರ್ಯ ಸಾಧನೆಗೆ ಅಡ್ಡಿಯಾಗಲಾರದು. ಸಮೀಪವರ್ತಿಗಳ ಆಶ್ವಾಸನೆ ದೊರೆತು ಶುಭ ಕಾರ್ಯಗಳತ್ತ ಗಮನ ಹರಿಸುವಿರಿ. ಸಾಹಿತ್ಯ ಸಂಗೀತ ವಿಷಯಗಳತ್ತ ಮನಸ್ಸು ತಿರುಗುವುದು.\

ವೃಷಭ: ಸಾಮಾಜಿಕ ಜೀವನದಲ್ಲಿ ಮತ್ತು ಭಾವನಾತ್ಮಕ ಸಂಬಂಧಗಳಲ್ಲಿ ಉತ್ತಮ ಪ್ರಗತಿ ಕಾಣುವಿರಿ. ಮನಸ್ಸಿನ ಅಸ್ಥಿರತೆ ಆಧ್ಯಾತ್ಮ ಚಿಂತನೆಗೆ ತೊಂದರೆ ಮಾಡುವುದು. ಅಗತ್ಯ ವಸ್ತುಗಳ ಖರೀದಿಗೆ ಹಣ ವಿನಿಯೋಗ ಆಗುವುದು.

ಮಿಥುನ: ಆರನೇ ಇಂದ್ರಿಯದ ಮಾತಿಗೆ ಬೆಲೆ ಕೊಡುವುದು ಸರಿಯಾದ ತೀರ್ಮಾನ ಅನಿಸುವುದು. ಲೇವಾದೇವಿ ವ್ಯವಹಾರ ನಿಮ್ಮ ಸಂಪತ್ತಿನ ಕ್ಷೀಣತೆಗೆ ಹಾದಿಯಾಗುವುದು. ಹಿರಿಯರ ಆಶೀರ್ವಾದ ಪಾಲಿಗಿದೆ.

ಕರ್ಕಾಟಕ: ಶತ್ರುಗಳ ಉಪಟಳವನ್ನು ಎದುರಿಸುವ ಸಾಮರ್ಥ್ಯ ಈ ದಿನ ಭಗವಂತ ನೀಡಲಿದ್ದಾನೆ. ಕಲಾವಿದರಿಗೆ ಹಾಗೂ ದಿನಗೂಲಿ ನೌಕರರಿಗೆ ಅನುಕೂಲಕರ ವಾತಾವರಣಗಳು ಸಿಗಲಿವೆ. ಹೊಂದಾಣಿಕೆ ಅಗತ್ಯ.

ಸಿಂಹ: ಒಳ್ಳೆಯ ಮಿತ್ರರಿಂದ ಕಂಪನಿಯ ಮುಖ್ಯವಾದ ವ್ಯಕ್ತಿಯ ಪರಿಚಯ ಹಾಗೂ ಅಭಿವೃದ್ಧಿಯ ಮಾಹಿತಿ ದೊರೆಯುತ್ತದೆ. ಆಭರಣ ಮಾರಾಟಗಾರರು, ವಕೀಲ ವೃತ್ತಿಯವರಿಗೆ ಹೆಚ್ಚಿನ ಕೆಲಸವಿರುವುದು.

ಕನ್ಯಾ: ಧೈರ್ಯ ಮತ್ತು ಪ್ರೇರಣಾ ಶಕ್ತಿಯ ಭಾವವನ್ನು ಹೊಂದುವುದರಿಂದ ಸಮಸ್ಯೆಯನ್ನು ಸುಲಭವಾಗಿ ಎದುರಿಸಬಹುದು. ಸಂಸ್ಥೆಯ ಮುಖಾಂತರ ಹೆಚ್ಚಿನ ತರಬೇತಿಗಾಗಿ ದೂರ ಪ್ರಯಾಣ ಮಾಡಬೇಕಾಗಿ ಬರಬಹುದು.

ತುಲಾ: ಕೌಟುಂಬಿಕವಾಗಿ ಎಷ್ಟೇ ಕಷ್ಟ ಬಂದರೂ ಹಿಡಿದ ದಾರಿ ಬಿಡಬಾರದೆಂಬ ಮನೋಭಾವ ದೇಹಾಯಾಸ ಮೂಲಕ ಗುರಿ ತಲುಪಲಿದೆ. ಫೋಟೋ ಸ್ಟುಡಿಯೊದವರಿಗೆ ಅಧಿಕ ಕಾರ್ಯಕ್ರಮದಿಂದ ಲಾಭಾಂಶ ಇರಲಿದೆ.

ವೃಶ್ಚಿಕ: ಸಿಮೆಂಟ್ ವ್ಯಾಪಾರಸ್ಥರಿಗೆ ಅಧಿಕ ಲಾಭ. ಶ್ರೀ ಗುರು ನರಸಿಂಹ ದೇವರ ಸ್ತುತಿ, ಸೇವೆ ಮಾಡಿ. ಖಾಸಗಿ ಸಂಸ್ಥೆಗಳ ಉದ್ಯೋಗಸ್ಥರಿಗೆ ಉನ್ನತ ಸ್ಥಾನಮಾನ ಪ್ರಾಪ್ತಿಯಾಗಲಿದೆ. ಕಾರ್ಯ ಒಪ್ಪಂದದ ಬಗ್ಗೆ ದೃಢ ನಿರ್ಧಾರ ಮಾಡಿರಿ.

ಧನು: ವೃತ್ತಿಯಲ್ಲಿ ಉನ್ನತ ಸ್ಥಾನಕ್ಕೆ ಏರಲು ಬೇಕಾದ ತಯಾರಿ ಮಾಡಿಕೊಳ್ಳಿ. ತರಕಾರಿ ವ್ಯಾಪಾರಸ್ಥರಿಗೆ ಲಾಭಾಂಶದಲ್ಲಿ ಕೊರತೆ. ಭದ್ರ ಮಾಡಿ ಇಟ್ಟಂತಹ ವಸ್ತುಗಳು ಕಣ್ಮರೆಯಾಗಬಹುದು.

ಮಕರ: ಅಪೇಕ್ಷಿಸಿದ ಪ್ರಗತಿಯು ದೇವತಾನುಗ್ರಹದಿಂದ ಪ್ರಾಪ್ತಿಯಾಗುವುದು. ಹೆಂಡತಿಯ ಆರೋಗ್ಯದ ಬಗ್ಗೆ ಗಮನ ನೀಡಬೇಕಾಗುತ್ತದೆ. ಸುಬ್ರಹ್ಮಣ್ಯನನ್ನು ಆರಾಧಿಸುವುದರಿಂದ ಆರೋಗ್ಯಭಾಗ್ಯ ಉಂಟಾಗುತ್ತದೆ.

ಕುಂಭ: ಸಂಸ್ಥೆಯೊಂದರ ಸಲಹೆಗಾರರಾಗಿರುವ ನಿಮಗೆ ಹೆಚ್ಚಿನ ಒತ್ತಡ ಮತ್ತು ಸಂದಿಗ್ಧ ಪರಿಸ್ಥಿತಿ ಎದುರಾಗುತ್ತದೆ. ಲೇವಾದೇವಿ ವ್ಯವಹಾರಗಳು ಸಾಧಾರಣ ಮಟ್ಟದಲ್ಲಿ ನಡೆಯುವುದು. ನವಗ್ರಹ ಪೂಜೆಯ ಶುಭ ವಾರ್ತೆ ಪಡೆಯುವಿರಿ.

ಮೀನ: ಮುಖ್ಯವಾಗಿ ಅಪರಿಚಿತ ಜಾಗದಲ್ಲಿ, ಅಪರಿಚಿತ ವ್ಯಕ್ತಿಗಳಲ್ಲಿ ಉದ್ವೇಗಗೊಳ್ಳದೆ ತಾಳ್ಮೆಯಿಂದ ವ್ಯವಹರಿಸಿದರೆ ನಿಮ್ಮ ಹಾದಿ ಸುಗಮವಾಗಿ ಸಾಗುತ್ತದೆ. ಕಾರ್ಮಿಕರ ಬೇಡಿಕೆಗಳನ್ನು ಪರಿಶೀಲಿಸಿ. ನ್ಯಾಯ ಸಮ್ಮತವಾಗಿ ವ್ಯವಹರಿಸಿ.

ಪದಬಂಧ 5448

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬೆಲೆ ಕಟ್ಟಲಾಗದ್ದು (3)
2.ಕೆಡುಕನ್ನುಂಟು ಮಾಡುವುದು (3)
5.ಉತ್ತರದವರ ಬಾಯಲ್ಲಿ ಅಧಿಕ (3)
6.ಸತ್ಯವಲ್ಲದುದು ಇದು (3)
7.ಭಿಕ್ಷೆ ಬೇಡುವವಳು ತಿರುಗಿದ್ದಾಳಲ್ಲಾ (3)
8.ಮಣ ಭಾರದ ಹೆಣವನ್ನು ಸಾಗಿಸಿದ ಜಾಗ (3)
9.ದಾಯಾದಿ ಜಗಳವಿದು (5)
10.ವನದ ಕೊನೆಗೆ ಪರಿಶುದ್ಧವಾದುದು ಕಾಣುತ್ತಿದೆ (3)
11.ರಸವಿಲ್ಲದ್ದು ಇದು (3)
13.ಸಂಪ್ರದಾಯದಲ್ಲೇ ಪಾವತಿ! (3)
14.ಚಿಗುರೊಡೆದ ಕೊಂಬೆ (3)
16.ವಸ್ತುಗಳ ಅಳತೆ ತೂಕ ತಿಳಿಸುವ ಪಟ್ಟಿಕೆ (3)
17.ಮನವನ್ನು ಸೆಳೆದ ಲಕ್ಷ್ಯ (3)

ಮೇಲಿಂದ ಕೆಳಕ್ಕೆ

1.ಒಂಚೂರು ವಿವೇಕವೇ ಇಲ್ಲ ಇವನಿಗೆ! (4)
2.ಆನೆಯನ್ನು ನಡೆಸುವವನು (3)
3.ಕಠೋರವಾದ ಕೈ! (2)
4.ಈತ ಬಲು ಬುದ್ಧಿವಂತ (4)
6.ಕೊನೆಗೆ ಜ್ಞಾನವಿದ್ದಾಗಿನ ನೆನಪು! (4)
8.ಗೌರವಕ್ಕೆ ಪಾತ್ರನಾದವನು (4)
10.ಉತ್ತರದವರ ಮೆಟ್ಟಿಲು (4)
12.ಸಭೆಯಲ್ಲಿರುವ ಮಂದಿ (4)
13.ಕಬ್ಬಿಣದ ಭಾರೀ ಪೆಟ್ಟಿಗೆ (3)
15.ಕಾವಲು ಕಾಯುವವನು ಹಿಡಿದ ದೊಣ್ಣೆ ಉಲ್ಟಾ ಆಗಿದೆ (2)



5447ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಛಾಯಾಗ್ರಾಹಿ
3.ಪರಿತ್ಯಾಗ 5.ಷಿಕಾರಿ
6.ಜ್ಞಾತಿ 7.ನೆಪ
9.ಯಮ 11.ವಾರ
12.ಮಾರ್ದವ 14.ಸುಶಿಕ್ಷಿತ
15.ನವಜಾತ

ಮೇಲಿಂದ ಕೆಳಕ್ಕೆ:
1.ಛಾಪಾಖಾನೆ
2.ಹಿತೈಷಿ 3.ಪರಾರಿ
4.ಗರತಿ 6.ಜ್ಞಾನೇಂದ್ರಿಯ
8.ಪರಿಕರ 10.ಮನೋಗತ
11.ವಾರಸು 12.ಮಾರುತ
13.ವಸನ

ಸುಡೊಕು 5834

3	2			8		9		1
		8						4
	4		9			3		8
6								9
	5		7	6	9		8	
8						6		
			2			7		6
				9	7			
		7				4		5

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು.
ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5833 ಸುಡೊಕು

4	5	6	9	7	1	8	3	2
1	9	2	6	8	3	5	7	4
8	7	3	4	2	5	9	6	1
7	2	1	3	4	9	6	5	8
3	8	5	1	6	2	4	9	7
6	4	9	7	5	8	2	1	3
2	3	8	5	1	6	7	4	9
9	6	4	8	3	7	1	2	5
5	1	7	2	9	4	3	8	6

ಮುಂಬೈ ಧಾರಣೆ

ಶೇಂಗಾ

21-09-2023

ಜಾವಾ 70/80(ಹೊಸ)	12400-12500
ಜಾವಾ 80/90(ಹೊಸ)	12100-12200
ದಪ್ಪ ಮಧ್ಯಪ್ರದೇಶ(ಹೊಸ)	11000-11100
ದಪ್ಪ ಗುಜರಾತ್(ಹೊಸ)	11900-12000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1850 (1850)
ಒಂದು ವಾರದ ಡೆಲಿವರಿ	1845 (1845)
ಸೋಯಾ ಕಚ್ಚಾ	817 (835)
ಪಾಮ್ ವಾರದ ಡೆಲಿವರಿ	802(812)
ಸೂರ್ಯಕಾಂತಿ ಎಣ್ಣೆ ಕಚ್ಚಾ	780 (785)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58,900 (59,050)
ಬೆಳ್ಳಿ ಕೆ.ಜಿ 72,100 (72,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,901
ಇಂದಿನ ಅಂತ್ಯ	19,742
▼	159
ದಿನದ ಕನಿಷ್ಠ	19,709

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು

100 ಮೊಟ್ಟೆಗೆ	₹535
12 ಮೊಟ್ಟೆಗೆ	₹70

ಮೈಸೂರು

100 ಮೊಟ್ಟೆಗೆ	₹535

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1840 (1840)
ಸೋಯಾ (ರಿಫೈನ್ಡ್)	₹880 (885)
ಸೂರ್ಯಕಾಂತಿ (ರಿಫೈನ್ಡ್)	₹870 (880)
ಪಾಮೋಲಿನ್	₹804 (814)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹211-530
ದ್ವಿತಳಿ (ಬಿ.ವಿ)	₹222-632

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಕೆ.ಆರ್.ಪೇಟೆ	8000-8000
ಪುತ್ತೂರು	4500-7300
ತಿಪಟೂರು	₹7200-8307
ತುರುವೇಕೆರೆ	₹8200-8200

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹143
ಆರ್‌ಎಸ್‌ಎಸ್-5	₹137
ಗುಡ್ ಲಾಟ್	₹125

ಸೆಲ್ಟೋಸ್, ಕಾರೆನ್ಸ್ ಬೆಲೆ ಹೆಚ್ಚಲಿದೆ: ಕಿಯಾ

ನವದೆಹಲಿ(ಪಿಟಿಐ): ಕಿಯಾ ಇಂಡಿಯಾ ಕಂಪನಿಯು ಸೆಲ್ಟೋಸ್ ಮತ್ತು ಕಾರೆನ್ಸ್ ಕಾರಿನ ಬೆಲೆಯನ್ನು ಅಕ್ಟೋಬರ್ 1ರಿಂದ ಜಾರಿಗೆ ಬರುವಂತೆ ಶೇ 2ರವರೆಗೆ ಹೆಚ್ಚಳ ಮಾಡಲು ನಿರ್ಧರಿಸಿದೆ ಎಂದು ಕಂಪನಿಯ ಭಾರತದ ಮುಖ್ಯಸ್ಥ ಹರ್‌ದೀಪ್ ಎಸ್. ಬರಾರ್ ಗುರುವಾರ ತಿಳಿಸಿದ್ದಾರೆ.

ಏಪ್ರಿಲ್ ನಂತರ ಹಲವು ಹಲವು ಕಂಪನಿಗಳು ಬೆಲೆ ಏರಿಕೆ ಮಾಡಿವೆ. ಆದರೆ, ಕಚ್ಚಾ ಸಾಮಗ್ರಿಗಳ ದರ ಏರಿಕೆ ಆಗುತ್ತಿದ್ದರೂ ನಾವು ಬೆಲೆ ಹೆಚ್ಚಿಸಿಲ್ಲ. ಹೊಸ ಸೆಲ್ಟೋಸ್ ಬಿಡುಗಡೆ ಮಾಡಲಾಗಿದ್ದು, ಅದಕ್ಕಾಗಿ ಸಾಕಷ್ಟು ಹೂಡಿಕೆ ಮಾಡಲಾಗಿದೆ. ಹೀಗಾಗಿ ಬೆಲೆ ಏರಿಕೆ ಮಾಡಲು ಇದು ಸೂಕ್ತ ಸಮಯ ಎಂದು ನಾವು ಭಾವಿಸಿದ್ದೇವೆ ಎಂದು ಹೇಳಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಜಾಗತಿಕ ಮಾರುಕಟ್ಟೆಗಳಲ್ಲಿ ನಕಾರಾತ್ಮಕ ವಹಿವಾಟು: ಸೆನ್ಸೆಕ್ಸ್, ನಿಫ್ಟಿ ಇಳಿಕೆ

3 ದಿನದಲ್ಲಿ ₹5.50 ಲಕ್ಷ ಕೋಟಿ ನಷ್ಟ

ನವದೆಹಲಿ (ಪಿಟಿಐ): ದೇಶದ ಷೇರುಪೇಟೆಗಳು ಸತತ ಮೂರನೇ ವಹಿವಾಟು ಅವಧಿಯಲ್ಲಿಯೂ ಇಳಿಕೆ ಕಂಡಿತು. ಇದರಿಂದಾಗಿ ಮುಂಬೈ ಷೇರುಪೇಟೆಯಲ್ಲಿ ನೋಂದಾಯಿತ ಕಂಪನಿಗಳ ಬಂಡವಾಳ ಮೌಲ್ಯದಲ್ಲಿ ₹5.50 ಲಕ್ಷ ಕೋಟಿ ಕರಗಿದೆ.

ಮುಂಬೈ ಷೇರುಪೇಟೆಯಲ್ಲಿ ಒಟ್ಟು ಬಂಡವಾಳ ಮೌಲ್ಯವು ಗುರುವಾರದ ಅಂತ್ಯಕ್ಕೆ ₹317.90 ಲಕ್ಷ ಕೋಟಿಗೆ ಇಳಿಕೆ ಕಂಡಿದೆ. ವಿದೇಶಿ ಬಂಡವಾಳ ಹೊರಹರಿವು ಮತ್ತು ಜಾಗತಿಕ ಮಾರುಕಟ್ಟೆಗಳಲ್ಲಿ ಇಳಿಮುಖ ವಹಿವಾಟ ನಡೆದಿದ್ದರಿಂದ ದೇಶದ ಷೇರುಪೇಟೆಗಳಲ್ಲಿ ಗುರು ವಾರವೂ ನಕಾರಾತ್ಮಕ

ಚಲನೆ ಮುಂದುವರಿಯಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 571 ಅಂಶ ಇಳಿಕೆ ಕಂಡು 66,230 ಅಂಶಗಳಿಗೆ ತಲುಪಿತು. ಮೂರು ದಿನಗಳ ವಹಿವಾಟಿನಲ್ಲಿ ಸೆನ್ಸೆಕ್ಸ್ 1,608 ಅಂಶಗಳಷ್ಟು ಇಳಿಕೆ ಕಂಡಿದೆ.

ನಿಫ್ಟಿ 159 ಅಂಶ ಇಳಿಕೆಯಾಗಿ 19,742 ಅಂಶಗಳಿಗೆ ತಲುಪಿತು. ಬಿಎಸ್‌ಇ ಮಿಡ್‌ಕ್ಯಾಪ್ ಶೇ 0.99ರಷ್ಟು ಮತ್ತು ಸ್ಮಾಲ್ ಕ್ಯಾಪ್ ಶೇ 0.98ರಷ್ಟು ಇಳಿಕೆ ಕಂಡಿತು.

ಮುಖ್ಯಾಂಶಗಳು

- ಐಸಿಐಸಿಐ ಬ್ಯಾಂಕ್ ಷೇರು ಶೇ 2.81ರಷ್ಟು ಇಳಿಕೆ
- ಶೇ 1.75ರಷ್ಟು ತಗ್ಗಿದ ಬ್ಯಾಂಕಿಂಗ್ ವಲಯ

ಜಾಗತಿಕ ಮಾರುಕಟ್ಟೆಗಳಲ್ಲಿ ನಡೆದ ಇಳಿಮುಖ ವಹಿವಾಟಿನಿಂದಾಗಿ ದೇಶದ ಷೇರುಪೇಟೆಗಳಲ್ಲಿ ಮಾರಾಟದ ಒತ್ತಡ ಕಂಡುಬಂದಿತು. ಈ ವರ್ಷದ ನಂತರದಲ್ಲಿ ಇನ್ನೊಂದು ಬಾರಿ ಬಡ್ಡಿದ ಹೆಚ್ಚಳ ಮಾಡುವುದಾಗಿ ಅಮೆರಿಕದ ಫೆಡರಲ್ ರಿಸರ್ವ್ ಸೂಚನೆ ನೀಡಿರುವುದು ಜಾಗತಿಕ ಮಟ್ಟದಲ್ಲಿ ನಕಾರಾತ್ಮಕ ವಹಿವಾಟಿಗೆ ಕಾರಣವಾಯಿತು. ಅಮೆರಿಕದ ಡಾಲರ್ ಮೌಲ್ಯ ವೃದ್ಧಿ ಮತ್ತು ಕಚ್ಚಾ ತೈಲ ದರ ಗರಿಷ್ಠ ಮಟ್ಟದಲ್ಲಿ ಇರುವುದು ಸಹ ಹೂಡಿಕೆದಾರರ ಮೇಲೆ ಪ್ರತಿಕೂಲ ಪರಿಣಾಮ ಬೀರಿತು ಎಂದು ಕೋಟಕ್ ಸೆಕ್ಯುರಿಟೀಸ್ ಲಿಮಿಟೆಡ್‌ನ ಸಂಶೋಧನಾ ಮುಖ್ಯಸ್ಥ ಶ್ರೀಕಾಂತ್ ಚೌಹಾಣ್ ಹೇಳಿದ್ದಾರೆ.

ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು, ಮಿಡ್ ಮತ್ತು ಸ್ಮಾಲ್ ಕ್ಯಾಪ್‌ಗಳು ಹೆಚ್ಚಿನ ನಷ್ಟ ಕಂಡಿವೆ. ಕಚ್ಚಾ ತೈಲ ದರ ಏರಿಕೆ ಮತ್ತು ಮಳೆಯ ಕುರಿತಾದ ಅನಿಶ್ಚಿತ ಪರಿಸ್ಥಿತಿಯಿಂದಾಗಿ ಹೂಡಿಕೆದಾರರನ್ನು ಇನ್ನಷ್ಟು ಎಚ್ಚರಿಕೆಯಿಂದ ವಹಿವಾಟು ನಡೆಸುವಂತೆ ಮಾಡಿದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ತಿಳಿಸಿದ್ದಾರೆ.

ಬ್ರೆಂಟ್ ಕಚ್ಚಾ ತೈಲ ದರ ಶೇ 0.81ರಷ್ಟು ಇಳಿಕೆ ಕಂಡು ಬ್ಯಾರಲ್‌ಗೆ 92.77 ಡಾಲರ್‌ಗೆ ತಲುಪಿತು. ಏಷ್ಯಾದ ಮಾರುಕಟ್ಟೆಯಲ್ಲಿ ಸೋಲ್, ಟೋಕಿಯೊ, ಶಾಂಘೈ ಮತ್ತು ಹಾಂಗ್ ಕಾಂಗ್ ಷೇರುಪೇಟೆಗಳ ವಹಿವಾಟು ಇಳಿಕೆ ಕಂಡಿತು. ಯುರೋಪ್ ಮಾರುಕಟ್ಟೆಗಳಲ್ಲಿಯೂ ನಕಾರಾತ್ಮಕ ವಹಿವಾಟು ನಡೆಯಿತು.

ಚಿರಸ್ಮರಣೆ

ಶ್ರೀಮತಿ ಲಕ್ಷ್ಮಮ್ಮ
ನಿಧನ: 23-01-1973

ಶ್ರೀ ಪಾಪಣ್ಣ ರೆಡ್ಡಿ
ನಿಧನ: 08-07-1988

ಶ್ರೀ ಬಿ.ಪಿ. ಗೋಪಾಲರೆಡ್ಡಿ
ನಿಧನ: 20-09-2015

ನೀವುಗಳು ನಮ್ಮನ್ನು ಅಗಲಿದರೂ ನಿಮ್ಮ ಪ್ರೀತಿ, ತಾಳ್ಮೆ, ತ್ಯಾಗ, ಆದರ್ಶಮಯ ಜೀವನ ನಿಮ್ಮ ಮಾರ್ಗದರ್ಶನ ನಮ್ಮ ಬದುಕಿಗೆ ದಾರಿ ದೀಪವಾಗಿದೆ.

ಪ್ರತಿದಿನವೂ, ಪ್ರತಿಕ್ಷಣವೂ ನಿಮ್ಮಗಳ ನೆನಪಿನಲ್ಲಿರುವ
ಶ್ರೀಮತಿ ಶಾರದಮ್ಮ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಕುಟುಂಬದವರು.

‘ಉದ್ದೇಶಪೂರ್ವಕ ಸುಸ್ತಿದಾರ’ ನಿಯಮ ಬಿಗಿಗೊಳಿಸಲು ಚಿಂತನೆ

ಮುಂಬೈ (ರಾಯಿಟರ್ಸ್/ಪಿಟಿಐ): ಬ್ಯಾಂಕ್‌ಗಳು ಸಾಲಗಾರರನ್ನು ‘ಉದ್ದೇಶಪೂರ್ವಕ ಸುಸ್ತಿದಾರ’ ಎಂದು ಘೋಷಿಸಲು ಇರುವ ನಿಯಮಗಳನ್ನು ಇನ್ನಷ್ಟು ಬಿಗಿಗೊಳಸಲು ಭಾರತೀಯ ರಿಸರ್ವ್ ಬ್ಯಾಂಕ್ ಮುಂದಾಗಿದೆ.

ಈ ಸಂಬಂಧ ಕರಡು ನಿಯಮಗಳನ್ನು ಆರ್‌ಬಿಐ ಸಿದ್ಧಪಡಿಸಿದೆ. ಅದರಂತೆ, ₹25 ಲಕ್ಷಕ್ಕೂ ಹೆಚ್ಚಿನ ಮೊತ್ತವನ್ನು ಬಾಕಿ ಉಳಿಸಿಕೊಂಡಿದ್ದು, ಸಾಲ ಮರುಪಾವತಿಸುವ ಸಾಮರ್ಥ್ಯ ಇದ್ದರೂ ಬಾಕಿ ತೀರಿಸಲು ನಿರಾಕರಿಸಿದರೆ ಅಂತಹ ಸಾಲಗಾರರನ್ನು ‘ಉದ್ದೇಶಪೂರ್ವ ಸುಸ್ತಿದಾರ’ ಎಂದು ಪರಿಗಣಿಸುವಂತೆ ಬ್ಯಾಂಕ್‌ಗಳಿಗೆ ಸಲಹೆ ನೀಡಿದೆ.

ವಸೂಲಾಗದ ಸಾಲದ ಖಾತೆಯನ್ನು ಉದ್ದೇಶಪೂರ್ವ

ಸುಸ್ತಿದಾರ ಖಾತೆ ಎಂದು ಆರು ತಿಂಗಳ ಒಳಗಾಗಿ ಘೋಷಿಸುವಂತೆಯೂ ಹೇಳಿದೆ. ಈ ಸಂಬಂಧ ಪರಿಶೀಲನಾ ಸಮಿತಿಯೊಂದನ್ನು ರಚನೆ ಮಾಡಿ, ಉದ್ದೇಶಪೂರ್ವಕ ಸುಸ್ತಿದಾರ ಎಂದು ಘೋಷಿಸುವ ಮುನ್ನ ಸಾಲಗಾರರಿಂದ 15 ದಿನಗಳ ಒಳಗೆ ಲಿಖಿತ ರೂಪದಲ್ಲಿ ಪ್ರತಿಕ್ರಿಯೆ ಪಡೆಯಬೇಕು. ಅಗತ್ಯ ಬಿದ್ದಲ್ಲಿ ಖುದ್ದು ವಿಚಾರಣೆ ನಡೆಸಬೇಕು ಎಂದು ಕರಡು ನೀತಿಯಲ್ಲಿ ಬ್ಯಾಂಕ್‌ಗಳಿಗೆ ಸಲಹೆ ನೀಡಲಾಗಿದೆ.

ಮುಖ್ಯಾಂಶಗಳು

- ಸುಸ್ತಿದಾರರ ಘೋಷಣೆಗೆ 6 ತಿಂಗಳ ಕಾಲಮಿತಿ ಸಂಭವ
- ಪ್ರತಿಕ್ರಿಯೆ ನೀಡಲು ಅಕ್ಟೋಬರ್ 31ರವರೆಗೆ ಅವಕಾಶ

ಒಮ್ಮೆ ಉದ್ದೇಶಪೂರ್ವಕ ಸುಸ್ತಿದಾರ ಎಂದು ಗುರುತಿಸಿದ ಬಳಿಕ ಸಾಲ ಪಡೆದವರು ಆ ಸ್ಥಿತಿಯಿಂದ ಹೊರಬರುವವರೆಗೆ ಹೆಚ್ಚುವರಿ ಸಾಲ ನೀಡಬಾರದು ಎಂದು ಹೇಳಿದೆ. ಕರಡು ನಿಯಮಗಳ ಕುರಿತು ಪ್ರತಿಕ್ರಿಯೆ ನೀಡಲು ಅಕ್ಟೋಬರ್ 31ರವರೆಗೆ ಅವಕಾಶ ನೀಡಲಾಗಿದೆ.

ಸಂಕ್ಷಿಪ್ತ ಸುದ್ದಿ

ವಾರಕ್ಕೊಮ್ಮೆ ಸಕ್ಕರೆ ದಾಸ್ತಾನು ಮಾಹಿತಿ ನೀಡಲು ಸೂಚನೆ

ನವದೆಹಲಿ (ಪಿಟಿಐ): ಸಕ್ಕರೆಯನ್ನು ಅಗತ್ಯಕ್ಕಿಂತ ಹೆಚ್ಚು ದಾಸ್ತಾನು ಮಾಡಿಟ್ಟುಕೊಳ್ಳುವುದನ್ನು ತಪ್ಪಿಸಲು ವಾರಕ್ಕೊಮ್ಮೆ ಸರ್ಕಾರಿ ಜಾಲತಾಣದಲ್ಲಿ ದಾಸ್ತಾನು ಮಾಹಿತಿಯನ್ನು ದಾಖಲಿಸುವಂತೆ ಕೇಂದ್ರ ಸರ್ಕಾರವು ವರ್ತಕರಿಗೆ ಗುರುವಾರ ಸೂಚನೆ ನೀಡಿದೆ.

ರಿಟೇಲ್, ಸಗಟು ವ್ಯಾಪಾರಿಗಳು, ಸಂಸ್ಕರಣಾಗಾರರು ಮತ್ತು ದೊಡ್ಡ ಪ್ರಮಾಣದಲ್ಲಿ ವಹಿವಾಟು ನಡೆಸುವ ಮಳಿಗೆಗಳು ಪ್ರತಿ ಸೋಮವಾರ ತಮ್ಮ ಬಳಿ ಇರುವ ಸಕ್ಕರೆ ದಾಸ್ತಾನಿನ ಮಾಹಿತಿಯನ್ನು www.esugar.nic.inನಲ್ಲಿ ದಾಖಲಿಸುವಂತೆ ತಿಳಿಸಿದೆ.

ದೇಶಿ ಬಳಕೆಗೆ ಸಾಕಾಗುವಷ್ಟು ಸಕ್ಕರೆ ದಾಸ್ತಾನು ಇದೆ. ಹಬ್ಬದ ಋತುವಿನಲ್ಲಿ ಯಾವುದೇ ರೀತಿಯ ಕೊರತೆ ಎದುರಾಗುವುದಿಲ್ಲ ಎಂದು ಆಹಾರ ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

‘ಜಿಡಿಪಿ ಶೇ 6.5ರಷ್ಟು ಬೆಳವಣಿಗೆ’

ನವದೆಹಲಿ (ಪಿಟಿಐ): ಕಚ್ಚಾ ತೈಲ ದರ ಏರಿಕೆ ಮತ್ತು ಪ್ರತಿಕೂಲ ಹವಾಮಾನದ ಹೊರತಾಗಿಯೂ ಭಾರತದ ಆರ್ಥಿಕತೆಯು ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ 6.5ರಷ್ಟು ಬೆಳವಣಿಗೆ ಕಾಣಲಿದೆ ಎಂದು ನೀತಿ ಆಯೋಗದ ಸದಸ್ಯ ಅರವಿಂದ ವೀರಮಣಿ ಗುರುವಾರ ಹೇಳಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಜಿಡಿಪಿ ಬೆಳವಣಿಗೆಯು ಶೇ 6.5ರಷ್ಟು (ಶೇ 0.5ರಷ್ಟು ಹೆಚ್ಚು ಅಥವಾ ಕಡಿಮೆ) ಆಗಲಿದೆ ಎಂದು ಅವರು ತಿಳಿಸಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ರಾಯಭಾರ ಕಚೇರಿ ಮೇಲೆ ದಾಳಿ 10 ಆರೋಪಿಗಳ ಚಿತ್ರ ಬಿಡುಗಡೆ

ನವದೆಹಲಿ (ಪಿಟಿಐ): ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೊದಲ್ಲಿನ ಭಾರತದ ರಾಯಭಾರ ಕಚೇರಿ ಮೇಲೆ ಈ ವರ್ಷದ ಮಾರ್ಚ್‌ನಲ್ಲಿ ದಾಳಿ ನಡೆಸಿದ 10 ಆರೋಪಿಗಳ ಚಿತ್ರಗಳನ್ನು ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ಬಿಡುಗಡೆ ಮಾಡಿದೆ.

ಜತೆಗೆ ಈ ಆರೋಪಿಗಳ ಕುರಿತು ಮಾಹಿತಿ ಒದಗಿಸುವಂತೆ ಸಾರ್ವಜನಿಕರಲ್ಲಿ ಕೋರಿದ್ದು, ಇವರ ಕುರಿತು ಮಾಹಿತಿ ನೀಡಿದವರ ಗುರುತನ್ನು ಬಹಿರಂಗಪಡಿಸುವುದಿಲ್ಲ ಎಂದು ತಿಳಿಸಿದೆ.

ಆರೋಪಿಗಳ ಬಂಧನಕ್ಕೆ ಪೂರಕವಾಗಬಹುದಾದ ಅವರ ಗುರುತು ಮತ್ತು ಮುಖ್ಯವಾದ ಮಾಹಿತಿ ನೀಡುವಂತೆ ಮನವಿ ಮಾಡಿದ್ದು, ಇವರ ಬಗ್ಗೆ ವಿವರ ನೀಡುವವರ ಹೆಸರನ್ನು ಗೋಪ್ಯವಾಗಿಡಲಾಗುವುದು ಎಂದು ತನಿಖಾ ಸಂಸ್ಥೆ



ತಿಳಿಸಿದೆ.

ಮಾರ್ಚ್ 18 ಮತ್ತು 19ರ ಮಧ್ಯರಾತ್ರಿ ಖಾಲಿಸ್ತಾನಿ ಪರವಾದ ಕೆಲವು ಉಗ್ರರು ಸ್ಯಾನ್‌ಫ್ರಾನ್ಸಿಸ್ಕೊದಲ್ಲಿರುವ ಭಾರತದ ರಾಯಭಾರ ಕಚೇರಿಗೆ ಅತಿಕ್ರಮವಾಗಿ ಪ್ರವೇಶಿಸಿ, ಕಚೇರಿಯನ್ನು ಸುಟ್ಟುಹಾಕಲು ಯತ್ನಿಸಿದ್ದರು. ಅದೇ ದಿನ ಖಾಲಿಸ್ತಾನ ಬೆಂಬಲಿಗರು ಘೋಷಣೆಗಳನ್ನು ಕೂಗುತ್ತಾ, ಭದ್ರತಾ ಬ್ಯಾರಿಕೇಡ್‌ಗಳನ್ನು ತೆರವುಗೊಳಿಸಿ ರಾಯಭಾರ ಕಚೇರಿ ಆವರಣದಲ್ಲಿ ಖಾಲಿಸ್ತಾನದ ಎರಡು ಧ್ವಜಗಳನ್ನು ಹಾರಿಸಿದ್ದರು. ಜತೆಗೆ ಕಟ್ಟಡವನ್ನು ಧ್ವಂಸಗೊಳಿಸಿ, ಅಧಿಕಾರಿಗಳ ಮೇಲೆ ದಾಳಿ ನಡೆಸಿದ್ದರು ಎಂದು ತನಿಖಾ ಸಂಸ್ಥೆ ಹೇಳಿದೆ.

ಈ ಕುರಿತು ಎನ್‌ಐಎ, ಜೂನ್ 16ರಂದು ಭಾರತೀಯ ದಂಡ ಸಂಹಿತೆ, ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ ಮತ್ತು ಸಾರ್ವಜನಿಕರ ಆಸ್ತಿಗೆ ಹಾನಿ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದೆ. ಅಲ್ಲದೆ, ಜುಲೈ ಒಂದು ಮತ್ತು ಎರಡರ ಮಧ್ಯರಾತ್ರಿ ಕೆಲವು ಆರೋಪಿಗಳು ರಾಯಭಾರ ಕಚೇರಿಗೆ ನುಗ್ಗಿ ಅಧಿಕಾರಿಗಳು ಇದ್ದಾಗಲೇ ಬೆಂಕಿ ಹಚ್ಚಲು ಯತ್ನಿಸಿದ್ದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	750-800
ನಡುಗೋಲು	900-950
ರಾಶಿ	1000-1150
ರಾಶಿ ಉತ್ತಮ	1150-1200
ಹೆರಕಿದ್ದು	1600-1700
ಹಸಿರು ಸಾಧಾರಣ	1200-1250
ಹಸಿರು ಉತ್ತಮ	1600-1700
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	600
ಬಂಟ್ವಾಳ	
ಕೋಕ	15000-25000
ಹೊಸತು	28000-45000
ಹಳತು	46000-48000
ಬೆಂಗಳೂರು	
ಇತರೆ	55000-60000
ಚನ್ನಗಿರಿ	
ರಾಶಿ	41099-50189
ಕಾರ್ಕಳ	
ಹೊಸತು	30000-45000
ಹಳತು	40000-48500
ಕುಮಟ	
ಚಿಪ್ಪು	30869-34869
ಕೋಕ	18299-33000
ಹಳೆಚಾಲಿ	38669-39269
ಹೊಸಚಾಲಿ	37000-40499
ಪುತ್ತೂರು	
ಕೋಕ	11000-25000
ಹೊಸತು	34000-45000
ಸಾಗರ	
ಬಿಳಿಗೋಟು	16569-32500
ಚಾಳಿ	36099-39099
ಕೋಕ	17989-33989
ಕೆಂಪುಗೋಟು	24290-34699
ರಾಶಿ	34469-48039
ಸಿಪ್ಪೆಗೋಟು	13319-22889
ಶಿವಮೊಗ್ಗ	
ಬೆಟ್ಟೆ	45619-53189
ಗೊರಬಲು	18000-37218
ರಾಶಿ	35399-49899
ಸರಕು	53000-83740
ಸಿದ್ದಾಪುರ	
ಬಿಳಿಗೋಟು	31899-35099
ಚಾಲಿ	36199-40299
ಕೋಕ	28599-32619
ಕೆಂಪುಗೋಟು	33599-33599
ರಾಶಿ	45289-48599
ಶಿರಸಿ	
ಬೆಟ್ಟೆ	41601-42199
ಬಿಳಿಗೋಟು	32199-35418
ಚಾಲಿ	37099-41468
ಕೆಂಪುಗೋಟು	25180-35699
ರಾಶಿ	45499-48269
ಯಲ್ಲಾಪುರ	
ಬಿಳಿಗೋಟು	23012-35510
ಚಾಲಿ	38250-41199
ಕೋಕ	19718-28000
ಕೆಂಪುಗೋಟು	22899-31016
ರಾಶಿ	48280-52699
ತಟ್ಟಿಬೆಟ್ಟೆ	40399-45589
ತೀರ್ಥಹಳ್ಳಿ	
ಗೊರಬಾಲು	37000-37000
ರಾಶಿ	47800-47800
ತುಮಕೂರು	
ರಾಶಿ	44500-47200

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	12600	12500	-	158.20 ಸೆಂಟ್ಸ್
ಎಸಿ	7000	6200	-	
ಆರ್‌ಪಿ	10100	9900	-	ಲಂಡನ್
ಆರ್‌ಸಿ	5830	5700	-	2508 ಡಾಲರ್ಸ್

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

Wanted

ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ಸಂಪರ್ಕಿಸಿ: 7019132200, 080- 25300714

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 20,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು- 76 ತಕ್ಷಣ ಸಂಪರ್ಕಿಸಿ: 9606385001, 9606523307

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು, ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. ರೂ.12,000- 17,000. 8951315839, 9880120052

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIನವರುಗಳು 16,600-65,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

ಪ್ರವಾಸ

Travel

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ: ವಿಮಾನ/ರೈಲು/ AC ಬಸ್ಸಿನಲ್ಲಿ 08.10.2023 26.10.2023 ಚಾರ್‌ಧಾಮ್ ಸಮೇತ ಪ್ರವಾಸ. 19.10.2023 ಅಲಹಾಬಾದ್,ಕಾಶಿ,ಬುದ್ಧಗಯಾ 26.10.2023 ನೇಪಾಳ,ಮುಕ್ತಿನಾಥ ಪೋಕ್ರ,ಲುಂಬಿನಿ. 17.11.2023 ಸೋಮನಾಥ್,ದ್ವಾರಕ ಮಹಾಕಾಳೇಶ್ವರ,ಓಂಕಾರೇಶ್ವರ ನಿಷ್ಕಳಂಕ ಮಹಾದೇವ ದಕ್ಷಿಣ/ ಮಧ್ಯಭಾರತ ಪ್ರವಾಸಗಳಿಗೆ ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು4. 26574131, 8431888138 7204173686 9686708171

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 25/10 ಗುಜರಾತ್, ಮಧ್ಯಪ್ರದೇಶ 4 ಜ್ಯೋತಿರ್ಲಿಂಗ ಪ್ಯಾಕೇಜ್. 22/10 ಹೈದರಬಾದ್ 4 ದಿನಗಳ ಪ್ಯಾಕೇಜ್ 9591017782, 9880621353

ಭವಿಷ್ಯ

Astrology

ಜನ್ಮಾಂತರ ಸಮ್ಮೋಹಿನಿ ಚಿಕಿತ್ಸೆ, ಎಲ್ಲಾ ರೀತಿಯ ದೈಹಿಕ ರೋಗಗಳು, ಮಾನಸಿಕ ಕಾಯಿಲೆಗಳು ಮತ್ತು ವ್ಯಾಪಾರ, ವ್ಯವಹಾರ, ವೈವಾಹಿಕ, ಶತ್ರುಬಾಧೆ, ಮನೆಯಲ್ಲಿ ಕಿರಿಕಿರಿ ಈ ಎಲ್ಲಾ ಸಮಸ್ಯೆಗಳಿಗೆ ರಾಮಬಾಣ. 8073342011

ಸ್ತ್ರೀವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967

★ಒಂದೇ ಕರೆಯಲ್ಲಿ★ ಸ್ತ್ರೀಪುರುಷ ವಶೀಕರಣ,ಹಣಕಾಸು ಮನೆತನ, ಇನ್ನೂ ಯಾವುದೇ ಸಮಸ್ಯೆಗಳಿಗೆ 2ಗಂಟೆಯಲ್ಲಿ 100% ಪರಿಹಾರ. ನಾರಾಯಣ ಆಚಾರ್ಯ.9880811806

DH DECCAN HERALD Classifieds More value, more impact
ಪ್ರಜಾವಾಣಿ
REAL ESTATE
The 1st thing to do when Selling/Buying your Property

www.dhclassifieds.com
BOOK NOW
Book your ad with us now!
For more details contact:
+91 9731810277 | +91 9900428036 |
+91 9845114560 | +91 9901641752 | |
+91 9886213331 | 080- 45557163/164

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಹೊಸ ವಿಜ್ಞಾನ ಪ್ರಶಸ್ತಿ ಘೋಷಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ವಿಜ್ಞಾನ, ತಂತ್ರಜ್ಞಾನ ಹಾಗೂ ಆವಿಷ್ಕಾರ ವಿಭಾಗದಲ್ಲಿ ಅಸಾಧಾರಣ ಸಾಧನೆ ಮಾಡಿದ ವಿಜ್ಞಾನಿಗಳಿಗೆ ಪ್ರತಿವರ್ಷವು ‘ರಾಷ್ಟ್ರೀಯ ವಿಜ್ಞಾನ ಪುರಸ್ಕಾರ’ ನೀಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಒಟ್ಟು ನಾಲ್ಕು ವಿಭಾಗಗಳಲ್ಲಿ ಈ ಪ್ರಶಸ್ತಿ ನೀಡಲಾಗುತ್ತದೆ. ಜೀವಮಾನದ ಸಾಧನೆಗಾಗಿ ನೊಬೆಲ್ ಪ್ರಶಸ್ತಿಯ ಮಾದರಿಯಲ್ಲಿ ಮೂವರಿಗೆ ‘ವಿಜ್ಞಾನ ರತ್ನ’ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಉಳಿದಂತೆ 45 ವರ್ಷದ ಒಳಗಿನ ವಿಜ್ಞಾನಿಗಳಿಗೆ ‘ವಿಜ್ಞಾನ ಶ್ರೀ’ ಹಾಗೂ ‘ವಿಜ್ಞಾನ ಯುವ ಶಾಂತಿ ಸ್ವರೂಪ್ ಭಟ್ನಾಗರ್’ ಪ್ರಶಸ್ತಿಯನ್ನು ಕೊಡಮಾಡಲಾಗುತ್ತದೆ. ಸಂಶೋಧನೆ ಅಥವಾ ಅನ್ವೇಷಣೆಗೆ ನೀಡಿದ ಕೊಡುಗೆ ಅವಲೋಕಿಸಿ ಮೂವರು ಸಂಶೋಧಕರನ್ನು ಒಳಗೊಂಡ ತಂಡವನ್ನು ‘ವಿಜ್ಞಾನ ತಂಡ’ ಪ್ರಶಸ್ತಿಗೆ ಪರಿಗಣಿಸಲಾಗುತ್ತದೆ.

ಕೇಂದ್ರ ಗೃಹ ಸಚಿವಾಲಯದ ಸೂಚನೆ ಮೇರೆಗೆ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ಕೊಡಮಾಡುತ್ತಿದ್ದ ಪ್ರಶಸ್ತಿಗಳನ್ನು ಸ್ಥಗಿತಗೊಳಿಸಲಾಗಿತ್ತು. ಒಂದು ವರ್ಷದ ಬಳಿಕ ಸಾಧಕರಿಗೆ ಪ್ರಶಸ್ತಿ ನೀಡುವ ಕಾರ್ಯಕ್ಕೆ ಮತ್ತೆ ಚಾಲನೆ ಸಿಕ್ಕಿದೆ.

ನಗದು ಬಹುಮಾನ ರದ್ದು

ಕೇಂದ್ರ ಸರ್ಕಾರವು ಪದ್ಮ ಪ್ರಶಸ್ತಿಗಳ ಮಾದರಿಯಲ್ಲಿ ಹೊಸ ಪ್ರಶಸ್ತಿಗಳನ್ನು ಘೋಷಿಸಿದ ಬಳಿಕ ‘ಶಾಂತಿ ಸ್ವರೂಪ್ ಭಟ್ನಾಗರ್ ಪ್ರಶಸ್ತಿ’ಗೆ ನೀಡುತ್ತಿದ್ದ ನಗದು ಬಹುಮಾನವನ್ನು ಕೈಬಿಟ್ಟಿದೆ.
ದೇಶದ ವಿಜ್ಞಾನ ಕ್ಷೇತ್ರದಲ್ಲಿ ಉನ್ನತ ಸಾಧನೆ ಮಾಡಿದವರಿಗೆ ಈ ಅತ್ಯುನ್ನತ ಪ್ರಶಸ್ತಿಯನ್ನು ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನಾ ಪರಿಷತ್‌ನಿಂದ ಕೊಡಮಾಡಲಾಗುತ್ತದೆ.
ಈ ಪ್ರಶಸ್ತಿ ಪುರಸ್ಕೃತರಿಗೆ ತಲಾ ₹ 5 ಲಕ್ಷ ನಗದು ಬಹುಮಾನದ ಜೊತೆಗೆ ಅವರು ಸರ್ಕಾರಿ ಸೇವೆಯಲ್ಲಿ ಇರುವವರೆಗೂ ಪ್ರತಿ ಮಾಸಿಕ ₹ 15 ಸಾವಿರ ಗೌರವಧನ ಲಭಿಸುತ್ತಿತ್ತು.

ಪ್ರಶಸ್ತಿ ಪ್ರದಾನ ಎಂದು?: ಪ್ರತಿ ವರ್ಷದ ಮೇ 11ರ ರಾಷ್ಟ್ರೀಯ ತಂತ್ರಜ್ಞಾನ ದಿನದಂದು ಈ ಪ್ರಶಸ್ತಿಗಳನ್ನು ಘೋಷಿಸಲಾಗುತ್ತದೆ. ‘ಚಂದ್ರಯಾನ 3’ರ ಯಶಸ್ಸಿಗಾಗಿ ಘೋಷಿಸಿರುವ ಆಗಸ್ಟ್ 23ರ ಬಾಹ್ಯಾಕಾಶ ದಿನದಂದು ರಾಷ್ಟ್ರಪತಿ ಅವರು ಪ್ರದಾನ ಮಾಡಲಿದ್ದಾರೆ.

ಜನವರಿ 14ರಿಂದ ಪ್ರಶಸ್ತಿಗೆ ನಾಮನಿರ್ದೇಶನ ಪ್ರಕ್ರಿಯೆ ಆರಂಭವಾಗಲಿದ್ದು, ಫೆಬ್ರುವರಿ 28ರ ರಾಷ್ಟ್ರೀಯ ವಿಜ್ಞಾನ ದಿನದಂದು ಮುಕ್ತಾಯಗೊಳ್ಳಲಿದೆ.

‘ವಿಜ್ಞಾನ ಶ್ರೀ’ ಹಾಗೂ ‘ವಿಜ್ಞಾನ ಯುವ ಶಾಂತಿ ಸ್ವರೂಪ್ ಭಟ್ನಾಗರ್’ ವಿಭಾಗದಲ್ಲಿ ತಲಾ 25 ವಿಜ್ಞಾನಿಗಳಿಗೆ ಪ್ರಶಸ್ತಿ ನೀಡಲಾಗುತ್ತದೆ. ‘ವಿಜ್ಞಾನ ತಂಡ’ ವಿಭಾಗದಲ್ಲಿ ಮೂರು ತಂಡಗಳನ್ನಷ್ಟೇ ಆಯ್ಕೆ ಮಾಡಲಾಗುತ್ತದೆ.

ಭೌತ ವಿಜ್ಞಾನ, ರಸಾಯನ ವಿಜ್ಞಾನ, ಜೈವಿಕ ವಿಜ್ಞಾನ, ಗಣಿತ, ಕಂಪ್ಯೂಟರ್ ವಿಜ್ಞಾನ, ಭೂವಿಜ್ಞಾನ, ಔಷಧಿ ವಿಜ್ಞಾನ, ಎಂಜಿನಿಯರಿಂಗ್, ಕೃಷಿ, ಪರಿಸರ, ತಂತ್ರಜ್ಞಾನ ಮತ್ತು ಅನ್ವೇಷಣೆ, ಪರಮಾಣು ಶಕ್ತಿ, ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿನ ಸಾಧನೆಯನ್ನು ಪ್ರಶಸ್ತಿಗೆ ಪರಿಗಣಿಸಲಾಗುತ್ತದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಪ್ರಧಾನ ವೈಜ್ಞಾನಿಕ ಸಲಹೆಗಾರರ ನೇತೃತ್ವದ 17 ಸದಸ್ಯರ ಸಮಿತಿಯ ಅರ್ಹರನ್ನು ಆಯ್ಕೆ ಮಾಡಲಿದೆ. ವಿಜ್ಞಾನ ಕಾರ್ಯದರ್ಶಿಗಳು, ವಿಜ್ಞಾನ ಮತ್ತು ಎಂಜಿನಿಯರಿಂಗ್ ಅಕಾಡೆಮಿಯ ಅಧ್ಯಕ್ಷರು ಹಾಗೂ ಪ್ರಸಿದ್ಧ ವಿಜ್ಞಾನಿಗಳು ಈ ಸಮಿತಿಯಲ್ಲಿ ಇದ್ದಾರೆ.

ನೊಬೆಲ್ ಮಾದರಿಯ ಪ್ರಶಸ್ತಿ (ವಿಜ್ಞಾನ ರತ್ನ) ಸೇರಿದಂತೆ ಉನ್ನತ ಮಟ್ಟದ ಹೊಸ ಪ್ರಶಸ್ತಿಗಳನ್ನು ನೀಡಬೇಕು. ಹಾಗಾಗಿ, ಇಲಾಖೆಯಿಂದ ನೀಡುತ್ತಿರುವ 200ಕ್ಕೂ ಹೆಚ್ಚು ಪ್ರಶಸ್ತಿಗಳನ್ನು ಸ್ಥಗಿತಗೊಳಿಸುವಂತೆ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಹಿಂದಿನ ವರ್ಷ ಕೇಂದ್ರ ಗೃಹ ಸಚಿವಾಲಯವು ಸೂಚಿಸಿತ್ತು.

ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನಾ ಪರಿಷತ್‌ನಿಂದ ನೀಡುವ ಪ್ರತಿಷ್ಠಿತ ‘ಶಾಂತಿ ಸ್ವರೂಪ್ ಭಟ್ನಾಗರ್’ ಪ್ರಶಸ್ತಿಯನ್ನಷ್ಟೇ ಮುಂದುವರಿಸಲು ನಿರ್ದೇಶನ ನೀಡಿತ್ತು.

‘ಪ್ರತಿವರ್ಷ ವೈಜ್ಞಾನಿಕ ವಿಷಯಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಇಲಾಖೆಗಳು 300ಕ್ಕೂ ಹೆಚ್ಚು ಪ್ರಶಸ್ತಿಗಳನ್ನು ನೀಡಲು ಸಾಕಷ್ಟು ಸಮಯ ಮತ್ತು ಸಂಪನ್ಮೂಲವನ್ನು ವ್ಯಯ ಮಾಡುತ್ತಿದ್ದವು. ಇದನ್ನು ತಪ್ಪಿಸಲು ನಾಲ್ಕು ವಿಭಾಗಗಳಲ್ಲಿ ಪ್ರಶಸ್ತಿ ನೀಡಲು ನಿರ್ಧರಿಸಲಾಗಿದೆ’ ಎಂದು ಕೇಂದ್ರ ವಿಜ್ಞಾನ ಸಚಿವಾಲಯದ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಬಿಜೆಪಿ–ಎಐಎಡಿಎಂಕೆ ನಡುವೆ ಬಿಕ್ಕಟ್ಟು ಇಲ್ಲ: ಅಣ್ಣಾಮಲೈ

ಚೆನ್ನೈ: ‘ತಮಿಳುನಾಡಿನಲ್ಲಿ ಬಿಜೆಪಿ ಮತ್ತು ಎಐಎಡಿಎಂಕೆ ಪಕ್ಷಗಳ ನಡುವೆ ಯಾವುದೇ ಸಮಸ್ಯೆ ಇಲ್ಲ. 2024ರಲ್ಲಿಯೂ ನರೇಂದ್ರ ಮೋದಿ ಅವರೇ ಪ್ರಧಾನಿ ಸ್ಥಾನದ ಅಭ್ಯರ್ಥಿ ಎಂಬುದು ಉಭಯ ಪಕ್ಷಗಳ ಸಾಮಾನ್ಯ ಚಿಂತನೆಯಾಗಿದೆ’ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಕೆ.ಅಣ್ಣಾಮಲೈ ಹೇಳಿದ್ದಾರೆ.

‘ಸಮಸ್ಯೆ ಇದೆ ಎಂದು ನನಗನ್ನಿಸುವುದಿಲ್ಲ. ಮೋದಿ ಹೆಸರು ಎರಡು ಪಕ್ಷಗಳನ್ನು ಒಗ್ಗೂಡಿಸಿದೆ.

ಆದರೆ, ಎರಡೂ ಪಕ್ಷಗಳ ಸಿದ್ಧಾಂತ ಭಿನ್ನವಾಗಿರುವ ಕಾರಣ ತಿಕ್ಕಾಟ ಸಹಜವಾದುದು’ ಎಂದು ಅಣ್ಣಾಮಲೈ ಮಂಗಳವಾರ ಪ್ರತಿಪಾದಿಸಿದರು. ‘ದೆಹಲಿಗೆ ಮೋದಿ, ತಮಿಳುನಾಡಿಗೆ ಎಡ ಪ್ಪಾಡಿ ಕೆ.ಪಳನಿಸ್ವಾಮಿ’ ಎಂಬ ಎಐಎಡಿಎಂಕೆ ಮುಖಂಡರ ಹೇಳಿಕೆಯನ್ನು ಉಲ್ಲೇಖಿಸಿ, ‘ಅದನ್ನು ನಾನು ಒಪ್ಪುವುದಿಲ್ಲ. ರಾಜ್ಯದಲ್ಲಿ ಬಿಜೆಪಿ ಬಲಪಡಿಸಿ, ಅಧಿಕಾರಕ್ಕೆ ತರುವ ಗುರಿಯೊಂದಿಗೆ ನಾನು ಬಂದಿದ್ದೇನೆ’ ಎಂದರು. ‘ನಾನು ಹಾಗೇ ಹೇಳುವುದು ಹೇಗೆ ಸಾಧ್ಯ. ಬಿಜೆಪಿಯನ್ನು ಅಧಿಕಾರಕ್ಕೆ ತರುವುದು ನನ್ನ ಗುರಿ. ನಾನು ವೃತ್ತಿನಿರತ ರಾಜಕಾರಣಿಯಲ್ಲ. ನನ್ನನ್ನು ಅಧ್ಯಕ್ಷನಾಗಿ ನೇಮಿಸುವಾಗ ಪಕ್ಷಕ್ಕೂ ಇದು ಗೊತ್ತಿತ್ತು. ಇನ್ನೊಂದು ಪಕ್ಷದ ಪ್ರಚಾರಕ್ಕೆ ನಾನಿಲ್ಲ’ ಎಂದು ಸ್ಪಷ್ಟಪಡಿಸಿದರು.

ಫುಟ್‌ಬಾಲ್: ಬಾಂಗ್ಲಾದೇಶಕ್ಕೆ ನಿರಾಸೆ, ಭಾರತದ ನಾಕೌಟ್ ಆಸೆ ಜೀವಂತ

ಚೆಟ್ರಿ ಏಕೈಕ ಗೋಲು ತಂದ ಜಯ

ಹಾಂಗ್‌ಝೌ (ಪಿಟಿಐ):ಬಾಂಗ್ಲಾ ಎದುರಿನ ಪಂದ್ಯದಲ್ಲಿ ಸುನಿಲ್ ಚೆಟ್ರಿ ಗಳಿಸಿದ ಏಕೈಕ ಗೋಲಿನ ನೆರವಿನಿಂದ ಭಾರತ ತಂಡವು ಏಷ್ಯನ್ ಕ್ರೀಡಾಕೂಟದ ಪುರುಷರ ಫುಟ್‌ಬಾಲ್‌ನಲ್ಲಿ ನಾಕೌಟ್ ಪ್ರವೇಶಿಸುವ ಆಸೆ ಜೀವಂತವಾಗಿದೆ.

ಗುರುವಾರ ನಡೆದ ಪಂದ್ಯದಲ್ಲಿ 39 ವರ್ಷದ ಚೆಟ್ರಿ 85ನೇ ನಿಮಿಷದಲ್ಲಿ ಗೋಲು ಗಳಿಸಿದರು. ಮಂಗಳವಾರ ನಡೆದಿದ್ದ ಪಂದ್ಯದಲ್ಲಿ ಭಾರತ 1–5ರಿಂದ ಚೀನಾ ಎದುರು ಸೋತಿತ್ತು. ಇದೀಗ ಬಾಂಗ್ಲಾ ಎದುರು ಜಯಿಸಿರುವುದರಿಂದ ಮತ್ತೆ ಆಸೆ ಚಿಗುರಿದೆ.

ಪಂದ್ಯದಲ್ಲಿ ಉಭಯ ತಂಡಗಳೂ ಕಠಿಣ ಪೈಪೋಟಿಯೊಡ್ಡಿದವು. ರಕ್ಷಣಾ ಪಡೆಯ ಆಟಗಾರರು ದಿಟ್ಟತನ ತೋರಿದರು. ಇದರಿಂದಾಗಿ 85 ನೇ ನಿಮಿಷದವರೆಗೂ ಗೋಲು ದಾಖಲಾಗಲಿಲ್ಲ.

ಒಂಬತ್ತನೇ ನಿಮಿಷದಲ್ಲಿಯೇ ಭಾರತಕ್ಕೆ ಗೋಲು ದಾಖಲಿಸುವ ಅವಕಾಶ ಸಿಕ್ಕಿತ್ತು. ರೋಹಿತ್ ದಾನು ಮತ್ತು ರಾಹುಲ್ ಕೆ.ಪಿ. ಅವರು ಕೊಟ್ಟ ಪಾಸ್ ಪಡೆದ ಚೆಟ್ರಿ ಕಿಕ್ ಮಾಡಿದ ಚೆಂಡು ಗೋಲು ಪೆಟ್ಟಿಗೆ ಪಕ್ಕದಿಂದ ಹೊರಹೋಯಿತು.

ಕೆಲವು ನಿಮಿಷಗಳ ನಂತರ ಮತ್ತೊಂದು ಅವಕಾಶವೂ ಚೆಟ್ರಿಗೆ ಲಭಿಸಿತ್ತು. ಆಯುಷ್ ದೇವ್ ನೀಡಿದ ಪಾಸ್ ಪಡೆದ ಚೆಟ್ರಿ ಆರು ಯಾರ್ಡ್ ಅಂತರದಿಂದ ಗೋಲುಬಲೆಯೊಳಗೆ ಸೇರಿಸುವ ಪ್ರಯತ್ನ ಮಾಡಿದರು. ಆದರೆ ಬಾಂಗ್ಲಾದೇಶದ ಆಟಗಾರರು ತಡೆಯೊಡ್ಡಿದರು.

ಬಾಂಗ್ಲಾದ ರವಿಯುಲ್ ಹಸನ್ ಮತ್ತು ಝುಯೇದ್ ಅಹಮದ್ ಅವರು ಮಾಡಿದ ಗೋಲಿನ ಪ್ರಯತ್ನಗಳೂ ವಿಫಲವಾದವು. ಭಾರತದ ಧೀರಜ್ ಸಿಂಗ್ ತಡೆಗೋಡೆಯಾಗಿ ನಿಂತರು. 40ನೇ ನಿಮಿಷ, 60ನೇ ನಿಮಿಷದಲ್ಲಿಯೂ ಭಾರತಕ್ಕೆ ಗೋಲು ಹೊಡೆಯುವ ಅವಕಾಶಗಳು ಕೈತಪ್ಪಿದವು. 85ನೇ ನಿಮಿಷದಲ್ಲಿ ತಮಗೆ ಲಭಿಸಿದ ಪಾಸ್‌ನಲ್ಲಿ ಚೆಂಡನ್ನು ಗೋಲುಬಲೆಯೊಳಗೆ ಕಳಿಸುವಲ್ಲಿ ಚೆಟ್ರಿ ಯಶಸ್ವಿಯಾದರು. ಬಾಂಗ್ಲಾದ ರಕ್ಷಣಾ ಆಟಗಾರರ ತೀವ್ರ ಪ್ರತಿರೋಧದ ನಡುವೆ ಚೆಂಡನ್ನು ಗುರಿ ಸೇರಿಸಿದರು.

ಪಂದ್ಯಗಳ ಆಯೋಜನೆಯ ನಡುವೆ ಹೆಚ್ಚು ದಿನಗಳ ಅಂತರವಿರದೇ ಆಟಗಾರರಿಗೆ ಚೇತರಿಸಿಕೊಳ್ಳಲು ತೊಂದರೆಯಾಗುತ್ತಿದೆ ಎಂಬ ದೂರುಗಳು ಬಂದಿದ್ದವು.

ಈ ಕುರಿತು ಪ್ರತಿಕ್ರಿಯಿಸಿದ ಚೆಟ್ರಿ, 'ಐದು ದಿನಗಳ ಅಂತರದಲ್ಲಿ ಮೂರು ಪಂದ್ಯಗಳನ್ನು ಆಡುವುದು ಸುಲಭವಲ್ಲ. ನಾವು ಹೆಚ್ಚಿನ ಪ್ರಮಾಣದಲ್ಲಿ ಐಸ್ ಬಾತ್ ಮಾಡುವುದು, ಉತ್ತಮ ಆಹಾರ ಸೇವನೆ ಹಾಗೂ ವಿಶ್ರಾಂತಿ ಪಡೆದು ಪಂದ್ಯಗಳಿಗೆ ಸಿದ್ಧವಾಗುವುದಷ್ಟೇ. ಇದರಿಂದಾಗಿ ದೇಹದ ದಣಿವು ಮತ್ತು ಗಾಯಗಳ ಉಪಶಮನ ಸಾಧ್ಯವಾಗುತ್ತದೆ' ಎಂದರು.

ಸುನಿಲ್ ಚೆಟ್ರಿ –ಪಿಟಿಐ ಚಿತ್ರ

ಚೀನಾ ತೈಪೆ ಎದುರು ಮಹಿಳಾ ತಂಡಕ್ಕೆ ಸೋಲು

ವೆನ್‌ಝೌ, ಚೀನಾ (ಪಿಟಿಐ): ಭಾರತ ತಂಡವು ಮಹಿಳೆಯರ ಫುಟ್‌ಬಾಲ್‌ನಲ್ಲಿ ಚೀನಾ ತೈಪೆ ಎದುರು ಸೋಲನುಭವಿಸಿತು.

ಗುರುವಾರ ನಡೆದ ಪಂದ್ಯದಲ್ಲಿ ತೈಪೆ ತಂಡವು 2–1ರಿಂದ ಭಾರತವನ್ನು ಸೋಲಿಸಿತು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 23ನೇ ಸ್ಥಾನದಲ್ಲಿರುವ ತೈಪೆ ತಂಡವು ಪಾರಮ್ಯ ಮೆರೆಯಿತು. ಅಂಜು ತಮಾಂಗ್ 47ನೇ ನಿಮಿಷದಲ್ಲಿ ಗೋಲು ದಾಖಲಿಸಿದರು. ಆದರೆ ತೈಪೆಯ ಲೀ ಚಿನ್ ಲೈ (68ನೇ ನಿ) ಹಾಗೂ ಸುವಾನ್ ಸೂ (84ನೇ ನಿ) ಗೋಲು ದಾಖಲಿಸಿ ಗೆಲುವಿನ ರೂವಾರಿಗಳಾದರು.

ದಾಖಲೆಯ ವಿಶ್ವಾಸದಲ್ಲಿ ಸಾಬ್ಳೆ

ಅವಿನಾಶ್ ಸಾಬ್ಳೆ

ನವದೆಹಲಿ (ಪಿಟಿಐ): ಕಳೆದ ತಿಂಗಳ ವಿಶ್ವ ಚಾಂಪಿಯನ್‌ಷಿಪ್‌ನ 3,000 ಮೀ. ಸ್ಟೀಪಲ್ ಚೇಸ್ ಸ್ಪರ್ಧೆಯಲ್ಲಿ ಅವಿನಾಶ್ ಸಾಬ್ಳೆ ನಿರಾಶೆ ಅನುಭವಿಸಿದ್ದರು. ಅದನ್ನು ಮರೆತು, ಇದೀಗ, ಹಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲಿ ನೂತನ ರಾಷ್ಟ್ರೀಯ ದಾಖಲೆಯೊಡನೆ ಚಿನ್ನ ಗೆಲ್ಲುವ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ.

ಈ ಋತುವಿನಲ್ಲಿ ತೋರಿದ ನಿರ್ವಹಣೆ ಸ್ವತಃ ಅವಿನಾಶ್ ಅವರಿಗೆ ತೃಪ್ತಿ ತಂದಿಲ್ಲ. ಬುಡಾಪೆಸ್ಟ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನ ಸ್ಟೀಪಲ್‌ಚೇಸ್ ಹೀಟ್ಸ್‌ನಲ್ಲಿ ಏಳನೇ ಸ್ಥಾನ ಪಡೆದು ಫೈನಲ್‌ಗೆ ಅರ್ಹತೆ ಪಡೆಯಲು ವಿಫಲರಾಗಿದ್ದರು. ಈಗ ಅವರು ಉತ್ತಮ ಮನೋಭೂಮಿಕೆಯೊಡನೆ ಏಷ್ಯನ್ ಗೇಮ್ಸ್‌ಗೆ ಸಿದ್ಧತೆ ನಡೆಸಿದ್ದಾರೆ.

'ಏಷ್ಯನ್ ಗೇಮ್ಸ್ ನನಗೆ ಈ ಋತುವಿನ ಕೊನೆಯ ರೇಸ್. ಈ ವರ್ಷ ಯಾವುದೇ ಓಟವನ್ನು ರಾಷ್ಟ್ರೀಯ ದಾಖಲೆಗಾಗಿ ಓಡಿಲ್ಲ. ಆದರೆ ಹಾಂಗ್‌ಝೌನಲ್ಲಿ ಅತ್ಯುತ್ತಮ ಅವಧಿಯೊಡನೆ ಓಡುವ ವಿಶ್ವಾಸ ಹೊಂದಿದ್ದೇನೆ. ನನಗೆ ದೊರೆತ ತರಬೇತಿಯಿಂದ ಈ ವಿಶ್ವಾಸ ಮೂಡಿದೆ' ಎಂದು ಆನ್‌ಲೈನ್ ಮಾಧ್ಯಮ ಸಂವಾದದಲ್ಲಿ ಅವರು ತಿಳಿಸಿದರು.

ಹಾಂಗ್‌ಝೌನಲ್ಲಿ ಅವರು ತಮ್ಮ ನೆಚ್ಚಿನ 3000 ಮೀ. ಸ್ಟೀಪಲ್‌ಚೇಸ್ ಜೊತೆ 5000 ಮೀ. ಓಟದಲ್ಲೂ ಭಾಗವಹಿಸಲಿದ್ದಾರೆ.

ಅ. 1ರಂದು ಸ್ಟೀಪಲ್‌ಚೇಸ್ ಸ್ಪರ್ಧೆಯಲ್ಲಿ ಅವರು ಪಾಲ್ಗೊಳ್ಳುವರು. ಅವರ ಎರಡನೇ ಸ್ಪರ್ಧೆ (5000 ಮೀ. ಓಟ) ಅಕ್ಟೋಬರ್ 4ರಂದು ನಡೆಯಲಿದೆ. 'ಕೋಚಿಂಗ್ ತಂಡದ ಜೊತೆ ಚರ್ಚೆ ನಡೆಸಿದ ನಂತರ ಎರಡು ಸ್ಪರ್ಧೆಗಳಲ್ಲಿ ಭಾಗವಹಿಸಲು ನಿರ್ಧರಿಸಿರುವೆ' ಎಂದಿದ್ದಾರೆ ಸಾಬ್ಳೆ.

'ಹಾಂಗ್‌ಝೌನ ಹವಾಮಾನವು, ನಾನು ತರಬೇತಿ ಪಡೆಯುವ ಬೆಂಗಳೂರಿನ ರೀತಿಯಲ್ಲೇ ಇದೆ' ಎಂದು ಹೇಳಿದರು.

ಸೆ.23ರಂದು ಆರಂಭವಾಗುವ ಏಷ್ಯನ್ ಕ್ರೀಡಾಕೂಟದಲ್ಲಿ ಭಾಗವಹಿಸಲು ಭಾರತದ ಸ್ಪರ್ಧಾಳುಗಳು ಚೀನಾದ ಹಾಂಗ್‌ಝೌಗೆ ಗುರುವಾರ ತಲುಪಿದರು –ಎಎಫ್‌ಪಿ ಚಿತ್ರ

ಮಹಿಳಾ ಟಿ–20 ಪಂದ್ಯಗಳು ಮಳೆಯ ಪಾಲು

ಭಾರತ, ಪಾಕಿಸ್ತಾನ ಸೆಮಿಗೆ

ಹಾಂಗ್‌ಝೌ (ಪಿಟಿಐ): ಮಲೇಷ್ಯಾ ವಿರುದ್ಧ ಏಷ್ಯನ್ ಕ್ರೀಡಾಕೂಟದ ಮಹಿಳಾ ಟಿ–20 ಕ್ರಿಕೆಟ್ ಕ್ವಾರ್ಟರ್‌ಫೈನಲ್ ಪಂದ್ಯ ಗುರುವಾರ ಮಳೆಯಿಂದಾಗಿ ಅರ್ಧದಲ್ಲೇ ಸ್ಥಗಿತಗೊಂಡಿದ್ದು, ಭಾರತ ತಂಡವು ಐಸಿಸಿಯ ಉತ್ತಮ ರ‍್ಯಾಂಕಿಂಗ್ ಆಧಾರದಲ್ಲಿ ಸೆಮಿಫೈನಲ್ ತಲುಪಿತು.

ಪಾಕಿಸ್ತಾನ ವನಿತಾ ತಂಡವೂ ಸೆಮಿಫೈನಲ್ ತಲುಪಿತು.

ಅನನುಭವಿ ಮಲೇಷ್ಯಾ ದಾಳಿಯನ್ನು ದಂಡಿಸಿದ ಶಫಾಲಿ ವರ್ಮಾ 39 ಎಸೆತಗಳಲ್ಲಿ 67 ರನ್ ಸಿಡಿಸಿ ಗಮನ ಸೆಳೆದರು. ಅವರ ಇನಿಂಗ್ಸ್‌ನಲ್ಲಿ ಐದು ಸಿಕ್ಸರ್ ಮತ್ತು ನಾಲ್ಕು ಬೌಂಡರಿಗಳಿದ್ದವು. ಮಳೆಯ ಕಾರಣ ಪಂದ್ಯವನ್ನು 15 ಓವರುಗಳಿಗೆ ಇಳಿಸಲಾಗಿದ್ದು ಭಾರತ 2 ವಿಕೆಟ್‌ಗೆ 173 ರನ್ ಗಳಿಸಿತು. ನಾಯಕಿ ಸ್ಮೃತಿ ಮಂದಾನ (16 ಎಸೆತಗಳಲ್ಲಿ 27), ಜೆಮಿಮಾ ರಾಡ್ರಿಗಸ್ (29 ಎಸೆಗಳಲ್ಲಿ 47) ಮತ್ತು ರಿಚಾ ಘೋಷ್ (7 ಎಸೆಗಳಲ್ಲಿ 21) ಅವರೂ ಮೊತ್ತ ಹೆಚ್ಚಲು ನೆರವಾದರು.

ಟಾಸ್ ಗೆದ್ದಿದ್ದ ಮಲೇಷ್ಯಾ ನಾಯಕಿ ವಿನಿಫ್ರೆಡ್ ದುರೈಸಿಂಗಂ ಅವರು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಫೀಲ್ಡರ್‌ಗಳೂ ಕೆಲವು ಸುಲಭ ಕ್ಯಾಚ್‌ಗಳನ್ನು ನೆಲಕ್ಕೆ ಹಾಕಿದರು.

ಮಳೆಯಿಂದ ಮಲೇಷ್ಯಾ ತಂಡದ ಗುರಿಯನ್ನು ಪರಿಷ್ಕರಿಸಿ ಡಿಎಲ್‌ಎಸ್ ಆಧಾರದಲ್ಲಿ 177 ರನ್‌ಗಳಿಗೆ ನಿಗದಿಪಡಿಸಲಾಯಿತು. ಆದರೆ ಕೇವಲ ಎರಡೇ ಎಸೆತಗಳ ನಂತರ ಮಳೆ ಸುರಿಯತೊಡಗಿ ಪಂದ್ಯ ಮುಂದುವರಿಸಲು ಸಾಧ್ಯವಾಗಲಿಲ್ಲ. ಜೂನ್ 1ರ ಐಸಿಸಿ ರ‍್ಯಾಂಕಿಂಗ್ ಪ್ರಕಾರ ಭಾರತ ಏಷ್ಯಾದಲ್ಲಿ ಅಗ್ರಸ್ಥಾನದಲ್ಲಿದೆ.

ಮಂದಾನ ಮತ್ತು ಶಫಾಲಿ ಮೊದಲ ವಿಕೆಟ್‌ಗೆ 59 ರನ್ ಸೇರಿಸಿದ್ದರೆ, ಶಫಾಲಿ ಮತ್ತು ರಾಡ್ರಿಗಸ್ ಎರಡನೇ ವಿಕೆಟ್‌ಗೆ 86 ರನ್ ಜೊತೆಯಾಟವಾಡಿದರು.

ಬಾಂಗ್ಲಾದೇಶ ತಂಡವು ಶುಕ್ರವಾರ ನಡೆಯುವ ಕ್ವಾರ್ಟರ್‌ಫೈನಲ್‌ನಲ್ಲಿ ಹಾಂಗ್‌ಕಾಂಗ್ ತಂಡವನ್ನು ಎದುರಿಸಲಿದ್ದು ಈ ಪಂದ್ಯದ ವಿಜೇತರು ಭಾರತ ತಂಡವನ್ನು ಎದುರಿಸಲಿದ್ದಾರೆ.

ಸ್ಕೋರುಗಳು: ಭಾರತ: 15 ಓವರುಗಳಲ್ಲಿ 2 ವಿಕೆಟ್‌ಗೆ 173 (ಶಫಾಲಿ ವರ್ಮಾ 67, ಜೆಮಿಮಾ ರಾಡ್ರಿಗಸ್ 47); **ಮಲೇಷ್ಯಾ:** (ಪರಿಷ್ಕೃತ ಗುರಿ 177): 0.2 ಓವರುಗಳಲ್ಲಿ ವಿಕೆಟ್ ನಷ್ಟವಿಲ್ಲದೇ 1. (ಪಂದ್ಯ ರದ್ದು, ರ‍್ಯಾಂಕಿಂಗ್ ಆಧಾರದಲ್ಲಿ ಭಾರತಕ್ಕೆ ಜಯ).

ಶಫಾಲಿ ವರ್ಮಾ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರ

ಪಾಕ್ ಮುನ್ನಡೆ: ಝೆಜಿಯಾಂಗ್ ಯುನಿವರ್ಸಿಟಿ ಆಫ್ ಟೆಕ್ನಾಲಜಿ ಪಿಂಗ್‌ಫೆಂಗ್ ಕ್ರಿಕೆಟ್ ಫೀಲ್ಡ್‌ನಲ್ಲಿ ನಿಗದಿಯಾಗಿದ್ದ ಪಾಕಿಸ್ತಾನ–ಇಂಡೊನೇಷ್ಯಾ ಪಂದ್ಯವೂ ಮಳೆಯಿಂದ ಕೊಚ್ಚಿಹೋಗಿದ್ದು, ಉತ್ತಮ ರ‍್ಯಾಂಕಿಂಗ್ ಆಧಾರದಲ್ಲಿ ಪಾಕಿಸ್ತಾನ ಮಹಿಳೆಯರ ತಂಡ ನಾಲ್ಕರ ಘಟ್ಟಕ್ಕೆ ಮುನ್ನಡೆಯಿತು.

ಪಾಕ್ ತಂಡವು ಸೆಮಿಫೈನಲ್‌ನಲ್ಲಿ ಶ್ರೀಲಕಾ– ಥಾಯ್ಲೆಂಡ್ ಪಂದ್ಯದ ವಿಜೇತರನ್ನು ಎದುರಿಸಲಿದೆ.

ಪಾಕ್ ತಂಡವು ಈ ಹಿಂದಿನ ಎರಡು ಏಷ್ಯನ್ ಕ್ರೀಡಾಕೂಟಗಳಲ್ಲಿ (2010ರ ಗುವಾಂಗ್ ಝೌ ಮತ್ತು 2014ರ ಇಂಚಿಯಾನ್ ಗೇಮ್ಸ್‌ನಲ್ಲಿ) ಚಿನ್ನದ ಪದಕಗಳನ್ನು ಗೆದ್ದುಕೊಂಡಿದೆ. ಐದು ವರ್ಷಗಳ ಹಿಂದೆ ಜಕಾರ್ತಾ ಏಷ್ಯನ್ ಗೇಮ್ಸ್‌ನಲ್ಲಿ ಕ್ರಿಕೆಟ್ ಆಟ ಕೈಬಿಡಲಾಗಿತ್ತು.

ಥಾಯ್ಲೆಂಡ್ ಕಬಡ್ಡಿ ತಂಡಕ್ಕೆ ಕನ್ನಡಿಗ ರವಿ ಕೋಚ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡಿಗ ರವೀಂದ್ರ ಶೆಟ್ಟಿ ಅವರು ಏಷ್ಯನ್ ಕ್ರೀಡಾಕೂಟದಲ್ಲಿ ಆಡಲಿರುವ ಥಾಯ್ಲೆಂಡ್ ಕಬಡ್ಡಿ ತಂಡದ ಮುಖ್ಯ ಕೋಚ್ ಆಗಿ ನೇಮಕವಾಗಿದ್ದಾರೆ.

ಮೂಲತಃ ಹಾವೇರಿ ಜಿಲ್ಲೆಯ ಬ್ಯಾಡಗಿಯ ರವೀಂದ್ರ ಅವರು ಸುಮಾರು ನಾಲ್ಕು ದಶಕಗಳಿಂದ ಕಬಡ್ಡಿ ಆಟಗಾರನಾಗಿ, ಅಂತರರಾಷ್ಟ್ರೀಯ ಕೋಚ್ ಆಗಿ ಕಾರ್ಯನಿರ್ವಹಿಸಿದ್ದಾರೆ. ಬೆಂಗಳೂರಿನಲ್ಲಿರುವ ಸಿಐಎಲ್ ರಕ್ಷಣಾ ಸಚಿವಾಲಯದಲ್ಲಿ ಕಾರ್ಯನಿರ್ವಹಿಸಿದ್ದಾರೆ. ಕರ್ನಾಟಕ ಕಬಡ್ಡಿ ತಂಡದ ಪ್ರಮುಖ ಆಟಗಾರರಾಗಿದ್ದ ಅವರು, ವೃತ್ತಿಯಿಂದ ಎಂಜಿನಿಯರ್ ಆಗಿದ್ದಾರೆ.

ಅವರ ಮಾರ್ಗದರ್ಶನದಲ್ಲಿ ಕರ್ನಾಟಕ ತಂಡವು ಸುಮಾರು 20 ರಾಷ್ಟ್ರೀಯ ಟೂರ್ನಿಗಳಲ್ಲಿ ಆಡಿತ್ತು. 2012ರಲ್ಲಿ ಮಲೇಷ್ಯಾ ರಾಷ್ಟ್ರೀಯ ಕಬಡ್ಡಿ ತಂಡದ ಕೋಚ್ ಆಗಿದ್ದರು. ಬಿಹಾರದ ಪಾಟ್ನಾದಲ್ಲಿ ನಡೆದಿದ್ದ ಮಹಿಳಾ ವಿಶ್ವಕಪ್ ಕಬಡ್ಡಿ ಟೂರ್ನಿಯಲ್ಲಿ ಆಡಿದ ಮಲೇಷ್ಯಾ ತಂಡಕ್ಕೆ ರವೀಂದ್ರ ಮಾರ್ಗದರ್ಶನ ನೀಡಿದ್ದರು.

ರವೀಂದ್ರ ಅವರನ್ನು ಭಾರತ ಜೂನಿಯರ್ ತಂಡದ ಆಯ್ಕೆ ಸಮಿತಿಯ ಸದಸ್ಯರನ್ನಾಗಿ ಈಚೆಗೆ ಭಾರತ ಅಮೆಚೂರ್ ಕಬಡ್ಡಿ ಫೆಡರೇಷನ್ ನೇಮಕ ಮಾಡಿತ್ತು. ತೆಹರಾನ್‌ನಲ್ಲಿ ನಡೆದ ಜೂನಿಯರ್ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡಕ್ಕೆ ಕೋಚ್ ಆಗಿದ್ದರು. ತಂಡವು ಚಿನ್ನ ಗೆದ್ದಿತ್ತು.

ಪ್ರೊಕಬಡ್ಡಿ ಟೂರ್ನಿಯಲ್ಲಿ ಅವರು ಯು ಮುಂಬಾ, ಜೈಪುರ ಪಿಂಕ್ ಪ್ಯಾಂಥರ್ಸ್, ಪುಣೇರಿ ಪಲ್ಟನ್ ಹಾಗೂ ಪಟ್ನಾ ಪೈರೆಟ್ಸ್ ತಂಡಗಳಿಗೆ ಕೋಚ್ ಆಗಿದ್ದರು.

'ಥಾಯ್ಲೆಂಡ್‌ನಲ್ಲಿ ಪ್ರತಿಭಾವಂತ ಆಟಗಾರರಿದ್ದಾರೆ. ಅವರೆಲ್ಲರೂ ಅಪಾರ ಆಸಕ್ತಿಯಿಂದ ಕಲಿಯುತ್ತಿದ್ದಾರೆ. ಬಲಿಷ್ಠ ತಂಡಗಳ ಎದುರು ಉತ್ತಮವಾಗಿ ಆಡುವ ವಿಶ್ವಾಸವಿದೆ' ಎಂದು ರವೀಂದ್ರ ಶೆಟ್ಟಿ 'ಪ್ರಜಾವಾಣಿ'ಗೆ ತಿಳಿಸಿದರು.

ಥಾಯ್ಲೆಂಡ್ ಕಬಡ್ಡಿ ತಂಡದೊಂದಿಗೆ ರವೀಂದ್ರ ಶೆಟ್ಟಿ

ರೋಯಿಂಗ್: ಮೂರು ಫೈನಲ್‌ಗಳಿಗೆ ಭಾರತ

ಹಾಂಗ್‌ಝೌ (ಪಿಟಿಐ): ಭಾರತದ ರೋಯಿಂಗ್ ಕ್ರೀಡಾಪಟುಗಳು ಮೂರು ವಿಭಾಗಗಳಲ್ಲಿ ಫೈನಲ್ ತಲುಪಿದ್ದಾರೆ.

ಗುರುವಾರ ನಡೆದ ಸ್ಪರ್ಧೆಯಲ್ಲಿ ಪುರುಷರ ಕ್ವಾಡ್ರಪಲ್ ಸ್ಕಲ್ಸ್ ವಿಭಾಗದಲ್ಲಿ ಭಾರತದ ಸತ್ನಾಮ್ ಸಿಂಗ್, ಪರಮಿಂದರ್ ಸಿಂಗ್, ಜಕಾರ್ ಖಾನ್ ಮತ್ತು ಸುಖಮೀತ್ ಸಿಂಗ್ ಅವರು ಅರ್ಹತೆ ಫೈನಲ್‌ಗೆ ಗಳಿಸಿದರು. ಅವರು 6ನಿಮಿಷ, 09.94 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು.

ಪುರುಷರ ಲೈಟ್‌ವೇಟ್ ಡಬಲ್ ಸ್ಕಲ್ಸ್ ವಿಭಾಗದಲ್ಲಿ ಭಾರತದ ಜೋಡಿ ಅರ್ಜುನ್ ಲಾಲ್ ಜಾಟ್ಮತ್ತು ಅರವಿಂದ್ ಸಿಂಗ್ ಅವರು 6ನಿ, 55.78ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಫೈನಲ್ ಪ್ರವೇಶಿಸಿದರು.

ಪುರುಷರ ಡಬಲ್ ಸ್ಕಲ್‌ನಲ್ಲಿ ಸತ್ನಾಮ್ ಸಿಂಗ್ ಮತ್ತು ಪರಮಿಂದರ್ ಸಿಂಗ್ ಜೋಡಿಯು 6ನಿ,48.06 ಸೆಕೆಂಡುಗಳಲ್ಲಿ ರಿಪೇಚ್ ನಲ್ಲಿ ಗೆದ್ದರು. ಇದರೊಂದಿಗೆ ಫೈನಲ್‌ಗೆ ಲಗ್ಗೆ ಇಟ್ಟರು.

ಆದರೆ ಮಹಿಳೆಯರ ಲೈಟ್‌ವೇಟ್ ಡಬಲ್ಸ್ ಸ್ಕಲ್‌ನಲ್ಲಿ ಭಾರತ ತಂಡವು ಅಂತಿಮ ಸುತ್ತು ಪ್ರವೇಶಿಸುವಲ್ಲಿ ವಿಫಲವಾಯಿತು. ಈ ತಂಡದಲ್ಲಿ ಕಿರಣ್, ಅನಿಷ್ಕಾ ಭಾರತಿ ಇದ್ದರು. 8ನಿಮಿಷ, 01.80 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ನಾಲ್ಕನೇ ಸ್ಥಾನ ಪಡೆದರು.

ಭಾರತದ ಬಲರಾಜ್ ಪನ್ವಾರ್ ಅವರು ಪುರುಷರ ಸಿಂಗಲ್ಸ್ ವಿಭಾಗದ ಸಿಂಗಲ್ ಸ್ಕಲ್ ಸೆಮಿಫೈನಲ್ ಪ್ರವೇಶಿಸಿದ್ದಾರೆ.

ಐಎಸ್‌ಎಲ್ ಫುಟ್‌ಬಾಲ್: ಬಿಎಫ್‌ಸಿಗೆ ಸೋಲು

ಕೊಚ್ಚಿ: ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡವು ಗುರುವಾರ ಇಲ್ಲಿ ಆರಂಭವಾದ ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯ ಮೊದಲ ಪಂದ್ಯದಲ್ಲಿ ನಿರಾಶೆ ಅನುಭವಿಸಿತು.

ಸುನಿಲ್ ಚೆಟ್ರಿ ಗೈರುಹಾಜರಿಯಲ್ಲಿ ಕಣಕ್ಕಿಳಿದ ಬಿಎಫ್‌ಸಿ ತಂಡವು 1–2ರಿಂದ ಕೇರಳ ಬ್ಲಾಸ್ಟರ್ಸ್ ತಂಡದ ಎದುರು ಮಣಿಯಿತು.

ಬಿಎಫ್‌ಸಿ ತಂಡದ ಕೆಸ್ಸ್ಯಿ ವೀನ್‌ಡ್ರಾಪ್ ಅವರು 52ನೇ ನಿಮಿಷದಲ್ಲಿ ನೀಡಿದ 'ಉಡುಗೊರೆ' ಗೋಲಿನಿಂದ ಆತಿಥೇಯ ತಂಡವು 1–0 ಮುನ್ನಡೆ ಗಳಿಸಿತು. 69ನೇ ನಿಮಿಷದಲ್ಲಿ ಕೇರಳದ ಅಡ್ರಿಯನ್ ಲೂನಾ ಗೋಲು ಗಳಿಸಿದರು. ಇದರಿಂದಾಗಿ 2 ಗೋಲುಗಳ ಮುನ್ನಡೆ ಪಡೆಯಿತು.

90 ನೇ ನಿಮಿಷದಲ್ಲಿ ತಿರುಗೇಟು ಕೊಟ್ಟ ಬಿಎಫ್‌ಸಿಯ ಕರ್ಟಿಸ್ ಮೇನ್ ಗೋಲು ಹೊಡೆದರು. ಇದರಿಂದ ಸೋಲಿನ ಅಂತರ ಕಡಿಮೆಯಾಯಿತಷ್ಟೇ.

ವಾರಾಣಸಿಯಲ್ಲಿ ನಿರ್ಮಾಣಗೊಳ್ಳಲಿರುವ ಕ್ರಿಕೆಟ್ ಕ್ರೀಡಾಂಗಣ ಹೀಗಿರಲಿದೆ –ಎಕ್ಸ್ (ಟ್ವಿಟರ್) ಚಿತ್ರ

ಕ್ರಿಕೆಟ್ ಕ್ರೀಡಾಂಗಣದಲ್ಲಿ ತ್ರಿಶೂಲ, ಡಮರುಗ...

ವಾರಾಣಸಿ (ಪಿಟಿಐ): ದೇಶದ ಪ್ರಮುಖ ತೀರ್ಥಕ್ಷೇತ್ರಗಳಲ್ಲಿ ಒಂದಾದ ವಾರಾಣಸಿಯಲ್ಲಿ ಅಂತರರಾಷ್ಟ್ರೀಯ ದರ್ಜೆಯ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣವಾಗಲಿದೆ.

ಕ್ರೀಡಾಂಗಣ ನಿರ್ಮಿಸಲು ಭೂಸ್ವಾಧೀನಕ್ಕಾಗಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ಸರ್ಕಾರವು ₹ 121 ಕೋಟಿ ಖರ್ಚು ಮಾಡಿದೆ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ₹ 330 ಕೋಟಿ ವೆಚ್ಚದಲ್ಲಿ ಕ್ರೀಡಾಂಗಣ ನಿರ್ಮಿಸಲಿದೆ. ಇದರಲ್ಲಿ ಕೆಲವು ವಿಶೇಷ ವಿನ್ಯಾಸಗಳನ್ನು ಮಾಡಲಾಗುತ್ತಿದೆ. ಈ ಮೈದಾನದ ದೀಪದ ಸ್ಥಂಭಗಳು ಶಿವನ ತ್ರಿಶೂಲದ ವಿನ್ಯಾಸವನ್ನು ಹೋಲುತ್ತವೆ. ಕಟ್ಟಡದ ವಿನ್ಯಾಸವನ್ನು ಡಮರುಗದ ಮಾದರಿಯಲ್ಲಿ ನಿರ್ಮಿಸಲಾಗುತ್ತಿದೆ. ಬಿಲ್ವ ಪತ್ರೆಯ ಆಕಾರವನ್ನು ಹೋಲುವ ವಿನ್ಯಾಸಗಳೂ ಇಲ್ಲಿರಲಿವೆ.

ಕಾಶಿಯೆಂದೂ ಕರೆಯಲಾಗುವ ವಾರಾಣಸಿಯ ಸ್ನಾನ ಘಟ್ಟಗಳ ಮೆಟ್ಟಿಲುಗಳ ಮಾದರಿಯಲ್ಲಿ ಪ್ರೇಕ್ಷಕರ ಗ್ಯಾಲರಿಯು ನಿರ್ಮಾಣವಾಗಲಿದೆ. 30 ಸಾವಿರ ಪ್ರೇಕ್ಷಕರ ಸಾಮರ್ಥ್ಯದ ಗ್ಯಾಲರಿ ಇದಾಗಲಿದೆ. ರಾಜಾತಾಲಾಬ್ ಪ್ರದೇಶದ ರಿಂಗ್ ರಸ್ತೆಯ ಸಮೀಪ ಈ ಕ್ರೀಡಾಂಗಣ ತಲೆ ಎತ್ತುತ್ತಿದೆ.

ಶನಿವಾರ ಪ್ರಧಾನಿ ನರೇಂದ್ರ ಮೋದಿ ಅವರು ಶಿಲಾನ್ಯಾಸ ನೆರವೇರಿಸುವರು. ಕ್ರಿಕೆಟ್ ದಿಗ್ಗಜರಾದ ಸಚಿನ್ ತೆಂಡೂಲ್ಕರ್, ಸುನಿಲ್ ಗಾವಸ್ಕರ್ ಮತ್ತು ರವಿಶಾಸ್ತ್ರಿ, ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ, ಉಪಾಧ್ಯಕ್ಷ ರಾಜೀವ ಶುಕ್ಲಾ ಮತ್ತು ಕಾರ್ಯದರ್ಶಿ ಜಯ್ ಶಾ ಹಾಜರಾಗಲಿದ್ದಾರೆ. ಉತ್ತರ ಪ್ರದೇಶದಲ್ಲಿ ಕಾನ್ಪುರ ಹಾಗೂ ಲಖನೌನಲ್ಲಿ ಅಂತರರಾಷ್ಟ್ರೀಯ ಕ್ರೀಡಾಂಗಣಗಳಿವೆ. 2025ರ ವೇಳೆಗೆ ಲೋಕಾರ್ಪಣೆಗೆ ಸಿದ್ಧವಾಗಲಿದೆ

'ಈಶ ಗ್ರಾಮೋತ್ಸವ'ದ ಫೈನಲ್ ಪಂದ್ಯಗಳು ನಾಳೆ

ಬೆಂಗಳೂರು: ಈಶ ಫೌಂಡೇಷನ್‌ನ ಸಾಮಾಜಿಕ ಅಭಿವೃದ್ಧಿ ಅಂಗವಾದ ಈಶಾ ಔಟ್‌ರೀಚ್ ಆಶ್ರಯದಲ್ಲಿ ನಡೆಯುವ 'ಈಶ ಗ್ರಾಮೋತ್ಸವ'ದ ಅಂತಿಮ ಹಂತದ ಸ್ಪರ್ಧೆಗೆ ಇದೇ 23ರಂದು ಕೊಯಮತ್ತೂರಿನ ಈಶ ಯೋಗ ಕೇಂದ್ರದ ಆವರಣದಲ್ಲಿ ನಡೆಯಲಿದೆ.

ಗ್ರಾಮೋತ್ಸವದ 15ನೇ ಆವೃತ್ತಿಯು 194 ಗ್ರಾಮೀಣ ಸ್ಥಳಗಳಲ್ಲಿ ಕ್ಲಸ್ಟರ್ ಮತ್ತು ವಿಭಾಗೀಯ ಮಟ್ಟಗಳಲ್ಲಿ ನಡೆಸಲಾಗಿದೆ. ದಕ್ಷಿಣ ಭಾರತದ ಐದು ರಾಜ್ಯ ಮತ್ತು ಒಂದು ಕೇಂದ್ರಾಡಳಿತ ಪ್ರದೇಶದಿಂದ (ಕರ್ನಾಟಕ, ತಮಿಳುನಾಡು, ಕೇರಳ, ತೆಲಂಗಾಣ, ಆಂಧ್ರಪ್ರದೇಶ ಮತ್ತು ಪುದುಚೇರಿ) 60 ಸಾವಿರಕ್ಕೂ ಹೆಚ್ಚು ಆಟಗಾರರ ಭಾಗವಹಿಸಿದ್ದಾರೆ. ಫೈನಲ್ ಸ್ಪರ್ಧೆಗಳು 112 ಅಡಿ ಎತ್ತರದ ಆದಿಯೋಗಿ ಮೂರ್ತಿಯ ಎದುರಿನಲ್ಲಿ ನಡೆಯಲಿದೆ. ಸಮಾರಂಭದಲ್ಲಿ ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಭಾಗಿಯಾಗಲಿದ್ದಾರೆ.

2004ರಿಂದ ಈಶ ಗ್ರಾಮೋತ್ಸವ ಆಯೋಜಿಸಲಾಗುತ್ತಿದೆ. ಈ ವರ್ಷ ಗ್ರಾಮೋತ್ಸವದ ವಿವಿಧ ಸ್ಪರ್ಧೆಗಳಿಗೆ ಒಟ್ಟು ₹ 55 ಲಕ್ಷ ಬಹುಮಾನ ನೀಡಲಾಗುವುದು. ಪುರುಷರ ವಾಲಿಬಾಲ್ ಮತ್ತು ಮಹಿಳೆಯರ ಥ್ರೋಬಾಲ್ ಸ್ಪರ್ಧೆಯ ವಿಜೇತರು ಕ್ರಮವಾಗಿ ₹ 5 ಲಕ್ಷ ಮತ್ತು ₹ 2 ಲಕ್ಷ ಹಾಗೂ ಪುರುಷ ಮತ್ತು ಮಹಿಳಾ ಕಬಡ್ಡಿಯಲ್ಲಿ ವಿಜೇತರಾದ ತಂಡಗಳು ಕ್ರಮವಾಗಿ ₹ 5 ಲಕ್ಷ ಮತ್ತು ₹ 2 ಲಕ್ಷ ಬಹುಮಾನ ಪಡೆಯಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಡೇವಿಸ್ ಕಪ್: ಭಾರತಕ್ಕೆ ಪಾಕ್ ಎದುರಾಳಿ

ನವದೆಹಲಿ (ಪಿಟಿಐ): ಭಾರತವು ಡೇವಿಸ್ ಕಪ್ ವಿಶ್ವ ಒಂದನೇ ಗುಂಪಿನ ಪ್ಲೇ ಆಫ್ ಪಂದ್ಯದಲ್ಲಿ ಪಾಕಿಸ್ತಾನ ತಂಡವನ್ನು ಅದೇ ದೇಶದಲ್ಲಿ ಎದುರಿಸಲಿದೆ. ಆದರೆ ಈ ಬಾರಿ ತಟಸ್ಥ ತಾಣಕ್ಕೆ ಈ ಪಂದ್ಯವನ್ನು ಸ್ಥಳಾಂತರಿಸಲು ಯಾವುದೇ ಕಾರಣಕ್ಕೆ ಒಪ್ಪುವುದಿಲ್ಲ ಎಂದು ಪಾಕಿಸ್ತಾನ ಟೆನಿಸ್ ಫೆಡರೇಷನ್ (ಪಿಟಿಎಫ್) ಸ್ಪಷ್ಟಮಾತುಗಳಲ್ಲಿ ಹೇಳಿದೆ.

ಬುಧವಾರ ಲಂಡನ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಂತರರಾಷ್ಟ್ರೀಯ ಟೆನಿಸ್ ಫೆಡರೇಷನ್ ಡೇವಿಸ್ ಕಪ್ 'ಡ್ರಾ'ಗಳನ್ನು ಅಂತಿಮಗೊಳಿಸಿದ್ದು, ಇದರಂತೆ ಏಷ್ಯಾದಲ್ಲಿ ಸಾಂಪ್ರದಾಯಿಕ ಎದುರಾಳಿಗಳು ಮತ್ತೆ ಮುಖಾಮುಖಿ ಆಗಿದ್ದಾರೆ.

2019ರಲ್ಲಿ ಕೊನೆಯ ಬಾರಿ ಭಾರತ– ಪಾಕ್ ತಂಡಗಳು ಮುಖಾಮುಖಿ ಆಗಿದ್ದವು. ಭಾರತ, ಪಾಕಿಸ್ತಾನದಲ್ಲಿ ಪಂದ್ಯವನ್ನು ಆಡಬೇಕಾಗಿತ್ತು. ಆದರೆ ಭದ್ರತೆಯ ಬಗ್ಗೆ ಕಳವಳ ವ್ಯಕ್ತಪಡಿಸಿದ್ದರಿಂದ ಕೊನೆಗೆ ಏಷ್ಯಾ– ಓಷಾನಿಯಾ ಒಂದನೇ ಗುಂಪಿನ ಈ ಪಂದ್ಯವನ್ನು ಕಜಕಸ್ತಾನಕ್ಕೆ ಸ್ಥಳಾಂತರಿಸಲಾಗಿತ್ತು.

ಇದನ್ನು ಪ್ರತಿಭಟಿಸಿ ಪಾಕಿಸ್ತಾನದ ಪ್ರಮುಖ ಆಟಗಾರರಾದ ಐಸಾಮ್–ಉಲ್–ಹಕ್ ಖುರೇಷಿ ಮತ್ತು ಅಖೀಲ್ ಖಾನ್ ಅವರು ಪಂದ್ಯದಿಂದ ಹಿಂದೆ ಸರಿದಿದ್ದರು. ಅವರ ಬದಲು ಮೊಹಮ್ಮದ್ ಶೋಯೆಬ್, ಹುಸೈಫಾ ಅಬ್ದುಲ್ ರೆಹಮಾನ್ ಮತ್ತು ಯೂಸಫ್ ಖಲೀಲ್ ಆಡಿದ್ದರು. ಭಾರತ, ದುರ್ಬಲಗೊಂಡ ಎದುರಾಳಿ ತಂಡವನ್ನು 4–0ಯಿಂದ ಸೋಲಿಸಿತ್ತು. ಇಡೀ ಪಂದ್ಯದಲ್ಲಿ ಪಾಕ್ ಏಳು ಗೇಮ್‌ಗಳನ್ನು ಮಾತ್ರ ಪಡೆದಿತ್ತು.

ಈ ಬಾರಿ ಭಾರತ ತಂಡ ತಮ್ಮ ದೇಶಕ್ಕೆ ಪ್ರಯಾಣಿಸಲಿದೆ ಎಂಬ ವಿಶ್ವಾಸವನ್ನು ಪಾಕಿಸ್ತಾನದ ಹಿರಿಯ ಆಟಗಾರ ಅಖೀಲ್ ಖಾನ್ ವ್ಯಕ್ತಪಡಿಸಿದ್ದಾರೆ.

ಹೋದ ವಾರ ಇಸ್ಲಾಮಾಬಾದ್‌ನ ಹುಲ್ಲಿನಂಕಣದಲ್ಲಿ ನಡೆದ ಹಣಾಹಣಿಯಲ್ಲಿ ಪಾಕಿಸ್ತಾನ 4–0 ಯಿಂದ ಇಂಡೊನೇಷ್ಯಾ ತಂಡವನ್ನು ಸದೆಬಡಿದಿತ್ತು. ಭಾರತ, ಇನ್ನೊಂದೆಡೆ ಲಖನೌದಲ್ಲಿ ಮೊರೊಕ್ಕೊ ತಂಡವನ್ನು 4–1 ರಿಂದ ಸೋಲಿಸಿತ್ತು.

ಭಾರತ ವಿರುದ್ಧದ ಪಂದ್ಯವೂ ಹುಲ್ಲಿನ ಅಂಕಣದಲ್ಲಿ ನಡೆಯಲಿದೆ ಎಂದು ಪಿಟಿಎಫ್ ಅಧ್ಯಕ್ಷ ಸಲೀಮ್ ಸೈಫುಲ್ಲಾ ಖಾನ್ ತಿಳಿಸಿದ್ದಾರೆ.

'ಅವರು (ಭಾರತ ತಂಡ) ಪಾಕಿಸ್ತಾನಕ್ಕೆ ಬರಬೇಕು. ಪಾಕಿಸ್ತಾನಕ್ಕೆ ಅವರು ಬರದೇ ಇರುವುದು ಸರಿಯಲ್ಲ. ಸ್ಟೇಡಿಯಂ ಪಕ್ಕದಲ್ಲೇ ಒಳ್ಳೆಯ ಹೋಟೆಲ್ ಇದೆ. ಭಾರತ ತಂಡವು ಆಡಲು ಬಂದಲ್ಲಿ ನಾವು ಒಳ್ಳೆಯ ನೆರೆಹೊರೆಯವರು ಎಂಬ ಉತ್ತಮ ಸಂದೇಶ ರವಾನೆಯಾಗುತ್ತದೆ' ಎಂದು ಸೈಫುಲ್ಲಾ ಪಿಟಿಐಗೆ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

'ಭಾರತದಲ್ಲಿ ಅಲ್ಪಸಂಖ್ಯಾತರ ಮೂಲಭೂತ ಹಕ್ಕು ಕುಂಠಿತ'

ವಾಷಿಂಗ್ಟನ್ (ಪಿಟಿಐ): ಭಾರತದಲ್ಲಿ ವಿಶೇಷವಾಗಿ ಧಾರ್ಮಿಕ ಮತ್ತು ಇತರೆ ಅಲ್ಪಸಂಖ್ಯಾತರ ಮೂಲಭೂತ ಹಕ್ಕುಗಳು ಕುಂಠಿತವಾಗುತ್ತಿರುವುದು ಆತಂಕದ ಸಂಗತಿ ಎಂದು ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯದ ಕುರಿತಾದ ಅಮೆರಿಕದ ಆಯೋಗಕ್ಕೆ(ಯುಎಸ್‌ಸಿಆರ್‌ಎಫ್) ವಿಶ್ವಸಂಸ್ಥೆಯ ವಿಶೇಷ ಅಧಿಕಾರಿ ಮಾಹಿತಿ ನೀಡಿದ್ದಾರೆ.

ಅಲ್ಪಸಂಖ್ಯಾತರ ವಿಚಾರ ಕುರಿತು ವರದಿ ಮಾಡಲು ವಿಶ್ವಸಂಸ್ಥೆ ನೇಮಿಸಿಕೊಂಡಿರುವ ವಿಶೇಷ ಅಧಿಕಾರಿ ಫರ್ನಾಂಡ್ ಡಿ ವರೆನ್ನೆಸ್, ಭಾರತದ ಪರಿಸ್ಥಿತಿಯನ್ನು ಸದೃಢ, ವ್ಯವಸ್ಥಿತ ಮತ್ತು ಅಪಾಯಕಾರಿ ಎಂಬ ಮೂರು ಪದಗಳಲ್ಲಿ ವಿವರಿಸಬಹುದು ಎಂದಿದ್ದಾರೆ.

ಮುಖ್ಯವಾಗಿ ಧಾರ್ಮಿಕ ಮತ್ತು ಇತರೆ ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರಿಶ್ಚಿಯನ್, ಸಿಖ್ ಸೇರಿದಂತೆ ಇನ್ನಿತರರನ್ನು ಗುರಿಯಾಗಿಸಿ ನಡೆಯುತ್ತಿರುವ ನಿಂದನೆಗಳಿಂದಾಗಿ ಭಾರತದಲ್ಲಿ ಅಸ್ಥಿರತೆ, ದೌರ್ಜನ್ಯ, ಹಿಂಸಾಚಾರ ಹೆಚ್ಚಾಗುತ್ತಿದೆ ಎಂದಿದ್ದಾರೆ.

ಭಾರತದಲ್ಲಿ ಆದಿವಾಸಿಗಳು, ದಲಿತರು, ಸಿಖ್ಖರು, ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರ ಮೇಲೆ ದಾಳಿಗಳು ಹೆಚ್ಚಿವೆ ಎಂದು ಯುಎಸ್‌ಸಿಆರ್‌ಎಫ್ ಮುಖ್ಯಸ್ಥ ಅಬ್ರಾಹಂ ಕೂಪರ್ ಹೇಳಿದ್ದಾರೆ.

ಪಾಕಿಸ್ತಾನ: ಜನವರಿ ಕೊನೆ ವಾರದಲ್ಲಿ ಚುನಾವಣೆ

ಇಸ್ಲಾಮಾಬಾದ್ (ಪಿಟಿಐ): ಮುಂಬರುವ ಜನವರಿ ಕೊನೆಯ ವಾರದಲ್ಲಿ ಪಾಕಿಸ್ತಾನದಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಲಿದೆ ಎಂದು ಚುನಾವಣಾ ಆಯೋಗ ಗುರುವಾರ ಪ್ರಕಟಿಸಿದೆ.

ಕ್ಷೇತ್ರಗಳ ಪುನರ್‌ವಿಂಗಡಣೆ ಕಾರ್ಯದ ಪ್ರಗತಿ ಪರಿಶೀಲನೆ ನಡೆಸಿದ್ದು ಸೆಪ್ಟೆಂಬರ್ 27ರಂದು ಕ್ಷೇತ್ರಗಳ ಕರಡು ಪಟ್ಟಿಯನ್ನು ಪ್ರಕಟಿಸಲಾಗುತ್ತದೆ. ಆಕ್ಷೇಪಣೆಗಳು, ಸಲಹೆಗಳನ್ನು ಪರಿಗಣಿಸಿದ ನಂತರ ನವೆಂಬರ್ 30ರಂದು ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ ಎಂದು ಆಯೋಗವು ಹೇಳಿಕೆಯಲ್ಲಿ ತಿಳಿಸಿದೆ.

ಪಾಕಿಸ್ತಾನದ ನ್ಯಾಷನಲ್ ಅಸೆಂಬ್ಲಿಯನ್ನು ಆಗಸ್ಟ್ 9ರಂದು ವಿಸರ್ಜನೆ ಮಾಡಿದ್ದು, ಆ ದಿನದಿಂದ 90 ದಿನಗಳ ಒಳಗೆ ಸಾರ್ವತ್ರಿಕ ಚುನಾವಣೆ ನಡೆಸಬೇಕು. ಆದರೆ, ಕ್ಷೇತ್ರಗಳ ಪುನರ್‌ವಿಂಗಡಣೆ ಕಾರ್ಯ ಇನ್ನೂ ಪೂರ್ಣಗೊಳ್ಳದ ಕಾರಣ ಚುನಾವಣೆ ನಡೆಯುವುದು ವಿಳಂಬವಾಗುವ ಸಾಧ್ಯತೆ ಇದೆ. ಈ ಮಧ್ಯೆ 90 ದಿನಗಳ ಒಳಗೆ ಚುನಾವಣೆ ನಡೆಸಬೇಕು ಎಂಬ ಒತ್ತಡ ರಾಜಕೀಯ ಪಕ್ಷಗಳ ಕಡೆಯಿಂದ ಬರುತ್ತಿದೆ.

ಸಾವಿನ ಕುರಿತು ಅಪಹಾಸ್ಯ: ವೇತನ ರಹಿತ ರಜೆಗೆ ಶಿಫಾರಸು

ಸಿಯಾಟಲ್ (ಪಿಟಿಐ): ಭಾರತದ ವಿದ್ಯಾರ್ಥಿಯೊಬ್ಬರ ಸಾವಿನ ಕುರಿತು ಅಪಹಾಸ್ಯ ಮಾಡಿದ ನಗರದ ಪೊಲೀಸ್ ಮುಖ್ಯಸ್ಥರನ್ನು ವೇತನರಹಿತ ರಜೆ ಮೇಲೆ ಕಳುಹಿಸಬೇಕು ಎಂದು ಸಿಯಾಟಲ್‌ನ ಪೊಲೀಸ್ ಆಯುಕ್ತರು ಶಿಫಾರಸು ಮಾಡಿದ್ದಾರೆ. ಜನವರಿಯಲ್ಲಿ ರಸ್ತೆ ದಾಟುತ್ತಿದ್ದ 23 ವರ್ಷದ ಜಾಹ್ನವಿ ಕಂದುಲ ಅವರಿಗೆ ಅತಿವೇಗವಾಗಿ ಬಂದ ಪೊಲೀಸ್ ಕಾರು ಡಿಕ್ಕಿ ಹೊಡೆದ ಪರಿಣಾಮ ಸಾವನ್ನಪ್ಪಿದ್ದರು.

ನವಾಜ್ ಷರೀಫ್ ಸೇರಿ ಇತರರ ಭ್ರಷ್ಟಾಚಾರ ಪ್ರಕರಣ ಮರು ತನಿಖೆ

ಇಸ್ಲಾಮಾಬಾದ್ (ಪಿಟಿಐ): ಮಾಜಿ ಪ್ರಧಾನಿ ನವಾಜ್ ಷರೀಫ್ ಮತ್ತು ಮಾಜಿ ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ ಸೇರಿದಂತೆ ಪಾಕಿಸ್ತಾನದ ಪ್ರಮುಖ ರಾಜಕೀಯ ನಾಯಕರ ವಿರುದ್ಧ ಭ್ರಷ್ಟಾಚಾರದ ಪ್ರಕರಣಗಳನ್ನು ಪುನಃ ತನಿಖೆಗೊಳಪಡಿಸಲು ಭ್ರಷ್ಟಾಚಾರ ನಿಗ್ರಹ ದಳ ನಿರ್ಧರಿಸಿದೆ.

ಭ್ರಷ್ಟಾಚಾರ ನಿಗ್ರಹ ಕಾನೂನುಗಳಿಗೆ ತಂದಿದ್ದ ತಿದ್ದುಪಡಿಗಳನ್ನು ಸುಪ್ರೀಂ ಕೋರ್ಟ್ ಇತ್ತೀಚೆಗೆ ರದ್ದುಗೊಳಿಸಿದ ಬೆನ್ನಲ್ಲೇ, ಪಾಕಿಸ್ತಾನದ ಭ್ರಷ್ಟಾಚಾರ ನಿಗ್ರಹ ದಳ ಈ ಕ್ರಮಕ್ಕೆ ಮುಂದಾಗಿದೆ.

₹50 ಕೋಟಿಗಿಂತ ಕಡಿಮೆ ಭ್ರಷ್ಟಾಚಾರದ ಪ್ರಕರಣಗಳನ್ನು ಮರು ತನಿಖೆ ಮಾಡಬೇಕು ಎಂದು ಭ್ರಷ್ಟಾಚಾರ ನಿಗ್ರಹ ದಳ (ಎನ್‌ಎಬಿ) ತಿಳಿಸಿದೆ ಎಂದು ಡಾನ್ ಪತ್ರಿಕೆ ವರದಿ ಮಾಡಿತ್ತು.


ನವಾಜ್ ಷರೀಫ್

ಕಳೆದ ವಾರ ವಷ್ಟೇ ಭ್ರಷ್ಟಾಚಾರ ನಿಗ್ರಹ ದ ಕಾನೂನುಗಳಿಗೆ ಪಾಕಿಸ್ತಾನದ ಸುಪ್ರೀಂ ಕೋರ್ಟ್ ತಿದ್ದುಪಡಿ ತಂದಿತ್ತು. ಈ ಮೂಲಕ ಮಾಜಿ ಪ್ರಧಾನಿ ಆಸಿಫ್ ಅಲಿ ಜರ್ದಾರಿ, ಮಾಜಿ ಪ್ರಧಾನಿಗಳಾದ ನವಾಜ್ ಷರೀಫ್, ಶೆಹಬಾಜ್ ಷರೀಫ್, ಯುಸೂಫ್ ಗಿಲಾನಿ, ರಾಜಾ ಪರ್ವೆಜ್ ಅಶ್ರಫ್ ಮತ್ತು ಶಾಹೀದ್ ಖಾಕನ್ ಅಬ್ಬಾಸಿ ವಿರುದ್ಧದ ಭ್ರಷ್ಟಾಚಾರದ ಪ್ರಕರಣಗಳನ್ನು ಮರುಸ್ಥಾಪಿಸಿತ್ತು.

ಮೈಸೂರು ರೇಸ್

ತೆಹಾನಿ ಗೆಲ್ಲುವ ನಿರೀಕ್ಷೆ

ಕರ್ನಾಟಕ ರೇಸ್ ಹಾರ್ಸ್ ಓನರ್ಸ್ ಅಸೋಶಿಯೇಷನ್ ಮೈಸೂರು 1000 ಗಿನ್ನೀಸ್ 2023 ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ತೆಹಾನಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಎಮಿರಾಲ್ಡೊ 1, ಸ್ಟಾರ್ ಅಜೀಮ್ 3, ಮೇಬ್ಯಾಚ್ 2
2ನೇ ರೇಸ್: ಇಕೊ ಫ್ರೆಂಡ್ಲಿ 5, ಸೆಕ್‌ಮೆಟ್ 8, ಜೆ ನೆ ಸಾಯಿಸ್ ಕ್ವೊ 9
3ನೇ ರೇಸ್: ಸನ್‌ಶೈನ್ ಕೋಸ್ಟ್ 3, ಮಿಸ್ಟಿಕ್ ಡಿವೈನ್ 2, ಮಿಲೊಸ್ 1
4ನೇ ರೇಸ್: ವಿನ್ ಮೈ ಲುವ್ 4, ಜ್ಯೂಯೆಲ್ ಥೀಫ್ 5. ಗೋಲ್ಡ್ ಕೈಟ್ 2
5ನೇ ರೇಸ್: ಶೀಬಾ 4, ಸಿಯೋಲ್ 8, ಗೋಲ್ಡ್ ಕ್ರೆಸ್ಟ್ 1
6ನೇ ರೇಸ್: ತೆಹಾನಿ 9, ಆಸ್ಪೀಸಿಯಸ್ ಕ್ವೀನ್ 2, ಗೋಲ್ಡನ್ ಪೀಕ್ಸ್ 4
7ನೇ ರೇಸ್: ನ್ಯಾಚುರಲ್ ಒನ್ 6, ಡಾಕ್ ಮಾರ್ಟಿನ್ 5, ಮಾರ್ಚ್ ಟು ವಿಕ್ಟರಿ 4
8ನೇ ರೇಸ್: ಪೆಲೂಷೆ 5, ಸ್ಟ್ರೈಕಿಂಗ್ ಮೆಮೋರಿ 6, ಮಿಸ್ಟಿಕಲ್ ಮರ್ಕಾಬ 9

ಉತ್ತಮ ಬೆಟ್: ಇಕೊ ಫ್ರೆಂಡ್ಲಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಜಯಿಸಿದ ಭಾರತದ ಕುಸ್ತಿಪಟು

ಅಂತಿಮ್‌ಗೆ ಪ್ಯಾರಿಸ್ ಒಲಿಂಪಿಕ್ಸ್ ರಹದಾರಿ

ಭಾರತದ ಕುಸ್ತಿಪಟು ಅಂತಿಮ್ ಪಂಘಲ್

ಬೆಲ್‌ಗ್ರೇಡ್ (ಸರ್ಬಿಯಾ): ಭಾರತದ ಅಂತಿಮ್ ಪಂಘಲ್ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಜಯಿಸಿದರು. ಅದರೊಂದಿಗೆ ಮುಂದಿನ ವರ್ಷ ನಡೆಯಲಿರುವ ಪ್ಯಾರಿಸ್ ಒಲಿಂಪಿಕ್ಸ್‌ಗೂ ಅರ್ಹತೆ ಗಿಟ್ಟಿಸಿದರು.

ಗುರುವಾರ ನಡೆದ 53 ಕೆ.ಜಿ ವಿಭಾಗದ ಬೌಟ್‌ನಲ್ಲಿ 19 ವರ್ಷದ ಅಂತಿಮ್ ಸ್ವೀಡನ್‌ನ ಎಮಾ ಜೊನಾ ಡೆನಿಸ್ ಮ್ಯಾಲ್ಮಗ್ರಿನ್ ವಿರುದ್ಧ ಗೆದ್ದರು.

ಪ್ಯಾರಿಸ್ ಒಲಿಂಪಿಕ್ ಕೂಟಕ್ಕೆ ಆಯ್ಕೆಯಾದ ಭಾರತದ ಮೊದಲ ಕುಸ್ತಿಪಟು ಎಂಬ ಹೆಗ್ಗಳಿಕೆಯೂ ಅವರದ್ದಾಯಿತು.

ಗೀತಾ ಫೋಗಟ್ (2012), ಬಬಿತಾ ಫೋಗಟ್ (2012), ಪೂಜಾ ದಂಡಾ (2018), ವಿನೇಶಾ ಫೋಗಟ್ (2019) ಮತ್ತು ಅನ್ಶು ಮಲಿಕ್ ಅವರು ಈ ಹಿಂದೆ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಜಯಿಸಿ ಒಲಿಂಪಿಕ್ ಅರ್ಹತೆ ಗಳಿಸಿದ್ದರು.

ಗ್ರಿಕೊ ರೋಮನ್ ನಿರಾಶೆ: ಭಾರತದ ಗ್ರಿಕೊ–ರೋಮನ್ ಕುಸ್ತಿಪಟುಗಳ ನಿರಾಶಾದಾಯಕ ಪ್ರದರ್ಶನ ಮುಂದುವರಿದಿದೆ. 82 ಕೆ.ಜಿ. ವಿಭಾಗದಲ್ಲಿ ಭಾರತದ ಸಜನ್ ಅವರು ದಕ್ಷಿಣ ಕೊರಿಯಾದ ಎದುರಾಳಿ ಎದುರು 3–1 ರಿಂದ ಸೋಲನುಭವಿಸಿದರು.

ಗುರುವಾರ ನಡೆದ ಈ ಸೆಣಸಾಟದಲ್ಲಿ ಸಜನ್ ಅವರು ದಕ್ಷಿಣ ಕೊರಿಯಾದ ಯಾಂಗ್ ಸೆಜಿನ್ ಅವರಿಗೆ ಸಾಟಿಯಾಗಲಿಲ್ಲ. ಯಾಂಗ್ ಅವರು ತಾಂತ್ರಿಕವಾಗಿಯೂ ಉತ್ತಮ ಪಟ್ಟುಗಳನ್ನು ಪ್ರದರ್ಶಿಸಿದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ ಭಾರತದ ಸ್ಪರ್ಧಿ 18ನೇ ಸ್ಥಾನದಲ್ಲಿದ್ದರೆ, ಕೊರಿಯಾದ ಪೈಲ್ವಾನ್ 19ನೇ ಸ್ಥಾನದಲ್ಲಿ ಇದ್ದಾರೆ.

ಫ್ರೀಸ್ಟೈಲ್ ಕುಸ್ತಿಯಲ್ಲೂ ಭಾರತ ತಂಡ ಪುರುಷರ ವಿಭಾಗದಲ್ಲಿ ಮುಗ್ಗರಿಸಿದ್ದು, ಪದಕದ ಸುತ್ತಿಗೆ ಮುನ್ನಡೆಯುವಲ್ಲಿ ಯಾರಿಗೂ ಸಾಧ್ಯವಾಗಿಲ್ಲ.

ಪುರುಷರ 77 ಕೆ.ಜಿ. ವಿಭಾಗದಲ್ಲಿ ನೇರವಾಗಿ ಪ್ರಿಕ್ವಾರ್ಟರ್‌ಫೈನಲ್‌ಗೆ ಪ್ರವೇಶ ಪಡೆದಿದ್ದ ಗುರುಪ್ರೀತ್ ಸಿಂಗ್ ಅವರು ವಿಶ್ವದ ಅಗ್ರಮಾನ್ಯ ಕುಸ್ತಿಪಟು, ಹಂಗರಿಯ ಲೆವ್ಯೆ ಝೊಲ್ಟಾನ್ ಅವರಿಗೆ ಕೇವಲ ಒಂದು ನಿಮಿಷ 12 ಸೆಕೆಂಡುಗಳಲ್ಲಿ ಮಣಿದರು.

ಝೊಲ್ಟಾನ್ ಅವರು ಬೆಲ್‌ಗ್ರೇಡ್‌ನಲ್ಲಿ ನಡೆದ 2022ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿಯ ಪದಕ ಗಳಿಸಿದ್ದರು.

ಆದರೆ, ಝೊಲ್ಟಾನ್ ಅವರು ಫೈನಲ್ ತಲುಪಿದಲ್ಲಿ, ಗುರುಪ್ರೀತ್ ಅವರು ರಿಪೆಷಾಜ್ ಮೂಲಕ ಕಂಚಿನ ಪದಕ ಗೆಲ್ಲುವ ಅವಕಾಶ ಹೊಂದಿದ್ದಾರೆ.

ಯುನೈಟೆಡ್ ವರ್ಲ್ಡ್ ರೆಸ್ಲಿಂಗ್ (ಯುಡಬ್ಲ್ಯುಡಬ್ಲ್ಯು), ಭಾರತ ಕುಸ್ತಿ ಫೆಡರೇಷನ್‌ಅನ್ನು ಅಮಾನತುಗೊಳಿಸಿರುವ ಕಾರಣ ಭಾರತದ ಸ್ಪರ್ಧಿಗಳು ಯುಡಬ್ಲ್ಯುಡಬ್ಲ್ಯು ಧ್ವಜದಡಿ ಪಾಲ್ಗೊಳ್ಳುತ್ತಿದ್ದಾರೆ.

130 ಕೆ.ಜಿ. ವಿಭಾಗದ ಗ್ರಿಕೊ ರೋಮನ್ ವಿಭಾಗದ ಪೈಲ್ವಾನ್ ಮೆಹರ್ ಸಿಂಗ್ ಕೂಡ ಕ್ವಾಲಿಫಿಕೇಷನ್ ಸುತ್ತಿನಲ್ಲೇ ಸೋಲನುಭವಿಸಿದರು. 27ನೇ ಶ್ರೇಯಾಂಕದ ಮೆಹರ್, 28ನೇ ಶ್ರೇಯಾಂಕದ ಡೇವಿಡ್ ಒವಸಪ್ಯಾನ್ (ಅರ್ಮೇನಿಯಾ) ಅವರಿಗೆ 0–8 ರಿಂದ ಸೋತರು. ಕೇವಲ 39 ಸೆಕೆಂಡುಗಳಲ್ಲಿ ಸೆಣಸಾಟ ಇತ್ಯರ್ಥಗೊಂಡಿತು.

ನಗಾಲ್ ನೆರವಿಗೆ ಪೆಪ್ಸಿ, ಡಿಎಲ್‌ಟಿಎ

ಸುಮಿತ್ ನಗಾಲ್

ನವದೆಹಲಿ (ಪಿಟಿಐ): ಭಾರತದ ಪ್ರಮುಖ ಟೆನಿಸ್ ಆಟಗಾರ ಸುಮಿತ್ ನಗಾಲ್ ಅವರು ಬುಧವಾರ ತಮ್ಮ ಹಣಕಾಸಿನ ಬವಣೆಯನ್ನು ತೋಡಿಕೊಂಡ ಬೆನ್ನಲ್ಲೇ ಅವರಿಗೆ ಹಣಕಾಸು ನೆರವು ಬರಲಾರಂಭಿಸಿದೆ.

ತಂಪು ಪಾನೀಯ ಕಂಪನಿ ಪೆಪ್ಸಿಕೊ ಇಂಡಿಯಾ ಮತ್ತು ದೆಹಲಿ ಲಾನ್ ಟೆನಿಸ್ ಸಂಸ್ಥೆ (ಡಿಎಲ್‌ಟಿಎ) ಸಹಾಯಹಸ್ತ ಚಾಚಿವೆ. ಒಂದು ಬಾರಿಯ ನೆರವಿನ ರೂಪದಲ್ಲಿ ₹ 5 ಲಕ್ಷ ನೀಡಲು ಡಿಎಲ್‌ಟಿಎ ನಿರ್ಧರಿಸಿದೆ. ಮೂರು ವರ್ಷಗಳ ಕಾಲ ಬೆಂಬಲ ನೀಡುವುದಾಗಿ ಪೆಪ್ಸಿಕೊ ಅಭಯ ನೀಡಿದೆ.

ಪಿಟಿಐಗೆ ನೀಡಿದ ಸಂದರ್ಶನದಲ್ಲಿ ನಗಾಲ್ ಅವರು ಎಟಿಪಿ ಟೂರ್‌ಗಳಲ್ಲಿ ಪಾಲ್ಗೊಳ್ಳಬೇಕಾದರೆ ವರ್ಷಕ್ಕೆ ಸುಮಾರು ಒಂದು ಕೋಟಿ ರೂಪಾಯಿ ಬೇಕಾಗುತ್ತದೆ. ಆದರೆ ತಮ್ಮ ಬಳಿ ಲಕ್ಷ ರೂಪಾಯಿ ಕೂಡ ಇಲ್ಲವೆಂದು ಹೇಳಿದ್ದರು.

‘ಸುಮಿತ್ ಹೊಸಪೀಳಿಗೆಯ ಅಥ್ಲೀಟುಗಳಿಗೆ ಆದರ್ಶಪ್ರಾಯ ಕ್ರೀಡಾಪಟು. ಅವರು ಪರಿಶ್ರಮಕ್ಕೆ ನೈಜ ಮಾದರಿ. ನೆರವು ನೀಡುವ ಅಥ್ಲೀಟುಗಳ ಗುಂಪಿಗೆ ಅವರನ್ನು ನಾವು ಸೇರ್ಪಡೆಗೊಳಿಸುತ್ತೇವೆ’ ಎಂದು ಪೆಪ್ಸಿಕೊ ಇಂಡಿಯಾದ ಎನರ್ಜಿ ಮತ್ತು ಹೈಡ್ರೇಷನ್ ವಿಭಾಗದ ಅಸೋಸಿಯೇಟ್ ನಿರ್ದೇಶಕ ಅಂಕಿತ್ ಅಗರವಾಲ್ ಹೇಳಿದ್ದಾರೆ. ನಗಾಲ್ ಅವರು ಈ ನೆರವಿಗೆ ಕೃತಜ್ಞತೆ ಸಲ್ಲಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಗಾಲಿಕುರ್ಚಿ ಕ್ರಿಕೆಟ್ ಲೀಗ್ ಇಂದಿನಿಂದ

ಬೆಂಗಳೂರು: ದಿವ್ಯಾಂಗ್ ಮೈತ್ರಿ ಕ್ರೀಡಾ ಅಕಾಡೆಮಿಯಿಂದ ಇದೇ 22ರಿಂದ 24ರವರೆಗೆ ಕರ್ನಾಟಕ ವ್ಹೀಲ್ ಚೇರ್ (ಗಾಲಿ ಕುರ್ಚಿ) ಪ್ರೀಮಿಯರ್ ಲೀಗ್‌ನ 2ನೇ ಆವೃತ್ತಿ ವೈಎಂಸಿಎ ಕ್ರಿಕೆಟ್ ಮೈದಾನದಲ್ಲಿ ನಡೆಯಲಿದೆ.

ಈ ಲೀಗ್‌ನಲ್ಲಿ ಬೆಳಗಾವಿ ಬುಲ್ಸ್, ತುಮಕೂರು ಟೈಗರ್ಸ್, ಬೆಂಗಳೂರು ಈಗಲ್ಸ್ ಮತ್ತು ಬಿಜಾಪುರ ಬ್ಲಾಸ್ಟರ್ ತಂಡಗಳು ಭಾಗವಹಿಸುತ್ತಿವೆ. ಪ್ರತಿ ತಂಡದಲ್ಲಿ 15 ಮಂದಿ ಆಟಗಾರರು ಪಾಲ್ಗೊಳ್ಳಬಹುದು. ಲೀಗ್‌ನಲ್ಲಿ ಗೆದ್ದ ತಂಡಕ್ಕೆ ₹1 ಲಕ್ಷ ಬಹುಮಾನ ನೀಡಲಾಗುವುದು ಎಂದು ಅಕಾಡೆಮಿಯ ದಿಲೀಪ್ ಕುಮಾರ್ ತಿಳಿಸಿದರು.

ಡೆಕ್ಕನ್‌ಗೆ ಗೆಲುವು

ಬೆಂಗಳೂರು: ಎಫ್‌ಸಿ ಡೆಕ್ಕನ್ ತಂಡವು ಗುರುವಾರ ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಪಂದ್ಯದಲ್ಲಿ 3–2ರಿಂದ ಬೆಂಗಳೂರು ಡ್ರೀಮ್ ಯುನೈಟೆಡ್ ತಂಡವನ್ನು ಮಣಿಸಿತು.

ಡೆಕ್ಕನ್ ತಂಡದ ರಾಹಿಲ್ ಸರ್ದಾರ್, ಬಿ.ಯು. ಮಿಥುನ್, ರಾಕೇಶ್ ಸಿಂಗ್ ಮತ್ತು ಯುನೈಟೆಡ್‌ನ ರಾಜು ಬಾಸ್ಫೋರ್ ಮತ್ತು ನವೋರೆಂ ನನಾನೋ ತಲಾ ಒಂದು ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಎಂಎಫ್ ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡವು 4–2ರಿಂದ ಎಫ್‌ಸಿ ಅಗ್ನಿಪುತ್ರ ತಂಡವನ್ನು ಪರಾಭವಗೊಳಿಸಿತು.

ಕ್ರಿಕೆಟ್: ರಾಹುಲ್ ನಾಯಕತ್ವಕ್ಕೆ ಸವಾಲು

ಭಾರತ– ಆಸ್ಟ್ರೇಲಿಯಾ ಹಣಾಹಣಿ ಇಂದು, ಸೂರ್ಯನ ಲಯದ ಮೇಲೆ ಕಣ್ಣು

ಭಾರತ ತಂಡದ ನಾಯಕ ಕೆ.ಎಲ್. ರಾಹುಲ್

ಮೊಹಾಲಿ (ಪಿಟಿಐ): ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಇನ್ನೆರಡು ವಾರಗಳು ಬಾಕಿ ಉಳಿದಿವೆ. ವಿಶ್ವಕಪ್ ಟೂರ್ನಿಗೆ ಆತಿಥ್ಯ ವಹಿಸುತ್ತಿರುವ ಭಾರತ ಮತ್ತು ಐದು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾ ತಂಡಗಳೂ ಅಂತಿಮ ಘಟ್ಟದ ಸಿದ್ಧತೆಗಾಗಿ ಕಣಕ್ಕಿಳಿಯಲಿವೆ.

ಉಭಯ ತಂಡಗಳು ಆಡಲಿರುವ ಮೂರು ಪಂದ್ಯಗಳ ಸರಣಿಯ ಮೊದಲ ಹಣಾಹಣಿ ಶುಕ್ರವಾರ ನಡೆಯಲಿದೆ. ಸರಣಿಯ ಮೊದಲೆರಡು ಪಂದ್ಯಗಳಲ್ಲಿ ಆತಿಥೇಯ ತಂಡವನ್ನು ಕನ್ನಡಿಗ ಕೆ.ಎಲ್. ರಾಹುಲ್ ಮುನ್ನಡೆಸಲಿದ್ದಾರೆ. ಏಷ್ಯಾ ಕಪ್ ಟೂರ್ನಿಯಲ್ಲಿ ಶತಕ ಬಾರಿಸಿದ್ದ ರಾಹುಲ್, ವಿಕೆಟ್‌ಕೀಪಿಂಗ್‌ನಲ್ಲಿಯೂ ಗಮನ ಸೆಳೆದಿದ್ದರು.

ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಹಾರ್ದಿಕ್ ಪಾಂಡ್ಯ ಹಾಗೂ ಸ್ಪಿನ್ನರ್ ಕುಲದೀಪ್ ಯಾದವ್ ಅವರಿಗೆ ವಿಶ್ರಾಂತಿ ನೀಡಲಾಗಿದೆ. ಇದರಿಂದಾಗಿ ತಂಡದ ಬೆಂಚ್ ಶಕ್ತಿಯನ್ನು ಪರೀಕ್ಷಿಸಲು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅವರಿಗೆ ಇದು ಕಡೆ ಅವಕಾಶವಾಗಿದೆ.

ಇದರಿಂದಾಗಿ ಅವಕಾಶ ಪಡೆಯಲಿರುವ ಶ್ರೇಯಸ್ ಅಯ್ಯರ್ ಅವರು ತಮ್ಮ ಫಿಟ್‌ನೆಸ್ ಸಾಬೀತುಪಡಿಸಬೇಕಿದೆ. ಶಸ್ತ್ರಚಿಕಿತ್ಸೆಯ ನಂತರ ದೀರ್ಘ ಸಮಯ ವಿಶ್ರಾಂತಿಯಲ್ಲಿದ್ದ ಅವರು ಈಚೆಗೆ ಏಷ್ಯಾ ಕಪ್ ಟೂರ್ನಿಗೆ ಮರಳಿದ್ದರು. ಆದರೆ, ಮತ್ತೆ ಗಾಯದ ಸಮಸ್ಯೆ ಅನುಭವಿಸಿ ಬಹುತೇಕ ಪಂದ್ಯಗಳಲ್ಲಿ ಬೆಂಚ್‌ನಲ್ಲಿದ್ದರು. ಇದೀಗ ಚೇತರಿಸಿಕೊಂಡಿರುವ ಅವರು ಕಣಕ್ಕಿಳಿಯಲಿದ್ದಾರೆ.

ಅವರೊಂದಿಗೆ ಸೂರ್ಯಕುಮಾರ್ ಯಾದವ್ ಅವರಿಗೂ ಲಯಕ್ಕೆ ಮರಳುವ ಸವಾಲು ಇದೆ. ಇವರಿಬ್ಬರಿಗೂ ವಿಶ್ವಕಪ್ ತಂಡದಲ್ಲಿ ಆಡುವ ಅವಕಾಶ ಗಿಟ್ಟಿಸಲು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಲೇಬೇಕಾದ ಒತ್ತಡದಲ್ಲಿದ್ದಾರೆ.

ಉಳಿದಂತೆ ರಾಹುಲ್ ಅವರಿಗೆ ಹೆಚ್ಚು ಚಿಂತೆಯಿಲ್ಲ. ಬೌಲಿಂಗ್‌ನಲ್ಲಿ ಅನುಭವಿ ಸ್ಪಿನ್ನರ್ ಆರ್. ಅಶ್ವಿನ್ ತಂಡಕ್ಕೆ ಮರಳಿದ್ದಾರೆ. ಅಮೋಘ ಲಯದಲ್ಲಿರುವ ಸಿರಾಜ್, ಶಮಿ, ಬೂಮ್ರಾ ಇದ್ದಾರೆ.

ತಮ್ಮ ಮುಂಗೈ ಗಾಯದಿಂದ ಚೇತರಿಸಿಕೊಂಡಿರುವ ಪ್ಯಾಟ್ ಕಮಿನ್ಸ್ ನಾಯಕತ್ವದ ಆಸ್ಟ್ರೇಲಿಯಾ ಭಾರತದ ವಾತಾವರಣಕ್ಕೆ ಹೊಂದಿಕೊಳ್ಳಲು ಈ ಸರಣಿಯನ್ನು ವೇದಿಕೆ ಮಾಡಿಕೊಂಡಿದೆ.

ಇಲ್ಲಿಗೆ ಬರುವ ಮುನ್ನ ಆಸ್ಟ್ರೇಲಿಯಾ ತಂಡವು 2–3ರಿಂದ ದಕ್ಷಿಣ ಆಫ್ರಿಕಾದಲ್ಲಿ ಸರಣಿ ಸೋತು ಬಂದಿದೆ. ಅದರಿಂದಾಗಿ ತನ್ನ ಲೋಪಗಳನ್ನು ತಿದ್ದಿಕೊಳ್ಳಲೂ ತಂಡಕ್ಕೆ ಈ ಸರಣಿ ನೆರವಾಗಲಿದೆ.

ಸ್ಟೀವ್ ಸ್ಮಿತ್, ಡೇವಿಡ್ ವಾರ್ನರ್, ಮಾರ್ನಸ್ ಲಾಬುಷೇನ್ ಮತ್ತು ಮಿಚೆಲ್ ಮಾರ್ಷ್ ಅವರು ತಂಡದ ಬ್ಯಾಟಿಂಗ್ ವಿಭಾಗದ ಪ್ರಮುಖ ಶಕ್ತಿಯಾಗಿದ್ದಾರೆ. ಅಕ್ಟೋಬರ್ ಎಂಟರಂದು ಭಾರತ ಮತ್ತು ಆಸ್ಟ್ರೇಲಿಯಾ ತಂಡಗಳು ಚೆನ್ನೈನಲ್ಲಿ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಅದಕ್ಕೂ ಮುನ್ನ ಈ ಸರಣಿಯಲ್ಲಿ ಗೆದ್ದು ಆತ್ಮಬಲ ವೃದ್ಧಿಸಿಕೊಳ್ಳುವ ಛಲದಲ್ಲಿವೆ.

ತಂಡಗಳು: ಭಾರತ: ಕೆ.ಎಲ್. ರಾಹುಲ್ (ನಾಯಕ–ವಿಕೆಟ್‌ಕೀಪರ್), ರವೀಂದ್ರ ಜಡೇಜ (ಉಪನಾಯಕ), ಶುಭಮನ್ ಗಿಲ್, ಶ್ರೇಯಸ್ ಅಯ್ಯರ್, ಸೂರ್ಯಕುಮಾರ್ ಯಾದವ್, ತಿಲಕ್ ವರ್ಮಾ, ಇಶಾನ್ ಕಿಶನ್ (ವಿಕೆಟ್ ಕೀಪರ್), ಶಾರ್ದೂಲ್ ಠಾಕೂರ್, ವಾಷಿಂಗ್ಟನ್ ಸುಂದರ್, ಆರ್. ಅಶ್ವಿನ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಪ್ರಸಿದ್ಧಕೃಷ್ಣ, ಋತುರಾಜ್ ಗಾಯಕವಾಡ.

ಆಸ್ಟ್ರೇಲಿಯಾ: ಪ್ಯಾಟ್ ಕಮಿನ್ಸ್ (ನಾಯಕ), ಅಲೆಕ್ಸ್ ಕ್ಯಾರಿ, ನೇಥನ್ ಎಲಿಸ್, ಕ್ಯಾಮರಾನ್ ಗ್ರೀನ್, ಆ್ಯಡಂ ಜಂಪಾ, ಮಾರ್ಕಸ್ ಸ್ಟೊಯಿನಿಸ್, ಮಿಚೆಲ್ ಸ್ಟಾರ್ಕ್, ಸ್ಟೀವ್ ಸ್ಮಿತ್, ಡೇವಿಡ್ ವಾರ್ನರ್, ಜೋಶ್ ಹ್ಯಾಜಲ್‌ವುಡ್, ಸ್ಪೆನ್ಸರ್ ಜಾನ್ಸನ್, ಮಾರ್ನಸ್ ಲಾಬುಷೇನ್, ಮಿಚೆಲ್ ಮಾರ್ಷ್, ಗ್ಲೆನ್ ಮ್ಯಾಕ್ಸ್‌ವೆಲ್, ತನ್ವೀರ್ ಸಂಘಾ, ಮ್ಯಾಟ್ ಶಾರ್ಟ್.

ಪಂದ್ಯ ಆರಂಭ: ಮಧ್ಯಾಹ್ನ 1.30
ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ

ಬಲಾಬಲ	
ಒಟ್ಟು ಪಂದ್ಯಗಳು	146
ಭಾರತದ ಜಯ	54
ಆಸ್ಟ್ರೇಲಿಯಾ ಜಯ	82
ಫಲಿತಾಂಶವಿಲ್ಲ	10